ಶನಿವಾರ, ಜನವರಿ 28, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂವಾದ

ನವದೆಹಲಿಯಲ್ಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪ್ರದರ್ಶನ ನೀಡಿದ್ದ ಕಲಾವಿದೆಯೊಬ್ಬರ ಜತೆಗೆ ಶುಕ್ರವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಸಂವಾದ ನಡೆಸಿದರು




G20 ಭಾರತ 2023 INDIA | 75 ಸ್ವಾತಂತ್ರ್ಯದ ಅಮೃತಮಹೋತ್ಸವ | ಕರ್ನಾಟಕ ಸರ್ಕಾರ

ನವ ಭಾರತಕ್ಕಾಗಿ
ನವ ಕರ್ನಾಟಕ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ರಾಜ್ಯದಲ್ಲಿ ಸಮಗ್ರ ಅಭಿವೃದ್ಧಿಗೆ ಒತ್ತು
ಉತ್ತರ ಕರ್ನಾಟಕದಲ್ಲಿ ಅಭಿವೃದ್ಧಿಯ ಹೊಸ ಪರ್ವ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು





ಧಾರವಾಡದಲ್ಲಿ ರಾಷ್ಟ್ರೀಯ ನ್ಯಾಯ ವಿಜ್ಞಾನ ವಿಶ್ವವಿದ್ಯಾಲಯದ ಆಫ್-ಕ್ಯಾಂಪಸ್ ಸೌಕರ್ಯಕ್ಕೆ ಸನ್ಮಾನ್ಯ ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ಅವರಿಂದ ಶಂಕುಸ್ಥಾಪನೆ

ದಿನಾಂಕ: 28-01-2023 । ಸ್ಥಳ: ಧಾರವಾಡ

ರಾಷ್ಟ್ರೀಯ ನ್ಯಾಯ ವಿಜ್ಞಾನ (ಫೊರೆನ್ಸಿಕ್) ವಿಶ್ವವಿದ್ಯಾಲಯದ ಉದ್ದೇಶಗಳು

- ಆನ್ವಯಿಕ ವರ್ತನೆಗಳ ವಿಜ್ಞಾನಗಳ ಅಧ್ಯಯನಗಳೊಂದಿಗೆ ನ್ಯಾಯ ವಿಜ್ಞಾನ ಕ್ಷೇತ್ರದಲ್ಲಿ ಶೈಕ್ಷಣಿಕ ಕಲಿಕೆಗೆ ಸೌಕರ್ಯ ಕಲ್ಪಿಸುವುದು ಹಾಗೂ ಉತ್ತೇಜನ ನೀಡುವುದು.
- ನ್ಯಾಯ ವಿಜ್ಞಾನ ಕ್ಷೇತ್ರದಲ್ಲಿ ಆಧುನಿಕ ಸಾಂಸ್ಥಿಕ ಹಾಗೂ ಸಂಶೋಧನಾ ಸೌಕರ್ಯಗಳನ್ನು ಒದಗಿಸುವುದು.
- ಯೋಜನೆಗಳು ಹಾಗೂ ಸಂಶೋಧನೆ ಮೂಲಕ ತನಿಖೆ ಸುಧಾರಣೆ, ಅಪರಾಧ ಪತ್ತೆ ಮಾಡಲು ಹಾಗೂ ತಡೆಗಟ್ಟಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೊಡನೆ ಸಮನ್ವಯ ಸಾಧಿಸುವುದು.

2019 ರಿಂದ ರಾಜ್ಯದಲ್ಲಿ ನ್ಯಾಯ ವಿಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಅಭಿವೃದ್ಧಿ

- 2020ರಲ್ಲಿ ಬೆಂಗಳೂರಿನಲ್ಲಿ **ರೂ.30 ಕೋಟಿ** ವೆಚ್ಚದಲ್ಲಿ ನಿರ್ಮಿಸಲಾದ ರಾಜ್ಯ ನ್ಯಾಯ ವಿಜ್ಞಾನದ **ಆಧುನಿಕ ಸೌಲಭ್ಯವುಳ್ಳ** ಪ್ರಯೋಗಾಲಯದ ಉದ್ಘಾಟನೆ
- **ಬಳ್ಳಾರಿ ಹಾಗೂ ಹುಬ್ಬಳ್ಳಿಯಲ್ಲಿ ಎರಡು ಆಧುನಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳ ಸ್ಥಾಪನೆಗೆ ಮಂಜೂರಾತಿ** ಹಾಗೂ 2022ರಿಂದ ಅವುಗಳ ಕಾರ್ಯಾಚರಣೆ ಆರಂಭ
- ರಾಜ್ಯದಲ್ಲಿ ನ್ಯಾಯ ವಿಜ್ಞಾನ ಪ್ರಯೋಗಾಲಯಗಳ ಸಾಮರ್ಥ್ಯವನ್ನು ಹೆಚ್ಚಿಸಲು ನೀಡಿರುವ ವಿಶೇಷ ಕಾಳಜಿಯಿಂದ ಬಾಕಿಯಿರುವ ಪ್ರಕರಣಗಳು ವಾರ್ಷಿಕ **ಶೇಕಡ 42ರಷ್ಟು** ಕಡಿಮೆಯಾಗಿವೆ.
- ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳ **ಮೂಲಭೂತ ಸೌಕರ್ಯ** ಉತ್ತಮ ಪಡಿಸಲು ಕಟ್ಟಡ ನಿರ್ಮಾಣಕ್ಕೆ **ರೂ.5.6 ಕೋಟಿ**
- 2021ರಲ್ಲಿ **54 ವೈಜ್ಞಾನಿಕ ಅಧಿಕಾರಿಗಳು** ಹಾಗೂ **40 ಇತರೆ ತಾಂತ್ರಿಕ** ಸಿಬ್ಬಂದಿಯ ನೇಮಕಾತಿ
- **ನ್ಯಾಯ ವಿಜ್ಞಾನ ಪ್ರಯೋಗಾಲಯ ನಿರ್ವಹಣೆ ವ್ಯವಸ್ಥೆ ತಂತ್ರಾಂಶದ ಅಭಿವೃದ್ಧಿ** ಹಾಗೂ ರಾಜ್ಯದಾದ್ಯಂತ ಅದರ ಅಳವಡಿಕೆ
- ರಾಜ್ಯದಲ್ಲಿ ಇನ್ನೂ ಎರಡು ನ್ಯಾಯ ವಿಜ್ಞಾನ **ಪ್ರಯೋಗಾಲಯಗಳನ್ನು ತುಮಕೂರು** ಹಾಗೂ **ಶಿವಮೊಗ್ಗದಲ್ಲಿ** ಸ್ಥಾಪಿಸಲು ನಿರ್ಧಾರ

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಆದ್ಯತೆ

ನೀರಾವರಿ, ಕುಡಿಯುವ ನೀರೊದಗಿಸುವ ಯೋಜನೆ

- ಉತ್ತರ ಕರ್ನಾಟಕದ ಮಹತ್ವಾಕಾಂಕ್ಷಿ ಯೋಜನೆ ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಅನುಷ್ಠಾನಕ್ಕೆ **ರೂ. 5,000 ಕೋಟಿ** ಅನುದಾನ
- ಕಳಸಾ ಮತ್ತು ಬಂಡೂರಿ ನಾಲಾ ತಿರುವು ಯೋಜನೆಗಳಿಗೆ **ರೂ. 1,000 ಕೋಟಿ** ಅನುದಾನ ಮೀಸಲು
- ಬೀದರ್‌ನ ಔರಾದ್ ಹಾಗೂ ಭಾಲ್ಕಿ ತಾಲ್ಲೂಕಿನ ನೀರಾವರಿ ಯೋಜನೆಗಳಿಗೆ **ರೂ.1,110.70 ಕೋಟಿ** ಮಂಜೂರಾತಿ
- ಯಾದಗಿರಿಯಲ್ಲಿ **50 ಸಾವಿರ ಎಕರೆ** ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಅನುದಾನ
- ಬಾಗಲಕೋಟೆಯ ಬಾದಾಮಿ ಹಾಗೂ ಬೀಳಗಿ ತಾಲ್ಲೂಕುಗಳ **ಒಟ್ಟು 46950 ಎಕರೆ ಪ್ರದೇಶಕ್ಕೆ ನೀರೊದಗಿಸುವ ರೂ. 525 ಕೋಟಿ ಮೊತ್ತದ ಕೆರೂರು ಏತ ನೀರಾವರಿ ಯೋಜನೆಗೆ** ಆಡಳಿತಾತ್ಮಕ ಅನುಮೋದನೆ
- **ಹಾವೇರಿ ಜಿಲ್ಲೆಯಲ್ಲಿ ವಿವಿಧ ಕೆರೆ ತುಂಬುವ ಯೋಜನೆಗಳಿಗೆ ಒಟ್ಟು ರೂ.1,356.95 ಕೋಟಿ ಅನುದಾನ.**

ಶಿಕ್ಷಣ

- ಯಾದಗಿರಿಯಲ್ಲಿ ವೈದ್ಯಕೀಯ ಕಾಲೇಜಿನ ಕನಸು ಈಗ ನನಸು. **150-ಸೀಟುಗಳ ಮೆಡಿಕಲ್ ಕಾಲೇಜಿಗೆ** ಮಂಜೂರಾತಿ
- **ಬಳ್ಳಾರಿಯ ಹಗರಿ** ಕೃಷಿ ವಿಜ್ಞಾನ ಕೇಂದ್ರದಲ್ಲಿ **ಕೃಷಿ ಮಹಾವಿದ್ಯಾಲಯ** ಸ್ಥಾಪನೆ ಈಗ ನನಸು
- ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಶಾಲೆಗಳನ್ನು **ಸ್ಮಾರ್ಟ್ ಕ್ಲಾಸ್‌ರೂಂಗಳಾಗಿ** ಪರಿವರ್ತಿಸಲು **ರೂ.150 ಕೋಟಿ**

ರೈಲು ಯೋಜನೆಗಳು

- ರೂ. 927.40 ಕೋಟಿ ವೆಚ್ಚದಲ್ಲಿ **ಧಾರವಾಡ-ಕಿತ್ತೂರು-ಬೆಳಗಾವಿ ನೂತನ ರೈಲು ಮಾರ್ಗ** ನಿರ್ಮಾಣ
- **ಗದಗ-ಯಲವಿಗಿ ರೈಲ್ವೆ ಯೋಜನೆಗೆ ರೂ.600 ಕೋಟಿ** ಮೀಸಲು

ಕೈಗಾರಿಕೆ, ಉದ್ಯೋಗ ಸೃಷ್ಟಿ

- ಧಾರವಾಡದಲ್ಲಿ **ಎಫ್‌ಎಂಸಿಜಿ ಕ್ಲಸ್ಟರ್** ಸ್ಥಾಪನೆ. **183 ಎಕರೆ** ಜಮೀನು ಮೀಸಲು. 20 ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆ.
- ಧಾರವಾಡದಲ್ಲಿ ಕಸೂತಿ, ಕೊಪ್ಪಳದಲ್ಲಿ ಕೌದಿ ಮತ್ತು ಕಿನ್ನಾಳದ ಗೊಂಬೆ, ನವಲಗುಂದದಲ್ಲಿ ಜಮಖಾನ, ಹಾಗೂ ಇಳಕಲ್ಲ, ಗುಳೇದಗುಡ್ಡ, ಬೆಳಗಾವಿ ಮತ್ತು ಶಹಪುರದಲ್ಲಿ ಸೀರೆ ಮೈಕ್ರೋ ಕ್ಲಸ್ಟರ್‌ಗಳ ಅಭಿವೃದ್ಧಿಗೆ ಕ್ರಮ
- ಕಲಬುರಗಿ ಜಿಲ್ಲೆಯಲ್ಲಿ **ಬೃಹತ್ ಜವಳಿ ಪಾರ್ಕ್** ನಿರ್ಮಿಸಲು ಕೇಂದ್ರದ ಒಪ್ಪಿಗೆ
- ಹಾವೇರಿ ಜಿಲ್ಲೆಯಲ್ಲಿ **ರೂ. 70 ಕೋಟಿ** ವೆಚ್ಚದಲ್ಲಿ ಮೆಗಾ ಡೈರಿ.
- **ಶಿಗ್ಗಾಂವಿಯಲ್ಲಿ ಜವಳಿ ಪಾರ್ಕ್** ಕಾಮಗಾರಿಗೆ ಚಾಲನೆ
- ಬಾಗಲಕೋಟೆಯ ಬಾದಾಮಿ ತಾಲ್ಲೂಕಿನಲ್ಲಿ **ಕೈಗಾರಿಕಾ ಪ್ರದೇಶ** ಸ್ಥಾಪಿಸಲು ಉದ್ದೇಶ

ಆರೋಗ್ಯ

- ಉತ್ತರ ಕರ್ನಾಟಕ ಭಾಗದಲ್ಲಿ ಹೈಟೆಕ್ ಚಿಕಿತ್ಸಾ ಸೌಲಭ್ಯಕ್ಕಾಗಿ **ಹುಬ್ಬಳ್ಳಿಯಲ್ಲಿ** ಜಯದೇವ ಹೃದ್ರೋಗ ಸಂಸ್ಥೆಯ ಪ್ರಾದೇಶಿಕ ಹೃದ್ರೋಗ ಕೇಂದ್ರದ ಸ್ಥಾಪನೆಗೆ **ರೂ.250 ಕೋಟಿ.**
- **ಬೆಳಗಾವಿಯಲ್ಲಿ ಕಿದ್ವಾಯಿ ಕ್ಯಾನ್ಸರ್ ಕೇಂದ್ರ ಸ್ಥಾಪನೆಗೆ ರೂ. 50 ಕೋಟಿ.**
- **ಕಲಬುರಗಿಯಲ್ಲಿ ಪ್ರಾದೇಶಿಕ ಕ್ಯಾನ್ಸರ್ ಆಸ್ಪತ್ರೆ** ಸ್ಥಾಪನೆ.
- **ಬಳ್ಳಾರಿ ಜಿಲ್ಲೆಯ** 310 ಹಾಸಿಗೆಗಳ ಆಸ್ಪತ್ರೆಯನ್ನು **ರೂ.72.50 ಕೋಟಿ** ವೆಚ್ಚದಲ್ಲಿ 510 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಉನ್ನತೀಕರಿಸಲು ಕ್ರಮ

ಇತರೆ ಅಭಿವೃದ್ಧಿ ಕಾಮಗಾರಿಗಳು

- ವಿಜಯನಗರ ಜಿಲ್ಲೆಯಲ್ಲಿ **ರೂ. 464 ಕೋಟಿ** ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ಆರಂಭಿಸಿ ಅಭಿವೃದ್ಧಿಗೆ ಚಾಲನೆ
- ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅನುದಾನ **ರೂ. 1,500 ಕೋಟಿಯಿಂದ ರೂ. 3,000 ಕೋಟಿಗೆ ಹೆಚ್ಚಳ**
- ವಿಜಯಪುರದಲ್ಲಿ ದ್ರಾಕ್ಷಿ ರೈತರಿಗೆ ನೆರವಾಗಲು **ರೂ. 35 ಕೋಟಿ** ವೆಚ್ಚದಲ್ಲಿ **ಕೋಲ್ಡ್ ಸ್ಟೋರೇಜ್ ಘಟಕ**
- ಕೊಪ್ಪಳ ಜಿಲ್ಲೆಯಲ್ಲಿ ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ **ರೂ. 120 ಕೋಟಿ** ಅನುದಾನ ಒದಗಿಸಲು ಕ್ರಮ

ವಿಮಾನ ನಿಲ್ದಾಣ, ಪ್ರವಾಸೋದ್ಯಮ

- ರಾಯಚೂರಿನಲ್ಲಿ ವಿಮಾನ ನಿಲ್ದಾಣಕ್ಕೆ **400 ಎಕರೆ** ಜಾಗ ಮೀಸಲು. ರೂ.182 ಕೋಟಿ ಅನುದಾನ
- ಕೊಪ್ಪಳ ಜಿಲ್ಲೆಯಲ್ಲಿ ವಿಮಾನ ನಿಲ್ದಾಣಕ್ಕೆ **ರೂ. 40 ಕೋಟಿ**
- ವಿಜಯಪುರದಲ್ಲಿ ವಿಮಾನ ನಿಲ್ದಾಣವನ್ನು ಏರ್‌ಬಸ್-320ರ ನಿಲ್ದಾಣವನ್ನಾಗಿ ಮೇಲ್ದರ್ಜೆಗೇರಿಸಲು ಹೆಚ್ಚುವರಿ ಅನುದಾನ
- **ರೂ. 150 ಕೋಟಿ** ವೆಚ್ಚದಲ್ಲಿ ರಾಯಚೂರಿನಲ್ಲಿ ಗ್ರೀನ್-ಫೀಲ್ಡ್ ವಿಮಾನ ನಿಲ್ದಾಣ ನಿರ್ಮಾಣ
- ಪ್ರವಾಸೋದ್ಯಮ ಉತ್ತೇಜನಕ್ಕೆ **ಹಂಪಿ-ಬಾದಾಮಿ-ಐಹೊಳೆ-ಪಟ್ಟದಕಲ್ಲು-ವಿಜಯಪುರ** ಪ್ರವಾಸಿ ವೃತ್ತವನ್ನು ರೂಪಿಸಿ, ಸಮಗ್ರ ಅಭಿವೃದ್ಧಿಗೆ ಚಾಲನೆ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ರಾಜಕಾಲುವೆ: ಎಂಟೂ ವಲಯಗಳಲ್ಲಿ ಆದೇಶಕ್ಕೆ ಕಾಯುತ್ತಿರುವ ಬಿಬಿಎಂಪಿ ಅಧಿಕಾರಿಗಳು

ಒತ್ತುವರಿ ತೆರವು: ಆದೇಶ ನೀಡದ ತಹಶೀಲ್ದಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಗೆ ತಹಶೀಲ್ದಾರ್‌ಗಳು ಆದೇಶ ನೀಡದಿರುವುದರಿಂದ ಹಿನ್ನಡೆ ಉಂಟಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ರಾಜಕಾಲುವೆ ಒತ್ತುವರಿ ಪ್ರದೇಶಗಳ ಬಗ್ಗೆ ನೋಟಿಸ್ ಜಾರಿ ಮಾಡಿ, ತೆರವು ಆದೇಶ ನೀಡಲು ತಹಶೀಲ್ದಾರ್ ಅವರಿಗೆ ಫೆ.10 ಮತ್ತು 15ರ ಗಡುವು ನೀಡಲಾಗಿದೆ. ಆದೇಶ ಬಂದ ಕೂಡಲೇ ಎಲ್ಲ ಒತ್ತುವರಿಯನ್ನೂ ತೆರವು ಮಾಡಲಾಗುತ್ತದೆ ಎಂದರು.

ತಗ್ಗು ಮತ್ತು ಸೂಕ್ಷ್ಮ ಪ್ರದೇಶಗಳಲ್ಲಿ ಮಳೆಯಿಂದ ಪ್ರವಾಹವನ್ನು ತಡೆಗಟ್ಟಬೇಕಾಗಿರುವ ಸ್ಥಳಗಳಲ್ಲಿ ಒತ್ತುವರಿ ಕಂಡುಬಂದಲ್ಲಿ ಭೂಮಾಪಕರು ಆದ್ಯತೆಯ ಮೇರೆಗೆ ಸರ್ವೆ ಕಾರ್ಯ ಕೈಗೊಳ್ಳಬೇಕು. ಅಂತಹ ಪ್ರಕರಣಗಳಲ್ಲಿ ತಹಶೀಲ್ದಾರ್ ತುರ್ತಾಗಿ ಒತ್ತುವರಿ ತೆರವು ಆದೇಶವನ್ನು ಹೊರಡಿಸಬೇಕು ಎಂದು ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಶುಕ್ರವಾರ ನಡೆದ ಪರಿಶೀಲನಾ ಸಭೆಯಲ್ಲಿ ತುಷಾರ್ ಗಿರಿನಾಥ್ ಸೂಚಿಸಿದರು.

ಭೂಮಾಪನ ಕಾರ್ಯವನ್ನು ಶಿಸ್ತು, ಗ್ರಾಮ ನಕ್ಷೆ ಮತ್ತು ಟಿಪ್ಪಣಿಗಳ ಅನ್ವಯ ಯಾವುದೇ ವ್ಯತ್ಯಾಸ ಮಾಡದೆ ಸಂಬಂಧಪಟ್ಟ ಭೂಮಾಪಕರು ನಕ್ಷೆಯನ್ನು ಸಿದ್ಧಪಡಿಸಬೇಕು. ತಹಶೀಲ್ದಾರ್ ಆದೇಶ ಜಾರಿ ಮಾಡಿ ಆರ್.ಪಿ.ಎ.ಡಿ ಅಂಚೆಯ ಮುಖಾಂತರ ಸಹ ಸ್ವೀಕೃತಿಯನ್ನು ಪಡೆಯಲು ನಿರ್ದೇಶನ ನೀಡಿದರು.

ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಆಯುಕ್ತ ಮುನೀಶ್ ಮೌದ್ಗಿಲ್, ಬಿಬಿಎಂಪಿ ವಿಶೇಷ ಆಯುಕ್ತರಾದ ಡಾ. ತ್ರಿಲೋಕ್ ಚಂದ್ರ, ಪಿ.ಎನ್. ರವೀಂದ್ರ, ರೆಡ್ಡಿ ಶಂಕರ ಬಾಬು, ಡಾ. ಹರೀಶ್ ಕುಮಾರ್, ಪ್ರೀತಿ ಗೆಹ್ಲೋಟ್, ಉಪ ಆಯುಕ್ತರಾದ ರಾಹುಲ್ ಶರಣಪ್ಪ ಸಂಕನೂರ್ ಇದ್ದರು.

ಮಹದೇವಪುರದಲ್ಲಿ ಒತ್ತುವರಿ ಹೆಚ್ಚಳ: ಮಹದೇವಪುರ ವಲಯದಲ್ಲಿ ಹಾಲಿ 130 ಸರ್ವೆ ನಂಬರ್‌ಗಳಲ್ಲಿ ಒತ್ತುವರಿ ಇದೆ. ಹೊಸದಾಗಿ 159 ಸರ್ವೆ ನಂಬರ್‌ಗಳಲ್ಲಿ ಒತ್ತುವರಿಗಳನ್ನು ಗುರುತಿಸಲಾಗಿದೆ. ತಹಶೀಲ್ದಾರ್‌ರವರು 131 ಸರ್ವೆ ನಂಬರ್‌ಗಳಿಗೆ ಒತ್ತುವರಿ ತೆರವು ಆದೇಶ ಹೊರಡಿಸಿದ್ದಾರೆ.

ಸಂಬಂಧ ಪಟ್ಟ ಅಧಿಕಾರಿಗಳು ನೋಟೀಸ್ ಜಾರಿಮಾಡಿದ ಒತ್ತುವರಿಗಳನ್ನು ಕೂಡಲೆ ತೆರವುಗೊಳಿಸಲು ಸೂಚಿಸಿದರು.

ಉಳಿದ 146 ಸರ್ವೆ ನಂಬರ್‌ಗಳ ಒತ್ತುವರಿ ಆದೇಶಗಳನ್ನು ಸಂಬಂಧಪಟ್ಟ ತಹಶೀಲ್ದಾರ್‌ರವರು ಆದ್ಯತೆಯ ಮೇರೆಗೆ ಆದೇಶವನ್ನು ಹೊರಡಿಸಬೇಕು. 62 ಪ್ರಕರಣಗಳು ಹೈಕೋರ್ಟ್‌ನಲ್ಲಿವೆ. ಪಶ್ಚಿಮ ಹಾಗೂ ಆರ್.ಆರ್. ನಗರ ವಲಯದಲ್ಲಿ ಹೆಚ್ಚುವರಿಯಾಗಿ ತಲಾ ಒಂದು ಒತ್ತುವರಿ ಪ್ರಕರಣ ಗುರುತಿಸಲಾಗಿದೆ.

ಆರ್.ಆರ್. ನಗರ, ದಾಸರಹಳ್ಳಿಯಲ್ಲಿ ತೆರವಿಲ್ಲ: ಬಿಬಿಎಂಪಿ ಆರ್.ಆರ್. ನಗರ ಹಾಗೂ ದಾಸರಹಳ್ಳಿ ವಲಯದಲ್ಲಿ ಕ್ರಮವಾಗಿ 33 ಹಾಗೂ 124 ಒತ್ತುವರಿ ಪ್ರಕರಣಗಳಿದ್ದು, ಕಳೆದ ನವೆಂಬರ್‌ನಿಂದ ಯಾವುದೇ ತೆರವು ಕಾರ್ಯಾಚರಣೆ ನಡೆದಿಲ್ಲ.

ಎಲ್ಲೆಲ್ಲಿ ಎಷ್ಟೆಷ್ಟು ಒತ್ತುವರಿ?

ವಲಯ	ಜ.27ರಂತೆ ಒತ್ತುವರಿ ಪ್ರಕರಣ	ಸರ್ವೆ	ನೋಟಿಸ್	ತೆರವು ಆದೇಶ	ತೆರವು	ಸರ್ವೆಗೆ ಬಾಕಿ	ಒಟ್ಟು ತೆರವು ಬಾಕಿ
ಪೂರ್ವ	91	90	0	0	3	1	88
ಪಶ್ಚಿಮ	6	3	0	0	2	3	4
ದಕ್ಷಿಣ (ಕೋರಮಂಗಲ ಕಣಿವೆ)	3	3	0	0	0	0	3
ಯಲಹಂಕ	86	84	60	60	7	2	79
ಮಹದೇವಪುರ	289	157	131	131	81	132	146
ಬೊಮ್ಮನಹಳ್ಳಿ	9	8	3	2	1	1	5
ಆರ್.ಆರ್. ನಗರ	35	32	32	3	2	3	33
ದಾಸರಹಳ್ಳಿ	124	124	31	0	0	0	124
ಒಟ್ಟು	643	501	257	196	96	142	485

ಬಿಡಿಎ ಒತ್ತುವರಿ ಸಕ್ರಮ!

‘ಬಿಬಿಎಂಪಿ ಪೂರ್ವ ವಲಯದಲ್ಲಿ 15 ಪ್ರಕರಣಗಳಲ್ಲಿ ಬಿಡಿಎ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದೆ. ಈ ಒತ್ತುವರಿ ಪ್ರದೇಶದಲ್ಲಿ ಬಿಡಿಎ ರಸ್ತೆಯನ್ನು ನಿರ್ಮಾಣ ಮಾಡಿದ್ದು, ಇಲ್ಲಿ ಪ್ರವಾಹ ಉಂಟಾಗುತ್ತಿಲ್ಲ. ಹೀಗಾಗಿ, ಈ ಒತ್ತುವರಿ ಪ್ರಕರಣಗಳ ತೆರವು ಪ್ರಕ್ರಿಯೆಯನ್ನು ಕೈಬಿಡಲಾಗುತ್ತದೆ’ ಎಂದು ಬಿಬಿಎಂಪಿ ರಾಜಕಾಲುವೆ ಒತ್ತುವರಿಯ ವಿವರಗಳುಳ್ಳ ವರದಿಯಲ್ಲಿ ತಿಳಿಸಿದೆ.

ದಕ್ಷಿಣ ವಲಯದ ಕೋರಮಂಗಲ ಕಣಿವೆ ಪ್ರದೇಶದಲ್ಲಿ ಮೂರು ಪ್ರಕರಣಗಳಲ್ಲಿ ರಾಜಕಾಲುವೆ ಒತ್ತುವರಿಯಾಗಿದ್ದು, ಈ ಮೂರೂ ಪ್ರಕರಣಗಳಲ್ಲಿರುವ ಪ್ರದೇಶವನ್ನು ಬಿಬಿಎಂಪಿ ಗುತ್ತಿಗೆ ಆಧಾರದ ಮೇಲೆ ನೀಡಿದೆ. ಹೀಗಾಗಿ ಇದನ್ನು ತೆರವುಗೊಳಿಸಿಲ್ಲ.

ಯಲಹಂಕ ವಲಯದಲ್ಲಿ 12 ಪ್ರಕರಣಗಳಲ್ಲಿರುವ ಒತ್ತುವರಿ ತೆರವುಗಳಿಸಲು ಯಲಹಂಕದ ವಲಯ ಆಯುಕ್ತರಿಗೆ ಡಿ.13ರಂದು ಸೂಚಿಸಲಾಗಿದೆ. ಆ ಕಾರ್ಯ ಇನ್ನೂ ಬಾಕಿ ಇದೆ.

ಬೊಮ್ಮನಹಳ್ಳಿ ವಲಯದ ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದಲ್ಲಿ 56 ಪ್ರಕರಣಗಳಲ್ಲಿ ಭೂ ಕಬಳಿಕೆ ಮಾಡಲಾಗಿದೆ. ಈ ಬಗ್ಗೆ ಯಾವುದೇ ಕ್ರಮವಾಗಿಲ್ಲ. ಇನ್ನು ಒಂದು ಪ್ರಕರಣ ನ್ಯಾಯಾಲಯದಲ್ಲಿದೆ.

ಸುದ್ದಿ 2 ನಿಮಿಷ

ಪಾಕ್ ಆರ್ಥಿಕ ಬಿಕ್ಕಟ್ಟು: ರೂಪಾಯಿ ಮೌಲ್ಯ ತೀವ್ರ ಕುಸಿತ

ಕರಾಚಿ(ಪಿಟಿಐ): ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿರುವ ಪಾಕಿಸ್ತಾನದಲ್ಲಿ ಶುಕ್ರವಾರ ರೂಪಾಯಿ ಮೌಲ್ಯ ಇನ್ನಷ್ಟು ಕುಸಿದಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 262.6ಕ್ಕೆ ಇಳಿಕೆ ಕಂಡಿದೆ.

ಪಾಕಿಸ್ತಾನದ ಸ್ಟೇಟ್ ಬ್ಯಾಂಕ್ ಪ್ರಕಾರ ದೇಶದ ಕರೆನ್ಸಿ ಮೌಲ್ಯ ಶುಕ್ರವಾರ 7.17 ರೂಪಾಯಿ ಅಥವಾ ಶೇ 2.73ರಷ್ಟು ಕುಸಿತ ದಾಖಲಿಸಿದೆ.

ಪಾಕಿಸ್ತಾನದ ರೂಪಾಯಿ ಮೌಲ್ಯವು ಇಂಟರ್‌ಬ್ಯಾಂಕ್‌ನಲ್ಲಿ ಗುರುವಾರದಿಂದ 34 ರೂಪಾಯಿಗಳಷ್ಟು ಅಪಮೌಲ್ಯಗೊಂಡಿದೆ. ಇದು, ಹೊಸ ವಿನಿಮಯ ದರ ವ್ಯವಸ್ಥೆ 1999ರಿಂದ ಶುರುವಾದಾಗಿನಿಂದ ಅತಿ ದೊಡ್ಡ ಅಪಮೌಲ್ಯ ಎನಿಸಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಸಾಲ ಯೋಜನೆ ಪುನರ್ ನವೀಕರಣ ಸ್ಥಗಿತಗೊಳಿಸಿದ ಪಾಕಿಸ್ತಾನ ಸರ್ಕಾರವು ವಿನಿಮಯ ದರದ ಮಿತಿಯನ್ನು (ಕ್ಯಾಪ್) ಅನಧಿಕೃತವಾಗಿ ತೆಗೆದ ನಂತರ ರೂಪಾಯಿ ತೀವ್ರ ಅಪಮೌಲ್ಯಗೊಂಡಿದೆ.

ಕರೆನ್ಸಿ ವಿನಿಮಯ ಕಂಪನಿಗಳು ಮುಕ್ತ ಮಾರುಕಟ್ಟೆಯಲ್ಲಿ ದರ ಕ್ಯಾಪ್ ತೆಗೆದುಹಾಕುವಿಕೆ ಘೋಷಿಸಿದ ನಂತರ ಸರ್ಕಾರ ಈ ನಿರ್ಧಾರವನ್ನು ಗುರುವಾರ ತೆಗೆದುಕೊಂಡಿತ್ತು.

ಐಎಂಎಫ್ ಜತೆಗೆ ಸರ್ಕಾರ ಮಾತುಕತೆ ನಡೆಸುತ್ತಿದೆ. ಆದಷ್ಟು ಶೀಘ್ರ ಈ ಸಮಸ್ಯೆ ಬಗೆಹರಿಯಲಿದೆ. ಐಎಂಎಫ್ ಮುಂದಿನ ತಿಂಗಳು ಅನುದಾನ ಬಿಡುಗಡೆ ಮಾಡುವ ವಿಶ್ವಾಸವಿದೆ ಎಂದು ಪ್ರಧಾನಿ ಶಹಬಾಜ್ ಷರೀಫ್ ಹೇಳಿದ್ದಾರೆ.



‘ಚಟುವಟಿಕೆ ಆಧಾರಿತ ಶಿಕ್ಷಣ ಮುಖ್ಯ’

ಬೆಂಗಳೂರು: ಅಕ್ಷರ ಫೌಂಡೇಶನ್ ವತಿಯಿಂದ ‘ಇವತ್ತಿನ ಸಂದರ್ಭದಲ್ಲಿ ‘ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ (ಎಸ್‌ಟಿಇಎಂ)’ ಕುರಿತು ವಿಚಾರಸಂಕಿರಣ ಆಯೋಜಿಸಲಾಗಿತ್ತು.

’ಇಟ್ ಆಲ್ ಆಡ್ಸ್ ಅಪ್ 2022-23’ ಶೀರ್ಷಿಕೆಯಡಿಯಲ್ಲಿ ನಡೆದ ಈ ವಿಚಾರ ಸಂಕಿರಣದಲ್ಲಿ ಮೂರು ಗೋಷ್ಠಿಗಳು ನಡೆದವು.

ಫೌಂಡೇಶನ್‌ನ ಅಧ್ಯಕ್ಷ ಅಶೋಕ್ ಕಾಮತ್ ಮಾತನಾಡಿ, ‘ಶಿಕ್ಷಣದಲ್ಲಿನ ಗುಣಮಟ್ಟ ಹೆಚ್ಚಿಸಲು ಸರ್ವಶಿಕ್ಷಾ ಅಭಿಯಾನದ ಮಾದರಿಯ ಇನ್ನೊಂದು ಯೋಜನೆಯ ಅಗತ್ಯವಿದೆ. 2001 ರಲ್ಲಿ ಸುಮಾರು ಶೇ 60ರಷ್ಟು ಮಕ್ಕಳು ಮಾತ್ರ ಶಾಲೆಗೆ ಹಾಜರಾಗುತ್ತಿದ್ದರು. ಸರ್ವಶಿಕ್ಷಾ ಅಭಿಯಾನವು ಶಾಲಾ ಹಾಜರಾತಿಯನ್ನು ಶೇ 95ಕ್ಕೆ ಹೆಚ್ಚಿಸಿದೆ. ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ಏರಿಕೆಯ ಜತೆಗೆ ಗುಣಮಟ್ಟವೂ ಮುಖ್ಯ. ಚಟುವಟಿಕೆ ಆಧಾರಿತ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ’ ಎಂದು ಪ್ರತಿಪಾದಿಸಿದರು.

ಸಮಗ್ರ ಶಿಕ್ಷಣ ಕರ್ನಾಟಕದ ಯೋಜನಾ ನಿರ್ದೇಶಕಿ ಬಿ. ಬಿ. ಕಾವೇರಿ ಮಾತನಾಡಿ, ‘ಕೋವಿಡ್ ನಂತರ ಕಲಿಕಾ ಚೇತರಿಕೆ ಕಾರ್ಯಕ್ರಮವು ಮಕ್ಕಳು ಮತ್ತು ಶಿಕ್ಷಕರಲ್ಲಿ ವಿಷಯ ಗ್ರಹಿಕೆಯ ಮಟ್ಟವನ್ನು ಹೆಚ್ಚಿಸಿತು’ ಎಂದು ವಿವರಿಸಿದರು.

ಶಿಕ್ಷಣ ತಜ್ಞ ಶಿವಶಂಕರ ಶಾಸ್ತ್ರಿ, ಡಯಟ್ ಹಿರಿಯ ಶಿಕ್ಷಕ ಟಿ.ಕೆ. ರಾಘವೇಂದ್ರ ಇದ್ದರು.

ಪತ್ನಿಯ ಜೀವನಾಂಶ ₹40 ಲಕ್ಷಕ್ಕೆ ಹೆಚ್ಚಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಚ್ಛೇದನ ಪ್ರಕರಣವೊಂದರಲ್ಲಿ ಕೌಟುಂಬಿಕ ನ್ಯಾಯಾಲಯ ಆದೇಶಿಸಿದ್ದ ₹ 25 ಲಕ್ಷ ಮೊತ್ತದ ಶಾಶ್ವತ ಜೀವನಾಂಶವನ್ನು ಹೈಕೋರ್ಟ್ ₹ 40 ಲಕ್ಷಕ್ಕೆ ಹೆಚ್ಚಿಸಿದೆ.

‘ಕೌಟುಂಬಿಕ ನ್ಯಾಯಾಲಯ ಆದೇಶಿಸಿರುವ ಜೀವನಾಂಶದ ಮೊತ್ತ ಕಡಿಮೆ ಮಾಡಬೇಕು’ ಎಂದು ಪತಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಲೋಕ್ ಆರಾಧೆ ಮತ್ತು ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದೆ.

ವಿಚ್ಛೇದನ ಪಡೆದಿರುವ ವಿದ್ಯಾವಂತ ದಂಪತಿಗೆ ಇಬ್ಬರು ಗಂಡುಮಕ್ಕಳಿದ್ದು, ಮೊದಲ ಮಗ ಮುಂಬೈನ ಐಐಟಿಯಲ್ಲಿ ಓದುತ್ತಿದ್ದಾರೆ. ತಾಯಿಯ ವಶದಲ್ಲಿರುವ ಎರಡನೇ ಮಗ 9ನೇ ತರಗತಿಯಲ್ಲಿ ಓದುತ್ತಿದ್ದು, ಹಿರಿಯ ಮಗನಿಗೆ ಶಿಕ್ಷಣ ನೀಡುವ ಜವಾಬ್ದಾರಿಯನ್ನು ತಂದೆಯೇ ವಹಿಸಿಕೊಂಡಿದ್ದಾರೆ.

‘ಎರಡನೇ ಮಗನ ಶಿಕ್ಷಣಕ್ಕೂ ಮೊದಲ ಮಗನಿಗೆ ತಗಲುವಷ್ಟೇ ಮೊತ್ತ ಬೇಕಾಗಬಹುದು’ ಎಂಬ ಪತ್ನಿಯ ಬೇಡಿಕೆಯನ್ನು ಪರಿಗಣಿಸಿದ ನ್ಯಾಯಪೀಠ ಜೀವನಾಂಶ ಹೆಚ್ಚಿಸಿ ಆದೇಶಿಸಿದೆ. ‘ಪತಿ ಮೊದಲ ಮಗನನ್ನು ನೋಡಿಕೊಳ್ಳುತ್ತಿದ್ದರೆ, 2ನೇ ಮಗನ ಶಿಕ್ಷಣದ ವೆಚ್ಚವನ್ನೂ ಭರಿಸಬೇಕು’ ಎಂದು ಹೇಳಿದೆ.

ಪ್ರಕರಣವೇನು?: ಮಂಗಳೂರಿನ ದಂಪತಿ 2003ರಲ್ಲಿ ಮದುವೆಯಾಗಿದ್ದರು. 6 ವರ್ಷಗಳ ನಂತರ ಇಬ್ಬರ ಮಧ್ಯೆ ಮನಸ್ತಾಪ ಉಂಟಾಗಿತ್ತು. 2009ರಲ್ಲಿ ಪತ್ನಿ ತನ್ನ ಇಬ್ಬರು ಮಕ್ಕಳೊಂದಿಗೆ ಗಂಡನ ಮನೆಯನ್ನು ತೊರೆದಿದ್ದರು. ಆಕೆಯನ್ನು ಮನೆಗೆ ಕರೆತರುವ ಪ್ರಯತ್ನ ವಿಫಲವಾದ ನಂತರ 2011ರಲ್ಲಿ ಪತಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು.

‘ಪತಿ ಮತ್ತು ಕುಟುಂಬದ ಸದಸ್ಯರ ಕಿರುಕುಳದಿಂದ ಗಂಡನ ಮನೆ ತೊರೆಯಬೇಕಾಯಿತು’ ಎಂಬ ಪತ್ನಿಯ ಆರೋಪವನ್ನು ಪುರಸ್ಕರಿಸಿದ್ದ ಕೌಟುಂಬಿಕ ನ್ಯಾಯಾಲಯ 2015 ರಲ್ಲಿ ವಿಚ್ಛೇದನದ ಡಿಕ್ರಿ ನೀಡಿತ್ತು.

ಬಿಡಬ್ಲ್ಯುಎಸ್‌ಎಸ್‌ಬಿ, ಬೆಸ್ಕಾಂಗೆ ಸೂಚನೆ; ಎಂಜಿನಿಯರ್‌ಗಳಿಗೆ ಹೊಣೆ

ರಸ್ತೆ ಅಗೆಯಲು ಅನುಮತಿ ಇಲ್ಲ: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಡಾಂಬರು ಹಾಕಿದ ಮೇಲೆ ರಸ್ತೆ ಅಗೆಯಲು ಯಾವುದೇ ಇಲಾಖೆಗೆ ಅನುಮತಿ ನೀಡಲಾಗುವುದಿಲ್ಲ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಬೃಹತ್ ಪ್ರಮಾಣದಲ್ಲಿ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಹೀಗಾಗಿ, ಯಾವುದೇ ಇಲಾಖೆಗಳು ರಸ್ತೆ ಅಗೆಯಬೇಕಾದರೆ ಡಾಂಬರಿಗೆ ಮೊದಲೇ ಈ ಕಾಮಗಾರಿಗಳನ್ನು ಕೈಗೊಳ್ಳಬೇಕು. ರಸ್ತೆ ಡಾಂಬರು ಆದ ಮೇಲೆ ಯಾರಿಗೂ ಅಗೆಯಲು ಅನುಮತಿ ನೀಡುವುದಿಲ್ಲ ಎಂದು ಹೇಳಿದರು.

ಬಿಡಬ್ಲ್ಯುಎಸ್‌ಎಸ್‌ಬಿ, ಬೆಸ್ಕಾಂ ಸೇರಿ ಎಲ್ಲ ಇಲಾಖೆಗಳು ರಸ್ತೆಗಳಲ್ಲಿ ಅಗೆಯಬೇಕಾದರೆ ಅನುಮತಿ ಪಡೆಯಬೇಕು. ಡಾಂಬರು ಹಾಕಿದ ಮೇಲೆ ಅವರಿಗೆ ಅನುಮತಿ ನೀಡುವುದಿಲ್ಲ. ಹಾಗೇನಾದರೂ ಅಗೆದರೆ ಅವರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ. ಅಷ್ಟೇ ಅಲ್ಲ, ಅವರೇ ಪೂರ್ಣ ರಸ್ತೆಗೆ ಡಾಂಬರು ಹಾಕಬೇಕು ಎಂದರು.

ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಸುತ್ತಿರುವ ಬಗ್ಗೆ ಎಲ್ಲ ಇಲಾಖೆಗೂ ಸಂಬಂಧಪಟ್ಟ ಎಂಜಿನಿಯರ್‌ಗಳು ಮೊದಲೇ ಮಾಹಿತಿ ನೀಡಬೇಕು. ಅನ್ಯ ಇಲಾಖೆಗಳವರು ಮೊದಲೇ ಕಾಮಗಾರಿ ಮುಗಿಸುವಂತೆ ನೋಡಿಕೊಳ್ಳಬೇಕು. ಎಇಇ, ಇಇಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಎಲ್ಲರ ಮೇಲೂ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

‘ಮನೆಗಳಿಗೆ ನೀರು, ಒಳಚರಂಡಿ, ವಿದ್ಯುತ್ ಸಂಪರ್ಕ ಪಡೆಯುವಾಗ ಅವರು ಶುಲ್ಕ ಪಾವತಿಸಿರುತ್ತಾರೆ. ಅಂತಹ ಪ್ರಕರಣಗಳಲ್ಲಿ ನಾವೇ ಅದನ್ನು ದುರಸ್ತಿ ಮಾಡುತ್ತೇವೆ’ ಎಂದರು.

ಹೊಸದಾಗಿ ರಸ್ತೆಯನ್ನು ನಿರ್ಮಾಣ ಮಾಡುತ್ತಿರುವ ಸ್ಥಳಗಳಲ್ಲಿ ಮಾತ್ರ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಲು ಅವಕಾಶ ಇದೆ. ಆದರೆ, ಈಗಾಗಲೇ ಕಾಮಗಾರಿ ಮುಗಿದು ಮರು ಅಭಿವೃದ್ಧಿ ಆಗಿದ್ದರೆ ಅಲ್ಲಿ ರಸ್ತೆ ಅಗೆಯಲು ಇಲಾಖೆಗಳಿಗೆ ಅನುಮತಿ ಇಲ್ಲ ಎಂದರು.

‘ಸ್ವಾತಂತ್ರ್ಯ ಉದ್ಯಾನದ ಬಳಿಯ ಪಾರ್ಕಿಂಗ್ ಸೌಲಭ್ಯ ಆರಂಭಿಸಲು ವೆಚ್ಚ ಹೆಚ್ಚಿರುವುದರಿಂದ ಟೆಂಡರ್‌ಗೆ ಯಾರೂ ಬರುತ್ತಿಲ್ಲ. ಡಿಯುಎಲ್‌ಟಿ ಅವರಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದ್ದು, ಕಡಿಮೆ ಮಾಡಿ ಅದನ್ನು ಆಚರಣೆಗೆ ತರಲಾಗುತ್ತದೆ. ಜೆ.ಸಿ. ರಸ್ತೆಯಲ್ಲಿರುವ ಬಹು ಅಂತಸ್ತಿನ ಪಾರ್ಕಿಂಗ್‌ಗೆ ಉತ್ತಮ ಪ್ರತಿಕ್ರಿಯೆ ಬಂದಿದ್ದು, ಸುಮಾರು ₹75 ಲಕ್ಷ ಆದಾಯ ಬರಲಿದೆ ಎಂದು ಹೇಳಿದರು.

ಏರೋ ಇಂಡಿಯಾ: ಮಾಂಸಾಹಾರ ಮಾರಾಟ ನಿರ್ಬಂಧ



ನಗರದಲ್ಲಿ ನಡೆಯುವ ಏರೋ ಇಂಡಿಯಾ ವೈಮಾನಿಕ ವಸ್ತು ಪ್ರದರ್ಶನದ ಹಿನ್ನೆಲೆಯಲ್ಲಿ ಯಲಹಂಕ ವಾಯುನೆಲೆ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಮಾಂಸ-ಮಾಂಸಾಹಾರ ಮಾರಾಟ ನಿರ್ಬಂಧಿಸಲಾಗಿದೆ. ಹೋಟೆಲ್, ಢಾಬಾಗಳಲ್ಲಿ ಮಾಂಸಾಹಾರ ತಯಾರಿಸುವಂತಿಲ್ಲ. ಜ.30ರಿಂದ ಫೆ.20ರವರೆಗೆ ಇದು ಅನ್ವಯವಾಗಲಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

‘ಏರೋ ಇಂಡಿಯಾಗೆ’ ಸಂಬಂಧಿಸಿದಂತೆ ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗುತ್ತಿದೆ. ಶುಚಿತ್ವದ ಬಗ್ಗೆ ಹೆಚ್ಚು ನಿಗಾವಹಿಸಲಾಗಿದೆ. ಈ ಬಾರಿ 258 ಇ-ಶೌಚಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಯಲಹಂಕ ವಾಯುನೆಲೆಯ ಸುತ್ತಮುತ್ತಲಿನ ಎಲ್ಲ ಕೆರೆಗಳಲ್ಲಿ ಮೀನುಗಾರಿಕೆಯನ್ನು ಸ್ಥಗಿತಗೊಳಿಸಲಾಗುತ್ತದೆ’ ಎಂದು ತಿಳಿಸಿದರು.

‘ಲ್ಯಾಂಡ್ ಫಿಲ್‌ಗಳಲ್ಲಿ ರಾತ್ರಿ ಮಾತ್ರ ಕೆಲಸ ಮಾಡಿ ಮೇಲ್ಭಾಗದಲ್ಲಿ ಮಣ್ಣು ಹಾಕಿ ಮುಚ್ಚಲಾಗುತ್ತದೆ. ನಮ್ಮ ಯಲಹಂಕ ವಲಯದ ವತಿಯಿಂದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ’ ಎಂದು ಹೇಳಿದರು.



ಕೃಷಿಕ ಸಮಾಜದ ಉಪಾಧ್ಯಕ್ಷ ಬಿ.ಟಿ.ಜಗದೀಶ್ ಹೇಳಿಕೆ

ಅಡಿಕೆಗೆ ಬರಲಿದೆ ಬಂಗಾರದ ಬೆಲೆ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್


ಅಡಿಕೆಗೆ ಬಂಗಾರದ ಬೆಲೆ ಬರುವ ಸಾಧ್ಯತೆ ಇದ್ದು, ಅಡಿಕೆ ಬೆಳೆಗಾರರು ಆತಂಕಪಡುವ ಅಗತ್ಯವಿಲ್ಲ ಎಂದು ಚಿತ್ರದುರ್ಗ ಕೃಷಿಕ ಸಮಾಜದ ಉಪಾಧ್ಯಕ್ಷ ಬಿ.ಟಿ.ಜಗದೀಶ್ ತಿಳಿಸಿದ್ದಾರೆ.

‘ಕಳೆದ ಕೆಲ ದಿನಗಳಿಂದ ಅಡಿಕೆ ಬೆಲೆ ಏರಿಕೆ ಕಾಣುತ್ತಿದೆ. ಅಡಿಕೆ ಧಾರಣೆ ₹ 48 ಸಾವಿರದ ಗಡಿ ದಾಟಿದ್ದು, ರೈತರಲ್ಲಿ ಹರ್ಷವುಂಟು ಮಾಡಿದೆ. ಈ ಬೆಲೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

‘ಭೂತಾನ್ ದೇಶದಿಂದ 17 ಸಾವಿರ ಟನ್ ಹಸಿ ಅಡಿಕೆ ಆಮದಿಗೆ ಕೇಂದ್ರ ಸರ್ಕಾರ ಸೆಪ್ಟೆಂಬರ್‌ನಲ್ಲಿ ಅನುಮತಿ ನೀಡಿತ್ತು. ಅಡಿಕೆ ಧಾರಣೆಯ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರಿತ್ತು. ದೇಶೀಯ ಅಡಿಕೆ ಬೆಳೆಗಾರರ ಹಿತಾಸಕ್ತಿ ರಕ್ಷಣೆಗಾಗಿ ತರಲಾಗಿದ್ದ ಅಡಿಕೆ ಆಮದು ನಿರ್ಬಂಧ ನಿಯಮಗಳಿಗೆ ಕೇಂದ್ರ ವಾಣಿಜ್ಯ ಸಚಿವಾಲಯ ತಿದ್ದುಪಡಿ ತಂದು ಭೂತಾನ್ ಅಡಿಕೆಗೆ ಅವಕಾಶ ಕಲ್ಪಿಸಿತ್ತು’ ಎಂದು ಹೇಳಿದ್ದಾರೆ.

‘ಇದಕ್ಕೆ ಬೆಳೆಗಾರರಿಂದ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಅಡಿಕೆ ಆಮದು ಸುಂಕ ಹೆಚ್ಚಿಸಿ ದೇಶೀಯ ಅಡಿಕೆ ಬೆಲೆ ಏರಿಕೆ ಮಾಡುವಂತೆ ಸರ್ಕಾರದ ಮೇಲೆ ಒತ್ತಡವೂ ಸೃಷ್ಟಿಯಾಗಿತ್ತು. ಅಕ್ಟೋಬರ್‌ನಲ್ಲಿ ₹ 53 ಸಾವಿರ ಇದ್ದ ಕ್ವಿಂಟಲ್ ಅಡಿಕೆ ಧಾರಣೆ ಡಿಸೆಂಬರ್‌ನಲ್ಲಿ ₹ 39 ಸಾವಿರಕ್ಕೆ ಕುಸಿದಿತ್ತು. ಆದರೆ, ಕಳೆದ ಹತ್ತು ದಿನಗಳಿಂದ ಅಡಿಕೆ ದರ ಏರಿಕೆ ಹಾದಿಗೆ ಮರಳಿದೆ’ ಎಂದಿದ್ದಾರೆ.


‘ದೇಶದಲ್ಲಿ 18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆ ಇದ್ದು, ವಾರ್ಷಿಕ 12 ಲಕ್ಷ ಮೆಟ್ರಿಕ್ ಟನ್ ಅಡಿಕೆ ಉತ್ಪಾದನೆ ಆಗುತ್ತಿದೆ. 70 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಅಡಿಕೆ ಬೆಳೆ ಮೇಲೆ ಅವಲಂಬಿತವಾಗಿವೆ. ದೇಶದಲ್ಲಿ ಉತ್ಪಾದನೆ ಆಗುವ ಅಡಿಕೆಯಲ್ಲಿ ಕರ್ನಾಟಕದ ಪಾಲು ಶೇ 65ಕ್ಕಿಂತ ಹೆಚ್ಚಿದೆ. ಇತ್ತೀಚೆಗೆ ಅಡಿಕೆ ಬೆಳೆ ಅತಿ ವೇಗವಾಗಿ ವಿಸ್ತರಣೆಯಾಗುತ್ತಿದೆ’ ಎಂದು ಅವರು ವಿವರಿಸಿದ್ದಾರೆ.



ಅಡಿಕೆ ಮಾರುಕಟ್ಟೆಯ ಚಿತ್ರ



ಫಲಕ್ಕೆ ಬಂದಿರುವ ಅಡಿಕೆ ತೋಟ





14 ಹಾವು, 4 ಸಸ್ತನಿಗಳ ರಕ್ಷಣೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ 4 ಜನ ಪ್ರಯಾಣಿಕರ ತಂಡ ಅಕ್ರಮವಾಗಿ ಹಾವುಗಳು ಹಾಗೂ ಸಸ್ತನಿ ಪ್ರಾಣಿಗಳನ್ನು ಕಳ್ಳ ಸಾಗಣೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಬ್ಯಾಂಕಾಕ್‌ನಿಂದ ಕಾಡು ಪ್ರಾಣಿಗಳ ಪ್ರವರ್ಗಕ್ಕೆ ಸೇರುವ ಹಾವು, ಸಸ್ತನಿಗಳನ್ನು ಕಳ್ಳಸಾಗಣೆ ಮಾಡುತ್ತಿರುವುದನ್ನು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳ ಕಾರ್ಯಾಚರಣೆ ವೇಳೆ ಈ ಕೃತ್ಯ ಜ.22 ರಂದು ಪತ್ತೆಯಾಗಿದೆ.



ಕಳ್ಳ ಸಾಗಣೆ ಮಾಡುತ್ತಿದ್ದ ಹಾವುಗಳು

ವಿಮಾನ ನಿಲ್ದಾಣದ ಚೆಕ್‌ಇನ್ ಬ್ಯಾಗ್‌ನಲ್ಲಿ ಹಾವುಗಳನ್ನು ಇರಿಸಿಕೊಂಡು ಬಂದಿದ್ದರು. ತಕ್ಷಣವೇ ಆರೋಪಿಗಳಿಂದ ವಶಕ್ಕೆ ಪಡೆದ ಹಾವುಗಳನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲಾಗಿದ್ದು, ಅವುಗಳನ್ನು ಸುರಕ್ಷಿತವಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಸ್ಥಳಾಂತರಿಸಲಾಗಿದೆ.

ಪ್ರಕರಣದಲ್ಲಿ ಓರ್ವ ಮಹಿಳೆ ಸೇರಿದಂತೆ ಇಬ್ಬರು ಯುವಕರನ್ನು ಬಂಧಿಸಿದ್ದು, ತನಿಖೆ ವೇಳೆ ಬೆಂಗಳೂರು ಹೊರವಲಯದ ಫಾರ್ಮ್ ಹೌಸ್‌ನಲ್ಲಿ ಕಳ್ಳ ಸಾಗಣೆ ಮಾಡಿದ್ದ ಒಟ್ಟು 139 ಕಾಡು ಪ್ರಾಣಿಗಳು ಪತ್ತೆಯಾಗಿದ್ದು, ಅದರಲ್ಲಿ ವಿವಿಧ ಜಾತಿಯ ಕೋತಿ, ಪಕ್ಷಿಗಳು, ಅನಕೊಂಡ ಹಾವುಗಳು ಇವೆ.

‘ಸ್ಯಾಂಟ್ರೊ’ ರವಿ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ, ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆಕಾಯ್ದೆ ಅಡಿ ಬಂಧನಕ್ಕೆ ಒಳಗಾಗಿ ಸಿಐಡಿ ವಶದಲ್ಲಿರುವ ಕೆ.ಎಸ್.ಮಂಜುನಾಥ ಅಲಿಯಾಸ್ ಸ್ಯಾಂಟ್ರೊ ರವಿ ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ. ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೈಸೂರಿನ 6ನೇ ಜಿಲ್ಲಾ ಹೆಚ್ಚುವರಿ ಮತ್ತು ಸೆಷನ್ಸ್ ನ್ಯಾಯಾಲಯವು ಜ. 30ರ ವರೆಗೆ ಸಿಐಡಿ ಕಸ್ಟಡಿಗೆ ನೀಡಿ ಆದೇಶಿಸಿತ್ತು. ಅದರಂತೆ ಆತನನ್ನು ಬೆಂಗಳೂರಿಗೆ ಕರೆ ತಂದು ಸಿಐಡಿ ಕಚೇರಿಯಲ್ಲಿ ವಿಚಾರಣೆ ನಡೆಸಲಾಗುತ್ತಿತ್ತು.

‘ಗುರುವಾರ ರಾತ್ರಿ ಊಟ ಸೇವಿಸದೆ ಮಾತ್ರೆ ತೆಗೆದುಕೊಂಡಿದ್ದ ರವಿ ಶುಕ್ರವಾರ ಬೆಳಿಗ್ಗೆ ಅಸ್ವಸ್ಥಗೊಂಡು ಕುಸಿದು ಬಿದ್ದಿದ್ದ. ಸಿಬ್ಬಂದಿ ಗಮನಿಸಿ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಬಳಿಕ ಆತನನ್ನು ಆಸ್ಪತ್ರೆಗೆ ದಾಖಲಿಸಲಾಯಿತು’ ಎಂದು ಮೂಲಗಳು ಹೇಳಿವೆ.

ಗ್ರೇಡ್– 2 ತಹಶೀಲ್ದಾರ್ ಹುದ್ದೆ: 47 ಮಂದಿಗೆ ನೇಮಕಾತಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2017ರ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯಲ್ಲಿ ಗ್ರೇಡ್‌–2 ತಹಶೀಲ್ದಾರ್ ಹುದ್ದೆಗೆ ಆಯ್ಕೆಯಾಗಿದ್ದ 50 ಮಂದಿಯ ಪೈಕಿ 47 ಮಂದಿಗೆ ಕಂದಾಯ ಇಲಾಖೆ ಶುಕ್ರವಾರ ನೇಮಕಾತಿ ಆದೇಶ ನೀಡಿದೆ.

106 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ 2017ರಲ್ಲಿ ಪ್ರಕ್ರಿಯೆ ಆರಂಭಿಸಲಾಗಿತ್ತು. 2021ರ ಫೆಬ್ರುವರಿಯಲ್ಲಿ ಮುಖ್ಯ ಪರೀಕ್ಷೆ ನಡೆದಿತ್ತು. 2022ರ ಸೆಪ್ಟೆಂಬರ್ 9ರಂದು ಆಯ್ಕೆಪಟ್ಟಿ ಪ್ರಕಟಿಸಲಾಗಿತ್ತು.

ಕಂದಾಯ ಇಲಾಖೆಯ ಮೂಲ ವೃಂದದ 44 ಹಾಗೂ ಹೈದರಾಬಾದ್ ಕರ್ನಾಟಕ ವೃಂದದ ಆರು ತಹಶೀಲ್ದಾರ್ ಗ್ರೇಡ್‌–2 ಹುದ್ದೆಗಳಿಗೆ ಒಟ್ಟು 50 ಅಭ್ಯರ್ಥಿಗಳ ಆಯ್ಕೆಪಟ್ಟಿ ಪ್ರಕಟಿಸಲಾಗಿತ್ತು. ಈಗ ಕಂದಾಯ ಇಲಾಖೆಯ ಮೂಲ ವೃಂದಕ್ಕೆ ಆಯ್ಕೆಯಾದ 42 ಮತ್ತು ಹೈದರಾಬಾದ್ ಕರ್ನಾಟಕ ವೃಂದಕ್ಕೆ ಆಯ್ಕೆಯಾದ ಐದು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.

‘ಭವಿಷ್ಯ ನಿಧಿ ನಿಮ್ಮ ಹತ್ತಿರ’ ಕಾರ್ಯಕ್ರಮಕ್ಕೆ ಚಾಲನೆ

‘ಸದಸ್ಯರ ಸಮಸ್ಯೆಗೆ ತ್ವರಿತ ಪರಿಹಾರ’

ಪ್ರಜಾವಾಣಿ ವಾರ್ತೆ

ರಾಮನಗರ: ಭವಿಷ್ಯ ನಿಧಿ ಸದಸ್ಯರ ಕುಂದುಕೊರತೆಗಳನ್ನು ಆಲಿಸಿ ಬಗೆಹರಿಸುವಲ್ಲಿ ಮಹತ್ವದ ಹೆಜ್ಜೆ ಇಟ್ಟಿರುವ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ‘ಭವಿಷ್ಯ ನಿಧಿ ನಿಮ್ಮ ಹತ್ತಿರ-2.0’ ಎಂಬ ಅಭಿಯಾನ ಹಮ್ಮಿಕೊಂಡಿದೆ.

ಶುಕ್ರವಾರ ದೇಶದಾದ್ಯಂತ ಏಕ ಕಾಲಕ್ಕೆ ಈ ಅಭಿಯಾನಕ್ಕೆ ಕೇಂದ್ರ ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಆರತಿ ಅಹುಜಾ ಆನ್‌ಲೈನ್ ಮೂಲಕ ಚಾಲನೆ ನೀಡಿದರು.

500ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಸಂಘಟನೆಯ ಅಧಿಕಾರಿ ಮತ್ತು ಸಿಬ್ಬಂದಿಯು ಕಾರ್ಮಿಕ ವರ್ಗದ ಜೊತೆ ಸಂವಾದ ನಡೆಸಿ ಅವರ ಅಹವಾಲುಗಳನ್ನು ಆಲಿಸಿದರು.

ಅಭಿಯಾನದ ನಿಮಿತ್ತ ಇಪಿಎಫ್‌ಒ ಆರ್.ಆರ್. ನಗರ ವಲಯ ಕಚೇರಿಯಿಂದ ಬಿಡದಿಯ ಹಿಂದೂಸ್ತಾನ್ ಕೋಕಾಕೋಲಾ ಬೇವರೇಜಸ್ ಕಾರ್ಖಾನೆ ಸಭಾಂಗಣದಲ್ಲಿ ಕಾರ್ಮಿಕರೊಂದಿಗೆ ಸಂವಾದ ನಡೆಯಿತು. ಇಪಿಎಫ್‌ಒನ ಆರ್.ಆರ್. ನಗರ ಪ್ರಾದೇಶಿಕ ಕಚೇರಿಯ ಜಾರಿ ಅಧಿಕಾರಿ (ಇ.ಒ) ನವನೀತ್ ಪ್ರಕಾಶ್ ನೇತೃತ್ವದ ತಂಡವು ಕಾರ್ಮಿಕರ ಕುಂದುಕೊರತೆ ಆಲಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ನವನೀತ್, ‘ಸದಸ್ಯರು ಇರುವಲ್ಲಿಗೆ ಸೇವೆ ಒದಗಿಸುವ ಸಲುವಾಗಿ ಈ ಅಭಿಯಾನ ಆರಂಭಿಸಲಾಗಿದೆ. ಈ ಮೊದಲು ಇಪಿಎಫ್‌ಒ ಕಚೇರಿಗಳಲ್ಲಿ ಮಾತ್ರ ಇಂತಹ ಕಾರ್ಯಕ್ರಮಗಳು ನಡೆಯುತ್ತಿದ್ದವು. ಈಗ ಕೈಗಾರಿಕಾ ವಲಯಗಳಲ್ಲಿನ ಕಚೇರಿಗಳಿಗೆ ಇದನ್ನು ವಿಸ್ತರಿಸಲಾಗಿದೆ. ಮುಂದೆ ಪ್ರತಿ ತಿಂಗಳ 27ರಂದು ಸಾರ್ವಜನಿಕ ಸ್ಥಳಗಳಲ್ಲಿ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು’ ಎಂದು ವಿವರಿಸಿದರು.

‘ಹೆಸರು ತಿದ್ದುಪಡಿ, ಹುಟ್ಟಿದ ದಿನಾಂಕ ಬದಲಾವಣೆ, ಸೇವೆಗೆ ಸೇರಿದ ದಿನಾಂಕ ಬದಲಾವಣೆ ಸೇರಿದಂತೆ ಅಗತ್ಯ ತಿದ್ದುಪಡಿ ಅರ್ಜಿಗಳನ್ನು ಸ್ಥಳದಲ್ಲಿಯೇ ಸ್ವೀಕರಿಸಿ ಅದನ್ನು ಪರಿಹರಿಸಲಾಗುವುದು. ಇಪಿಎಫ್‌ಒನಲ್ಲಿ ಖಾತೆ ಹೊಂದಿರುವ ಸದಸ್ಯರಿಗೆ ಸದ್ಯ ವಾರ್ಷಿಕ ಶೇ 8.1ರಷ್ಟು ಬಡ್ಡಿ ಸಿಗುತ್ತಿದೆ. ಇಪಿಎಫ್‌ಒ ಸೇವೆ ಮತ್ತು ಪ್ರಯೋಜನಗಳ ಕುರಿತು ಸದಸ್ಯರಿಗೆ ಮಾಹಿತಿ ನೀಡಲಾಗುವುದು’ ಎಂದು ವಿವರಿಸಿದರು.

‘ಇಪಿಎಫ್‌ಒ ಬೆಂಗಳೂರಿನಲ್ಲಿ ಆರ್.ಆರ್. ನಗರ, ರಿಚ್‌ಮಂಡ್ ಸರ್ಕಲ್, ಯಲಹಂಕ, ಬೊಮ್ಮಸಂದ್ರ, ಕೆ.ಆರ್. ಪುರಂ ಸೇರಿದಂತೆ ವಿವಿಧೆಡೆ ಕಚೇರಿಗಳನ್ನು ಹೊಂದಿದೆ. ನಮ್ಮ ಕಚೇರಿಗಳು ಇಲ್ಲದಿರುವ ಜಿಲ್ಲೆಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು’ ಎಂದು ಮಾಹಿತಿ ನೀಡಿದರು.

ವಲಯ ಕಚೇರಿಯ ಡಿಪಿಎ ರೂಬಿ ಜೋಸೆಫ್, ಎಸ್‌ಎಸ್‌ಎ ಸಂಕೇತ್ ಹಾಗೂ ಕೆಂಪರಾಜು ಜೊತೆಗಿದ್ದರು.

ಇಪಿಎಫ್‌ಒ ಪ್ರಾದೇಶಿಕ ಆಯುಕ್ತ ರಾಜೇಶ್ ಚಂದ್ರ, ಆರ್.ಆರ್. ನಗರ ಒಐಸಿ ಅಧಿಕಾರಿ ಇನಾಕೋಟಿ ಶ್ರೀದೇವಿ ಸೇರಿದಂತೆ ಅನೇಕರು ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಕಾರ್ಯಕ್ರಮದಲ್ಲಿ ಇಪಿಎಫ್‌ಒ ಆರ್‌ಆರ್ ನಗರ ಪ್ರಾದೇಶಿಕ ಕಚೇರಿಯ ಜಾರಿ ಅಧಿಕಾರಿ (ಇ.ಒ) ನವನೀತ್ ಪ್ರಕಾಶ್, ಡಿಪಿಎ ರೂಬಿ ಜೋಸೆಫ್, ಎಸ್‌ಎಸ್‌ಎ ಸಂಕೇತ್ ಹಾಗೂ ಕೆಂಪರಾಜು ಪಾಲ್ಗೊಂಡಿದ್ದರು

ಶನಿವಾರ, ಜನವರಿ 28, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಚರ್ಚೆ
ನವದೆಹಲಿಯಲ್ಲಿ ಶುಕ್ರವಾರ ನಡೆದ 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು

ಶನಿವಾರ, ಜನವರಿ 28, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 28 | ಪುಟ 26
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ ‘ಆ ದಿನಗಳ’ ವಿರಾಮ ಯಾಕೆ ಬೇಕು ಕುರಿತ ಚರ್ಚೆ ಇಲ್ಲಿದೆ.



ಪ್ರಜಾವಾಣಿ @75 ಕನ್ನಡ ಪತ್ರಿಕೋದ್ಯಮದ ಕ್ರೀಡಾಜ್ಯೋತಿ

ಬಹುಭಾಷಾ ನಟ ಜಮುನಾ ನಿಧನ 8

‘ಗೋಫಸ್ಟ್’ಗೆ ₹ 10 ಲಕ್ಷ ದಂಡ 3A

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,331 ▼	17,604 ▼	₹58,900 (ಬೆಂಗಳೂರು)	₹70,500 (ಬೆಂಗಳೂರು)	81.59 ▲

ಅದಾನಿ ಕಂಪನಿಗಳ ಬಂಡವಾಳ ಮೌಲ್ಯ ₹ 4.17 ಲಕ್ಷ ಕೋಟಿ ಕುಸಿತ, ಬ್ಯಾಂಕಿಂಗ್ ಷೇರು ಕುಸಿತ

ಅದಾನಿ ಸಮೂಹ: ಮೌಲ್ಯ ನಷ್ಟ

ನವದೆಹಲಿ, ಮುಂಬೈ (ಪಿಟಿಐ/ರಾಯಿಟರ್ಸ್): ಅಮೆರಿಕದ ಸಂಶೋಧನಾ ಸಂಸ್ಥೆ ‘ಹಿಂಡನ್‌ಬರ್ಗ್ ರಿಸರ್ಚ್’ನ ವರದಿ ಪ್ರಕಟವಾದ ನಂತರದಲ್ಲಿ ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯದಲ್ಲಿ ಶುರುವಾದ ಕುಸಿತವು ಶುಕ್ರವಾರವೂ ಮುಂದುವರಿದಿದೆ. ಬುಧವಾರ ಹಾಗೂ ಶುಕ್ರವಾರದ ವಹಿವಾಟಿನಲ್ಲಿ ಅದಾನಿ ಸಮೂಹದ ಷೇರುಪೇಟೆ ನೋಂದಾಯಿತ ಕಂಪನಿಗಳ ಷೇರುಮೌಲ್ಯದಲ್ಲಿ ಒಟ್ಟು ₹ 4.17 ಲಕ್ಷ ಕೋಟಿ ನಷ್ಟವಾಗಿದೆ.

ಬ್ಯಾಂಕಿಂಗ್ ವಲಯದ ಷೇರುಗಳ ಮೌಲ್ಯ ಕೂಡ ದೊಡ್ಡ ಮಟ್ಟದಲ್ಲಿ ಕುಸಿದಿದೆ. ಅದಾನಿ ಸಮೂಹಕ್ಕೆ ಬ್ಯಾಂಕಿಂಗ್ ವಲಯದಿಂದ ನೀಡಿರುವ ಸಾಲ ದೊಡ್ಡ ಪ್ರಮಾಣದಲ್ಲಿದೆ ಎಂಬ ಕಳವಳ ಇದಕ್ಕೆ ಕಾರಣ.

ಅದಾನಿ ಸಮೂಹದ ಕಂಪನಿಗಳ ಷೇರುಮೌಲ್ಯದಲ್ಲಿನ ಇಳಿಕೆಯು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಷೇರು ಮೌಲ್ಯದ ಮೇಲೆಯೂ ಪರಿಣಾಮ ಬೀರುತ್ತಿದೆ. ಏಕೆಂದರೆ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಸಮೂಹಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ನೀಡಿವೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಸಂಶೋಧನೆ ನಡೆಸದೆ ಸಿದ್ಧಪಡಿಸಿರುವ ವರದಿಯು ಅದಾನಿ ಸಮೂಹ, ಸಮೂಹದ ಷೇರುದಾರರು ಹಾಗೂ ಹೂಡಿಕೆದಾರರ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಿದೆ. ಸಮೂಹದ ಕಂಪನಿಗಳ ಷೇರುಮೌಲ್ಯದಲ್ಲಿ ಆಗುವ ಕುಸಿತದಿಂದ ಲಾಭ ಮಾಡಿಕೊಳ್ಳುವ ಸ್ಥಿತಿಯಲ್ಲಿ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆ ಇದೆ. ಈ ವಿಚಾರವನ್ನು ಸಂಸ್ಥೆಯೇ ಹೇಳಿದೆ’ ಎಂದು ಅದಾನಿ ಸಮೂಹದ ಮುಖ್ಯಸ್ಥ ಜತಿನ್ ಜಲುಂಧ್ವಾಲಾ ಗುರುವಾರ ಹೇಳಿದ್ದರು.

ಹಿಂಡನ್‌ಬರ್ಗ್ ರಿಸರ್ಚ್ ವಿರುದ್ಧ ಕಾನೂನು ಕ್ರಮ ಜರುಗಿಸುವ ಬಗ್ಗೆ ಪರಿಶೀಲನೆ ನಡೆಸುತ್ತಿರುವುದಾಗಿ ಸಮೂಹವು ಈಗಾಗಲೇ ತಿಳಿಸಿದೆ. ವರದಿಗೆ ಬದ್ಧವಾಗಿರುವುದಾಗಿ ಹಿಂಡನ್ ಬರ್ಗ್ ರಿಸರ್ಚ್ ಹೇಳಿದೆ.

‘ಮಿತಿ ಮೀರಿಲ್ಲ’: ಅದಾನಿ ಸಮೂಹಕ್ಕೆ ತಾವು ನೀಡಿರುವ ಸಾಲದ ಮೊತ್ತವು ಆರ್‌ಬಿಐ ನಿಗದಿ ಮಾಡಿರುವ ಮಿತಿಯೊಳಗೇ ಇದೆ ಎಂದು ಕೆಲವು ಬ್ಯಾಂಕ್‌ಗಳು ಶುಕ್ರವಾರ ಸ್ಪಷ್ಟಪಡಿಸಿವೆ. ಬ್ಯಾಂಕ್ ಬಳಿ ಸಾಲ ಕೊಡಲು ಲಭ್ಯವಿರುವ ಬಂಡವಾಳದಲ್ಲಿ ಶೇಕಡ 25ರಷ್ಟನ್ನು ಮಾತ್ರ ಒಂದೇ ಸಮೂಹಕ್ಕೆ ಸಾಲವಾಗಿ ನೀಡಬಹುದು ಎಂದು ನಿಯಮ ಹೇಳುತ್ತದೆ.

‘ಅದಾನಿ ಸಮೂಹಕ್ಕೆ ನೀಡಿರುವ ಸಾಲದ ವಿಚಾರದಲ್ಲಿ ಕಳವಳಪಡುವಂಥದ್ದು ಏನೂ ಇಲ್ಲ’ ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಕುಮಾರ್ ಖರಾ ಹೇಳಿದ್ದಾರೆ. ಬ್ಯಾಂಕ್ ಆಫ್ ಇಂಡಿಯಾ ಕೂಡ ತಾನು ನೀಡಿರುವ ಸಾಲವು ಮಿತಿಯನ್ನು ಮೀರಿಲ್ಲ ಎಂದು ಹೇಳಿದೆ.


ಎಲ್‌ಐಸಿಗೆ ನಷ್ಟ: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಅದಾನಿ ಸಮೂಹದಲ್ಲಿ ಹೂಡಿಕೆ ಮಾಡಿದ್ದು, ಎರಡು ದಿನಗಳ ವಹಿವಾಟಿನಲ್ಲಿ ಸಮೂಹದ ಷೇರುಮೌಲ್ಯ ಕುಸಿತ ಕಂಡ ಪರಿಣಾಮವಾಗಿ ಎಲ್‌ಐಸಿ ಹೂಡಿಕೆಯು ₹ 18 ಸಾವಿರ ಕೋಟಿಯಷ್ಟು ಕರಗಿದೆ.

ಅಲ್ಲದೆ, ಎಲ್‌ಐಸಿ, ಅದಾನಿ ಎಂಟರ್‌ಪ್ರೈಸಸ್‌ನ ಷೇರು ಮಾರಾಟ ಪ್ರಕ್ರಿಯೆ (ಎಫ್‌ಪಿಒ) ವೇಳೆ ₹ 300 ಕೋಟಿ ಹೊಸ ಹೂಡಿಕೆ ಮಾಡಿದೆ ಎಂದು ಗೊತ್ತಾಗಿದೆ.

ಇನ್ನಷ್ಟು ಸುದ್ದಿಗಳು 12

ಅದಾನಿ ಸಮೂಹದ ಕಂಪನಿಗಳ ಷೇರುಮೌಲ್ಯದಲ್ಲಿ ಶುಕ್ರವಾರ ಆದ ಕುಸಿತ (%)

1.ಅದಾನಿ ಟೋಟಲ್ ಗ್ಯಾಸ್ ಎಕನಾಮಿಕ್ ಜೋನ್
2.ಅದಾನಿ ಟ್ರಾನ್ಸ್‌ಮಿಷನ್
3.ಅದಾನಿ ಗ್ರೀನ್ ಎನರ್ಜಿ
4.ಅದಾನಿ ಎಂಟರ್‌ಪ್ರೈಸಸ್
5.ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಿಯಲ್
6.ಅದಾನಿ ವಿಲ್ಮರ್
7.ಅದಾನಿ ಪವರ್
8.ಅಂಬುಜಾ ಸಿಮೆಂಟ್ಸ್
9.ಎಸಿಸಿ



ಬ್ಯಾಂಕಿಂಗ್ ವಲಯದ ಷೇರುಗಳಲ್ಲಿ ಶುಕ್ರವಾರ ಆದ ಕುಸಿತ

ಹೆಸರು	ಕುಸಿತ(%)
ಎಸ್‌ಬಿಐ	5.03
ಐಸಿಐಸಿಐ ಬ್ಯಾಂಕ್	4.41
ಇಂಡಸ್‌ಇಂಡ್	3.43
ಎಕ್ಸಿಸ್ ಬ್ಯಾಂಕ್	2.07
ಕೋಟಕ್ ಬ್ಯಾಂಕ್	2.03
ಎಚ್‌ಡಿಎಫ್‌ಸಿ ಬ್ಯಾಂಕ್	1.96
ಬ್ಯಾಂಕ್ ಆಫ್ ಬರೋಡ	7.36
ಬ್ಯಾಂಕ್ ಆಫ್ ಇಂಡಿಯಾ	5.63
ಪಿಎನ್‌ಬಿ	5.31
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ	4.03

‘ನಿಭಾಯಿಸುವ ಸ್ಥಿತಿಯಲ್ಲಿ ಬ್ಯಾಂಕ್‌ಗಳ ಸಾಲ’

ಮುಂಬೈ (ರಾಯಿಟರ್ಸ್): ಭಾರತದ ಬ್ಯಾಂಕ್‌ಗಳು ಅದಾನಿ ಸಮೂಹಕ್ಕೆ ನೀಡಿರುವ ಸಾಲದ ಮೊತ್ತವು ‘ನಿಭಾಯಿಸಬಹುದಾದ ಮಿತಿ’ಯಲ್ಲಿ ಇದೆ ಎಂದು ಸಿಎಲ್‌ಎಸ್‌ಎ ಹಾಗೂ ಜೆಫರೀಸ್ ಬ್ರೋಕರೇಜ್ ಸಂಸ್ಥೆಗಳು ಅಂದಾಜಿಸಿವೆ. ‘ದೇಶದ ಬ್ಯಾಂಕಿಂಗ್ ವಲಯಕ್ಕೆ ಯಾವುದೇ ಕೆಟ್ಟ ಪರಿಣಾಮ ಎದುರಾಗುವ ಸಾಧ್ಯತೆ ನಮಗೆ ಕಾಣುತ್ತಿಲ್ಲ’ ಎಂದು ಜೆಫರೀಸ್ ಹೇಳಿದೆ.

ಅದಾನಿ ಸಮೂಹವು ಭಾರತದ ಬ್ಯಾಂಕ್‌ಗಳಿಂದ ಪಡೆದಿರುವ ಸಾಲದ ಮೊತ್ತವು ಅದರ ಒಟ್ಟು ಸಾಲದ ಶೇ40ರಷ್ಟು ಮಾತ್ರ ಎಂದು ಸಿಎಲ್‌ಎಸ್‌ಎ ಬ್ರೋಕರೇಜ್ ಸಂಸ್ಥೆ ಹೇಳಿದೆ.



ದೆಹಲಿ ವಿಶ್ವವಿದ್ಯಾಲಯದಲ್ಲಿ ‘ಬಿಬಿಸಿ ಸಾಕ್ಷ್ಯಚಿತ್ರ’ ಪ್ರದರ್ಶನವನ್ನು ಆಯೋಜಿಸಿದ್ದ ಭೀಮ್ ಆರ್ಮಿ ವಿದ್ಯಾರ್ಥಿ ಫೆಡರೇಷನ್‌ನ ಸದಸ್ಯರೊಬ್ಬರನ್ನು ಪೊಲೀಸರು ಶುಕ್ರವಾರ ವಶಕ್ಕೆ ಪಡೆದರು –ಪಿಟಿಐ ಚಿತ್ರ

ದೆಹಲಿ ವಿ.ವಿ: ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಯತ್ನ

24 ವಿದ್ಯಾರ್ಥಿಗಳು ಪೊಲೀಸ್ ವಶಕ್ಕೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಕುರಿತು ಬಿಬಿಸಿ ನಿರ್ಮಿಸಿರುವ ಸಾಕ್ಷ್ಯಚಿತ್ರವನ್ನು ದೆಹಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರದರ್ಶಿಸಲು ಮುಂದಾದ ವಿದ್ಯಾರ್ಥಿಗಳಲ್ಲಿ 24 ಮಂದಿಯನ್ನು ದೆಹಲಿ ಪೊಲೀಸರು ಶುಕ್ರವಾರ ವಶಕ್ಕೆ ಪಡೆದಿದ್ದಾರೆ. ವಿಶ್ವವಿದ್ಯಾಲಯ ನೀಡಿದ ದೂರಿನ ಆಧಾರದಲ್ಲೇ ಕ್ರಮ ತೆಗೆದುಕೊಂಡಿದ್ದೇವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬಿಬಿಸಿಯ ‘ಇಂಡಿಯಾ: ದಿ ಮೋದಿ ಕ್ವೆಶ್ಚನ್’ ಸಾಕ್ಷ್ಯಚಿತ್ರವನ್ನು ದೆಹಲಿ ವಿಶ್ವವಿದ್ಯಾಲಯದ ಕಲಾ ವಿಭಾಗದ ಬಳಿ ಶುಕ್ರವಾರ ಸಂಜೆ 5ಕ್ಕೆ ಪ್ರದರ್ಶಿಸುವುದಾಗಿ ಭೀಮ್ ಆರ್ಮಿ ಸಂಘಟನೆಯ ವಿದ್ಯಾರ್ಥಿ ಸದಸ್ಯರು ಘೋಷಿಸಿದ್ದರು.

ಜತೆಗೆ ವಿಶ್ವವಿದ್ಯಾಲಯದ ನಾರ್ತ್ ಕ್ಯಾಂಪಸ್‌ನಲ್ಲಿ ಸಂಜೆ 4ಕ್ಕೆ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸುವುದಾಗಿ ವಿದ್ಯಾರ್ಥಿ ಸಂಘಟನೆ ಎನ್‌ಎಸ್‌ಯುಐ ಘೋಷಿಸಿತ್ತು.

ಆದರೆ, ಸಾಕ್ಷ್ಯಚಿತ್ರ ಪ್ರದರ್ಶನಕ್ಕೂ ಮುನ್ನವೇ ದೆಹಲಿ ಪೊಲೀಸರು ವಿ.ವಿಯ ಆವರಣದಲ್ಲಿ ಸೇರಿದ್ದರು. ಎರಡೂ ಸ್ಥಳಗಳಲ್ಲಿ ಸಾಕ್ಷ್ಯಚಿತ್ರ ವೀಕ್ಷಣೆಗೆ ಸೇರಿದ ವಿದ್ಯಾರ್ಥಿಗಳನ್ನು ತೆರವು ಮಾಡಲು ಪೊಲೀಸರು ಮುಂದಾದರು.

ಪೊಲೀಸರ ಕ್ರಮವನ್ನು ಖಂಡಿಸಿ, ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ವಿದ್ಯಾರ್ಥಿಗಳನ್ನು ಪೊಲೀಸರು ಎಳೆದೊಯ್ದರು. ವಿದ್ಯಾರ್ಥಿಗಳನ್ನು ಪೊಲೀಸರು ಎಳೆದೊಯ್ಯುತ್ತಿರುವ ಚಿತ್ರ ಮತ್ತು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

8ನೇ ಪುಟ ನೋಡಿ

‘ಅನುಮತಿ ಪಡೆದಿರಲಿಲ್ಲ’

‘ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ವಿದ್ಯಾರ್ಥಿಗಳು ಅನುಮತಿ ಪಡೆದಿರಲಿಲ್ಲ. ಜತೆಗೆ ವಿ.ವಿಯಲ್ಲಿನ ಶಾಂತ ವಾತಾವರಣವನ್ನು ಹದಗೆಡಿಸಲು ಯತ್ನಿಸಿದ ಕಾರಣ ಪೊಲೀಸರಿಗೆ ದೂರು ನೀಡಲಾಗಿತ್ತು’ ಎಂದು ದೆಹಲಿ ವಿಶ್ವವಿದ್ಯಾಲಯದ ಮುಖ್ಯ ಮೇಲ್ವಿಚಾರಕರಾದ ರಜನಿ ಅಬ್ಬಿ ಹೇಳಿದ್ದಾರೆ. ‘ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದಿರುವುದು ನಿಜ. ಸೆಕ್ಷನ್ 144 ಅಡಿಯಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಹೀಗಿದ್ದೂ ವಿದ್ಯಾರ್ಥಿಗಳು ಅಲ್ಲಿ ಸೇರಿದ್ದು ಏಕೆ’ ಎಂದು ಅವರು ಪ್ರಶ್ನಿಸಿದ್ದಾರೆ ಎಂದು ಎನ್‌ಡಿ ಟಿ.ವಿ ವರದಿ ಮಾಡಿದೆ.

‘ವಿಶ್ವವಿದ್ಯಾಲಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ 2022ರ ಡಿಸೆಂಬರ್‌ನಿಂದ ಫೆಬ್ರುವರಿ 28ರವರೆಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ’ ಎಂದು ವಿಶ್ವವಿದ್ಯಾಲಯದ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಇನ್ನೊಂದು ಸುದ್ದಿ 8

ಪರಿಸರ ಅನುಮೋದನೆ: ಕರ್ನಾಟಕದಿಂದ ಮತ್ತಷ್ಟು ವಿವರಣೆ ಕೇಳಿದ ಆರ್‌ಇಸಿ

ಮಹದಾಯಿ: ಅರಣ್ಯ ಸಚಿವಾಲಯ ತಗಾದೆ

• ಮಂಜುನಾಥ ಹೆಬ್ಬಾರ್

ನವದೆಹಲಿ: ಮಹದಾಯಿ ಯೋಜನೆಯ ಭಾಗವಾದ ಕಳಸಾ ನಾಲಾ ತಿರುವು ಯೋಜನೆಗೆ 26.92 ಹೆಕ್ಟೇರ್ ಮೀಸಲು ಅರಣ್ಯ ಬಳಕೆಗೆ ತ್ವರಿತವಾಗಿ ಪರಿಸರ ಅನುಮೋದನೆ ನೀಡಲು ನಿರಾಕರಿಸಿರುವ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ, ಹುಲಿ ಕಾರಿಡಾರ್ ಹಾಗೂ ಪರಿಹಾರಾತ್ಮಕ ಹಸಿರು ಬೆಳೆಸುವ ಯೋಜನೆ ಮತ್ತಿತರ ವಿಷಯಗಳ ಕುರಿತು ವಿಸ್ತೃತ ಚರ್ಚೆ ಹಾಗೂ ವಿವರಣೆಯ ಅಗತ್ಯ ಇದೆ ಎಂದು ಸ್ಪಷ್ಟಪಡಿಸಿದೆ.

ಕೇಂದ್ರ ಪರಿಸರ ಸಚಿವಾಲಯದ ಉಪ ಮಹಾನಿರ್ದೇಶಕ (ಕೇಂದ್ರ) ಪಿ.ಸುಬ್ರಹ್ಮಣ್ಯಂ ಅಧ್ಯಕ್ಷತೆಯಲ್ಲಿ ಜನವರಿ 20ರಂದು ನಡೆದ ಪ್ರಾದೇಶಿಕ ಉನ್ನತಾಧಿಕಾರಿ ಸಮಿತಿಯ (ಆರ್‌ಇಸಿ) ಸಭೆಯಲ್ಲಿ ಪರಿಸರ ಅನುಮೋದನೆಯ ಪ್ರಸ್ತಾವದ ಕುರಿತು ಚರ್ಚೆ ನಡೆದು, ಈ ಕಾರ್ಯಸೂಚಿಯನ್ನು ಮುಂದೂಡಲು ತೀರ್ಮಾನಿಸಲಾಯಿತು.

ಜಲಾನಯನ ಪ್ರದೇಶದ ಸಂರಕ್ಷಣೆಗೆ ಸಂಬಂಧಪಟ್ಟ ಯಾವುದೇ ಸಲಹೆಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ. ಶೀಘ್ರ ಪರಿಸರ ಅನುಮೋದನೆ ನೀಡಬೇಕು

ರಾಕೇಶ್ ಸಿಂಗ್, ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ

ಪ್ರಜಾವಾಣಿ ವಿಶೇಷ

8ನೇ ಪುಟ ನೋಡಿ

‘ಸಮಗ್ರ ಪರಿಶೀಲನೆ ಅಗತ್ಯ’

- ಯೋಜನೆಯು ದಟ್ಟ ಅರಣ್ಯದ ಮೂಲಕ ಹಾದು ಹೋಗಲಿದೆ. ಯೋಜನೆ ಅನುಷ್ಠಾನದ ವೇಳೆ ಪರಿಸರ ನಾಶ ಆಗಲಿದೆ. ಆದರೆ, ಪರಿಹಾರಾತ್ಮಕವಾಗಿ ಹಸಿರು ಬೆಳೆಸಲು ಅಥಣಿ ತಾಲ್ಲೂಕಿನಲ್ಲಿ ಜಾಗ ಗುರುತಿಸಲಾಗಿದೆ. ಇದು ಒಣ ಪ್ರದೇಶ. ಇಂತಹ ಪ್ರದೇಶವನ್ನು ಒಪ್ಪಲು ಸಾಧ್ಯವಿಲ್ಲ.
- ಕೆಲವು ಕಡೆಗಳಲ್ಲಿ ಅಣೆಕಟ್ಟಿನ ಎತ್ತರ 9.8 ಮೀಟರ್ ಇರಲಿದೆ ಎಂದು ಪರಿಷ್ಕೃತ ವಿಸ್ತೃತ ಯೋಜನಾ ವರದಿಯಲ್ಲಿ (ಡಿಪಿಆರ್) ತಿಳಿಸಲಾಗಿದೆ. ಇದರಿಂದಾಗಿ, ಮುಳುಗಡೆ ಪ್ರದೇಶ ಇನ್ನಷ್ಟು ಹೆಚ್ಚಾಗಲಿದೆ.
- ಯೋಜನೆ ಅನುಷ್ಠಾನಗೊಂಡ ನಂತರ ಕಳಸಾ ನಾಲೆಯಿಂದ ನೀರು ಮಲಪ್ರಭಾ ಜಲಾಶಯಕ್ಕೆ ಹೋಗಲಿದೆ. ಈ ನೀರನ್ನು ಕುಡಿಯುವ ನೀರಿನ ಉದ್ದೇಶಕ್ಕೆ ಮಾತ್ರ ಬಳಸಲಾಗುತ್ತದೆ ಎಂಬುದನ್ನು ನಂಬಲು ಸಾಧ್ಯವಿಲ್ಲ.
- ಮಲಪ್ರಭಾ ಜಲಾಶಯ ಬಹುಪಯೋಗಿಯ ಯೋಜನೆ. ಜಲಾಶಯದ ನೀರನ್ನು ಕುಡಿಯುವ ನೀರಿಗೆ ಹಾಗೂ ನೀರಾವರಿ ಉದ್ದೇಶಕ್ಕೆ ಉಪಯೋಗಿಸಲಾಗುತ್ತದೆ. ಹಾಗಾಗಿ, ಇದಕ್ಕೆ ಪರಿಸರ ಅನುಮೋದನೆ ಹಾಗೂ ಸಂಬಂಧಿಸಿದ ಇತರ ನಿಬಂಧನೆಗಳು ಅನ್ವಯವಾಗುತ್ತದೆ.

ಸುಹಾಸ್ ಜಗನ್ನಾಥ ಗೋಡ್ಸೆ, ಆರ್‌ಇಸಿ ಸದಸ್ಯ

‘ವಸತಿಶಾಲೆಗಳಲ್ಲಿ ಪಿಯು ಕಾಲೇಜು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತು ವರ್ಷ ಪೂರೈಸಿರುವ ರಾಜ್ಯದ ಸರ್ಕಾರಿ ವಸತಿಶಾಲೆಗಳಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಪದವಿ ಪೂರ್ವ ಶಿಕ್ಷಣ ಆರಂಭಿಸಲು ಸೂಚಿಸಲಾಗಿದೆ ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅರಮನೆ ಮೈದಾನದಲ್ಲಿ ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ವಿಜ್ಞಾನ ಮೇಳ-2023 ಉದ್ಘಾಟಿಸಿ ಅವರು ಮಾತನಾಡಿದರು.

ಒಂದು ವಸತಿಶಾಲೆಗೆ ₹30 ಕೋಟಿ ವೆಚ್ಚವಾಗುತ್ತದೆ. ಆದರೂ ಮಕ್ಕಳಿಗೆ ಸೂಕ್ತ ವ್ಯವಸ್ಥೆ ಆಗಿಲ್ಲ. ಇದು ಹಿಂದಿನ ಸರ್ಕಾರಗಳ ಬಳುವಳಿ. ಗುತ್ತಿಗೆ ಆಧಾರಿತ ವ್ಯವಸ್ಥೆಯಿಂದ ಇಂತಹ ಪರಿಸ್ಥಿತಿ ಎದುರಾಗಿದೆ. ಮೂರು ವರ್ಷಗಳಿಂದ ಸುಧಾರಣೆಯಾಗುತ್ತಿದೆ. ಶಾಲೆಗಳ ಸಂಖ್ಯೆ ಒಂದು ಸಾವಿರ ತಲುಪಿದೆ. ಪರಿಶಿಷ್ಟ ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಿಸುವುದೇ ವಸತಿಶಾಲೆಗಳ ಮೊದಲ ಆದ್ಯತೆ. ಅದಕ್ಕಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದರು.

ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಗೋವಿಂದ ಕಾರಜೋಳ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಉಪಸ್ಥಿತರಿದ್ದರು.

ಯಾತ್ರೆ: ಕಾಶ್ಮೀರದಲ್ಲಿ ಭದ್ರತಾ ಲೋಪ

ಪ್ರಜಾವಾಣಿ ವಾರ್ತೆ

ಶ್ರೀನಗರ: ‘ಜಮ್ಮು–ಕಾಶ್ಮೀರ ಆಡಳಿತದಿಂದ ಗಂಭೀರ ಸ್ವರೂಪದ ಭದ್ರತಾ ಲೋಪವಾಗಿದೆ’ ಎಂದು ಆರೋಪಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ದಿನದ ಮಟ್ಟಿಗೆ ಭಾರತ್ ಜೋಡೊ ಯಾತ್ರೆಯನ್ನು ಶುಕ್ರವಾರ ರದ್ದು ಮಾಡಿದರು.

ಮಧ್ಯಾಹ್ನವಷ್ಟೆ ಯಾತ್ರೆ ಜಮ್ಮು–ಕಾಶ್ಮೀರವನ್ನು ಪ್ರವೇಶಿಸಿತ್ತು.

ಯಾತ್ರೆಯನ್ನು ರದ್ದುಗೊಳಿಸಿದ ನಂತರ ಅನಂತನಾಗ್ ಜಿಲ್ಲೆಯ ಖಾನಾಬಾಲ್‌ನಲ್ಲಿ ದಿಢೀರ್ ಪತ್ರಿಕಾಗೋಷ್ಠಿ ನಡೆಸಿದ ರಾಹುಲ್ ಗಾಂಧಿ, ‘ಬನಿಹಾಲ್‌ನಿಂದ ಕಾಜಿ ಗುಂಡಕ್ಕೆ ತೆರಳುವಾಗ, ಯಾತ್ರೆಯು ಜವಾಹರ್ ಸುರಂಗ ದಾಟುತ್ತಿದ್ದಂತೆಯೇ ನನ್ನ ಸ್ವಾಗತಕ್ಕಾಗಿ ಜನರು ದೊಡ್ಡ ಸಂಖ್ಯೆಯಲ್ಲಿ ಜಮಾವಣೆಗೊಂಡಿದ್ದರು. ಆದರೆ, ಈ ಜನರನ್ನು ನಿಯಂತ್ರಿಸಲು ಒಬ್ಬ ಪೊಲೀಸ್ ಸಿಬ್ಬಂದಿಯೂ ಇರಲಿಲ್ಲ’ ಎಂದು ಆರೋಪಿಸಿದರು.

‘ಯಾತ್ರೆಯನ್ನು ಮುಂದುವರಿಸುವುದು ಬೇಡ ಎಂದು ನನ್ನ ಭದ್ರತಾ ಸಿಬ್ಬಂದಿ ಸಲಹೆ ನೀಡಿದರು. ನಾನು ಅವರ ಸಲಹೆಯನ್ನು ಮೀರುವುದು ಸಾಧ್ಯವಿರಲಿಲ್ಲ’ ಎಂದರು.

‘ಭಾರತ್ ಜೋಡೊ ಯಾತ್ರೆಗೆ ಭದ್ರತೆ ಒದಗಿಸಲು ಸ್ಥಳೀಯ ಆಡಳಿತ ವಿಫಲವಾಗಿದೆ’ ಎಂದು ಎಐಸಿಸಿಯ ಜಮ್ಮು–ಕಾಶ್ಮೀರ ಉಸ್ತುವಾರಿ ರಜನಿ ಪಾಟೀಲ್ ಟ್ವೀಟ್ ಮಾಡಿದ್ದಾರೆ.

ಶುಕ್ರವಾರದಂದು ರಾಹುಲ್ ಗಾಂಧಿ ಅವರು 16 ಕಿ.ಮೀ ನಡೆಯಬೇಕಿತ್ತು. ಆದರೆ, ಅದನ್ನು 4 ಕಿ.ಮಿ.ಗೇ ಮೊಟಕುಗೊಳಿಸಬೇಕಾಯಿತು.

‘ಭದ್ರತಾ ಲೋಪವಾಗಿಲ್ಲ’: ಅನಂತನಾಗ್ (ಪಿಟಿಐ): ‘ಭಾರತ್ ಜೋಡೊ ಯಾತ್ರೆಗೆ ಒದಗಿಸಿರುವ ಭದ್ರತೆಯಲ್ಲಿ ಯಾವುದೇ ಲೋಪವಾಗಿಲ್ಲ. ಬನಿಹಾಲ್‌ನಿಂದ ಸಾಗುವ ಯಾತ್ರೆಯಲ್ಲಿ ದೊಡ್ಡಸಂಖ್ಯೆಯಲ್ಲಿ ಜನರು ಸೇರಿಕೊಳ್ಳುತ್ತಾರೆ ಎಂಬ ಮಾಹಿತಿಯನ್ನು ಸಂಘಟಕರು ತಿಳಿಸಿರಲಿಲ್ಲ’ ಎಂದು ಜಮ್ಮು–ಕಾಶ್ಮೀರದ ಎಡಿಜಿಪಿ ಹೇಳಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಎಂಎಸ್‌ಪಿ: 54 ಸಾವಿರ ಟನ್ ಕೊಬ್ಬರಿ ಖರೀದಿಗೆ ಆದೇಶ

ಬೆಂಗಳೂರು: ತೆಂಗು ಬೆಳೆಯುವ ಪ್ರದೇಶ ಹೆಚ್ಚಿನ ಪ್ರಮಾಣದಲ್ಲಿರುವ ರಾಜ್ಯದ ಏಳು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆ (ಎಂಎಸ್‌ಪಿ) ಅಡಿಯಲ್ಲಿ ಪ್ರತಿ ಟನ್‌ಗೆ ₹11,750ರ ದರದಲ್ಲಿ 54,750 ಟನ್ ಉಂಡೆ ಕೊಬ್ಬರಿ ಖರೀದಿಗೆ ಸಹಕಾರ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ತುಮಕೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕೊಬ್ಬರಿ ಖರೀದಿ ನಡೆಯಲಿದೆ.

45 ದಿನಗಳವರೆಗೆ ರೈತರ ನೋಂದಣಿಗೆ ಅವಕಾಶವಿದ್ದು, ಆರು ತಿಂಗಳವರೆಗೆ ಖರೀದಿ ನಡೆಯಲಿದೆ.



ಮಡಿಕೇರಿಯಲ್ಲಿ ವೈನ್ ಉತ್ಸವ

ಮಡಿಕೇರಿ: 'ಇಲ್ಲಿನ ರಾಜಾಸೀಟ್ ಉದ್ಯಾನದಲ್ಲಿ ಫಲಪುಷ್ಪ ಪ್ರದರ್ಶನ ಹಾಗೂ ಗಾಂಧಿ ಮೈದಾನದಲ್ಲಿ ವೈನ್ ಉತ್ಸವವನ್ನು ಫೆ.3ರಿಂದ 6ರವರೆಗೆ ಆಯೋಜಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದರು.

ಫೆ. 4ರಂದು ಅನುದಾನ ರಹಿತ ಶಾಲೆಗಳ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ಕುಸ್ಮ) ಫೆಬ್ರುವರಿ 4ರಂದು ಬೆಂಗಳೂರಿನಲ್ಲಿ ವಿಶೇಷ ಸಮ್ಮೇಳನ ಆಯೋಜಿಸಿದೆ.

ಕುಸ್ಮದ 40ನೇ ವಾರ್ಷಿಕೋತ್ಸವದ ಅಂಗವಾಗಿ ಬೆಂಗಳೂರಿನ ಜಯನಗರದ ಆರ್.ವಿ. ಟೀಚರ್ಸ್ ಕಾಲೇಜಿನಲ್ಲಿ ಹಮ್ಮಿಕೊಂಡಿರುವ ಈ ಸಮ್ಮೇಳನ ಅಂದು ಬೆಳಿಗ್ಗೆ 9:30ಕ್ಕೆ ಆರಂಭವಾಗಲಿದೆ.

ಅನುದಾನ ರಹಿತ ಶಾಲೆಗಳ ಸಮಸ್ಯೆ, ನ್ಯಾಯಾಲಯದ ತೀರ್ಪು, ಇಎಸ್‌ಐ, ಗ್ರ್ಯಾಚ್ಯುಟಿ, ಮಾನ್ಯತೆ ನವೀಕರಣ, ಆಸ್ತಿ ತೆರಿಗೆ, ಸರ್ಕಾರದ ನೂತನ ಆದೇಶಗಳ ಬಗ್ಗೆ ವಿವಿಧ ತಜ್ಞರಿಂದ ಮಾರ್ಗದರ್ಶನ, ಉಪನ್ಯಾಸಗಳು ನಡೆಯಲಿವೆ. ಶಿಕ್ಷಣ ತಜ್ಞರು, ಕಾನೂನು ತಜ್ಞರು ಭಾಗವಹಿಸುವರು.

ಶಿಕ್ಷಣ ತಜ್ಞ ಜಿ.ಎಸ್. ಶರ್ಮಾ ಅವರ ನೇತೃತ್ವದಲ್ಲಿ 1984ರಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಘಟನೆ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಹಿತರಕ್ಷಣೆಗಾಗಿ ಹೋರಾಡಿದ ಇತಿಹಾಸ ಹೊಂದಿದೆ. ಸರ್ಕಾರದ ಭಾಷಾ ನೀತಿಯ ಕುರಿತು ಸಂಘಟನೆ ನ್ಯಾಯಾಂಗ ಹೋರಾಟ ನಡೆಸಿ, ಜಯಗಳಿಸಿದೆ ಎಂದು ಸಂಘಟನೆಯ ಅಧ್ಯಕ್ಷ ಎಸ್. ಸತ್ಯಮೂರ್ತಿ, ಕಾರ್ಯದರ್ಶಿ ಎ.ಮರಿಯಪ್ಪ ಮಾಹಿತಿ ನೀಡಿದ್ದಾರೆ.

ನಿಧನವಾರ್ತೆ

ಟಿ.ಎಲ್.ಸುರೇಶ್



ಬೆಂಗಳೂರು: ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ ಹಾಗೂ ನಾಗರಬಾವಿ ಕ್ಲಬ್‌ನ ಮಾಜಿ ನಿರ್ದೇಶಕ ಟಿ.ಎಲ್.ಸುರೇಶ್ ಅವರು ಶುಕ್ರವಾರ ನಿಧನರಾದರು. ನಾಗರಬಾವಿಯ 10ನೇ ಬ್ಲಾಕ್‌ನಲ್ಲಿ ಅವರು ನೆಲೆಸಿದ್ದರು.

ಮೃತರಿಗೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಅವರ ಅಂಗಾಂಗಗಳನ್ನು ಹಳೆ ಕೊಲಂಬಿಯಾ ಆಸ್ಪತ್ರೆಗೆ ದಾನ ನೀಡಲಾಯಿತು. ಅಂತ್ಯಕ್ರಿಯೆ ಶನಿವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರ್ಯಾಚ್ಯುಟಿ ಪಾವತಿ ಸೇರಿ ಹಲವು ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಪ್ರತಿಭಟನೆ ಶುಕ್ರವಾರಕ್ಕೆ ಐದು ದಿನ ಪೂರೈಸಿತು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸ್ಥಳದ ಕೊರತೆಯ ಕಾರಣಕ್ಕೆ ಗಾಂಧಿ ನಗರದ ರಸ್ತೆಗೆ ಬಂದು ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆ ಆರಂಭಿಸಿದ್ದಾರೆ. ಚಳಿಯನ್ನೂ ಲೆಕ್ಕಿಸದೆ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ.

ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್) ಅಧೀನದ ರಾಜ್ಯ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಯುತ್ತಿದೆ.



ಬೆಂಗಳೂರಿನ ಫ್ರೀಡಂ ಪಾರ್ಕ್ ರಸ್ತೆಯಲ್ಲಿ ಶುಕ್ರವಾರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಪ್ರತಿಭಟನೆ ನಡೆಸಿದರು

ಶುಕ್ರವಾರವೂ ಬೇರೆ ಬೇರೆ ಜಿಲ್ಲೆಗಳಿಂದ ಬಂದ ಮತ್ತಷ್ಟು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಪ್ರತಿಭಟನೆಗೆ ಸೇರಿಕೊಂಡರು.

ಸರ್ಕಾರವು ಬೇಡಿಕೆ ಈಡೇರಿಸುವ ತನಕ ಈ ಉದ್ಯಾನ ಬಿಟ್ಟು ಕದಲುವುದಿಲ್ಲ ಎಂದು ಅವರು ಎಚ್ಚರಿಸಿದರು.

‘ಚೇತನ್‌ಗೆ ಅಂಗರಕ್ಷಕರನ್ನು ನೇಮಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಲನಚಿತ್ರ ನಟ ಚೇತನ್ ಅಹಿಂಸಾ ಅವರಿಗೆ ಸರ್ಕಾರದಿಂದ ಅಂಗರಕ್ಷಕರನ್ನು ನೇಮಿಸಿ, ಅವರ ಮೇಲಿನ ಪ್ರಕರಣಗಳನ್ನು ಕೈಬಿಡಬೇಕು’ ಎಂದು ದಲಿತ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ನಾಗರಾಜು ಆಗ್ರಹಿಸಿದ್ದಾರೆ.

ಈ ಸಂಬಂಧ ಸಮಿತಿ ಫೆ.14ಕ್ಕೆ ಪ್ರತಿಭಟನೆ ಹಮ್ಮಿಕೊಂಡಿದೆ. ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಚೇತನ್ ಅವರು ಸಮಾನತೆಯ ಹರಿಕಾರರಾಗಿದ್ದಾರೆ. ಅವರಿಗೆ ಇತ್ತೀಚಿನ ದಿನಗಳಲ್ಲಿ ಬೆದರಿಕೆ ಕರೆಗಳು ಜಾಸ್ತಿಯಾಗುತ್ತಿವೆ. ಆದ್ದರಿಂದ ಅವರಿಗೆ ಅಂಗರಕ್ಷಕರನ್ನು ನೇಮಕ ಮಾಡಬೇಕು. ಫೆ.14ರೊಳಗೆ ಬೇಡಿಕೆ ಈಡೇರಿಸದಿದ್ದಲ್ಲಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುತ್ತದೆ’ ಎಂದು ಎಚ್ಚರಿಕೆ ನೀಡಿದ್ದಾರೆ.

ಪ್ರತ್ಯೇಕ ಪ್ರಕರಣ: ಇಬ್ಬರ ಸಾವು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಹೊಸೂರು ಸರ್ವೀಸ್ ರಸ್ತೆಯ ಮುತ್ತೂಟ್ ಫಿನ್‌ಕಾರ್ಪ್ ಬಳಿ, ಪಾದಚಾರಿ ನಾಗರಾಜ್ ಬಸಪ್ಪ ಭೋವಿ (47) ಅವರಿಗೆ ಬೈಕ್ ಡಿಕ್ಕಿಯಾದ ಪರಿಣಾಮ ಅವರು ಮೃತಪಟ್ಟಿದ್ದಾರೆ.

ವೇಗವಾಗಿ ಬಂದ ಬೈಕ್ ನಾಗರಾಜ್‌ಗೆ ಡಿಕ್ಕಿಯಾದ ಪರಿಣಾಮ ಅವರು ಗಾಯಗೊಂಡು ಸ್ಥಳದಲ್ಲೇ ಕುಸಿದು ಬಿದ್ದಿದ್ದರು. ಸ್ಥಳೀಯರ ನೆರವಿನಿಂದ ಅವರನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ.

ಸದಾಶಿವನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಎಚ್‌ಕ್ಯೂಟಿಸಿ ಬಸ್ ನಿಲ್ದಾಣದ ಬಳಿ ಸೀಸನ್ಸ್ ಹೋಟೆಲ್ ಕಡೆಗೆ ರಸ್ತೆ ದಾಟುತ್ತಿದ್ದ ವ್ಯಕ್ತಿಗೆ ವೇಗವಾಗಿ ಬಂದ ಕಾರೊಂದು ಡಿಕ್ಕಿಯಾದ ಪರಿಣಾಮ 35 ವರ್ಷ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಮೃತರ ಗುರುತು ಪತ್ತೆಯಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಜ್ಯದ ವಸತಿಶಾಲೆ ಮಕ್ಕಳ ಮೊದಲ ಮೇಳ • ಇಸ್ರೊ ವಿಜ್ಞಾನಿ ನಾಗರಾಜ್ ಅನಂತ್ ಭಾಗಿ

ಗಮನಸೆಳೆದ ವಿಜ್ಞಾನ ಮಾದರಿಗಳು

ಪ್ರಜಾವಾಣಿ ವಾರ್ತೆ


ಬೆಂಗಳೂರಿನಲ್ಲಿ ಶುಕ್ರವಾರ ಆರಂಭವಾದ ವಿಜ್ಞಾನ ಮೇಳದಲ್ಲಿ ವಿದ್ಯಾರ್ಥಿಗಳು ವಿಮಾನದ ಮಾದರಿ ವೀಕ್ಷಿಸಿದರು

ಬೆಂಗಳೂರು: 'ಸಾರ್ ಅಷ್ಟೊಂದು ಉಪಗ್ರಹಗಳನ್ನು ವಿವಿಧ ದೇಶಗಳು ಭೂ ಕಕ್ಷೆಗೆ ಬಿಡುತ್ತಿವೆ. ಅವುಗಳ ಆಯಸ್ಸು ಮುಗಿದ ಮೇಲೆ ಭೂಮಿಗೆ ಬೀಳುವುದಿಲ್ಲವೇ? ಅಪಾಯ ಅಲ್ಲವೇ?'

–ಇದು ದಾವಣಗೆರೆ ಜಗಳೂರು ಮುಗ್ಗಿದರಾಗಿಹಳ್ಳಿ ಮೊರಾರ್ಜಿ ಶಾಲೆಯ ಭಾವನಾ, ತೃಪ್ತಿ ಅವರು ಶುಕ್ರವಾರ ಆರಂಭವಾದ ವಿಜ್ಞಾನ ಮೇಳದಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ವಿಜ್ಞಾನಿ ನಾಗರಾಜ್ ಅನಂತ್ ಅವರನ್ನು ಪ್ರಶ್ನಿಸಿದ ಪರಿ.

ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 'ಸಾಗರದಲ್ಲಿ ಅವುಗಳನ್ನು ಬೀಳಿಸಲಾಗುತ್ತದೆ. ಹಾಗಾಗಿ ಮನುಷ್ಯರಿಗೆ ಏನೂ ಆಗದು' ಎಂದರು.

'ಅಯ್ಯೋ ಅಲ್ಲಿನ ಎಷ್ಟೊಂದು ಜಲಚರಗಳು ಸಾಯುತ್ತವೆ ಅಲ್ಲವೆ?' ಎಂದ ಮಕ್ಕಳಲ್ಲಿನ ಪರಿಸರ ಪ್ರೀತಿಗೆ ಮೆಚ್ಚುಗೆ ವ್ಯಕ್ತವಾಯಿತು.

ನೆಲಮಂಗಲ ಸಮೀಪದ ಭೈರನಾಯಕನಹಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿಶಾಲೆಯ ಮಕ್ಕಳು ಸಿದ್ಧಪಡಿಸಿದ್ದ ಬೀದಿ ದೀಪದಲ್ಲಿ ಸಮಸ್ಯೆ ಎದುರಾದಾಗ ಮೊಳಗಿಸುವ ಎಚ್ಚರಿಕೆ ನೀಡುವ ಸೈರನ್, ಚನ್ನಗಿರಿ ತಾಲ್ಲೂಕು ಕಾಕನೂರು ಶಾಲೆಯ ಮಕ್ಕಳ ತ್ಯಾಜ್ಯ ಪ್ಲಾಸ್ಟಿಕ್ ಸದ್ಬಳಕೆಯ ತಂತ್ರಜ್ಞಾನ, ರಸ್ತೆ ಉಬ್ಬುಗಳಿಂದ ವಿದ್ಯುತ್ ಉತ್ಪಾದಿಸುವ ಚನ್ನಪಟ್ಟಣ ಹೊನ್ನನಾಯಕನ ಹಳ್ಳಿ ಮಕ್ಕಳ ಆವಿಷ್ಕಾರ, ಶಿವಮೊಗ್ಗ ಜಿಲ್ಲೆ ಗಾಜನೂರು ವಸತಿಶಾಲೆ ಮಕ್ಕಳ ವಾಲಿಬಾಲ್ ಅಂಕಣದಿಂದ ವಿದ್ಯುತ್ ಉತ್ಪಾದನೆ, ಚಾಮರಾಜಪೇಟೆ ಶಾಲೆಯ ಮಕ್ಕಳ ಭಾರದ ವಸ್ತು ಎತ್ತುವ ರಾಟೆಗಳು, ಆನೇಕಲ್ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಮಕ್ಕಳ ಪೆಪ್ಪರ್ ಭೂತ, ಕೋಲಾರ ಅಂಬೇಡ್ಕರ್ ವಸತಿಶಾಲೆ ಮಕ್ಕಳ ಸಮುದ್ರದಲ್ಲಿ ಹಡಗುಗಳಿಂದ ತೈಲ ಸೋರಿಕೆ ತಡೆ ಸಾಧನ, ಗೌರಿಬಿದನೂರು ಶಾಲೆ ಮಕ್ಕಳ ಔಷಧ ಸಸ್ಯ ಸಂರಕ್ಷಣೆ ವಿಧಾನಗಳು ಗಮನಸೆಳೆದವು.

ವಾತಾವರಣದಲ್ಲಿ ಹೆಚ್ಚಿನ ಇಂಗಾಲ ಡೈಆಕ್ಸೈಡ್ ಅನ್ನು ಆಮ್ಲಜನಕವಾಗಿ ಪರಿವರ್ತನೆ ಮಾಡುವ ಮಾದರಿ, ಜೈವಿಕ ಅನಿಲ ಉತ್ಪಾದನಾ ಮಾದರಿ, ಸದೃಢ ಹಾಗೂ ಆಧುನಿಕ ಕೃಷಿ ವಿಧಾನ, ವಿದ್ಯುತ್ ಕಳವು ನಿಯಂತ್ರಣ, ವಾತಾವರಣದಲ್ಲಿನ ತೇವಾಂಶ ವಿದ್ಯುತ್ ಆಗಿ ಪರಿವರ್ತನೆ, ಪ್ರವಾಹ ಮುನ್ಸೂಚನೆ ಸಾಧನಗಳು, ಬಾಹ್ಯಾಕಾಶದ ರೋಬೊ, ರಸ್ತೆ ಸುರಕ್ಷತೆ, ನೈಸರ್ಗಿಕ ತಂಪು, ಅಂಗವಿಕಲರಿಗೆ ಸೆನ್ಸಾರ್ ಸ್ಟಿಕ್, ಮಾದರಿ ಕೈಗಾರಿಕಾ ಪದ್ಧತಿ, ಸುರಕ್ಷತಾ ವಾಹನ ಸಂಚಾರ ಸೇರಿದಂತೆ ಹಲವು ಮಾದರಿಗಳು ಜನರನ್ನು ಆಕರ್ಷಿಸಿದವು.

ಭಾರತೀಯ ಸೇನೆ ಪ್ರಸುತ ಪಡಿಸಿರುವ ಆಕರ್ಷಕ ಶಸ್ತ್ರಾಸ್ತ್ರಗಳು, ರಾಕೆಟ್, ವಿಮಾನ ಹಾಗೂ ಹೆಲಿಕಾಪ್ಟರ್ ಮಾದರಿ, ವಿಂಟೇಜ್ ಕಾರುಗಳ ಪ್ರದರ್ಶನ ವಿದ್ಯಾರ್ಥಿಗಳನ್ನು ಆಕರ್ಷಿಸಿದವು. 200ಕ್ಕೂ ಹೆಚ್ಚು ವಸತಿಶಾಲೆಗಳ ವಿದ್ಯಾರ್ಥಿಗಳು ವಿವಿಧ ವಿಜ್ಞಾನ ಮಾದರಿಗಳ ಪ್ರಾತ್ಯಕ್ಷಿಕೆ ಪ್ರದರ್ಶಿಸಿದರು.


ವಿಜ್ಞಾನ ಮೇಳದಲ್ಲಿ ವಿದ್ಯಾರ್ಥಿಗಳು ಬಂದೂಕಿನ ಮಾದರಿ ವೀಕ್ಷಿಸಿದರು

ಮೇಳಕ್ಕೆ ಇಂದು ತೆರೆ

ವಿಜ್ಞಾನ ಮೇಳದ ಸಮಾರೋಪ ಶನಿವಾರ ಸಂಜೆ 4ಕ್ಕೆ ನಡೆಯಲಿದೆ. ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಬಿ. ಶ್ರೀರಾಮುಲು, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಎನ್‌ಸಿಸಿ ಅಧಿಕಾರಿ ಬಿ.ಎಸ್. ಕನ್ವಾರ್ ಭಾಗವಹಿಸುವರು.

ಸುದ್ದಿ 2 ನಿಮಿಷ

ನೌಕರಿ ಕೊಡಿಸುವ ನೆಪದಲ್ಲಿ ವಂಚನೆ: ಸಿನಿಮಾ ನಿರ್ಮಾಪಕ ಬಂಧನ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್)ನಲ್ಲಿ ನೌಕರಿ ಕೊಡಿಸುವುದಾಗಿ ನಂಬಿಸಿ ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿದ್ದ ಸಿನಿಮಾ ನಿರ್ಮಾಪಕ ಪ್ರಕಾಶ್ ಎಂಬಾತನನ್ನು ಆಡುಗೋಡಿ ಪೊಲೀಸರು ಬಂಧಿಸಿದ್ದಾರೆ.

ಕೆಎಂಎಫ್‌ನಲ್ಲಿ ಈಚೆಗೆ ತಾಂತ್ರಿಕ ಅಧಿಕಾರಿ ಹಾಗೂ ಸಹಾಯಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಪರಿಚಯಸ್ಥ ಅಭ್ಯರ್ಥಿಗಳಿಗೆ ನೌಕರಿ ಕೊಡಿಸುತ್ತೇನೆ ಎಂದು ಹೇಳಿ ಹಣ ಪಡೆದುಕೊಂಡಿದ್ದ. ಚಿಕ್ಕಬಳ್ಳಾಪುರ ತಾಲ್ಲೂಕಿನ ಚರಣ್‌ರಾಜ್ ಅವರಿಗೆ ನೌಕರಿ ಕೊಡಿಸುವುದಾಗಿ ಅವರಿಂದ ₹ 10 ಲಕ್ಷ ಪಡೆದುಕೊಂಡಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿ ಪ್ರಕಾಶ್ ನಿವೇಶನವೊಂದನ್ನು ಮಾರಾಟ ಮಾಡಿ 'ಶಬ್ಬಾಸ್ ಬಡ್ಡಿ ಮಗನೇ' ಎಂಬ ಸಿನಿಮಾ ನಿರ್ಮಿಸುತ್ತಿದ್ದ. ಸಿನಿಮಾ ನಿರ್ಮಾಣಕ್ಕೆ ಹಣದ ಸಮಸ್ಯೆ ಎದುರಾಗಿತ್ತು. ಆಗ ನೌಕರಿ ಕೊಡಿಸುತ್ತೇನೆ ಎಂದು 10ಕ್ಕೂ ಹೆಚ್ಚು ಮಂದಿಯಿಂದ ಹಣ ಪಡೆದು ವಂಚಿಸಿದ್ದ ಎಂದು ಮೂಲಗಳು ತಿಳಿಸಿವೆ.

ರಸ್ತೆಗೆ ಅಡ್ಡಲಾಗಿ ಟಿ.ಸಿ: ದೂರು



ನೆಲಮಂಗಲ: ತಾಲ್ಲೂಕಿನ ಹನುಮಂತೇಗೌಡನಪಾಳ್ಯದ ನಿವಾಸಿ ಎನ್. ಮಂಜುನಾಥ್ ಅವರು ತಮ್ಮ ನಿವೇಶನಕ್ಕೆ ಹೋಗುವ ದಾರಿಗೆ ಅಡ್ಡಲಾಗಿ ವಿದ್ಯುತ್ ಪರಿವರ್ತಕವನ್ನು (ಟಿ.ಸಿ) ಅಳವಡಿಸಿದ್ದಾರೆ ಎಂದು ದೂರಿದ್ದಾರೆ.

'ನಮ್ಮ ನಿವೇಶನಕ್ಕೆ ಓಡಾಡಲು ಇದು ಒಂದೇ ಹತ್ತು ಅಡಿ ರಸ್ತೆ ಇದ್ದು, ಈ ರಸ್ತೆಗೆ ಅಡ್ಡಲಾಗಿ ಹಿಂದೆಯೆ ವಿದ್ಯುತ್ ಕಂಬ ಅಳವಡಿಸಲಾಗಿತ್ತು. ವಿದ್ಯುತ್ ಕಂಬದಿಂದ ನಮಗೆ ಓಡಾಡಲು ತೊಂದರೆ ಇರಲಿಲ್ಲ. ಆದರೆ ಪ್ರಸ್ತುತ ಕಾಂಕ್ರೀಟ್ ಇಟ್ಟಿಗೆಗಳ ಅಗಲವಾದ ಬೆಡ್ ನಿರ್ಮಿಸಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗಿದೆ. ಇದರಿಂದ ಟ್ರ್ಯಾಕ್ಟರ್ ಹೋಗಲು ಸಹ ಇಕ್ಕಟ್ಟಾಗಿದೆ. ಸುತ್ತಲೂ ಮೆಷ್‌ನಿರ್ಮಿಸುವ ಕಾರ್ಯ ಬಾಕಿ ಇದೆ. ಮೆಷ್ ನಿರ್ಮಿಸಿದರೆ ಇನ್ನೂ ಇಕ್ಕಟ್ಟಾಗುತ್ತದೆ. ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ' ಎಂದರು.


ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ನಾಗರಾಜ್ ಅವರನ್ನು ಕೇಳಿದಾಗ, 'ವಿದ್ಯುತ್ ಪರಿವರ್ತಕ ಅಳವಡಿಸಿರುವುದು ಸರಿಯಾಗಿಯೆ ಇದೆ. ಸ್ಥಳೀಯರ ಅಭಿಪ್ರಾಯ ಪಡೆದೇ ಅಳವಡಿಸಿದ್ದೇವೆ. ಹಾಗೇನಾದರೂ ರಸ್ತೆಗೆ ಅಡ್ಡಲಾಗಿದೆ ಎಂದು ದೂರುದಾರರ ವಾದವಾದರೆ ಅವರು ಮುಖ್ಯಕಾರ್ಯನಿರ್ವಾಹಕರ ಬಳಿ ದೂರು ನೀಡಲು, ಹಾಗು ಸ್ಥಳಾಂತರಿಸಲು ಶುಲ್ಕ ಮತ್ತು ಸ್ಥಳ ತೋರಿಸಬೇಕಾಗುತ್ತದೆ' ಎಂದರು.

ಈ ಬಗ್ಗೆ ಪ್ರತಿಕ್ರಿಯಿಸಲು ಶ್ರೀನಿವಾಸಪುರ ಪಿಡಿಒ ಸುಮಿತ್ರಾ ಅವರಿಗೆ ಸಾಕಷ್ಟು ಬಾರಿ ಕರೆ ಮಾಡಿದರೂ ಅವರು ಕರೆ ಸ್ವೀಕರಿಸಲಿಲ್ಲ.

'ನಾಡಿನಲ್ಲಿ ಕನ್ನಡದ ಸ್ಥಿತಿ ಚಿಂತಾಜನಕ'

ಕಸಾಪ ಅಧ್ಯಕ್ಷ ಮಹೇಶ ಜೋಶಿ ಕಳವಳ • 'ಮ. ರಾಮಮೂರ್ತಿ ದತ್ತಿ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ


ಎಂ. ರಾಮೇಗೌಡ ಮತ್ತು ಗಾಯತ್ರಿ ರಾಮಣ್ಣ ಅವರಿಗೆ 'ವೀರಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ'ಯನ್ನು ಮಹೇಶ ಜೋಶಿ ಪ್ರದಾನ ಮಾಡಿದರು. ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು, ಎಂ.ಎ. ಪೊನ್ನಪ್ಪ, ಕಸಾಪ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗಶೆಟ್ಟಿ, ಪದ್ಮಿನಿ ನಾಗರಾಜು, ಸಾ.ರಾ. ಗೋವಿಂದು ಮತ್ತು ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕನ್ನಡ ನಾಡಿನಲ್ಲಿ ಕನ್ನಡದ ಸ್ಥಿತಿ ಚಿಂತಾಜನಕವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಹೋರಾಟಗಾರ ಮ. ರಾಮಮೂರ್ತಿ ಅಂಥವರ ಕೊರತೆ ಎದ್ದು ಕಾಣುತ್ತಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಕಸಾಪ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಸಮಾರಂಭದಲ್ಲಿ ಕನ್ನಡ ಚಳವಳಿಗಾರ್ತಿ ಗಾಯತ್ರಿ ರಾಮಣ್ಣ ಹಾಗೂ ಕನ್ನಡ ಹೋರಾಟಗಾರ ಎಂ.ರಾಮೇಗೌಡ ಅವರಿಗೆ 'ಮ. ರಾಮಮೂರ್ತಿ ದತ್ತಿ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು. 'ನಮ್ಮ ನೆಲದಲ್ಲಿ ಕನ್ನಡವನ್ನು ಉಳಿಸುವುದಕ್ಕೆ ಕಾನೂನು ರಚನೆ ಮಾಡಬೇಕಾದ ಅನಿವಾರ್ಯ ಬಂದಿದೆ. ಸಮಗ್ರ ಕನ್ನಡ ಅಭಿವೃದ್ಧಿ ಮಸೂದೆ-2022 ಅನ್ನು ಕಾನೂನು ಮಾಡುವಂತೆ ಸರ್ಕಾರಕ್ಕೆ ಒತ್ತಾಯ ಮಾಡಬೇಕಾದ ಕಾಲಘಟದಲ್ಲಿ, ಕನ್ನಡದ ಕಟ್ಟಾಳು ಮ. ರಾಮಮೂರ್ತಿಯಂತಹವರು ಇರಬೇಕಿತ್ತು' ಎಂದರು.

'ಬೆಂಗಳೂರಿನಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಈಗ ಶೇ 26ಕ್ಕೆ ಇಳಿದಿರುವುದು ಶೋಚನೀಯ. ಕನ್ನಡದ ಶಾಲೆಗಳು ದಿನ ಬೆಳಗಾದರೆ ನಾಪತ್ತೆಯಾಗುತ್ತಿವೆ. ಉತ್ತಮ ರೀತಿಯಲ್ಲಿ ನಡೆಯುತ್ತಿದ್ದ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಸ್ಕೂಲ್ ಹೆಸರಿನಲ್ಲಿ ಸರ್ಕಾರವೇ ಮಣ್ಣುಪಾಲು ಮಾಡುತ್ತಿದೆ. ಆಂಗ್ಲ ಭಾಷೆ ಕಲಿತರೆ ಉದ್ಯೋಗ ಸಿಗುತ್ತದೆ ಎನ್ನುವ ಭ್ರಮೆ ನಮ್ಮವರಲ್ಲಿ ಮನೆ ಮಾಡಿದೆ. ಮುಂದಿನ ದಿನಗಳಲ್ಲಿ ಕನ್ನಡ ನಾಪತ್ತೆ ಆಗುವ ಕಾಲ ಬಂದರೆ ಆಶ್ಚರ್ಯವಿಲ್ಲ' ಎಂದು ಕಳವಳ ವ್ಯಕ್ತಪಡಿಸಿದರು.

ಪತ್ರಕರ್ತ ಎಂ.ಎ. ಪೊನ್ನಪ್ಪ, 'ಮ. ರಾಮಮೂರ್ತಿಯವರ ಹೋರಾಟ ಸ್ವಾಭಿಮಾನದ ಪ್ರತೀಕವಾಗಿತ್ತು. ಪತ್ತೆದಾರಿ ಕಾದಂಬರಿಯನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಪತ್ತೆದಾರಿ ರಾಮಣ್ಣ ಎಂದೇ ಗುರುತಿಸಿಕೊಂಡಿದ್ದರು. ಕನ್ನಡ ಕಟ್ಟಿ ಬೆಳೆಸಲು ಕನ್ನಡದ ಮೇಲೆ ಅಭಿಮಾನ ಇದ್ದರೆ ಸಾಕು ಎಂದು ಹೇಳುತ್ತಲೇ ಕನ್ನಡವನ್ನು ಕಟ್ಟಿದ್ದರು. ಇಂದು ಅಂತಹ ಹೋರಾಟಗಾರರ ಕೊರತೆ ಇಂದು ಎದ್ದು ಕಾಣುತ್ತಿದೆ' ಎಂದು ಹೇಳಿದರು.

ಡಾ. ರಾಜಕುಮಾರ ಅಭಿಮಾನಿ ಸಂಘದ ರಾಜ್ಯಾಧ್ಯಕ್ಷ ಸಾ.ರಾ. ಗೋವಿಂದು, 'ದೇಶದಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆಯಾದ ನಂತರ ನಮ್ಮ ನಾಡಿನಲ್ಲಿ ಭಾಷಾಭಿಮಾನ ಇರುವ ಯಾವ ರಾಜಕಾರಣಿಯೂ ಬಾರದಿರುವುದು ನಮ್ಮ ನಾಡಿನ ದುರಂತ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಬೆಳೆಸುವ ನಿಟ್ಟಿನಲ್ಲಿ ಸರ್ಕಾರಕ್ಕೆ ಕಾಲ ಕಾಲಕ್ಕೆ ಬುದ್ಧಿ ಹೇಳಬೇಕು. ಕಾಲ ಬಂದರೆ ಸರ್ಕಾರದ ವಿರುದ್ಧ ಧ್ವನಿ ಎತ್ತಬೇಕು' ಎಂದರು.

ಮ.ರಾಮಮೂರ್ತಿ ಪತ್ನಿಗೆ ಆರ್ಥಿಕ ನೆರವು

'ಮ.ರಾಮಮೂರ್ತಿಯ ಅವರ ಪತ್ನಿಗೆ ಆರ್ಥಿಕ ನೆರವು ನೀಡುವಂತೆ ಸರ್ಕಾರಕ್ಕೆ ಪರಿಷತ್ತು ಮನವಿ ಮಾಡಿದೆ. ಒಂದು ವೇಳೆ ಆರ್ಥಿಕ ನೆರವು ನೀಡಲು ಸರ್ಕಾರ ಹಿಂದೇಟು ಹಾಕಿದಲ್ಲಿ ಪರಿಷತ್ತು ಮುಂದೆ ನಿಂತು, ಆರ್ಥಿಕ ಸಹಾಯ ಮಾಡಲಿದೆ. ಈ ಕುರಿತು ಅವಶ್ಯಕತೆ ಬಿದ್ದರೆ ಸರ್ಕಾರದ ವಿರುದ್ಧ ಕಾನೂನು ಹೋರಾಟಕ್ಕೂ ಪರಿಷತ್ತು ಹಿಂದೇಟು ಹಾಕುವುದಿಲ್ಲ' ಎಂದು ಮಹೇಶ ಜೋಶಿ ಹೇಳಿದರು.

ಪಿಂಚಣಿದಾರರ ತ್ರೈವಾರ್ಷಿಕ ಸಮ್ಮೇಳನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಪಿಂಚಣಿದಾರರು ಮತ್ತು ನಿವೃತ್ತರ ಮಹಾಸಂಘವು ತನ್ನ ನಾಲ್ಕನೇ ತ್ರೈವಾರ್ಷಿಕ ಸಮ್ಮೇಳನವನ್ನು ಇದೇ ಶನಿವಾರ ಮತ್ತು ಭಾನುವಾರ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಕೆ.ವಿ.ಆಚಾರ್ಯ, 'ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ ಅವರು ಸಮ್ಮೇಳನ ಉದ್ಘಾಟಿಸಲಿದ್ದಾರೆ. ಸಂಸದ ತೇಜಸ್ವಿ ಸೂರ್ಯ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಎಲ್ಲ ಸಾರ್ವಜನಿಕ ವಲಯಗಳು, ಖಾಸಗಿ ವಲಯಗಳು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಂಗಸಂಸ್ಥೆಗಳನ್ನು ಪ್ರತಿನಿಧಿಸುವ 700ಕ್ಕೂ ಅಧಿಕ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಉದ್ಘಾಟನಾ ಸಮಾರಂಭದ ಅಧಿವೇಶನದಲ್ಲಿ 1,500 ಪಿಂಚಣಿದಾರರು ಮತ್ತು ನಿವೃತ್ತರು ಭಾಗವಹಿಸಲಿದ್ದಾರೆ' ಎಂದು ಹೇಳಿದರು.

'ಪಿಂಚಣಿ ಹೆಚ್ಚಳ ಮತ್ತು ಪರಿಷ್ಕರಣೆಯನ್ನು ಪಿಂಚಣಿ ನಿಯಮಗಳ ಅನುಸಾರ ಮಾಡಬೇಕು. ಸೇವೆಯಲ್ಲಿರುವ ನೌಕರರಿಗೆ ನಿಯಮಿತ ವೇತನ ಪರಿಷ್ಕರಣೆ ಆಗುತ್ತಲೆ ಇದ್ದರೂ, 1992ರಿಂದಲೂ ಬ್ಯಾಂಕ್ ಪಿಂಚಣಿದಾರರಿಗೆ ಅವರ ಪಿಂಚಣಿ ಪರಿಷ್ಕರಣೆ ಆಗಿಲ್ಲ. ಪಿಂಚಣಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಬಗ್ಗೆ ಸಮ್ಮೇಳನದಲ್ಲಿ ಚರ್ಚಿಸಿ, ಪರಿಹಾರೋಪಾಯಕ್ಕೆ ಅಭಿಪ್ರಾಯ ಸಂಗ್ರಹಿಸಲಾಗುತ್ತದೆ' ಎಂದರು.


ಕೆ.ಎಸ್‌.ನರಸಿಂಹಸ್ವಾಮಿ ಅವರ ಜನ್ಮದಿನಾಚರಣೆ ಪ್ರಯುಕ್ತ ಕೆ.ಎಸ್‌.ನರಸಿಂಹಸ್ವಾಮಿ ಟ್ರಸ್ಟ್ ನಗರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕೆ.ಎಸ್‌.ನರಸಿಂಹಸ್ವಾಮಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಬಸವನಗುಡಿ ಕ್ಷೇತ್ರದ ಶಾಸಕ ಎಲ್‌.ಎ. ರವಿ ಸುಬ್ರಹ್ಮಣ್ಯ, ಸಂಗಾತಿ ವೆಂಕಟೇಶ್, ಗಾಯಕರಾದ ನಗರ ಶ್ರೀನಿವಾಸ ಉಡುಪ, ಕಿಕ್ಕೇರಿ ಕೃಷ್ಣಮೂರ್ತಿ, ಸುಬ್ರಹ್ಮಣ್ಯ, ಬಲರಾಮು, ಮೇಖಲಾ ವೆಂಕಟೇಶ್ ಇದ್ದರು

ದೂರು ವಿಚಾರಣೆಗೆ ಮೂರು ಸಮಿತಿ ರಚಿಸಿ ಅಧಿಸೂಚನೆ

ನವದೆಹಲಿ (ಪಿಟಿಐ): ಸಾಮಾಜಿಕ ಮಾಧ್ಯಮಗಳು ಹಾಗೂ ಇಂಟರ್‌ನೆಟ್ ಆಧಾರಿತ ವೇದಿಕೆಗಳ ವಿರುದ್ಧ ಬಳಕೆದಾರರು ನೀಡುವ ದೂರುಗಳ ವಿಚಾರಣೆ ನಡೆಸಲು ಕೇಂದ್ರ ಸರ್ಕಾರ ಮೂರು 'ದೂರುಗಳ ಮೇಲ್ಮನವಿ ಸಮಿತಿ'ಗಳನ್ನು (ಜಿಎಸಿ) ರಚಿಸಿದ್ದು, ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ದೂರುಗಳ ಮೇಲ್ಮನವಿ ಸಮಿತಿಯಲ್ಲಿ ಅಧ್ಯಕ್ಷರಲ್ಲದೇ, ಸರ್ಕಾರದ ವಿವಿಧ ಇಲಾಖೆಗಳಿಂದ ಆಯ್ಕೆ ಮಾಡಲಾಗುವ ಇಬ್ಬರು ಪೂರ್ಣಾವಧಿ ಸದಸ್ಯರು ಇರಲಿದ್ದಾರೆ. ಉದ್ಯಮ ಕ್ಷೇತ್ರದಿಂದ ನಿವೃತ್ತಿ ಹೊಂದಿದ ಹಿರಿಯ ಅಧಿಕಾರಿಯೊಬ್ಬರು ಇರುವರು. ಸಮಿತಿಯ ಸದಸ್ಯರ ಅಧಿಕಾರ ನೇಮಕಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಇರುತ್ತದೆ' ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಮೊದಲ ಸಮಿತಿಯ ಅಧ್ಯಕ್ಷರಾಗಿ ಗೃಹ ಸಚಿವಾಲಯ ಅಧೀನದ ಭಾರತೀಯ ಸೈಬರ್ ಕ್ರೈಂ ಸಮನ್ವಯ ಕೇಂದ್ರದ ಸಿಇಒ ಅವರು ಕಾರ್ಯನಿರ್ವಹಿಸುವರು. ನಿವೃತ್ತ ಐಪಿಎಸ್ ಅಧಿಕಾರಿ ಅಶುತೋಷ್ ಶುಕ್ಲ, ಪಂಜಾಬ್ ನ್ಯಾಷನಲ್ ಬ್ಯಾಂಕಿನ ಮಾಜಿ ಪ್ರಧಾನ ವ್ಯವಸ್ಥಾಪಕ ಸುನೀಲ್ ಸೋನಿ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಎರಡನೇ ಸಮಿತಿ ಅಧ್ಯಕ್ಷರನ್ನಾಗಿ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಜಂಟಿ ಕಾರ್ಯದರ್ಶಿ (ಪಾಲಿಸಿ ಮತ್ತು ಆಡಳಿತ ವಿಭಾಗ) ಅವರನ್ನು ನೇಮಕ ಮಾಡಲಾಗಿದೆ. ನೌಕಾಪಡೆಯ ನಿವೃತ್ತ ಅಧಿಕಾರಿ ಸುನೀಲ್‌ಕುಮಾರ್ ಗುಪ್ತ, ಎಲ್ ಅಂಡ್ ಟಿ ಕಂಪನಿಯ ಮಾಜಿ ಉಪಾಧ್ಯಕ್ಷ ಕವೀಂದ್ರ ಶರ್ಮಾ ಅವರನ್ನು ಸದಸ್ಯರಾಗಿ ನೇಮಕ ಮಾಡಲಾಗಿದೆ.

ಮೂರನೇ ಸಮಿತಿಯ ಮುಖ್ಯಸ್ಥರನ್ನಾಗಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಹಿರಿಯ ವಿಜ್ಞಾನಿ ಕವಿತಾ ಭಾಟಿಯಾ ಅವರನ್ನು ನೇಮಕ ಮಾಡಲಾಗಿದೆ. ಭಾರತೀಯ ರೈಲ್ವೆಯ ನಿವೃತ್ತ ಅಧಿಕಾರಿ ಸಂಜಯ್ ಗೋಯೆಲ್, ಐಡಿಬಿಐ ಇನ್‌ಟೆಕ್‌ನ ಮಾಜಿ ಎಂ.ಡಿ ಕೃಷ್ಣಗಿರಿ ರಘೋತ್ತಮರಾವ್ ಅವರನ್ನು ನೇಮಕ ಮಾಡಲಾಗಿದೆ.


ಅಭಿಯಾನ
ಸಂಭ್ರಮ ತಂಡದವರು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಸುರಕ್ಷಿತ ವಾಹನ ಚಾಲನೆ ಬಗ್ಗೆ ನಗರದಲ್ಲಿ ಹಮ್ಮಿಕೊಂಡಿದ್ದ 'ಡ್ರೈವ್ ಫಾರ್ ಚೇಂಜ್' ಅಭಿಯಾನದಲ್ಲಿ ಪಿಎಸ್‌ಐ ಪುಟ್ಟಮಾದಯ್ಯ ಅವರು ಮಕ್ಕಳೊಂದಿಗೆ ಜಾಗೃತಿ ಮೂಡಿಸಿದರು

'ಗೋ ಫಸ್ಟ್'ಗೆ ₹ 10 ಲಕ್ಷ ದಂಡ

ನವದೆಹಲಿ: ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 55 ಪ್ರಯಾಣಿಕರನ್ನು ಬಿಟ್ಟು ವಿಮಾನ ಹಾರಿದ್ದ ಪ್ರಕರಣಕ್ಕೆ ಸಂಬಂಧಿಸಿ, 'ಗೋ ಫಸ್ಟ್'ಗೆ ನಾಗರಿಕ ವಿಮಾನ ಯಾನ ನಿರ್ದೇಶನಾಲಯವು (ಡಿಜಿಸಿಎ) ಶುಕ್ರವಾರ ₹ 10 ಲಕ್ಷ ದಂಡ ವಿಧಿಸಿದೆ.

ಘಟನೆ ಸಂಬಂಧ ಜ.10ರಂದು ಗೋ ಫಸ್ಟ್ ವಿಮಾನ ಯಾನ ಸಂಸ್ಥೆಯ ಅಕೌಂಟೆಬಲ್ ಮ್ಯಾನೇಜರ್‌ಗೆ ಶೋಕಾಸ್ ನೀಡಲಾಗಿತ್ತು. ಜ. 25ರಂದು ವಿಮಾನಯಾನ ಸಂಸ್ಥೆಯು ವರದಿ ಸಲ್ಲಿಸಿತ್ತು. ವರದಿಯನ್ನು ಪರಿಶೀಲಿಸಿದ ನಂತರ ದಂಡ ವಿಧಿಸುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಡಿಜಿಸಿಎ ಹೇಳಿದೆ.

ಕಾವೇರಿ ವನ್ಯಜೀವಿಧಾಮದಲ್ಲಿ ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಸೆರೆ

ರಾಜ್ಯದಲ್ಲಿ ಬಿಳಿ ಸೀಳು ನಾಯಿ ಪತ್ತೆ

ಪ್ರಜಾವಾಣಿ ವಾರ್ತೆ


ಕಾವೇರಿ ವನ್ಯಜೀವಿಧಾಮದಲ್ಲಿ ಪತ್ತೆಯಾದ ಬಿಳಿ ಬಣ್ಣದ ಸೀಳು ನಾಯಿ

ರಾಮನಗರ: ಕಾವೇರಿ ವನ್ಯಜೀವಿಧಾಮದ ಸಂಗಮ ಅರಣ್ಯ ವಲಯ ವ್ಯಾಪ್ತಿಯಲ್ಲಿ ಬಿಳಿ ಸೀಳು ನಾಯಿ (ಅಲ್ಬಿನೊ) ಪತ್ತೆಯಾಗಿದೆ.

ರಾಜ್ಯದಲ್ಲಿ ಪತ್ತೆ ಆಗಿರುವ ಮೊದಲ ಅಲ್ಬಿನೊ ಸೀಳು ನಾಯಿ ಇದಾಗಿದೆ. ಸಾಮಾನ್ಯವಾಗಿ ಸೀಳು ನಾಯಿಗಳು ಕಂದು ಬಣ್ಣ ಹೊಂದಿದ್ದರೆ ಇದು ಭಾಗಶಃ ಬಿಳಿ ಬಣ್ಣ ಹೊದ್ದುಕೊಂಡಿದೆ.

ಜಿಲ್ಲೆಯ ಕನಕಪುರ ತಾಲ್ಲೂಕು ವ್ಯಾಪ್ತಿಯಲ್ಲಿನ ಸಂಗಮ ಅರಣ್ಯ ವಲಯ ಹಾಗೂ ಮಂಡ್ಯ ಜಿಲ್ಲೆಯ ಮುತ್ತತ್ತಿ ವಲಯದಲ್ಲಿ ಓಡಾಡುತ್ತಿರುವ ಕಂದು ವರ್ಣದ ಇತರೆ ಆರು ಸೀಳು ನಾಯಿಗಳ ಜೊತೆಗೆ ಈ ಬಿಳಿ ಸೀಳು ನಾಯಿ ಕಂಡುಬಂದಿದೆ. ಕಾಡಿನೊಳಗೆ ಅಳವಡಿಸಲಾದ ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಈ ತಿಂಗಳ ಆರಂಭದಲ್ಲಿ ಇದರ ಚಲನವಲನ ಕಂಡುಬಂದಿದೆ.

ನೇಚರ್ ಕನ್ಸರ್ವೇಷನ್ ಫೌಂಡೇಶನ್ ಮತ್ತು ಹೊಳೆಮತ್ತಿ ಫೌಂಡೇಶನ್‌ನಿಂದ ವನ್ಯಜೀವಿ ವಿಜ್ಞಾನಿ ಸಂಜಯ್ ಗುಬ್ಬಿ ನೇತೃತ್ವದ ತಂಡವು ಚಿರತೆಗಳ ಕುರಿತ ಅಧ್ಯಯನಕ್ಕಾಗಿ ವನ್ಯಜೀವಿಧಾಮದಲ್ಲಿ ಕ್ಯಾಮೆರಾಗಳನ್ನು ಅಳವಡಿಸಿತ್ತು. ಅದರಲ್ಲಿ ಈ ಇದರ ಛಾಯಾಚಿತ್ರ ಸೆರೆಯಾಗಿದೆ.

'ಅಲ್ಬಿನಿಸಂ' ಎನ್ನುವ ರೋಗದಿಂದ ಈ ಸೀಳು ನಾಯಿಯ ವರ್ಣವು ಕಂದು ಬಣ್ಣದಿಂದ ಬಿಳಿ ಬಣ್ಣಕ್ಕೆ ತಿರುಗಿದೆ. ಮೆಲನಿನ್ ಎನ್ನುವ ರಾಸಾಯನಿಕ ಅಂಶ ದೇಹದಲ್ಲಿ ಕಡಿಮೆ ಆದಾಗ ಅದಕ್ಕೆ ತುತ್ತಾದ ಪ್ರಾಣಿಯ ಕೂದಲು ಮತ್ತು ಚರ್ಮ ಬಿಳಿ ಬಣ್ಣಕ್ಕೆ ತಿರುಗುತ್ತದೆ.

'ಈ ಹಿಂದೆ ಬೇರೆ ಬೇರೆ ಪ್ರಾಣಿಗಳಲ್ಲಿ ಈ ರೀತಿಯ ಬಣ್ಣ ವ್ಯತ್ಯಾಸ ಆಗುವುದು ಕಂಡುಬಂದಿತ್ತು. ಆದರೆ, ಪ್ರಪಂಚದಲ್ಲೇ ಇದೇ ಮೊದಲ ಬಾರಿಗೆ ಸೀಳು ನಾಯಿಯೊಂದರಲ್ಲಿ ಈ ವರ್ಣ ಕಂಡುಬಂದಿದೆ' ಎನ್ನುತ್ತಾರೆ ಸಂಜಯ್ ಗುಬ್ಬಿ.

'ಈ ಅಲ್ಬಿನೊ ಸೀಳು ನಾಯಿ, ಬೀದಿ ನಾಯಿಯೊಡನೆ ಬೆರೆಕೆಯಾಗಿ ಹುಟ್ಟಿರುವ ಸಾಧ್ಯತೆಯೂ ಇದೆ. ಇದರ ಡಿಎನ್‌ಎ ಮಾದರಿಯನ್ನು ವಿಶ್ಲೇಷಿಸಿದರೆ ಮಾತ್ರ ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಲೆ ಹಾಕಬಹುದು' ಎನ್ನುತ್ತಾರೆ ಅವರು.

ಅಳಿವಿನಂಚಿನ ಪಟ್ಟಿಯಲ್ಲಿರುವ ಇವುಗಳಿಗೆ ಕನ್ನಡದಲ್ಲಿ ಸೀಳು ನಾಯಿ, ಕಾಡು ನಾಯಿ, ಕೆನ್ನಾಯಿ ಎಂದು ಕರೆಯುತ್ತಾರೆ. ಭಾರತ ಹೊರತುಪಡಿಸಿದರೆ ನೇಪಾಳ, ಬಾಂಗ್ಲಾದೇಶ, ಭೂತಾನ್, ಕಾಂಬೋಡಿಯ, ಚೀನಾ, ಇಂಡೋನೇಷ್ಯಾ ಸೇರಿದಂತೆ 11 ದೇಶಗಳಲ್ಲಷ್ಟೇ ಕಂಡುಬರುತ್ತವೆ.

ಹಿಂದೆಯೇ ಗೋಚರಿಸಿತ್ತು

'ಕಳೆದ ವರ್ಷದ ಏಪ್ರಿಲ್–ಮೇನಲ್ಲಿ ಕಾವೇರಿ ವನ್ಯಜೀವಿಧಾಮದಲ್ಲಿ ನಡೆದ ಹುಲಿ ಗಣತಿ ವೇಳೆ ಈ ಬಿಳಿ ಸೀಳುನಾಯಿ ಕಂಡುಬಂದಿತ್ತು. ಆದರೆ, ಅದರ ಛಾಯಾಚಿತ್ರಗಳು ದಾಖಲಾಗದ ಕಾರಣ ಅಧಿಕೃತವಾಗಿ ಪ್ರಕಟ ಆಗಿರಲಿಲ್ಲ' ಎನ್ನುತ್ತಾರೆ ಕಾವೇರಿ ವನ್ಯಜೀವಿಧಾಮದ ಸಂಗಮ ವಲಯ ಅರಣ್ಯಾಧಿಕಾರಿ ದೇವರಾಜು.

ನಗರದಲ್ಲಿ ಇಂದು


ರಥಸಪ್ತಮಿ ಆಚರಣೆ: ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ: ದೇವರಾಜ್, ಅತಿಥಿಗಳು: ಆರ್. ಅಶೋಕ್, ತೇಜಸ್ವಿ ಸೂರ್ಯ, ಉದಯ್ ಗರುಡಾಚಾರ್, ರವಿ ಸುಬ್ರಮಣ್ಯ, ಆಯೋಜನೆ: ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಸ್ಥಳ: ಶಾಲಿನಿ ಮೈದಾನ, 10ನೇ ಮುಖ್ಯ ರಸ್ತೆ, ಜಯನಗರ, ಬೆಳಿಗ್ಗೆ 5.30ರಿಂದ

ಲೂಯಿ ಬ್ರೈಲ್ ಅವರ 214ನೇ ಜನ್ಮೋತ್ಸವ ಸಮಾರಂಭ: ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ, ಆಯೋಜನೆ: ಕರ್ನಾಟಕ ಅಂಧರ ಕ್ಷೇಮಾಭ್ಯುದಯ ಸಂಸ್ಥೆ, ಸ್ಥಳ: ದಿ ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್, ಜೀವನ್ ಬಿಮಾ ನಗರ್, ಬೆಳಿಗ್ಗೆ 10

ಎನ್. ಶಂಭು ಅವರ 'ನಾರ್ಕೊ ಗಾಡ್' ಆಂಗ್ಲ ಕಾದಂಬರಿ ಬಿಡುಗಡೆ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಬಿ.ಎಲ್. ಶಂಕರ್, ಕಾದಂಬರಿ ಬಿಡುಗಡೆ: ಪ್ರೊ.ಎಚ್.ಎಸ್. ಶಿವಪ್ರಕಾಶ್, ಮುಖ್ಯ ಅತಿಥಿಗಳು: ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಪ್ರೊ.ಎಂ.ಎಸ್. ಆಶಾದೇವಿ, ಬಿ. ಸುರೇಶ್, ಆಯೋಜನೆ: ಶಂಭು ಕ್ರಿಯೇಷನ್ಸ್, ಸ್ಥಳ: ಅಲ್ಲಮ ಕಲಾಶಾಲೆ, ಸೀಗೆಹಳ್ಳಿ ರಸ್ತೆ, ಕನ್ನಲ್ಲಿ, ಬೆಳಿಗ್ಗೆ 10.30

ಪಂ.ಆರ್.ವಿ. ಶೇಷಾದ್ರಿ ಗವಾಯಿ ಅವರ 19ನೇ ವರ್ಷದ ಸ್ಮೃತಿ ಸ್ಮರಣೆ ಹಾಗೂ ನಾದವಾಹಿನಿ ಶ್ರೀದತ್ತ ಸಂಗೀತ ವಿದ್ಯಾನಿಕೇತನದ 36ನೇ ವಾರ್ಷಿಕೋತ್ಸವದ ಸಮಾರೋಪ: ಗಾಯನ: ನಾದವಾಹಿನಿ ಶ್ರೀದತ್ತ ಸಂಗೀತ ವಿದ್ಯಾನಿಕೇತನದ ವಿದ್ಯಾರ್ಥಿಗಳು, ಪಂ.ವಿ. ಎಂ. ನಾಗರಾಜ್, ಹಾರ್ಮೋನಿಯಂ: ಪಂ. ಜಯಕುಮಾರ್ ಹಿರೇಮಠ, ಪಂ. ಉಮಾಕಾಂತ್ ಪುರಾಣಿಕ್, ಹರೀಶ್ ಕರಣಂ, ತಬಲಾ: ಪಂ. ಶ್ರೀಕಾಂತ್ ದೇವಿಪುರ, ಪಂ. ರಾಜಗೋಪಾಲ್ ಕಲ್ಲೂರ್‌ಕರ್, ಪ್ರಜ್ವಲ್ ಶರ್ಮಾ, ಕೆ.ಸಿ. ಜಯರಾಮ್, ಆಯೋಜನೆ: ಪಂಡಿತ್ ಆರ್.ವಿ. ಶೇಷಾದ್ರಿಗವಾಯಿ ಪುಣ್ಯಸ್ಮೃತಿ ಸಮಿತಿ, ನಾದವಾಹಿನಿ ಶ್ರೀದತ್ತ ಸಂಗೀತ ವಿದ್ಯಾನಿಕೇತನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 2ರಿಂದ

'ಶಿಕ್ಷಣಕ್ಕಾಗಿ ಶ್ರೀ ಶ್ರೀ ಪ್ರಶಸ್ತಿ' ಪ್ರದಾನ ಸಮಾರಂಭ: ಉಪಸ್ಥಿತಿ: ಶ್ರೀ ಶ್ರೀ ರವಿಶಂಕರ್ ಗುರೂಜಿ, ಮುಖ್ಯ ಅತಿಥಿಗಳು: ರಾಜ್‌ಕುಮಾರ್ ರಂಜನ್ ಸಿಂಗ್, ಬಿ.ಸಿ. ನಾಗೇಶ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ ಹಾಗೂ ಸ್ಥಳ: ಆರ್ಟ್ ಆಫ್ ಲಿವಿಂಗ್, ಕನಕಪುರ ರಸ್ತೆ, ಸಂಜೆ 4



ಶ್ರೀ ಶ್ರೀ ರವಿಶಂಕರ ಗುರೂಜಿ

ಶಾಂತವೇರಿ ಗೋಪಾಲಗೌಡ ಶತಮಾನೋತ್ಸವ ಸಮಾರಂಭ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಆರಗ ಜ್ಞಾನೇಂದ್ರ, ವಿಶೇಷ ಆಹ್ವಾನಿತರು: ಎಚ್.ಡಿ. ದೇವೇಗೌಡ, ಮುಖ್ಯ ಅತಿಥಿಗಳು: ವಿ. ಸುನೀಲ್ ಕುಮಾರ್, ರಮೇಶ್ ಕುಮಾರ್, ಚಂದ್ರಶೇಖರ ಕಂಬಾರ, ಉಪಸ್ಥಿತಿ: ರಾಮಮನೋಹರ ಶಾಂತವೇರಿ, ಹಿ.ಎ. ಪುರುಷೋತ್ತಮ ಗೌಡ, ಆಯೋಜನೆ: ಶಾಂತವೇರಿ ಗೋಪಾಲಗೌಡ ಜನ್ಮ ಶತಮಾನೋತ್ಸವ ಆಚರಣಾ ಸಮಿತಿ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 4

ಫಲಪುಷ್ಪ ಪ್ರದರ್ಶನ ಪ್ರಯುಕ್ತ ಬಹುಮಾನ ವಿತರಣೆ: ದೊಡ್ಡರಂಗೇಗೌಡ, ವಿ. ನಾಗರಾಜ್, ಅಧ್ಯಕ್ಷತೆ: ಉದಯ್ ಗರುಡಾಚಾರ್, ಉಪಸ್ಥಿತಿ: ಕೆ. ನಾಗೇಂದ್ರ ಪ್ರಸಾದ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್‌ಬಾಗ್, ಮಧ್ಯಾಹ್ನ 2.30



ದೊಡ್ಡರಂಗೇಗೌಡ

ಚಂದ್ರಶೇಖರ ಕಂಬಾರ ಅವರ 87ನೇ ಜನ್ಮದಿನದ ನಿಮಿತ್ತ ವಿಚಾರ ಸಂಕಿರಣ: 'ಡಾ. ಚಂದ್ರಶೇಖರ ಕಂಬಾರರು ಮತ್ತು ಪ್ರಯೋಗಶೀಲತೆ', ಉದ್ಘಾಟನೆ: ಪಿ.ಎನ್. ಶ್ರೀನಿವಾಸಾಚಾರಿ, ಆಶಯ ನುಡಿ: ಪಂ. ರಾಜೀವ್ ತಾರಾನಾಥ್, ಪುಸ್ತಕ ಲೋಕಾರ್ಪಣೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಎಸ್. ಮಾಳಿಗಾಚಾರ್, ಆಯೋಜನೆ: ಮಯ ಪ್ರಕಾಶನ, ಸಿರಿನಾಡು ವೆಬ್ ಟಿವಿ, ಸ್ಥಳ: ರೋಟರಿ ಸಭಾಂಗಣ, ಸರ್ಕಾರಿ ಹೆಣ್ಣು ಮಕ್ಕಳ ಪದವಿಪೂರ್ವ ಕಾಲೇಜು ಆವರಣ, ಮಲ್ಲೇಶ್ವರ, ಬೆಳಿಗ್ಗೆ 11


ಚಂದ್ರಶೇಖರ ಕಂಬಾರ


ಗುರುಕುಲೋತ್ಸವ: ಮುಖ್ಯ ಅತಿಥಿ: ಎಂ. ಕೃಷ್ಣಪ್ಪ, ಗೌರವ ಅತಿಥಿಗಳು: ಪುಟ್ಟಣ್ಣ, ಶಶಿಕುಮಾರ್, ಮಾಗಡಿ ರೋಡ್ ಕೃಷ್ಣ, ಬಿ.ಟಿ.ಎಸ್. ನಾಗರಾಜು, ಆರ್. ರವಿಪ್ರಕಾಶ್, ಹರಿ ಚನ್ನಕೇಶವ, ಅಶೋಕ್ ಬಸ್ತಿ, ಆಯೋಜನೆ: ಗುರುಕುಲ ಇಂಟರ್‌ನ್ಯಾಷನಲ್ ಶಾಲೆ, ಸ್ಥಳ: ಸರ್ಕಾರಿ ಪ್ರಾಥಮಿಕ ಶಾಲೆಯ ಆಟದ ಮೈದಾನ, ಮಾಗಡಿ ರಸ್ತೆ, ಸಂಜೆ 4

ಶರಣ ಜ್ಞಾನಜ್ಯೋತಿ ಮಾಸಿಕ ಕಾರ್ಯಕ್ರಮ: ಮುಖ್ಯ ಅತಿಥಿಗಳು: ನ್ಯಾ. ಸುಭಾಷ್ ಬಿ. ಅಡಿ, ಅಧ್ಯಕ್ಷತೆ: ಎಸ್.ಆರ್. ಪ್ರಸಾದ್, ಉಪನ್ಯಾಸ: 'ಜೀವನದಲ್ಲಿ ಹಾಸ್ಯ', ಉಪನ್ಯಾಸಕರು: ಚೂಟಿ ಚಿದಾನಂದ, ಆಯೋಜನೆ: ಶರಣ ಸೇವಾ ಸಮಿತಿ, ಸ್ಥಳ: 3ನೇ ಮಹಡಿ, ಜ್ಞಾನ ಶಾಲೆ ಸೌಹಾರ್ದ ಬ್ಯಾಂಕ್ ಕಟ್ಟಡ, ಸಂಜಯನಗರ, ಸಂಜೆ 5.30


ನ್ಯಾ. ಸುಭಾಷ್ ಬಿ. ಅಡಿ

'ಇಡಬ್ಲ್ಯುಎಸ್ ಶೇ 10 ಮಹಾವಂಚನೆ' ಪುಸ್ತಕ ಬಿಡುಗಡೆ: ಪ್ರೊ. ರವಿವರ್ಮ ಕುಮಾರ್, ಪುಸ್ತಕ ಕುರಿತು: ಡಿ. ಉಮಾಪತಿ, ಮುಖ್ಯ ಅತಿಥಿಗಳು: ಬಾಬು ಮಾಥ್ಯೂ, ಅಶ್ವಿನಿ ಓಬುಳೇಶ್, ಸಂಪಾದಕರು: ಮಾವಳ್ಳಿ ಶಂಕರ್, ಬಿ. ಶ್ರೀಪಾದ ಭಟ್, ವಿಕಾಸ್ ಆರ್. ಮೌರ್ಯ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5

ಡಿ.ಎಸ್. ಚೌಗಲೆ ಅವರ 'ವಖಾರಿಧೂಸ' ನಾಟಕ ಕೃತಿ ಬಿಡುಗಡೆ: ಎಮ್. ಎಸ್. ಸತ್ಯು, ಅತಿಥಿ: ವಿಜಯಾ, ಕೃತಿ ಪರಿಚಯ: ಬೇಲೂರು ರಘುನಂದನ್, ಅಧ್ಯಕ್ಷತೆ: ಶ್ರೀನಿವಾಸ ಜಿ. ಕಪ್ಪಣ್ಣ, ಆಯೋಜನೆ: ಬೀಕಲ್ಚರ್ ಬೆಂಗಳೂರು, ಸಪ್ನ ಬುಕ್ ಹೌಸ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30


ಡಿ.ಎಸ್‌.ಚೌಗಲೆ

ಭರತನಾಟ್ಯ ರಂಗಪ್ರವೇಶ: ವಿದ್ಯಾ ವಿಶ್ವನಾಥನ್, ಗುರು: ದೀಪಾ ರಾಘವನ್, ಮುಖ್ಯ ಅತಿಥಿ: ಆರ್. ಮಾಧವ, ಆಯೋಜನೆ: ನೃತ್ಯ ಕಾವೇರಿ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.45

ಹಾಸ್ಯ ಕಾರ್ಯಕ್ರಮ: ಅತಿಥಿ: ಅಮಿತ್ ಟಂಡನ್, ಆಯೋಜನೆ: ಅಲ್ಗಾರಿದಮ್, ನೆಕ್ಸಸ್ ಶಾಂತಿನಿಕೇತನ, ವೈಟ್‌ಫೀಲ್ಡ್, ಸಂಜೆ 7

ಬಿಎಂಟಿಸಿಯಲ್ಲಿ ಮತ್ತೊಂದು ಗೋಲ್‌ಮಾಲ್: ಮಂಡಳಿ ನಿರ್ದೇಶಕನ ವಿರುದ್ಧ ಎಫ್‌ಐಆರ್ ದಾಖಲು

ಎಂ.ಡಿಗಳ ಸಹಿಯನ್ನೇ ನಕಲು ಮಾಡಿದ ಅಧಿಕಾರಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರಂತರ ಆರ್ಥಿಕ ಸಂಕಷ್ಟದಲ್ಲಿರುವ ಬಿಎಂಟಿಸಿಯಲ್ಲಿ ಈಗ ಮತ್ತೊಂದು ಅಕ್ರಮ ನಡೆದಿದೆ. ಮೂವರು ಐಎಎಸ್ ಅಧಿಕಾರಿಗಳ ಸಹಿಯನ್ನು ಹಿರಿಯ ಅಧಿಕಾರಿಗಳೇ ನಕಲು ಮಾಡಿ ಟೆಂಡರ್ ನವೀಕರಣ ಮಾಡಿ ಕೋಟ್ಯಂತರ ರೂಪಾಯಿ ವಂಚಿಸಿರುವುದು ತಡವಾಗಿ ಗೊತ್ತಾಗಿದೆ.

ಸಹಿ ನಕಲು ಪ್ರಕರಣದ ಪ್ರಮುಖ ರೂವಾರಿ ಎನ್ನಲಾಗಿರುವ ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರಾಗಿದ್ದ(-ವಾಣಿಜ್ಯ) ಶ್ರೀರಾಮ್ ಮುಲ್ಕಾವಾನ್ ಮತ್ತು ಆ ವಿಭಾಗದ ಸಿಬ್ಬಂದಿ ವಿರುದ್ಧ ಬಿಎಂಟಿಸಿ ಸಹಾಯಕ ಭದ್ರತಾ ಮತ್ತು ಜಾಗೃತ ಅಧಿಕಾರಿ ಸಿ.ಕೆ.ರಮ್ಯಾ ಅವರು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

ಶ್ರೀರಾಮ್ ಮುಲ್ಕಾವಾನ್ ಅವರು ಕಲಬುರ್ಗಿಗೆ ವರ್ಗಾವಣೆಯಾಗಿದ್ದು, ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದ ಆಡಳಿತ ಮಂಡಳಿ ನಿರ್ದೇಶಕರಾಗಿದ್ದರು.

'ಬಿಎಂಟಿಸಿ ಹಾಲಿ ವ್ಯವಸ್ಥಾಪಕಿ ನಿರ್ದೇಶಕಿ ಜಿ.ಸತ್ಯವತಿ, ಈ ಹಿಂದಿನ ವ್ಯವಸ್ಥಾಪಕ ನಿರ್ದೇಶಕರಾದ ವಿ.ಅನ್ಬುಕುಮಾರ್, ಸಿ.ಶಿಖಾ, ಭದ್ರತಾ ಮತ್ತು ಜಾಗೃತಿ ವಿಭಾಗದ ನಿರ್ದೇಶಕಿ ಜಿ.ರಾಧಿಕಾ, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದ ನಿರ್ದೇಶಕ ಸೂರ್ಯಸೇನ ಅವರ ಸಹಿಗಳನ್ನು ನಕಲು ಮಾಡಿ ಕರಾರು ಒಪ್ಪಂದ ಮತ್ತು ಆದೇಶ ಪತ್ರಗಳನ್ನು ಹೊರಡಿಸಿ ಬಿಎಂಟಿಸಿಗೆ ದ್ರೋಹ ಮಾಡಿದ್ದಾರೆ' ಎಂದು ಶ್ರೀರಾಮ್ ಮುಲ್ಕಾವಾನ್ ವಿರುದ್ಧ ಎಫ್‌ಐಆರ್‌ನಲ್ಲಿ ದೂರಲಾಗಿದೆ.

ಸಹಿ ನಕಲು ಹೇಗೆ?

ಹಿರಿಯ ಅಧಿಕಾರಿಗಳು ಬೇರೆ ಪತ್ರಗಳಿಗೆ ಮಾಡಿದ್ದ ಸಹಿಯನ್ನು ಕಲರ್ ಜೆರಾಕ್ಸ್ ಮಾಡಿಸಿ ಬೇರೆ ಒಪ್ಪಂದ ಪತ್ರಗಳಿಗೆ ಅದನ್ನು ಜೋಡಿಸಿ ಆದೇಶ ಹೊರಡಿಸುತ್ತಿದ್ದರು ಎಂದು ಜಿ.ಸತ್ಯವತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮೆಜೆಸ್ಟಿಕ್ ಬಿಎಂಟಿಸಿ ಬಸ್ ನಿಲ್ದಾಣದಲ್ಲಿರುವ ನಂದಿನಿ ಪಾರ್ಲರ್‌ನಲ್ಲಿ ಹಾಲಿನ ಉತ್ಪನ್ನದ ಜತೆಗೆ ಬೇರೆ ವಸ್ತುಗಳನ್ನೂ ಮಾರಾಟ ಮಾಡುತ್ತಿರುವ ಆರೋಪ ಬಂದಾಗ ತನಿಖೆಗೆ ಆದೇಶಿಸಿ ಕಡತ ತರಿಸಿ ನೋಡಿದೆ. ಟಿಪ್ಪಣಿ ಪತ್ರದಲ್ಲಿ ತಮ್ಮದೇ ಸಹಿ ನಕಲು ಮಾಡಿರುವುದು ಗಮನಕ್ಕೆ ಬಂತು' ಎಂದರು.

'ಅನುಮಾನ ಬಂದು ಎಲ್ಲಾ ಕಡತ ತರಿಸಲು ಪ್ರಯತ್ನಿಸಿದೆ. ಆದರೂ, ಆ ವಿಭಾಗದಿಂದ ಕಡತ ಬಂದಿರಲಿಲ್ಲ. ಅದೇ ಸಂದರ್ಭದಲ್ಲಿ ಅವರನ್ನು ಕಲಬುರಗಿಗೆ ವರ್ಗಾವಣೆ ಮಾಡಲಾಗಿತ್ತು. ಅದಾದ ಬಳಿಕ ಕೆಲವು ಕಡತಗಳನ್ನು ತರಿಸಿ ನೋಡಿದಾಗ ಈ ಹಿಂದಿನ ವ್ಯವಸ್ಥಾಪಕ ನಿರ್ದೇಶಕರ ಸಹಿಗಳನ್ನೂ ನಕಲು ಮಾಡಿರುವುದು ಗೊತ್ತಾಯಿತು' ಎಂದು ಹೇಳಿದರು.

ಅಧಿಕಾರಿ ಅಮಾನತು: ತನಿಖೆಗೆ ಆದೇಶ

ಪ್ರಾಥಮಿಕ ತನಿಖೆಯಲ್ಲಿ ಕೆಲವು ಪ್ರಕರಣಗಳಷ್ಟೇ ಬಹಿರಂಗವಾಗಿದ್ದು, ಅವರ ಅವಧಿಯಲ್ಲಿನ ಎಲ್ಲಾ ಕಡತಗಳ ಸಮಗ್ರ ತನಿಖೆಗೆ ಆದೇಶಿಸಲಾಗಿದೆ ಎಂದು ಜಿ.ಸತ್ಯವತಿ ತಿಳಿಸಿದರು.

ಶ್ರೀರಾಮ್ ಮುಲ್ಕಾವಾನ್ ಅವರನ್ನು ಅಮಾನತು ಮಾಡಲು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಶಿಫಾರಸು ಮಾಡಲಾಗಿತ್ತು. ಕೂಡಲೇ ಅಮಾನತು ಆದೇಶವನ್ನು ಅವರು ಹೊರಡಿಸಿದ್ದಾರೆ. ಆ ವಿಭಾಗದ ಸಿಬ್ಬಂದಿಯೂ ಈ ಅಕ್ರಮದಲ್ಲಿ ಭಾಗಿಯಾಗಿರುವ ಅನುಮಾನ ಇದೆ. ತನಿಖೆಯಿಂದ ಬಹಿರಂಗವಾಗಲಿದೆ ಎಂದು ಹೇಳಿದರು.

ನಕಲು ಸಹಿ ಪ್ರಕರಣಗಳು

- ಮೆಜೆಸ್ಟಿಕ್‌ನಲ್ಲಿರುವ ಕೆಎಂಎಫ್ ಮೂರು ಹಾಲಿನ ಮಳಿಗೆಗಳಿಗೆ ಪರವಾನಗಿ ವಿಸ್ತರಣೆ ಒಪ್ಪಂದ.
- ಶಿವಾಜಿನಗರ ಬಸ್ ನಿಲ್ದಾಣದಲ್ಲಿ ಎರಡು ಶೌಚಾಲಯ ಪರವಾನಗಿ ವಿಸ್ತರಿಸುವ ಒಪ್ಪಂದ.
- ಬಿಟಿಎಂ ಲೇಔಟ್ ಮತ್ತು ವಿಜಯನಗರ ಟಿಟಿಎಂಸಿ ಹೆಚ್ಚುವರಿ ಜಾಗ ಹಂಚಿಕೆ ಒಪ್ಪಂದ.



ಅಕ್ರಮವಾಗಿ ಶ್ರೀಗಂಧ ಮಾರಾಟ ಮಾಡುತ್ತಿದ್ದ ಆರೋಪಿಗಳು

ಶ್ರೀಗಂಧ ಮಾರಾಟ: ಇಬ್ಬರ ಬಂಧನ

ಬೆಂಗಳೂರು: ಅಕ್ರಮವಾಗಿ ಶ್ರೀಗಂಧ ಮಾರಾಟ ಮಾಡಲು ಮುಂದಾಗಿದ್ದ ಆಂಧ್ರಪ್ರದೇಶದ ಇಬ್ಬರು ಆರೋಪಿಗಳನ್ನು ಅರಣ್ಯ ಸಂಚಾರಿ ದಳದ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಕಾಗಿನಾಡ ರೌತ-ಲಪುಡಿಹಳ್ಳಿಯ ಸಿ.ಎಸ್.ಶ್ರೀನಿವಾಸ್ ಹಾಗೂ ಸೂರ್ಯಚಂದ್ರ ಸಿದ್ದಿರೆಡ್ಡಿ ಬಂಧಿತ ಆರೋಪಿಗಳು.

'ಇಂದಿರಾನಗರದ 80 ಅಡಿ ರಸ್ತೆಯ ಮೆಟ್ರೊ ನಿಲ್ದಾಣದ ಬಳಿ ಶ್ರೀಗಂಧ ತುಂಡುಗಳನ್ನು ಮಾರಾಟಕ್ಕೆ ತಂದಿದ್ದರು. ಬಂಧಿತರಿಂದ 4 ಕೆ.ಜಿ 810 ಗ್ರಾಂ ಶ್ರೀಗಂಧದ ತುಂಡುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.



ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿರುವ ಬಿಜೆಪಿ ಮುಖಂಡ ಎಸ್‌.ಎಂ. ಕೃಷ್ಣ ಅವರನ್ನು ರಾಜ್ಯ ಒಕ್ಕಲಿಗರ ಮಹಾಸಭಾ ವತಿಯಿಂದ ಅಭಿನಂದಿಸಲಾಯಿತು. ಅಧ್ಯಕ್ಷ ಎ.ಎಚ್‌. ಆನಂದ್, ಗೌರವ ಅಧ್ಯಕ್ಷ ತಲಕಾಡು ಚಿಕ್ಕರಂಗೇಗೌಡ, ಉಪಾಧ್ಯಕ್ಷರಾದ ಕೆ. ಅರಸಪ್ಪ, ನಟರಾಜ ಗೌಡ, ರಾಮರೆಡ್ಡಿ, ಪ್ರಧಾನ ಕಾರ್ಯದರ್ಶಿಗಳಾದ ಸತೀಶ್, ವೆಂಕಟೇಶಗೌಡ, ಕಾರ್ಯದರ್ಶಿಗಳಾದ ರಣಜಿತ್, ಮಹೇಶ್ ನಾಗವಾರ ಮತ್ತು ರಾಜ್ಯದ ಪದಾಧಿಕಾರಿಗಳು ಇದ್ದರು.

ಗುಣಾತ್ಮಕ ಆಡಳಿತಕ್ಕೆ ಕೃಷ್ಣ ಮಾದರಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಪರ ಮತ್ತು ಗುಣಾತ್ಮಕ ಆಡಳಿತಕ್ಕೆ ಎಸ್.ಎಂ. ಕೃಷ್ಣ ಮಾದರಿಯಾಗಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪದ್ಮವಿಭೂಷಣ ಪ್ರಶಸ್ತಿಗೆ ಆಯ್ಕೆಯಾಗಿರುವ ಬಿಜೆಪಿ ಮುಖಂಡ ಎಸ್.ಎಂ. ಕೃಷ್ಣ ಅವರ ನಿವಾಸಕ್ಕೆ ಶುಕ್ರವಾರ ಭೇಟಿ ನೀಡಿ ಅಭಿನಂದಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

ಅವರು, 'ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉದ್ಯಮಗಳ ಬೆಳವಣಿಗೆ, ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆ ಜಾರಿ, ರೈತರಿಗಾಗಿ ಯಶಸ್ವಿನಿ ಆರೋಗ್ಯ ವಿಮೆಯಂತಹ ಯೋಜನೆಗಳನ್ನು ಜಾರಿಗೊಳಿಸಿದ ಕೃಷ್ಣ ಅವರು, ರಾಜ್ಯದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದವರು. ಅವರನ್ನು ಕೇಂದ್ರ ಸರ್ಕಾರ ಗುರುತಿಸಿರುವುದು ಸಂತೋಷದ ಸಂಗತಿ' ಎಂದರು.

ಕೃಷ್ಣ ಅವರ ಸಾರ್ವಜನಿಕ ಜೀವನ ಎಲ್ಲರಿಗೂ ಮಾದರಿಯಾದುದು. ಕನ್ನಡ ಮತ್ತು ಕರ್ನಾಟಕಕ್ಕಾಗಿ ಅವರು ಅನೇಕ ಸವಾಲುಗಳನ್ನು ಎದುರಿಸಿದ್ದರು. ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದ ಉದ್ದಿಮೆಗಳು ಬೆಳೆದು ನಿಲ್ಲಲು ಅವರು ಪ್ರಮುಖ ಕಾರಣ ಎಂದು ಹೇಳಿದರು.

ಕೃಷ್ಣ ಅವರಿಗೆ ಬೊಮ್ಮಾಯಿ ಅವರು ಶಾಲು ಹೊದಿಸಿ, ಹಾರ ಹಾಕಿ ಗೌರವಿಸಿದರು.

ಸಚಿವರಾದ ಆರ್. ಅಶೋಕ ಮತ್ತು ಡಾ.ಕೆ. ಸುಧಾಕರ್ ಜತೆಗಿದ್ದರು.

ಬಾಲಕಿ ಮೇಲೆ ಅತ್ಯಾಚಾರ: ಅಪರಾಧಿಗೆ ಜೀವಾವಧಿ

ಬೆಂಗಳೂರು: ನಾಗದೋಷವಿದೆ ಎಂದು ಬಾಲಕಿಯನ್ನು ಕರೆಸಿಕೊಂಡು ಅತ್ಯಾಚಾರ ಎಸಗಿದ್ದ ಅಪರಾಧಿ ಮಂಜುನಾಥ್ ರಾವ್ ಎಂಬಾತನಿಗೆ ಎಫ್‌ಟಿಎಸ್‌ಸಿ 3ನೇ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ.

ಅಪರಾಧಿ ಮೆಡಿಕಲ್ ಗ್ಯಾಸ್ ಸಿಲಿಂಡರ್ ವ್ಯಾಪಾರ ನಡೆಸುತ್ತಿದ್ದ. ಅಂಗಡಿಯಲ್ಲಿ ದೇವರ ಫೋಟೊ ಇಟ್ಟುಕೊಂಡು ಅಂಗಡಿಗೆ ಬಂದ ಮಹಿಳೆಯರು ಹಾಗೂ ಬಾಲಕಿಯರಿಗೆ ಪ್ರಸಾದ ನೀಡಿ ನಾಗದೋಷವಿದೆ ಎಂದು ಹೇಳುತ್ತಿದ್ದ. ಹೀಗೆ ಬಂದ ಬಾಲಕಿಗೆ 2021ರ ಜುಲೈನಲ್ಲಿ ಅತ್ಯಾಚಾರ ಎಸಗಿದ್ದ.

ಈ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಭಾರತೀಯ ದಂಡ ಸಂಹಿತೆಯ ಕಲಂ 376 ಅಡಿ ಅಪರಾಧಿಗೆ 10 ವರ್ಷ ಕಠಿಣ ಶಿಕ್ಷೆ, ₹ 10 ಸಾವಿರ ದಂಡ, ಈ ಮೊತ್ತ ಪಾವತಿಸಲು ಸಾಧ್ಯವಾಗದಿದ್ದರೆ ಹೆಚ್ಚುವರಿ 1 ವರ್ಷ ಶಿಕ್ಷೆ, ಕಲಂ 506 ಅಡಿ 2 ವರ್ಷಗಳ ಕಠಿಣ ಶಿಕ್ಷೆ, ₹ 5 ಸಾವಿರ ದಂಡ, ತಪ್ಪಿದಲ್ಲಿ 1 ತಿಂಗಳು ಹೆಚ್ಚುವರಿ ಶಿಕ್ಷೆ ಹಾಗೂ ಪೋಕ್ಸೊ ಅಡಿ ಜೀವಾವಧಿ ಶಿಕ್ಷೆ ಹಾಗೂ ₹ 20 ಸಾವಿರ ದಂಡ ವಿಧಿಸಿ ನ್ಯಾಯಾಧೀಶರಾದ ಇಷ್ರತ್ ಜಹಾನ್ ಅರ ಆದೇಶಿಸಿದ್ದಾರೆ.

₹ 4 ಲಕ್ಷ ಪರಿಹಾರ ಹಾಗೂ ಆರೋಪಿಗೆ ವಿಧಿಸಿದ್ದ ದಂಡದ ಮೊತ್ತದಲ್ಲಿ ₹ 20 ಸಾವಿರವನ್ನು ನೊಂದ ಬಾಲಕಿಗೆ ನೀಡುವಂತೆಯೂ ಆದೇಶದಲ್ಲಿ ತಿಳಿಸಿದ್ದಾರೆ.

ಪಿಡಬ್ಲ್ಯುಡಿ ವ್ಯವಸ್ಥಾಪಕ ಆತ್ಮಹತ್ಯೆ



ಮಧುಗಿರಿ: ತಾಲ್ಲೂಕಿನ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ವಿಭಾಗ ಕಚೇರಿಯ ವ್ಯವಸ್ಥಾಪಕ ಲಕ್ಷ್ಮೀನರಸಿಂಹಯ್ಯ (56) ನೆಲಮಂಗಲ ತಾಲ್ಲೂಕಿನ ಶಿವಗಂಗೆಯ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಚೇರಿಯಲ್ಲಿನ ಇಬ್ಬರು ಅಧಿಕಾರಿಗಳ ಸೇವಾ ಪುಸ್ತಕ (ಸರ್ವೀಸ್ ರಿಜಿಸ್ಟರ್) ಕಳೆದು ಹೋಗಿತ್ತು. ಹುಡುಕಾಟ ನಡೆಸಿದರೂ ಸಿಕ್ಕಿಲ್ಲವೆಂದು ಮನ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕಚೇರಿ ಮೇಲಧಿಕಾರಿ ತಿಳಿಸಿದ್ದಾರೆ.

ಗುರುವಾರ ಲಕ್ಷ್ಮೀನರಸಿಂಹಯ್ಯ ರಾತ್ರಿ ಶಿವಗಂಗೆ ಪ್ರವಾಸಿ ಮಂದಿರಕ್ಕೆ ತೆರಳಿದ್ದ ಲಕ್ಷ್ಮೀ-ನರಸಿಂಹಯ್ಯ ಶುಕ್ರವಾರ ಮುಂಜಾನೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನೆಲಮಂಗಲ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

'ಕಣ್ಣಿಗೆ ಕಾಣುವ ಭ್ರಷ್ಟಾಚಾರ ಪ್ರಕರಣ: ಸ್ವಯಂ ಪ್ರೇರಿತ ದೂರು'

ಪ್ರಜಾವಾಣಿ ವಾರ್ತೆ

ವಿಜಯಪುರ: ಕಣ್ಣಿಗೆ ಕಾಣುವ ಭ್ರಷ್ಟಾಚಾರ ಪ್ರಕರಣಗಳಲ್ಲಿ ಮಾತ್ರ ಲೋಕಾಯುಕ್ತವೇ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಳ್ಳುತ್ತದೆಯೇ ವಿನಾ ಗಮನಕ್ಕೆ ಬಾರದ ಸಂಗತಿಗಳನ್ನಲ್ಲ ಎಂದು ಲೋಕಾಯುಕ್ತ ನ್ಯಾ. ಬಿ.ಎಸ್. ಪಾಟೀಲ ಸ್ಪಷ್ಟಪಡಿಸಿದರು.

ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡುವ ಸಂದರ್ಭದಲ್ಲಿ, 'ಗುತ್ತಿಗೆ ಕಾಮಗಾರಿಯಲ್ಲಿ ಶೇ 40 ರಷ್ಟು ಕಮಿಷನ್ ಎಂಬ ಆರೋಪ ಗುತ್ತಿಗೆದಾರರಿಂದ ಕೇಳಿಬಂದಿದ್ದರೂ ಈ ಬಗ್ಗೆ ಲೋಕಾಯುಕ್ತ ಸ್ವಯಂ ಪ್ರೇರಿತ ದೂರು ಏಕೆ ದಾಖಲಿಸಿಕೊಳ್ಳಲಿಲ್ಲ?' ಎಂಬ ಪ್ರಶ್ನೆಗೆ ಅವರು ಉತ್ತರಿಸಿದರು.

'ಕಣ್ಣಿಗೆ ಕಾಣುವ ಅಥವಾ ಅಧಿಕಾರಿ ದೊಡ್ಡ ಪ್ರಮಾಣದಲ್ಲಿ ಆಸ್ತಿ ಗಳಿಸಿದ ಸಂದರ್ಭಗಳಲ್ಲಿ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಬಹುದು. ಆದರೆ ಗಮನಕ್ಕೆ ಬಾರದ ಸಂಗತಿಗಳಿಗೆ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಲು ಬರುವುದಿಲ್ಲ' ಎಂದರು.

'ಭ್ರಷ್ಟಾಚಾರ ಭಯೋತ್ಪಾದನೆಯಿದ್ದಂತೆ. ಅದನ್ನು ಹೊಡೆದೋಡಿಸಲು ಜನರೇ ಕೈ ಜೋಡಿಸಬೇಕು. ಬೇಗ ಕೆಲಸ ಮಾಡಿಸಿಕೊಳ್ಳಲು ದುಡ್ಡು ಕೊಡುವ ಬದಲು, ಕೆಲಸ ಆಗದಿದ್ದಲ್ಲಿ ಧರಣಿ ಮಾಡುವೆ ಎಂಬ ಹಟ ಜನರಲ್ಲಿ ಬೆಳೆದಾಗಲಷ್ಟೇ ಸಂಪೂರ್ಣ ಕಡಿವಾಣ ಸಾಧ್ಯ' ಎಂದು ಅವರು ತಿಳಿಸಿದರು.

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,

ನಂ.2,(ಜಿ.ಎಂ.ಸಿ.ಬ್ಯಾಂಕ್ ಆವರಣ), ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018.
(Phone No.:080-29505301/29500301, E-mail – bdbrdccb@gmail.com)

ನಂ.ಬಿಡಿಸಿಸಿಬಿ:ಪ್ರ.ಕ.ಆಸಿ:
ನೇಮಕಾತಿ: 3576: 2022-23

ಪತ್ರಿಕಾ ಪ್ರಕಟಣೆ

ದಿನಾಂಕ:27.01.2023

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು **ONLINE** ಮುಖಾಂತರ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ http://recruitapp.in/bangalore_dccb2023 ರಲ್ಲಿ ನೀಡಿರುವ ಲಿಂಕ್ ಮುಖಾಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಖುದ್ದಾಗಿ/ಅಂಚೆ/ಕೊರಿಯರ್ ಇತ್ಯಾದಿಗಳ ಮೂಲಕ ಕಳುಹಿಸಲು ಅವಕಾಶವಿರುವುದಿಲ್ಲ. ನೇಮಕಾತಿ ಮಾಡಲು ಉದ್ದೇಶಿಸಿರುವ ವಿವಿಧ ವೃಂದಗಳ ಒಟ್ಟು 96 ಹುದ್ದೆಗಳನ್ನು ಸರ್ಕಾರಿ ಆದೇಶದ ಪ್ರಕಾರ ಈ ಕೆಳಕಂಡಂತೆ ವರ್ಗೀಕರಿಸಿ ಮೀಸಲರಿಸಲಾಗಿದೆ.

A) ಹುದ್ದೆಯ ಹೆಸರು : (ಕಿರಿಯ ಆಡಳಿತ ವರ್ಗ-I) ಶಾಖಾ ವ್ಯವಸ್ಥಾಪಕರು (Branch Managers)
ಹುದ್ದೆಗಳು: ಒಟ್ಟು 4 (ನಾಲ್ಕು) ಹುದ್ದೆಗಳು.

ವರ್ಗ	ಸಾಮಾನ್ಯ ಅಭ್ಯರ್ಥಿ (ಇತರೆ)	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಮಾಜಿ ಸೈನಿಕ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶ್ರಿತ ಅಭ್ಯರ್ಥಿ	ತೃತೀಯ ಲಿಂಗ	ಒಟ್ಟು ಹುದ್ದೆಗಳು
ಸಾಮಾನ್ಯ	–	–	1	1	–	–	–	–	2
ಪರಿಶಿಷ್ಟ ಜಾತಿ	–	–	–	–	–	–	–	–	–
ಪರಿಶಿಷ್ಟ ಪಂಗಡ		–	–	–	–	–	–	–	–
ಪ್ರ.ವರ್ಗ-I	1	–	–	–	–	–	–	–	1
ಪ್ರ.ವರ್ಗ-IIA	1	–	–	–	–	–	–	–	1
ಪ್ರ.ವರ್ಗ-IIB	–	–	–	–	–	–	–	–	–
ಪ್ರ.ವರ್ಗ-IIIA	–	–	–	–	–	–	–	–	–
ಪ್ರ.ವರ್ಗ-IIIB	–	–	–	–	–	–	–	–	–
ಒಟ್ಟು	2	–	1	1	–	–	–	–	4

B) ಹುದ್ದೆಯ ಹೆಸರು : (ಗ್ರೂಪ್ ಬಿ-I) ಹಿರಿಯ ಸಹಾಯಕರು (Senior Assistants)
ಹುದ್ದೆಗಳು: ಒಟ್ಟು 19 (ಹತ್ತೊಂಬತ್ತು) ಹುದ್ದೆಗಳು

ವರ್ಗ	ಸಾಮಾನ್ಯ ಅಭ್ಯರ್ಥಿ (ಇತರೆ)	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಮಾಜಿ ಸೈನಿಕ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶ್ರಿತ ಅಭ್ಯರ್ಥಿ	ತೃತೀಯ ಲಿಂಗ	ಒಟ್ಟು ಹುದ್ದೆಗಳು
ಸಾಮಾನ್ಯ	–	3	3	–	–	1	1	–	8
ಪರಿಶಿಷ್ಟ ಜಾತಿ	–	–	1	–	–	1	–	–	2
ಪರಿಶಿಷ್ಟ ಪಂಗಡ	1	1	–	–	–	–	–	–	2
ಪ್ರ.ವರ್ಗ-I	–	–	–	1	–	–	–	–	1
ಪ್ರ.ವರ್ಗ-IIA	1	1	1	–	–	–	–	–	3
ಪ್ರ.ವರ್ಗ-IIB	–	–	–	1	–	–	–	–	1
ಪ್ರ.ವರ್ಗ-IIIA	–	–	1	–	–	–	–	–	1
ಪ್ರ.ವರ್ಗ-IIIB	–	–	–	1	–	–	–	–	1
ಒಟ್ಟು	2	5	6	3	–	2	1	–	19

C) ಹುದ್ದೆಯ ಹೆಸರು : (ಗ್ರೂಪ್ ಬಿ-I) ಶೀಘ್ರಲಿಪಿಗಾರರು (Stenographer) ಹುದ್ದೆಗಳು: ಒಟ್ಟು 1 (ಒಂದು) ಹುದ್ದೆ.

ವರ್ಗ	ಸಾಮಾನ್ಯ ಅಭ್ಯರ್ಥಿ (ಇತರೆ)	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಮಾಜಿ ಸೈನಿಕ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶ್ರಿತ ಅಭ್ಯರ್ಥಿ	ತೃತೀಯ ಲಿಂಗ	ಒಟ್ಟು ಹುದ್ದೆಗಳು
ಸಾಮಾನ್ಯ	1	–	–	–	–	–	–	–	1
ಪರಿಶಿಷ್ಟ ಜಾತಿ	–	–	–	–	–	–	–	–	–
ಪರಿಶಿಷ್ಟ ಪಂಗಡ	–	–	–	–	–	–	–	–	–
ಪ್ರ.ವರ್ಗ-I	–	–	–	–	–	–	–	–	–
ಪ್ರ.ವರ್ಗ-IIA	–	–	–	–	–	–	–	–	–
ಪ್ರ.ವರ್ಗ-IIB	–	–	–	–	–	–	–	–	–
ಪ್ರ.ವರ್ಗ-IIIA	–	–	–	–	–	–	–	–	–
ಪ್ರ.ವರ್ಗ-IIIB	–	–	–	–	–	–	–	–	–
ಒಟ್ಟು	1	–	–	–	–	–	–	–	1

D) ಹುದ್ದೆಯ ಹೆಸರು : (ಗ್ರೂಪ್ ಬಿ-II) ಕಿರಿಯ ಸಹಾಯಕರು (Junior Assistants)
ಹುದ್ದೆಗಳು: ಒಟ್ಟು 43 (ನಲವತ್ತಮೂರು) ಹುದ್ದೆಗಳು

ವರ್ಗ	ಸಾಮಾನ್ಯ ಅಭ್ಯರ್ಥಿ (ಇತರೆ)	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಮಾಜಿ ಸೈನಿಕ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶ್ರಿತ ಅಭ್ಯರ್ಥಿ	ತೃತೀಯ ಲಿಂಗ	ಒಟ್ಟು ಹುದ್ದೆಗಳು
ಸಾಮಾನ್ಯ	3	6	5	1	2	1	–	1	19
ಪರಿಶಿಷ್ಟ ಜಾತಿ	2	2	2	–	1	–	–	–	7
ಪರಿಶಿಷ್ಟ ಪಂಗಡ	1	1	2	–	–	–	–	–	4
ಪ್ರ.ವರ್ಗ-I	–	–	1	–	–	–	–	–	1
ಪ್ರ.ವರ್ಗ-IIA	3	2	1	–	1	–	–	–	7
ಪ್ರ.ವರ್ಗ-IIB	–	–	1	–	–	–	–	–	1
ಪ್ರ.ವರ್ಗ-IIIA	–	1	1	–	–	–	–	–	2
ಪ್ರ.ವರ್ಗ-IIIB	–	1	1	–	–	–	–	–	2
ಒಟ್ಟು	9	13	14	1	4	1	–	1	43

E) ಹುದ್ದೆಯ ಹೆಸರು : (ಗ್ರೂಪ್ ಬಿ-II) ಕಂಪ್ಯೂಟರ್ ಆಪರೇಟರ್ (Computer Operators)
ಹುದ್ದೆಗಳು: ಒಟ್ಟು 2 (ಎರಡು) ಹುದ್ದೆಗಳು

ವರ್ಗ	ಸಾಮಾನ್ಯ ಅಭ್ಯರ್ಥಿ (ಇತರೆ)	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಮಾಜಿ ಸೈನಿಕ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶ್ರಿತ ಅಭ್ಯರ್ಥಿ	ತೃತೀಯ ಲಿಂಗ	ಒಟ್ಟು ಹುದ್ದೆಗಳು
ಸಾಮಾನ್ಯ	1	–	–	–	–	–	–	–	1
ಪರಿಶಿಷ್ಟ ಜಾತಿ	1	–	–	–	–	–	–	–	1
ಪರಿಶಿಷ್ಟ ಪಂಗಡ	–	–	–	–	–	–	–	–	–
ಪ್ರ.ವರ್ಗ-I	–	–	–	–	–	–	–	–	–
ಪ್ರ.ವರ್ಗ-IIA	–	–	–	–	–	–	–	–	–
ಪ್ರ.ವರ್ಗ-IIB	–	–	–	–	–	–	–	–	–
ಪ್ರ.ವರ್ಗ-IIIA	–	–	–	–	–	–	–	–	–
ಪ್ರ.ವರ್ಗ-IIIB	–	–	–	–	–	–	–	–	–
ಒಟ್ಟು	2	–	–	–	–	–	–	–	2

F) ಹುದ್ದೆಯ ಹೆಸರು : (ಗ್ರೂಪ್ ಸಿ) ವಾಹನ ಚಾಲಕರು (Drivers) ಹುದ್ದೆಗಳು: ಒಟ್ಟು 04 (ನಾಲ್ಕು) ಹುದ್ದೆಗಳು

ವರ್ಗ	ಸಾಮಾನ್ಯ ಅಭ್ಯರ್ಥಿ (ಇತರೆ)	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಮಾಜಿ ಸೈನಿಕ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶ್ರಿತ ಅಭ್ಯರ್ಥಿ	ತೃತೀಯ ಲಿಂಗ	ಒಟ್ಟು ಹುದ್ದೆಗಳು
ಸಾಮಾನ್ಯ	1	1	–	–	–	–	–	–	2
ಪರಿಶಿಷ್ಟ ಜಾತಿ	1	–	–	–	–	–	–	–	1
ಪರಿಶಿಷ್ಟ ಪಂಗಡ	1	–	–	–	–	–	–	–	1
ಪ್ರ.ವರ್ಗ-I	–	–	–	–	–	–	–	–	–
ಪ್ರ.ವರ್ಗ-IIA	–	–	–	–	–	–	–	–	–
ಪ್ರ.ವರ್ಗ-IIB	–	–	–	–	–	–	–	–	–
ಪ್ರ.ವರ್ಗ-IIIA	–	–	–	–	–	–	–	–	–
ಪ್ರ.ವರ್ಗ-IIIB	–	–	–	–	–	–	–	–	–
ಒಟ್ಟು	3	1	–	–	–	–	–	–	04

G) ಹುದ್ದೆಯ ಹೆಸರು : (ಗ್ರೂಪ್ ಸಿ) ನಾಲ್ಕನೇ ದರ್ಜೆ ನೌಕರರು (CLASS-IV)
ಹುದ್ದೆಗಳು: ಒಟ್ಟು 23 (ಇಪ್ಪತ್ತಮೂರು) ಹುದ್ದೆಗಳು

ವರ್ಗ	ಸಾಮಾನ್ಯ ಅಭ್ಯರ್ಥಿ (ಇತರೆ)	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಮಾಜಿ ಸೈನಿಕ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶ್ರಿತ ಅಭ್ಯರ್ಥಿ	ತೃತೀಯ ಲಿಂಗ	ಒಟ್ಟು ಹುದ್ದೆಗಳು
ಸಾಮಾನ್ಯ	2	3	3	–	1	–	1	–	10
ಪರಿಶಿಷ್ಟ ಜಾತಿ	–	2	1	–	–	–	1	–	4
ಪರಿಶಿಷ್ಟ ಪಂಗಡ	–	–	–	–	–	–	–	–	–
ಪ್ರ.ವರ್ಗ-I	–	–	1	–	–	–	–	–	1
ಪ್ರ.ವರ್ಗ-IIA	1	1	1	–	–	1	–	–	4
ಪ್ರ.ವರ್ಗ-IIB	–	–	–	1	–	–	–	–	1
ಪ್ರ.ವರ್ಗ-IIIA	–	–	–	1	–	–	–	–	1
ಪ್ರ.ವರ್ಗ-IIIB	–	1	–	1	–	–	–	–	2
ಒಟ್ಟು	3	7	6	3	1	1	2	–	23

ಟಿಪ್ಪಣಿ:

1. ಈ ನೇಮಕಾತಿ ಪ್ರಕಟಣೆಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಯಾಗಬಹುದಾಗಿದ್ದು, ನೇಮಕಾತಿ ಪ್ರಾಧಿಕಾರವು ಬದಲಾವಣೆ ಮಾಡುವ ಮತ್ತು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.
2. ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅರ್ಹತೆ ಪಡೆದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು.
3. ಅರ್ಜಿಗಳನ್ನು ಆನ್-ಲೈನ್ (ONLINE – ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ/ಕೊರಿಯರ್ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.
4. ಅಭ್ಯರ್ಥಿಗಳು ಅರ್ಜಿಯನ್ನು ONLINE ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು.
5. ಅಭ್ಯರ್ಥಿಗಳು ತಪ್ಪು/ಅಪೂರ್ಣ ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳತಕ್ಕದ್ದು.

GM – General Merit	ST – Scheduled Tribe
C-I – Category I	Ex-MP – Ex-Military Person
2A – Category 2A	Rural – Rural Candidate
2B – Category 2B	KMS – Kannada Medium Student
3A – Category 3A	PDP – Project Displaced Person
3B – Category 3B	PH – Physically Handicapped
SC- Scheduled Caste	TG – Transgender

ವಿಶೇಷ ಸೂಚನೆ:
ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ, ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಮತ್ತು ಶುಲ್ಕವನ್ನು ಪಾವತಿಸತಕ್ಕದ್ದು.

1. ವೇತನ ಶ್ರೇಣಿ:

ಹುದ್ದೆಯ ಹೆಸರು: (ಕಿರಿಯ ಆಡಳಿತ ವರ್ಗ-I) ಶಾಖಾ ವ್ಯವಸ್ಥಾಪಕರು (Branch Managers)
ಹುದ್ದೆಗಳು: ಒಟ್ಟು 04 (ನಾಲ್ಕು) ಹುದ್ದೆಗಳು
ವೇತನ ಶ್ರೇಣಿ : ರೂ.40900-1100-46400-1250-53900-1450-62600-1650-72500-1900-78200

ಹುದ್ದೆಯ ಹೆಸರು : (ಗ್ರೂಪ್ ಬಿ-I) ಹಿರಿಯ ಸಹಾಯಕರು (Senior Assistants)
ಹುದ್ದೆಗಳು: ಒಟ್ಟು 19 ಹುದ್ದೆಗಳು (ಹತ್ತೊಂಬತ್ತು) ಹುದ್ದೆಗಳು
ವೇತನ ಶ್ರೇಣಿ : ರೂ.37900-950-39800-1100-46400-1250-53900-1450-62600 - 1650-70850

ಹುದ್ದೆಯ ಹೆಸರು:(ಗ್ರೂಪ್ ಬಿ-I) ಶೀಘ್ರಲಿಪಿಗಾರರು (Stenographer) ಹುದ್ದೆ: ಒಟ್ಟು 1 (ಒಂದು) ಹುದ್ದೆ:
ವೇತನ ಶ್ರೇಣಿ : ರೂ.37900-950-39800-1100-46400-1250-53900-1450-62600-1650-70850

ಹುದ್ದೆಯ ಹೆಸರು : (ಗ್ರೂಪ್ ಬಿ-II) ಕಿರಿಯ ಸಹಾಯಕರು (Junior Assistant) ಹುದ್ದೆಗಳು: ಒಟ್ಟು 43 (ನಲವತ್ತಮೂರು) ಹುದ್ದೆಗಳು
ವೇತನ ಶ್ರೇಣಿ : ರೂ.30350-750-32600-850-36000-950-39800-1100-46400-1250-53900-1450-58250

ಹುದ್ದೆಯ ಹೆಸರು : (ಗ್ರೂಪ್ ಬಿ-II) ಕಂಪ್ಯೂಟರ್ ಆಪರೇಟರ್ (Computer Operators)
ಹುದ್ದೆಗಳು: ಒಟ್ಟು 2 (ಎರಡು) ಹುದ್ದೆಗಳು
ವೇತನ ಶ್ರೇಣಿ : ರೂ.30350-750-32600-850-36000-950-39800-1100-46400-1250-53900-1450-58250.

ಹುದ್ದೆಯ ಹೆಸರು : (ಗ್ರೂಪ್ ಸಿ) ವಾಹನ ಚಾಲಕರು Drivers ಹುದ್ದೆಗಳು: ಒಟ್ಟು 4 (ನಾಲ್ಕು) ಹುದ್ದೆಗಳು :
ವೇತನ ಶ್ರೇಣಿ: ರೂ.27650-650-29600-750-32600-850-36000-950-39800- 1100-46400-1250-52650

ಹುದ್ದೆಯ ಹೆಸರು : (ಗ್ರೂಪ್ ಸಿ) ನಾಲ್ಕನೇ ದರ್ಜೆ ನೌಕರರು (CLASS-IV)
ಹುದ್ದೆಗಳು: ಒಟ್ಟು 23 (ಇಪ್ಪತ್ತಮೂರು) ಹುದ್ದೆಗಳು :
ವೇತನ ಶ್ರೇಣಿ: ರೂ.23500-550-24600-600-27000-650-29600-750-32600-850-36000-950-39800-1100-46400-1250-47650

2. ಶುಲ್ಕ:

ಸಾಮಾನ್ಯ ವರ್ಗ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ)ಗೆ ಸೇರಿದ ಅಭ್ಯರ್ಥಿಗಳಿಗೆ	ರೂ.1500.00
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ	ರೂ.750.00

ಅಭ್ಯರ್ಥಿಗಳು ONLINE ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು:
ಅರ್ಜಿ ಶುಲ್ಕವನ್ನು Payment using Net Banking, Credit Card, Debit Card, UPI ಮುಖಾಂತರ ಅರ್ಜಿ ಶುಲ್ಕ ಮತ್ತು Payment Gateway ಚಾರ್ಜಸ್‌ನ್ನು ಪಾವತಿ ಮಾಡತಕ್ಕದ್ದು. ಶುಲ್ಕವನ್ನು ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 28.02.2023 ರ ರಾತ್ರಿ 11.59 ರ ಒಳಗಾಗಿ ಪಾವತಿಸತಕ್ಕದ್ದು. ಇದನ್ನು ಹೊರತುಪಡಿಸಿ ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಅರ್ಜಿ ಶುಲ್ಕವನ್ನು ನಿಗಧಿಪಡಿಸಿದ ದಿನಾಂಕ, ಸಮಯದೊಳಗಾಗಿ ಸಲ್ಲಿಸದೇ ಇರುವಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ : 30.01.2023
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 28.02.2023
ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ : 28.02.2023

ವಿಶೇಷ ಸೂಚನೆ: ONLINE ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ **(Help Line) 9036377735** ಅನ್ನು ಬೆಳಗ್ಗೆ 10.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

1. ಶೈಕ್ಷಣಿಕ ವಿದ್ಯಾರ್ಹತೆ :
ಅರ್ಜಿಗಳನ್ನು ಭರ್ತಿ ಮಾಡಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅನುಸೂಚಿಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರತಕ್ಕದ್ದು. ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೆ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹುದ್ದೆಯ ಹೆಸರು: (ಕಿರಿಯ ಆಡಳಿತ ವರ್ಗ-I) ಶಾಖಾ ವ್ಯವಸ್ಥಾಪಕರು (Br.Managers) ಹುದ್ದೆಗಳು:
ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದಲ್ಲಿ ಯಾವುದೇ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆಯಾಗಿರಬೇಕು. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆಗೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಮತ್ತು ಕಂಪ್ಯೂಟರ್ ಆಪರೇಷನ್ಸ್ ಹಾಗೂ ಅಪ್ಲಿಕೇಷನ್‌ನಲ್ಲಿ ಜ್ಞಾನ ಹೊಂದಿರಬೇಕು.

ಹುದ್ದೆಯ ಹೆಸರು : (ಗ್ರೂಪ್ ಬಿ-I) ಹಿರಿಯ ಸಹಾಯಕರು (Senior Assistants) ಹುದ್ದೆಗಳು:
ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದಲ್ಲಿ ಯಾವುದೇ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆಯಾಗಿರಬೇಕು. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆಗೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಮತ್ತು ಕಂಪ್ಯೂಟರ್ ಆಪರೇಷನ್ಸ್ ಹಾಗೂ ಅಪ್ಲಿಕೇಷನ್‌ನಲ್ಲಿ ಜ್ಞಾನ ಹೊಂದಿರಬೇಕು.

ಹುದ್ದೆಯ ಹೆಸರು : (ಗ್ರೂಪ್ ಬಿ-I) ಶೀಘ್ರಲಿಪಿಗಾರರು (Stenographer) ಹುದ್ದೆಗಳು:
ದ್ವಿತೀಯ ಪಿ.ಯು.ಸಿ.ಯಲ್ಲಿ ಅಥವಾ 3 ವರ್ಷಗಳ ಡಿಪ್ಲೋಮೊ ಇನ್ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಉತ್ತೀರ್ಣರಾಗಿರಬೇಕು, ಸೀನಿಯರ್ ಕನ್ನಡ ಮತ್ತು ಇಂಗ್ಲಿಷ್ ಶೀಘ್ರಲಿಪಿಯಲ್ಲಿ ಉತ್ತೀರ್ಣರಾಗಿರಬೇಕು. ಕಂಪ್ಯೂಟರ್ ಟೈಪಿಂಗ್, ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನವಿರಬೇಕು ಮತ್ತು ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

ಹುದ್ದೆಯ ಹೆಸರು : (ಗ್ರೂಪ್ ಬಿ-II) ಕಿರಿಯ ಸಹಾಯಕರು (Junior Assistants) ಹುದ್ದೆಗಳು:
ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು, ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಮತ್ತು ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ ಜ್ಞಾನವಿರಬೇಕು.

ಹುದ್ದೆಯ ಹೆಸರು : (ಗ್ರೂಪ್ ಬಿ-II) ಕಂಪ್ಯೂಟರ್ ಆಪರೇಟರ್ (Computer Operators) ಹುದ್ದೆಗಳು:
ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅಥವಾ 3 ವರ್ಷಗಳ ಡಿಪ್ಲೋಮೊ ಇನ್ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಉತ್ತೀರ್ಣರಾಗಿರಬೇಕು. ಸೀನಿಯರ್ ಕನ್ನಡ ಮತ್ತು ಇಂಗ್ಲಿಷ್ ಟೈಪ್‌ರೈಟಿಂಗ್‌ನಲ್ಲಿ ಉತ್ತೀರ್ಣರಾಗಿದ್ದು, ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನವಿರಬೇಕು ಮತ್ತು ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

ಹುದ್ದೆಯ ಹೆಸರು : (ಗ್ರೂಪ್ ಸಿ) ವಾಹನ ಚಾಲಕರು (Drivers) ಹುದ್ದೆಗಳು:
ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. ಕಾನೂನಿನನ್ವಯ ಲಘು ಮತ್ತು ಭಾರೀ ವಾಹನ ಚಾಲನೆ ಪರವಾನಗಿ ಹೊಂದಿರಬೇಕು.

ಹುದ್ದೆಯ ಹೆಸರು : (ಗ್ರೂಪ್ ಸಿ) ನಾಲ್ಕನೇ ದರ್ಜೆ ನೌಕರರು (CLASS-IV) ಹುದ್ದೆಗಳು:
ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.

1. ವಯೋಮಿತಿ:
ಅರ್ಜಿಗಳನ್ನು ಭರ್ತಿ ಮಾಡಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ ನಿಗಧಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

ವರ್ಗೀಕರಣದ ವಿವರ	ಕನಿಷ್ಠ	ಗರಿಷ್ಠ
ಸಾಮಾನ್ಯ ವರ್ಗ	18	35
2ಎ, 2ಬಿ, 3ಎ, 3ಬಿ	18	38
ಪ.ಜಾ./ಪ.ಪಂ/ಪ್ರ-1	18	40

ಆಯ್ಕೆ ವಿಧಾನ :
ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 18(ಸಿ),(ಡಿ),(ಇ),(ಎಫ್) ಮತ್ತು (ಜಿ) ರನ್ವಯ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ವಿಶೇಷ ಸೂಚನೆ : ಬ್ಯಾಂಕು ಈ ಹಿಂದೆ ನೀಡಿದ್ದ ಪತ್ರಿಕಾ ಪ್ರಕಟಣೆ ಸಂಖ್ಯೆ:ಬಿಜಿಆರ್:ಆರ್‌ಡಿಸಿಸಿಬಿ:ಪ್ರಕ:ಆಸಿ: ನೇಮಕಾತಿ:3958:2017-18, ದಿನಾಂಕ:06.03.2018 ರನ್ವಯ ಹಿರಿಯ ಸಹಾಯಕರು, ಶೀಘ್ರಲಿಪಿಗಾರರು, ಕಿರಿಯ ಸಹಾಯಕರು, ಕಂಪ್ಯೂಟರ್ ಆಪರೇಟರ್ ಮತ್ತು ನಾಲ್ಕನೇ ದರ್ಜೆ ನೌಕರರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ಪುನಃ ಸದರಿ ಹುದ್ದೆಗಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವ ಅಗತ್ಯ ಇರುವುದಿಲ್ಲ, ಈ ಹಿಂದೆ ಅರ್ಜಿ ಸಲ್ಲಿಸಿರುವ ಹುದ್ದೆಗಳನ್ನು ಹೊರತುಪಡಿಸಿ ಪ್ರಸ್ತುತ ಹೊರಡಿಸಿರುವ ಪ್ರಕಟಣೆಯಲ್ಲಿನ ಹುದ್ದೆಗಳಿಗೆ ಅಭ್ಯರ್ಥಿಗಳು ಅರ್ಹರಾಗಿದ್ದಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಸಹಿ/-
(ಪುಂಡಲಿಕ ಎಲ್. ಸಾದುರೆ, ಕ.ಸ.ಸೇ.)
ಸದಸ್ಯ ಕಾರ್ಯದರ್ಶಿ ನೇಮಕಾತಿ ಸಮಿತಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ
ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಬಾಳನ್ನು ಹಸನಾಗಿಸಿಕೊಳ್ಳಬೇಕು,
ಪ್ರಹಸನವಾಗಿಸಿಕೊಳ್ಳಬಾರದು.

-ಕೆ.ಎಸ್.ನಿಸಾರ್ ಅಹಮದ್

ಕುಸ್ತಿ: ಲೈಂಗಿಕ ದೌರ್ಜನ್ಯ ಪ್ರಕರಣ ಶಂಕೆಗೆ ಕಾರಣವಾದ ಸರ್ಕಾರದ ನಡೆ

ಒಲಿಂಪಿಕ್ ಕೂಟಗಳ ವೈಯಕ್ತಿಕ ವಿಭಾಗಗಳಲ್ಲಿ ಭಾರತಕ್ಕೆ ಹೆಚ್ಚು ಪದಕ ತಂದುಕೊಡುತ್ತಿರುವ ಕ್ರೀಡೆಯೆಂದರೆ ಕುಸ್ತಿ. ವಿಶ್ವದ ಘಟಾನುಘಟಿ ಕುಸ್ತಿಪಟುಗಳು ಭಾರತದ ಪೈಲ್ವಾನರನ್ನು ಕಠಿಣ ಪ್ರತಿಸ್ಪರ್ಧಿಗಳೆಂದೇ ಪರಿಗಣಿಸುತ್ತಾರೆ. ಇಂತಹ ಗೌರವ ಮತ್ತು ಖ್ಯಾತಿಯನ್ನು ತಂದುಕೊಡುತ್ತಿರುವ ಕುಸ್ತಿಕ್ಷೇತ್ರ ಈಗ ವಿವಾದಕ್ಕೀಡಾಗಿದೆ. ಕ್ರೀಡಾಕ್ಷೇತ್ರದಲ್ಲಿ ರಾಜಕೀಯ ಹಸ್ತಕ್ಷೇಪ ಹಾಸುಹೊಕ್ಕಾಗಿರುವುದು ಮತ್ತು ಆಡಳಿತ ವ್ಯವಸ್ಥೆ ಹಳಿ ತಪ್ಪಿರುವುದು ಕಣ್ಣಿಗೆ ರಾಚಿದೆ. ಭಾರತ ಕುಸ್ತಿ ಒಕ್ಕೂಟದ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದಾರೆಂದು ಆರೋಪಿಸಿ ಖ್ಯಾತನಾಮ ಕುಸ್ತಿಪಟುಗಳು ಹೋದ ವಾರ ನವದೆಹಲಿಯಲ್ಲಿ ಮೂರು ದಿವಸ ಧರಣಿ ನಡೆಸಿದರು. ವಿಶ್ವ ಚಾಂಪಿಯನ್‌ಷಿಪ್ ಮತ್ತು ಒಲಿಂಪಿಕ್ಸ್ ಪದಕಗಳನ್ನು ಗೆದ್ದ ಕುಸ್ತಿಪಟುಗಳಾದ ಬಜರಂಗ್ ಪುನಿಯಾ, ರವಿ ದಹಿಯಾ, ವಿನೇಶಾ ಫೋಗಟ್, ಬಬಿತಾ ಫೋಗಟ್ ಮತ್ತು ಸಾಕ್ಷಿ ಮಲಿಕ್ ನೇತೃತ್ವದಲ್ಲಿ ಧರಣಿ ನಡೆಯಿತು. ಬ್ರಿಜ್‌ಭೂಷಣ್ ಅವರನ್ನು ಪದಚ್ಯುತಗೊಳಿಸಿ ಹೊಸ ಆಡಳಿತ ಸಮಿತಿಯನ್ನು ನೇಮಕ ಮಾಡಬೇಕು ಎಂದು ಆಗ್ರಹಿಸಿದರು. ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ತನಿಖೆ ನಡೆಸಲು ಸಮಿತಿ ರಚಿಸುವುದಾಗಿ ಭರವಸೆ ನೀಡಿದ ನಂತರ ಕುಸ್ತಿಪಟುಗಳು ಧರಣಿ ಸ್ಥಗಿತಗೊಳಿಸಿದರು. ಇದೀಗ ಸರ್ಕಾರವು ಬಾಕ್ಸಿಂಗ್ ತಾರೆ ಮೇರಿ ಕೋಮ್ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ನೇಮಕ ಮಾಡಿದೆ. ಆದರೆ ಸಮಿತಿಯ ವಿಚಾರಣೆಯು ಪೂರ್ಣವಾಗುವವರೆಗೆ ಬ್ರಿಜ್‌ಭೂಷಣ್ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡುವುದಾಗಿ ಹೇಳಿದ್ದ ಭರವಸೆಯನ್ನು ಸರ್ಕಾರ ಈಡೇರಿಸಿಲ್ಲ. ಅಲ್ಲದೆ ಸಮಿತಿ ರಚನೆಗೂ ಮುನ್ನ ಕುಸ್ತಿಪಟುಗಳ ಅಭಿಪ್ರಾಯ ಆಲಿಸಲಾಗುವುದು ಎಂದು ಭರವಸೆ ನೀಡಲಾಗಿತ್ತು. ಆ ಭರವಸೆಯೂ ಹುಸಿಯಾಗಿದೆ ಎಂದು ಕುಸ್ತಿಪಟುಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ತ್ವರಿತಗತಿಯಲ್ಲಿ ತನಿಖೆ ಪೂರ್ಣಗೊಳಿಸಿ, ತಪ್ಪಿತಸ್ಥರನ್ನು ಶಿಕ್ಷಿಸಬೇಕು. ತಮ್ಮ ಹೆಣ್ಣುಮಕ್ಕಳನ್ನು ಕ್ರೀಡೆಗೆ ಕಳುಹಿಸಲು ಬಯಸುವ ಪಾಲಕರಲ್ಲಿ ಆ ಮೂಲಕ ವಿಶ್ವಾಸ ತುಂಬಬೇಕು

ವಿವಾದವನ್ನು ತಣ್ಣಗಾಗಿಸಿ, ತಪ್ಪಿತಸ್ಥರನ್ನು ರಕ್ಷಿಸುವ ಹುನ್ನಾರ ನಡೆದಿದೆ ಎಂಬ ಅನುಮಾನವನ್ನೂ ಕುಸ್ತಿಪಟುಗಳು ವ್ಯಕ್ತಪಡಿಸಿದ್ದಾರೆ. ಲೈಂಗಿಕ ಕಿರುಕುಳದ ಆರೋಪಗಳು ಎದುರಾದಾಗ ಮತ್ತು ಆಂತರಿಕ ಸಮಿತಿಯ ವ್ಯವಸ್ಥೆಯು ಅಸ್ತಿತ್ವದಲ್ಲಿ ಇಲ್ಲದೇ ಇದ್ದಾಗ ಅಥವಾ ಅಂತಹ ಸಮಿತಿಗಳು ನಿಷ್ಕ್ರಿಯವಾಗಿದ್ದರೆ, ಪೊಲೀಸರಿಗೆ ದೂರು ನೀಡಬೇಕಾಗಿರುವುದು ಸಹಜ ಪ್ರಕ್ರಿಯೆ. ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸಬೇಕು. ವಿಶ್ವದರ್ಜೆಯ ಕುಸ್ತಿಪಟುಗಳು ಬೀದಿಗಿಳಿದು ಲೈಂಗಿಕ ದೌರ್ಜನ್ಯದ ಆರೋಪ ಮಾಡಿದರೂ ಸಂಬಂಧಪಟ್ಟವರು ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಆರೋಪಗಳಿಗೆ ಪೂರಕವಾದ ಸಾಕ್ಷ್ಯಾಧಾರಗಳು ತಮ್ಮ ಬಳಿ ಇವೆ ಎಂದೂ ಕ್ರೀಡಾಪಟುಗಳು ಹೇಳಿದ್ದಾರೆ. ಆದರೂ ಕ್ರಮ ಜರುಗಿಸಿಲ್ಲ. ಅದಕ್ಕೆ ಕಾರಣ ಸಿಂಗ್ ಅವರು ಸಂಸದರಾಗಿರುವುದು ಮತ್ತು ಆಡಳಿತಾರೂಢ ಬಿಜೆಪಿಯ ಪ್ರಬಲ ನಾಯಕರಾಗಿರುವುದು. ಅವರು ಒಂದು ದಶಕದಿಂದ ಕುಸ್ತಿ ಫೆಡರೇಷನ್ ಅಧ್ಯಕ್ಷರಾಗಿದ್ದಾರೆ. ಪಕ್ಷ ಮತ್ತು ಕ್ರೀಡಾಕ್ಷೇತ್ರದಲ್ಲಿ ಬಹಳ ಪ್ರಭಾವ ಹೊಂದಿದ್ದಾರೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಲೈಂಗಿಕ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿದ ಕುಸ್ತಿಪಟುಗಳಲ್ಲಿ ಹೆಚ್ಚಿನವರು ಬಿಜೆಪಿಯೊಂದಿಗೆ ಗುರುತಿಸಿಕೊಂಡಿರುವವರೇ ಆಗಿದ್ದಾರೆ. ಪಕ್ಷಕ್ಕೆ ಮುಜುಗರ ಆಗುವುದನ್ನು ತಡೆಯಲು ಸರ್ಕಾರವು ವಿಳಂಬ ಧೋರಣೆ ಅನುಸರಿಸುತ್ತಿದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಹೊಸ ಕ್ರೀಡಾ ನೀತಿಯ ಕೆಲವು ನಿಯಮಗಳ ಬಗ್ಗೆ ಕ್ರೀಡಾಪಟುಗಳಿಗೆ ಅಸಮಾಧಾನವಿದೆ, ಆದರೆ ಆ ನಿಯಮಗಳಿಂದ ಕ್ರೀಡೆಗೆ ಒಳ್ಳೆಯದಾಗಲಿದೆ, ಇದನ್ನು ಸಹಿಸದ ಕೆಲವರು ಈ ಧರಣಿಗೆ ಕುಮ್ಮಕ್ಕು ನೀಡಿದ್ದಾರೆ, ತನಿಖೆ ಪಾರದರ್ಶಕವಾಗಿ ನಡೆದರೆ ಎಲ್ಲವೂ ಬಹಿರಂಗವಾಗಲಿವೆ ಎಂದು ಬ್ರಿಜ್‌ಭೂಷಣ್ ಪ್ರತಿಕ್ರಿಯಿಸಿದ್ದಾರೆ. ಆದರೆ ಈ ಪ್ರಕರಣವನ್ನು ಸರ್ಕಾರ ಇದುವರೆಗೆ ನಿರ್ವಹಿಸಿದ ರೀತಿಯು ತನಿಖೆ ಪಾರದರ್ಶಕವಾಗಿ ನಡೆಯುವ ಕುರಿತು ಅನುಮಾನಗಳು ಮೂಡುವಂತೆ ಮಾಡಿದೆ. ಆರೋಪ ಕೇಳಿಬಂದ ಕೂಡಲೇ ಸಂಬಂಧಪಟ್ಟವರು ಕುಸ್ತಿಪಟುಗಳ ಅಹವಾಲನ್ನು ಕೇಳಿ ಕ್ರಮಕ್ಕೆ ಮುಂದಾಗಬೇಕಿತ್ತು. ಅದರಿಂದ ವಿಶ್ವಮಟ್ಟದಲ್ಲಿ ದೇಶದ ಗೌರವ ಮುಕ್ಕಾಗುವುದನ್ನು ತಡೆಯಬಹುದಿತ್ತು. ದೇಶದ ಎಲ್ಲ ಕ್ಷೇತ್ರಗಳಲ್ಲಿಯೂ ಇಂದು ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ. ಇಂತಹ ಪ್ರಕರಣಗಳಿಂದ ಮಹಿಳೆಯರ ಮನೋಬಲ ಕುಗ್ಗಬಾರದು. ತ್ವರಿತಗತಿಯಲ್ಲಿ ತನಿಖೆ ಪೂರ್ಣಗೊಳಿಸಿ, ತಪ್ಪಿತಸ್ಥರನ್ನು ಶಿಕ್ಷಿಸಬೇಕು. ಆ ಮೂಲಕ ತಮ್ಮ ಹೆಣ್ಣುಮಕ್ಕಳನ್ನು ಕ್ರೀಡೆಗೆ ಕಳುಹಿಸಲು ಬಯಸುವ ಪಾಲಕರಲ್ಲಿ ವಿಶ್ವಾಸ ತುಂಬಬೇಕು.

ಮಕ್ಕಳ ಆಹಾರ ಮತ್ತು ಶಿಕ್ಷಣ ಕ್ರಮದ ಕುರಿತು ಮಠಾಧೀಶರು ಹೇಳಿದ್ದು ಸರಿಯೇ?

ಮೌಲಿಕ ಶಿಕ್ಷಣ ಮತ್ತು ಆಹಾರ ಪದ್ಧತಿ



ವಿಶ್ಲೇಷಣೆ

ಡಾ. ನೆಲ್ಲುಕುಂಟೆ ವೆಂಕಟೇಶ್

ಮೌಲ್ಯಯುತ ಶಿಕ್ಷಣ ಮತ್ತು ಆಹಾರ ಪದ್ಧತಿಯ ಬಗ್ಗೆ ಕೆಲವು ಮಠಾಧೀಶರು ಇತ್ತೀಚೆಗೆ ಮಾತನಾಡಿದ್ದಾರೆ. ಅವರಲ್ಲಿ ಬಹುತೇಕರು ಪದವೀಧರರಾಗಿರಬಹುದು. ಅವರ ತಿಳಿವಳಿಕೆ ಎಷ್ಟು ಸಮಸ್ಯಾತ್ಮಕವಾಗಿದೆ ಎಂಬುದು ಅವರ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಅರ್ಥವಾಗುತ್ತದೆ. ನಮ್ಮ ಸಮಾಜದಲ್ಲಿರುವ ಬಿಕ್ಕಟ್ಟುಗಳು ನಿವಾರಣೆಯಾಗಬೇಕಾದರೆ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸಬೇಕು ಎಂಬ ಅಂಶವು ಅವರ ಗಮನಕ್ಕೆ ಬಂದಿರುವುದು ಶ್ಲಾಘನೀಯವಾದರೂ ಬಿಕ್ಕಟ್ಟಿನ ಮೂಲಗಳ ಬಗೆಗಿನ ಅವರ ತಿಳಿವಳಿಕೆ ತೀರಾ ಅವೈಜ್ಞಾನಿಕವಾಗಿದೆ.

ಯಾವುದೇ ಒಂದು ಆಹಾರ ಪದ್ಧತಿಯು ಮಕ್ಕಳನ್ನು, ಮನುಷ್ಯರನ್ನು ಕೆಡಿಸುತ್ತಿದೆಯೇ? ಮಾಂಸಾಹಾರ ಸೇವನೆಯು ಹಿಂಸಾಪ್ರವೃತ್ತಿಯನ್ನು ಹೆಚ್ಚಿಸುತ್ತಿದೆಯೇ? ಕಾನೂನು ಸುವ್ಯವಸ್ಥೆ ಹದಗೆಡಲು ಕಾರಣವಾಗಿದೆಯೇ? ಆತ್ಮಹತ್ಯೆಗಳು ಹೆಚ್ಚಾಗಿವೆಯೇ? ಹಿಂಸಾಪ್ರವೃತ್ತಿಯೊಡನೆ ತಳುಕು ಹಾಕಿಕೊಳ್ಳುವ ವಿವಾಹ ವಿಚ್ಛೇದನದ ಪ್ರಮಾಣ ಎಲ್ಲೆಲ್ಲಿ ಎಷ್ಟೆಷ್ಟಿದೆ ಎಂಬುದ್ಯಾವುದನ್ನೂ ಪರಿಶೀಲಿಸದೆ ಢಾಳಾದ ಅಭಿಪ್ರಾಯ ವ್ಯಕ್ತಪಡಿಸುವುದೇ ಅವೈಜ್ಞಾನಿಕ.


ಜಗತ್ತಿನ ದೇಶಗಳು ಇತ್ತೀಚೆಗೆ ಮನುಷ್ಯನ ಸಂತೋಷವನ್ನು ಮಾನದಂಡವನ್ನಾಗಿ ಇಟ್ಟುಕೊಂಡು ಅಭಿವೃದ್ಧಿಯನ್ನು ವ್ಯಾಖ್ಯಾನಿಸುವ ಪ್ರಯತ್ನ ಮಾಡುತ್ತಿವೆ. ಸಂತೋಷದ ಸೂಚ್ಯಂಕ ಉತ್ತಮವಾಗಿರುವ ಮೊದಲ ಹತ್ತು ದೇಶಗಳಲ್ಲಿ ನ್ಯೂಜಿಲೆಂಡ್ ಬಿಟ್ಟರೆ ಉಳಿದವು ಸ್ಕ್ಯಾಂಡಿನೇವಿಯನ್ ದೇಶಗಳು. ಇದಕ್ಕೇನು ಕಾರಣ?

ಉತ್ತರ ಯುರೋಪಿನ ಈ ದೇಶಗಳ ಜನರಲ್ಲಿ ಪ್ರತಿಯೊಬ್ಬರೂ ವರ್ಷಕ್ಕೆ ಸರಾಸರಿ 75 ಕೆ.ಜಿ. ಮಾಂಸ ತಿನ್ನುತ್ತಾರೆ. ಭಾರತದ ಜನರು ಸೇವಿಸುವ ಸರಾಸರಿ ಪ್ರಮಾಣ ಕೇವಲ 3.7 ಕೆ.ಜಿ. ಮಾಂಸಾಹಾರವು ಹಿಂಸೆಯನ್ನು ಉದ್ದೀಪಿಸುತ್ತದೆ ಎನ್ನುವುದಾದರೆ, ನಾರ್ವೆ, ಫಿನ್ಲೆಂಡ್, ಸ್ವೀಡನ್, ಡೆನ್ಮಾರ್ಕ್, ನೆದರ್‌ಲ್ಯಾಂಡ್ಸ್, ಸ್ವಿಟ್ಜರ್‌ಲೆಂಡ್‌ನಂತಹ ದೇಶಗಳಲ್ಲಿ ವಿಪರೀತ ಪ್ರಕ್ಷುಬ್ಧತೆ ಇರಬೇಕಿತ್ತಲ್ಲವೇ? ಹಿಂಸೆಯ ತುತ್ತತುದಿ ನರಹತ್ಯೆ ಮತ್ತು ನರಹಿಂಸೆಯಲ್ಲವೇ? ಈ ದೇಶಗಳಲ್ಲಿ ಈ ಬಗೆಯ ಹಿಂಸೆಯ ಪ್ರಮಾಣವು ಭಾರತಕ್ಕಿಂತ ಬಹಳ ಕಡಿಮೆ ಇದೆ.

ಮಾಂಸಾಹಾರವು ವ್ಯಕ್ತಿತ್ವಕ್ಕೆ, ಆರೋಗ್ಯಕ್ಕೆ ವ್ಯತಿರಿಕ್ತ ಎನ್ನುವುದಾದರೆ, ಹೆಚ್ಚಿನ ಮಾಂಸಾಹಾರ ಸೇವನೆಯಿಂದ ಅವರ ಆಯುಷ್ಯ ನಮಗಿಂತ ಕಡಿಮೆ ಇರಬೇಕಲ್ಲವೇ? ಆದರೆ, ಪರಿಸ್ಥಿತಿ ತೀರಾ ಭಿನ್ನ. ಈ ಎಲ್ಲಾ ದೇಶಗಳ ಜನರ ಸರಾಸರಿ ಆಯುಸ್ಸು 82- 83 ವರ್ಷ. ಭಾರತೀಯರ ಸರಾಸರಿ ಆಯುಸ್ಸು 69 ವರ್ಷ. ನಮ್ಮಲ್ಲಿ ಕಾರ್ಬೋಹೈಡ್ರೇಟ್ ಇರುವ ಆಹಾರ ಪದಾರ್ಥಗಳ ಸೇವನೆ ಪ್ರಮಾಣ ಹೆಚ್ಚುತ್ತಿರುವುದರಿಂದ ಚಿಕ್ಕ ವಯಸ್ಸಿಗೇ ಸಕ್ಕರೆ ಕಾಯಿಲೆ, ರಕ್ತದೊತ್ತಡದಂತಹ ಅನೇಕ ಸಮಸ್ಯೆಗಳು ಕಾಡುತ್ತಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಕರಿಗೌಡ ಅವರು, ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ 18-40 ವರ್ಷದೊಳಗಿನ ಮಹಿಳೆಯರ ಆರೋಗ್ಯ ತಪಾಸಣೆ ಮಾಡಿಸಿದ್ದರು. ಅವರಲ್ಲಿ ಶೇ 25ಕ್ಕಿಂತ ಹೆಚ್ಚಿನ ತರುಣಿಯರಲ್ಲಿ ಸಕ್ಕರೆ ಕಾಯಿಲೆ ಮತ್ತು ರಕ್ತಹೀನತೆ ಕಂಡುಬಂದಿತ್ತು. ಟಿ.ವಿ. ಜ್ಯೋತಿಷಿಗಳ ವಾಸ್ತುದೋಷದ ಮಾತು ಕೇಳಿ, ಅವರೆಲ್ಲ ತಮ್ಮ ಮನೆಗಳ ಮುಂದಿದ್ದ ಸೀಬೆ, ಪಪ್ಪಾಯ, ಕರಿಬೇವು, ನಿಂಬೆ, ನುಗ್ಗೆ, ಸೀತಾಫಲ, ಮಾವಿನಂತಹ ಗಿಡಗಳನ್ನು ವ್ಯಾಪಕವಾಗಿ ಕಡಿದದ್ದು ಅದಕ್ಕೆ ಕಾರಣ ಇರಬಹುದೇ?

ಆ ದೇಶಗಳಲ್ಲಿ ವಿವಾಹ ವಿಚ್ಛೇದನದ ಪ್ರಮಾಣವೂ ಭಾರತಕ್ಕಿಂತ ಬಹಳ ಕಡಿಮೆ ಇದೆ. ಹೋಗಲಿ ಆತ್ಮಹತ್ಯೆಯ ಪ್ರಮಾಣವಾದರೂ ಹೆಚ್ಚಾಗಿ ಇರಬೇಕಲ್ಲವೆ? ಭಾರತದಲ್ಲಿ 1 ಲಕ್ಷ ಪುರುಷರಲ್ಲಿ 14.7ರಷ್ಟು ಮಂದಿ ಆತ್ಮಹತ್ಯೆ ಮಾಡಿಕೊಂಡರೆ, ಈ ಪ್ರಮಾಣ ಸ್ವಿಟ್ಜರ್‌ಲೆಂಡ್‌ನಲ್ಲಿ 9.8, ನಾರ್ವೆಯಲ್ಲಿ 11.8, ಇಟಲಿಯಲ್ಲಿ 4.3ರಷ್ಟಿದೆ. ಉತ್ತರ ಯುರೋಪಿನ ಇತರ ದೇಶಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಇನ್ನು ಅಪರಾಧಗಳ ವಿಚಾರಕ್ಕೆ ಬಂದರೆ, ಭಾರತದ ರಾಜ್ಯಗಳ ಉದಾಹರಣೆಯನ್ನೇ ನೋಡಬಹುದು. 2021ರ ಜನಗಣತಿಯಂತೆ, ಪ್ರತೀ ಚದರ ಕಿ.ಮೀ.ನಲ್ಲಿ ದಾಖಲಾಗುವ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ ಕರ್ನಾಟಕದಲ್ಲಿ 85, ಆಂಧ್ರಪ್ರದೇಶ 136, ಗುಜರಾತ್ 372, ಉತ್ತರಪ್ರದೇಶ 252, ಈಶಾನ್ಯ ರಾಜ್ಯಗಳಲ್ಲಿ 0.1ಕ್ಕಿಂತ ಕಡಿಮೆ. ಸಸ್ಯಾಹಾರಿಗಳ ಸಂಖ್ಯೆ ಕರ್ನಾಟಕದಲ್ಲಿ ಶೇ 21, ಗುಜರಾತಿನಲ್ಲಿ ಶೇ 61, ಉತ್ತರ ಪ್ರದೇಶದಲ್ಲಿ ಶೇ 47, ಈಶಾನ್ಯ ರಾಜ್ಯಗಳಲ್ಲಿ ಶೇ 9ಕ್ಕಿಂತ ಕಡಿಮೆ. ಹಾಗಿದ್ದರೆ ಶೇ 61ರಷ್ಟು ಸಸ್ಯಾಹಾರಿಗಳಿರುವ ಗುಜರಾತಿನಲ್ಲಿ ಯಾಕೆ ಪ್ರತೀ ಚದರ ಕಿ.ಮೀ.ನಲ್ಲಿ 372 ಕ್ರಿಮಿನಲ್ ಪ್ರಕರಣಗಳು ದಾಖಲಾಗುತ್ತಿವೆ?

ಆಹಾರ ಮತ್ತು ಸಾತ್ವಿಕತೆಗೆ ಸಂಬಂಧವಿದೆ ಎಂದಿರುವ ಮಠಾಧೀಶರು ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡಬೇಕಾಗುತ್ತದೆ. ಯಾಕೆಂದರೆ ಸಮಾಜವನ್ನು ಸರಿಪಡಿಸುವ ಆಶಯ ಸ್ವಾಮೀಜಿಗಳಿಗೆ ಇರುವುದಕ್ಕಿಂತ ಹೆಚ್ಚು ಸಮಾಜ ವಿಜ್ಞಾನಿಗಳಿಗೆ, ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ, ನ್ಯಾಯಾಂಗ ವ್ಯವಸ್ಥೆಗೆ, ಒಟ್ಟಾರೆ ಸಮಾಜಕ್ಕೆ ಇದೆ. ತಳಿ ವಿಜ್ಞಾನದ ಪ್ರಕಾರ, ಮನುಷ್ಯನು ಹಾಲಿನ ಬಳಕೆ ಪ್ರಾರಂಭಿಸಿದ್ದೇ 10 ಸಾವಿರ ವರ್ಷಗಳಿಂದ ಈಚೆಗೆ. ಬೆಣ್ಣೆ, ತುಪ್ಪದ ಬಳಕೆಗೆ 4 ಸಾವಿರ ವರ್ಷಗಳ ಇತಿಹಾಸವೂ ಇಲ್ಲ.



ಮನುಷ್ಯನ ಜೀನುಗಳಲ್ಲಿ ಮಾಂಸಾಹಾರದ ಚಹರೆಯೇ ಪ್ರಧಾನವಾಗಿದೆ.

ಹಾಗಿದ್ದರೆ ಸ್ಕ್ಯಾಂಡಿನೇವಿಯನ್ನರ ಸಂತೋಷಕ್ಕೆ ಕಾರಣವೇನು? ನನಗೆ ತಿಳಿದಮಟ್ಟಿಗೆ, ಆ ದೇಶಗಳ ಜನರು ಧರ್ಮರಕ್ಷಣೆಯ ಬಗ್ಗೆ ಮಾತನಾಡುವುದಕ್ಕಿಂತ ವಿಜ್ಞಾನ ಮತ್ತು ವೈಚಾರಿಕತೆಗೆ ಹೆಚ್ಚು ಹತ್ತಿರವಾಗಿದ್ದಾರೆ. ಶೇ 70ಕ್ಕೂ ಹೆಚ್ಚು ಜನ ನಾಸ್ತಿಕರು, ನಿರೀಶ್ವರವಾದಿಗಳು, ಆದರೆ ಹೃದಯವಂತರು. ಅವರು ಸಂಪನ್ಮೂಲಗಳನ್ನು ಮಿಲಿಟರಿಗೆ, ಅಣುಬಾಂಬಿಗೆ ವಿನಿಯೋಗಿಸುವುದರ ಬದಲು ಶಿಕ್ಷಣ, ಆರೋಗ್ಯ, ದುರ್ಬಲರ ರಕ್ಷಣೆ, ಉದ್ಯೋಗ ಸೃಷ್ಟಿಗೆ ಬಳಸುತ್ತಾರೆ. ಅಂದರೆ ನಮ್ಮ ಮಠಾಧೀಶರು ಹೇಳುತ್ತಿರುವುದಕ್ಕೆ ಸಂಪೂರ್ಣ ವಿರುದ್ಧವಾದ ದಿಕ್ಕಿನಲ್ಲಿ ಅವರು ಬದುಕುತ್ತಿದ್ದಾರೆ. ಹಾಗಾಗಿ ಅವರು ಹೆಚ್ಚು ಖುಷಿಯಾಗಿದ್ದಾರೆ ಹಾಗೂ ಆರೋಗ್ಯದ ಸಮಸ್ಯೆಗಳಿಲ್ಲದೆ ಹೆಚ್ಚು ವರ್ಷ ಬದುಕುತ್ತಿದ್ದಾರೆ. ಅಂತರ ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲೂ ಹೆಚ್ಚು ಪದಕಗಳನ್ನು ಗೆಲ್ಲುತ್ತಿದ್ದಾರೆ, ನೊಬೆಲ್ ಪ್ರಶಸ್ತಿಗಳನ್ನೂ ಪಡೆಯುತ್ತಿದ್ದಾರೆ. ಆ ದೇಶಗಳು ಬುದ್ಧ, ಬಸವಣ್ಣ, ಅಂಬೇಡ್ಕರ್, ಗಾಂಧೀಜಿಯಂಥವರ ವಿಚಾರಗಳನ್ನು ಅಳವಡಿಸಿಕೊಂಡಂತೆ ಬದುಕುತ್ತಿವೆ.

ನಮಗೆ ಬೇಕಾದ ಶಿಕ್ಷಣದ ಮೌಲ್ಯ ಯಾವುದಾಗಬೇಕು? ನಾವು ಬಾಯಿಪಾಠವನ್ನೇ ಶಿಕ್ಷಣ ಎಂದುಕೊಂಡಿದ್ದೇವೆ. ನಮ್ಮ ನೀತಿ ಶಿಕ್ಷಣದ ತಳಹದಿ ಎಷ್ಟು ದುರ್ಬಲವಾಗಿದೆಯೆಂದರೆ, ನದಿಗಳನ್ನು ದೇವತೆ ಎಂದು ಮಕ್ಕಳಿಗೆ ಕಲಿಸುತ್ತೇವೆ. ಅದೇ ಸಮಯದಲ್ಲಿ ಸತ್ತವರ ಬೂದಿ, ವಿಷರೂಪಿಯಾದ ಎಣ್ಣೆ, ಚೆಂಡು ಹೂವು, ಸ್ನಾನ ಮಾಡಿ ಬಿಸಾಡಿದ ಬಟ್ಟೆ ಎಲ್ಲವನ್ನೂ ಯಾವ ಲಜ್ಜೆಯೂ ಇಲ್ಲದೆ ನೀರಿಗೆ ಎಸೆಯುತ್ತೇವೆ. ಈ ಬಗೆಯ ತಲೆಕೆಳಗಾದ ನೀತಿ ಶಿಕ್ಷಣದಿಂದ ಯಾವ ಉಪಯೋಗವಿದೆ? ಹಾದಿ ತಪ್ಪಿದ ಅಧ್ಯಾತ್ಮ, ಧಾರ್ಮಿಕತೆಗಳು ಬದುಕನ್ನು ನರಕ ಮಾಡುತ್ತಿವೆ. ನಮ್ಮ ನದಿ, ಕಾಡು, ಉಸಿರಾಡುವ ಗಾಳಿ ಎಲ್ಲವನ್ನೂ ಪವಿತ್ರ ಎನ್ನುತ್ತಲೇ ಬೆಂಕಿ ಹಚ್ಚಿ, ವಿಷ ತುಂಬಿ ನಿರ್ನಾಮ ಮಾಡಿದ್ದೇವೆ. ಆದರೆ ವಿಜ್ಞಾನಕ್ಕೆ ಹೃದಯವಂತಿಕೆ ತಂದುಕೊಂಡ ದೇಶಗಳಲ್ಲಿ ನಗರಗಳ ಮಧ್ಯೆಯೇ ನದಿಗಳು ನಿರ್ಮಲವಾಗಿ ಹರಿಯುತ್ತಿವೆ. ಹಾಗಿದ್ದರೆ ಯಾರು ಸರಿ?

ಗಾಂಧೀಜಿ ‘ಶಿಕ್ಷಣವು ಪರಿಪೂರ್ಣವಾಗಬೇಕಾದರೆ ಮೆದುಳು, ಹೃದಯ ಮತ್ತು ಕೈಗಳನ್ನು ಬಳಸಿ ಕಲಿಸಬೇಕು’ ಎಂದಿದ್ದರು. ಜ್ಞಾನ, ಕರುಣೆ, ಕೌಶಲದ ಕುರಿತಂತೆ ಕೇವಲ ಮಾತನಾಡದೆ ಚಾಚೂ ತಪ್ಪದೆ ಅನುಷ್ಠಾನಗೊಳಿಸಬೇಕು. ಆಗ ಮಾತ್ರ ಒಂದು ದೇಶ ಬೆಳೆದು ವಿಶ್ವಗುರುವಾಗಲು ಸಾಧ್ಯ. ಜಾತಿ, ಧರ್ಮ, ಲಿಂಗ, ಆಹಾರ, ಪ್ರದೇಶಗಳ ಹೆಸರಿನಲ್ಲಿ ಮನುಷ್ಯರನ್ನು ಒಡೆದು ಸಮಾಜವನ್ನು ವಿಭಜಿಸುವುದನ್ನು ಅಧ್ಯಾತ್ಮ, ಧಾರ್ಮಿಕತೆಯೆಂದು ಕರೆಯಲಾಗದು. ಕೆಡುಕಿನ ಹಾದಿಯನ್ನು ಅಧ್ಯಾತ್ಮ, ಧಾರ್ಮಿಕತೆ ಎಂದು ತಿಳಿದಿರುವವರಿಗೆ ವೇದಗಳು, ಉಪನಿಷತ್ತುಗಳು ಸೇರಿದಂತೆ ಯಾವುದೇ ವೇದಾಂತ ಜ್ಞಾನವೂ ಅರ್ಥವಾಗಿಲ್ಲ ಎಂದೇ ಗ್ರಹಿಸಬೇಕಾಗುತ್ತದೆ.

ಈ ಮಠಾಧೀಶರು ವಿಶ್ವಜ್ಞಾನ ಮತ್ತು ವಿಜ್ಞಾನವನ್ನು ಅಧ್ಯಾತ್ಮದಲ್ಲಿ ಅಳವಡಿಸಿಕೊಂಡರೆ ಮಾತ್ರ ಜೀವಪರವಾದ ಬದಲಾವಣೆ ಸಂಭವಿಸಲು ಸಾಧ್ಯ. ಈ ಪ್ರಯೋಗವನ್ನು ಉಪನಿಷತ್ಕಾರರು, ಬುದ್ಧನಂತಹವರು ಮಾಡಿ ತೋರಿಸಿದ್ದಾರೆ. ಇಂದು ಇಡೀ ಜೀವಿಸಂಕುಲ ಅಪಾಯದಲ್ಲಿದೆ. ಜಗದ್ಗುರುಗಳು ಎನ್ನಿಸಿಕೊಂಡವರು ಜಾಗತಿಕ ದೃಷ್ಟಿಕೋನ ಹೊಂದಿರಬೇಕಲ್ಲವೆ?

ಚುರುಮುರಿ



‘ಅಲೋಕಿಕ’ ಹರಕೆ!

• ಚಂದ್ರಕಾಂತ ವಡ್ಡು

‘ಮುಖ್ಯಮಂತ್ರಿ ಬೊಮ್ಮಾಯಿ ಎವಿಡೆನ್ಸ್ ಆ್ಯಕ್ಟ್ ಓದಿಲ್ಲವಂತೇ... ಮಾಜಿ ಲಾಯರ್ ಸಿದ್ದರಾಮಯ್ಯ ಬಯಲಿಗೆಳೆದಿದ್ದಾರೆ...’ ‘ಮಾಸ್ಟರ್ ಇನ್ ಲಾ’ ಮಾಡುತ್ತಿರುವ ತಿಂಗಳೇಶನ ಮಗ ರಾಗ ತೆಗೆದ.

‘ಲಾ ಪದವಿ ಮಾಡಿದ್ದು ಸೀನಿಯರ್ ಬೊಮ್ಮಾಯಿ. ಅವರ ಮಗ ಏಕೆ ಎವಿಡೆನ್ಸ್ ಆ್ಯಕ್ಟ್ ಓದಬೇಕಿತ್ತು? ಇದು ಸಿದ್ದರಾಮಯ್ಯನವರ ಹೆವಿ-ಡೆನ್ಸ್ ಹೇಳಿಕೆ!’

‘ಹೌದು, ರಾಯಿಸ್ಟ್ ಬೊಮ್ಮಾಯಿ ವಕೀಲರಾಗಿಯೂ ಖ್ಯಾತರಾಗಿದ್ದರು. ‘ಬೊಮ್ಮಾಯಿ ಪ್ರಕರಣ’ದ ತೀರ್ಪು ಕೂಡ ಪ್ರಸಿದ್ಧ’.

‘ಜೂನಿಯರ್ ಬೊಮ್ಮಾಯಿ ಓದಿದ್ದು ಮೆಕ್ಯಾನಿಕಲ್ ಎಂಜಿನಿಯರಿಂಗ್ ಅಲ್ಲವೇ?’ ತಿಂಗಳೇಶನ ‘ಸನ್ ಇನ್ ಲಾ’ ಸಹ ಸಂಭಾಷಣೆಯಲ್ಲಿ ಸೇರಿಕೊಂಡ.

‘ಅವರು ಅಧಿಕೃತವಾಗಿ ಬ್ಯಾಚುಲರ್ ಆಫ್ ಎಂಜಿನಿಯರಿಂಗ್. ಆದರೆ ಸೋಷಿಯಲ್ ಎಂಜಿನಿಯರಿಂಗ್‌ನಲ್ಲಿ ವಿಶೇಷ ಪರಿಣತಿ. ಡಿಪ್ಲೊಮಾ ಇನ್ ಸಂಘ ಪರಿವಾರ್, ಡಿಪ್ಲೊಮಾ ಇನ್ ಕ್ಯಾಬಿನೆಟ್ ಎಕ್ಸ್‌ಪ್ಯಾನ್ಶನ್ ಟ್ರಿಕ್ಸ್, ಸರ್ಟಿಫಿಕೇಟ್ ಕೋರ್ಸ್ ಇನ್ ರಿಸರ್ವೇಶನ್ ಮ್ಯಾನೇಜ್‌ಮೆಂಟ್’.

‘ಮುಖ್ಯಮಂತ್ರಿ ‘ಶಿಗ್ಗಾಂವಿ ಕ್ಷೇತ್ರದಲ್ಲಿ ಮುಸ್ಲಿಂ ಮತ್ತು ಪಂಚಮಸಾಲಿ ಮತ ಸಂಪಾದನೆಯ ನೆಲೆ- ಬೆಲೆ’ ಎಂಬ ವಿಷಯ ಕುರಿತು ಸಂಶೋಧನೆ ನಡೆಸಿರುವ ಸುದ್ದಿಯೂ ಹರಿದಾಡುತ್ತಿದೆ’.

‘ಸಾರ್ವಜನಿಕವಾಗಿ ತಾಕತ್ತು ಪ್ರದರ್ಶನ ಹಾಗೂ ಆರೋಪ-ಪ್ರತ್ಯಾರೋಪ ನಿರ್ವಹಣೆಯಲ್ಲಿ ತರಬೇತಿ ಕೂಡ ಪಡೆದಿದ್ದಾರಂತೆ. ಆದರೆ ಇವುಗಳಿಗೆಲ್ಲಾ ಎಲ್ಲಿಂದ ಎವಿಡೆನ್ಸ್ ತರುವುದು?’ ಮಾಸ್ಟರ್ ಇನ್ ಲಾ ತಲೆ ಕೆರೆದುಕೊಂಡ.

‘ಗುತ್ತಿಗೆದಾರರ ಫಾರ್ಟಿ ಪರ್ಸೆಂಟ್ ಆರೋಪಕ್ಕೆ ಪ್ರತಿಯಾಗಿ ಎವಿಡೆನ್ಸ್ ‘ಬೇಡಿಕೆ’ ಮುಂದಿಡಲಾಗಿದೆ! ಹಾಗಾದರೆ ತನಿಖೆ ಮೊದಲೋ ಎವಿಡೆನ್ಸ್ ಮೊದಲೋ?’

‘ಎಲ್ಲಾ ಆರೋಪಗಳ ಬಗ್ಗೆ ತನಿಖೆ ನಡೆಸಿ ‘ಬಿ’ ರಿಪೋರ್ಟ್ ಹಾಕಿಸುವ ಅವಕಾಶಕ್ಕೂ ಚಪ್ಪಡಿ ಎಳೆದಿದೆ ಕನಕಪುರ ಬಂಡೆ. ತಮ್ಮ ಸರ್ಕಾರ ಬಂದಮೇಲೆ ಅವೆಲ್ಲಾ ವಿಚಾರಣೆ ನಡೆಸುತ್ತಾರಂತೆ...’

‘ಎವಿಡೆನ್ಸ್ ಸಿಗದಿರಲಿ ಎಂದು ದೇವರಲ್ಲಿ ‘ಅಲೋಕಿಕ’ ಹರಕೆ ಹೊತ್ತರೆ ಹೇಗೆ?’ ಸುಲಭ ಪರಿಹಾರ!

ದಿನದ ಟ್ವೀಟ್

ಮಾಡಬೇಕಾದುದಿಷ್ಟೇ...



ಸಾಂಕ್ರಾಮಿಕ ರೋಗಗಳನ್ನು ಕೊನೆಗೊಳಿಸಬೇಕೆಂದು ಬಯಸುವಿರಾ? ಬರೀ ಎರಡು ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ: 1. ಮಣ್ಣು, ಆಹಾರ, ನೀರು, ಗಾಳಿ ಮತ್ತು ವಾತಾವರಣಕ್ಕೆ (ಟೆಲಿಕಾಂ ವಿಕಿರಣ) ವಿಷ ಸೇರಿಸುವುದನ್ನು ನಿಲ್ಲಿಸಿ. 2. ಮನುಷ್ಯರಿಗೆ ವಿಷ ಉಣಿಸುವುದನ್ನು ನಿಲ್ಲಿಸಿ.

ಗೆರ್ರೆಟ್ ಕ್ರೇಮರ್, ಅಮೆರಿಕದ ಲೇಖಕ

ಕಿಡಿನುಡಿ

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಜೆಡಿಎಸ್ ಪಕ್ಷವನ್ನು ಟೀಕಿಸುವುದನ್ನು ಮೊದಲು ನಿಲ್ಲಿಸಬೇಕು. ಟೀಕಿಸುವುದರಿಂದ ಮತ್ತಷ್ಟು ಸ್ಥಾನ ಕಳೆದುಕೊಳ್ಳುತ್ತೀರಿ.



ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 28-1-1998

• **ವಿಶ್ವಾಸಮತ ಗಳಿಸಿದ ಪಟೇಲ್; ಕಾಂಗ್ರೆಸ್, ಬಿಜೆಪಿ ಸಭಾತ್ಯಾಗ**

ಬೆಂಗಳೂರು, ಜ. 27– ಪ್ರಮುಖ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಸಭಾತ್ಯಾಗದ ನಡುವೆ 20 ತಿಂಗಳ ಜೆ.ಎಚ್. ಪಟೇಲ್ ನೇತೃತ್ವದ ರಾಜ್ಯ ಜನತಾದಳ ಸರ್ಕಾರ ಇಂದು ವಿಧಾನಸಭೆಯಲ್ಲಿ 135-0 ಮತಗಳಿಂದ ವಿಶ್ವಾಸಮತ ಗಳಿಸಿತು.

ಸುಮಾರು ನಾಲ್ಕು ಗಂಟೆಗಳ ಕಾಲ ನಡೆದ ಚರ್ಚೆಯ ನಂತರ ವಿಶ್ವಾಸಮತ ಕೋರಿ ಮುಖ್ಯಮಂತ್ರಿ ಪಟೇಲ್ ಅವರು ಮಂಡಿಸಿದ ನಿರ್ಣಯವನ್ನು ಸಭಾಧ್ಯಕ್ಷ ರಮೇಶ್ ಕುಮಾರ್ ಮತಕ್ಕೆ ಹಾಕಿದಾಗ 135 ಸದಸ್ಯರು ಎದ್ದು ನಿಂತು ನಿರ್ಣಯಕ್ಕೆ ಬೆಂಬಲ ಸೂಚಿಸಿದರು. ಸಭಾಧ್ಯಕ್ಷರು ಫಲಿತಾಂಶ ಪ್ರಕಟಿಸುತ್ತಿದ್ದಂತೆಯೇ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ಹರ್ಷೋದ್ಗಾರ ವ್ಯಕ್ತಪಡಿಸಿದರು.

ಆದರೆ, ನಿರ್ಣಯವನ್ನು ಮತಕ್ಕೆ ಹಾಕುವ ಮುನ್ನವೇ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು, ‘ಆಡಳಿತ ಪಕ್ಷದೊಳಗೆ ನಡೆದಿರುವ ರಾಜಕೀಯ ಗೊಂದಲಗಳನ್ನು ನಿವಾರಿಸಿಕೊಳ್ಳಲು ಹಾಗೂ ಚುನಾವಣೆಯ ಸಂದರ್ಭದಲ್ಲಿ ಮತದಾರರ ಮೇಲೆ ಪ್ರಭಾವ ಬೀರಲು ಅಧಿವೇಶನ ಕರೆದು ಸದನವನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ’ ಎಂದು ಆರೋಪಿಸಿ ಸಭಾತ್ಯಾಗ ಮಾಡಿದರು.

• **ಸಚಿವ ಎಸ್.ಡಿ. ಜಯರಾಂ ನಿಧನ**

ಬೆಂಗಳೂರು, ಜ. 27– ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಖಾತೆ ಸಚಿವ ಎಸ್.ಡಿ. ಜಯರಾಂ ಅವರು ಹೃದಯಾಘಾತದಿಂದ ಇಂದು ಬೆಳಗಿನ ಜಾವ ಇಲ್ಲಿಯ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಅವರಿಗೆ 48 ವರ್ಷ ವಯಸ್ಸಾಗಿತ್ತು.

50 ವರ್ಷಗಳ ಹಿಂದೆ

ಭಾನುವಾರ, 28-1-1973

• **ವಿಯಟ್ನಾಂ ಶಾಂತಿ ಒಪ್ಪಂದಕ್ಕೆ ಪ್ಯಾರಿಸ್‌ನಲ್ಲಿ ಸಹಿ**

ಪ್ಯಾರಿಸ್, ಜ. 27– ಅಮೆರಿಕ, ಉತ್ತರ ಮತ್ತು ದಕ್ಷಿಣ ವಿಯಟ್ನಾಂ ಸರ್ಕಾರ ಹಾಗೂ ದಕ್ಷಿಣ ವಿಯಟ್ನಾಂನ ತಾತ್ಕಾಲಿಕ ಕ್ರಾಂತಿಕಾರಿ ಸರ್ಕಾರಗಳ (ಪಿಆರ್‌ಜಿ) ವಿದೇಶಾಂಗ ಸಚಿವರುಗಳು ಇಂದು ಇಲ್ಲಿ ವಿಯಟ್ನಾಂ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದರು.

ಇಪ್ಪತ್ತು ಲಕ್ಷಕ್ಕೂ ಹೆಚ್ಚು ಜನರನ್ನು ಆಹುತಿ ತೆಗೆದುಕೊಂಡಿರುವ ಸಮರವನ್ನು ಅಂತ್ಯಗೊಳಿಸುವ ಶಾಂತಿ ಒಪ್ಪಂದಕ್ಕೆ ಅಂತರರಾಷ್ಟ್ರೀಯ ಸಮ್ಮೇಳನದ ಭವ್ಯ ಭವನದಲ್ಲಿ ಮಧ್ಯಾಹ್ನ 3.36ಕ್ಕೆ (ಭಾರತೀಯ ಕಾಲಮಾನ) ಸಹಿ ಹಾಕಲಾಯಿತು.

ಅಮೆರಿಕದ ಸ್ಟೇಟ್ ಇಲಾಖೆ ಕಾರ್ಯದರ್ಶಿ ವಿಲಿಯಂ ರೋಜರ್ಸ್, ಉತ್ತರ ವಿಯಟ್ನಾಂನ ವಿದೇಶಾಂಗ ಸಚಿವ ನ್ಗುಯೆನ್ ಡಿ ಟ್ರನ್ಹ, ದಕ್ಷಿಣ ವಿಯಟ್ನಾಂ ವಿದೇಶಾಂಗ ಕಾರ್ಯದರ್ಶಿ ಟ್ರಾನ್ಸ್ ವಾಲ್ ಲಾಂ ಮತ್ತು ಪಿ.ಆರ್.ಜಿ.ಯ ನ್ಗುಯೆನ್ ಥಿ ಬನ್ಹ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

• **ಏಷ್ಯಾದಿಂದ ಅಮೆರಿಕ ಸೇನೆ ವಾಪಸು ಬೇಡ: ಕಮ್ಯುನಿಸ್ಟ್ ಚೀನಾ ಸಲಹೆ**

ನ್ಯೂಯಾರ್ಕ್, ಜ. 27– ಏಷ್ಯಾದಲ್ಲಿನ ಅಮೆರಿಕದ ಸೈನ್ಯವನ್ನು ಆತುರಾತುರದಿಂದ ಕುಗ್ಗಿಸುವುದರ ವಿರುದ್ಧ ಚೀನಾದ ನಾಯಕರು ಎಚ್ಚರಿಕೆ ನೀಡಿದ್ದಾರೆ. ಅಮೆರಿಕ ಸೇನೆ ಕಾಲ್ತೆಗೆದಲ್ಲಿ ಅದರಿಂದ ನಾಳೆ ಬೇರೆಯವರಿಗೆ ‘ದುಷ್ಪ್ರೇರಣೆ’ ಉಂಟಾಗಬಹುದು ಎಂದು ಚೀನಾ ತಿಳಿಸಿರುವುದಾಗಿ ವರದಿ ಆಗಿದೆ. ಅಮೆರಿಕ ಸೇನೆ ಕಾಲ್ತೆಗೆದಲ್ಲಿ ಏಷ್ಯಾದಲ್ಲಿ ಜಪಾನಿನ ಮಿಲಿಟರಿ ಪ್ರಾಬಲ್ಯ ಹೆಚ್ಚಬಹುದೆಂಬ ಭೀತಿ ಹಾಗೂ ರಷ್ಯಾ ವಿರೋಧಿ ನಿಲುವೇ ಈ ಶಂಕೆಗೆ ಕಾರಣವೆನ್ನಲಾಗಿದೆ.

ಸಂಗತ

ದತ್ತಾಂಶ ಗೋಪ್ಯತೆಗೆ ನಮ್ಮದೇ ಕೀಲಿಕೈ

ನಾವೆಲ್ಲ ನಮ್ಮ ದತ್ತಾಂಶವನ್ನು ಯಾರೊಂದಿಗೆ, ಯಾವಾಗ ಮತ್ತು ಎಲ್ಲಿ ಹಂಚಿಕೊಳ್ಳುತ್ತಿದ್ದೇವೆ ಎಂಬುದರ ಬಗ್ಗೆ ಜಾಗರೂಕರಾಗಿರಬೇಕು

• ಶ್ರೀಗುರು

‘ನನ್ನ ಫೇಸ್‌ಬುಕ್ ಅಕೌಂಟ್ ಹ್ಯಾಕ್ ಆಗಿದೆ’, ‘ಇನ್‌ಸ್ಟಾಗ್ರಾಮ್ ಅಕೌಂಟನ್ನು ಮಿಸ್‌ಯೂಸ್ ಮಾಡುತ್ತಿದ್ದಾರೆ’, ‘ನನಗೆ ಆರೋಗ್ಯ ಸರಿಯಿಲ್ಲ ಎಂಬ ಹೇಳಿಕೆ ನೀಡಿ ನನ್ನ ಹೆಸರಿನಲ್ಲಿ ಹಣ ಕೇಳುವ ಮೆಸೇಜ್ ನಿಮಗೂ ಬಂದಿರಬಹುದು. ಅದಕ್ಕೆ ಮಹತ್ವ ಕೊಡಬೇಡಿ’, ‘ನಾನು ತುಂಬಾ ಕಾಳಜಿಯಿಂದ ರಚಿಸಿ ಸ್ಟೋರ್ ಮಾಡಿಟ್ಟುಕೊಂಡಿದ್ದ ನೋಟ್ಸ್‌ನ ಕಾಪಿ ಇಂಟರ್‌ನೆಟ್‌ನಲ್ಲಿ ಲೀಕ್ ಆಗಿದೆ. ಅದನ್ನು ನಾನು ಪೋಸ್ಟ್ ಮಾಡಿಲ್ಲ, ಬೇರೆ ಯಾರೋ ಕಿಡಿಗೇಡಿಗಳು ನನ್ನ ಕ್ಲೌಡ್ ಅಕೌಂಟ್‌ಗೆ ನುಗ್ಗಿ ಅಪಹರಿಸಿದ್ದಾರೆ’ ಎಂಬಂಥ ಸಂದೇಶಗಳು ಪ್ರತಿನಿತ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುತ್ತವೆ.

ನಾವು ನಮ್ಮ ವ್ಯಾಪಾರ, ಬ್ಯಾಂಕಿಂಗ್, ಅರ್ಜಿ ಸಲ್ಲಿಕೆ, ಡಾಕ್ಯುಮೆಂಟ್ ಟ್ರಾನ್ಸ್‌ಫರ್, ತೆರಿಗೆ ಪಾವತಿ, ಸಾಲ ಮರುಪಾವತಿ ಮಾಡುವಾಗ ನಮಗೆ ಗೊತ್ತೇ ಇರದ ಅನೇಕರಿಗೆ ನಮ್ಮ ಬಗೆಗಿನ ಮಾಹಿತಿ ನೀಡುತ್ತಿರುತ್ತೇವೆ. ಮೊಬೈಲ್‌ಗಳಲ್ಲಿ ಅಡಕಗೊಂಡಿರುವ ಇಲ್ಲವೇ ಡೌನ್‌ಲೋಡ್ ಮಾಡಿಕೊಂಡಿರುವ ‘ಥರ್ಡ್‌ಪಾರ್ಟಿ ಆ್ಯಪ್’ಗಳ ಮುಖಾಂತರ ನೂರಾರು ಸಲ ಹಣ ವರ್ಗಾಯಿಸುವುದು, ಪಡೆಯುವುದು ಮಾಡುತ್ತಿರುತ್ತೇವೆ. ಕೆಲಸ ಬೇಗ ಆಗಲಿ ಎಂಬ ಕಾರಣಕ್ಕಾಗಿ, ತೆರೆಯ ಮೇಲೆ ಬರುವ ಅನೇಕ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಸಂಖ್ಯೆ, ಸಂಕೇತಗಳನ್ನು ತುಂಬುತ್ತಾ ಕೆಲಸ ಮುಗಿಸಿ ನಿರುಮ್ಮಳರಾಗುತ್ತೇವೆ. ಆ ಸುಖ ಕ್ಷಣಿಕ ಅಷ್ಟೇ. ಮರುಕ್ಷಣವೇ ನಮ್ಮ ಮೇಲ್ ಬಾಕ್ಸ್‌ಗೆ ಇಲ್ಲವೇ ಮೆಸೇಜ್ ಬಾಕ್ಸ್‌ಗೆ ‘ನಿಮ್ಮ ಖಾತೆ ಹ್ಯಾಕ್ ಆಗಿದೆ’ ಅಂತಲೋ, ‘ನಿಮ್ಮ ಟ್ರಾನ್ಸಾಕ್ಷನ್ ಫೇಲ್ ಆಗಿದೆ’ ಎಂದೋ ಸಂದೇಶ ಬರುತ್ತದೆ. ಗಾಬರಿಗೊಂಡು ತುರ್ತಾಗಿ ಅಕೌಂಟ್ ಬ್ಯಾಲೆನ್ಸ್ ಚೆಕ್ ಮಾಡಲು ಯತ್ನಿಸುತ್ತೇವೆ. ಅಲ್ಲಿ ನಮ್ಮ ಪ್ರವೇಶ ಬ್ಲಾಕ್ ಆಗಿರುತ್ತದೆ. ಲಾಗಿನ್ ಫೇಲ್ಡ್ ಎಂಬ ಪುನರಾವರ್ತಿತ ಸಂದೇಶ ಕಣ್ಣಿಗೆ ರಾಚತೊಡಗುತ್ತದೆ. ಹಲವು ಬಾರಿ ಮಿಂಚಿನ ವೇಗದಲ್ಲಿ ನೆರವು ನೀಡಿದ್ದ ತಂತ್ರಜ್ಞಾನ ನಮ್ಮ ನಿಯಂತ್ರಣ ತಪ್ಪಿ ಬೇರೆಯವರ ಕೈಗೊಂಬೆ ಆಗಿಬಿಟ್ಟಿರುತ್ತದೆ.

ಹೊಸ ಶತಮಾನದ ಚಿಂತಕರ ಪ್ರಕಾರ, ಇತ್ತೀಚಿನ ದಿನಗಳ ಅತಿ ದೊಡ್ಡ ಆಸ್ತಿ ಎಂದರೆ ಮಾಹಿತಿ ಮತ್ತು ಅದರಿಂದ ಹೆಕ್ಕಿ ತೆಗೆದ ದತ್ತಾಂಶ. ಜಗತ್ತಿನ 466 ಕೋಟಿ ಜನ, ಕ್ರಿಯಾತ್ಮಕವಾಗಿ ಇಂಟರ್‌ನೆಟ್ ಬಳಸುತ್ತಾರೆ. ಜಗತ್ತಿನ ಪ್ರತಿಯೊಬ್ಬ ಮನುಷ್ಯ, ವಸ್ತು, ಜೀವಿ, ಕ್ರಿಯೆ- ಪ್ರಕ್ರಿಯೆಗಳ ಬಗ್ಗೆ ಎಂದೆಂದೂ ಮುಗಿಯದಷ್ಟು ಅಗಾಧವಾದ ದತ್ತಾಂಶ ನಮ್ಮ ನಡುವೆ ಇದೆ. ಜನರ ವೈಯಕ್ತಿಕ ವಿವರಗಳು ಬ್ಯಾಂಕ್, ಉತ್ಪನ್ನ ಮಾರಾಟಗಾರರು, ರಾಜಕೀಯ ಪಕ್ಷ, ಕಿರಾಣಿ ಅಂಗಡಿ, ಮಾಲ್, ಸಾಲ ನೀಡುವ ಏಜೆನ್ಸಿ, ರಿಯಲ್ ಎಸ್ಟೇಟ್, ಜಾಹೀರಾತು ಉದ್ಯಮ, ಸರ್ಕಾರ- ಸರ್ಕಾರೇತರ ಸಂಸ್ಥೆಗಳ ಬಳಿ ವ್ಯವಸ್ಥಿತವಾಗಿ ಶೇಖರಗೊಂಡಿರುತ್ತವೆ. ಅದೇನೂ ನಿಂತ ನೀರಲ್ಲ, ನಿರಂತರವಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗುತ್ತ, ಸಂಸ್ಕರಣಗೊಳ್ಳುತ್ತ, ಬಲಗೊಳ್ಳುತ್ತ ಬಳಕೆಗೊಳ್ಳುತ್ತದೆ. ನಾವು ಬಳಸುವ ಮೊಬೈಲು, ಲ್ಯಾಪ್‌ಟಾಪ್, ಕ್ಯಾಮೆರಾ, ಥಿಂಕ್‌ಪ್ಯಾಡ್‌ಗಳೆಲ್ಲ ಒಂದಲ್ಲ ಒಂದು ನೆಟ್‌ವರ್ಕ್‌ನಲ್ಲಿ ಇದ್ದುಕೊಂಡು ಕೆಲಸ ಮಾಡುವಾಗ ನಮ್ಮ ದತ್ತಾಂಶವೆಲ್ಲ ಒಂದರಿಂದ ಇನ್ನೊಂದಕ್ಕೆ ವರ್ಗಾವಣೆಗೊಳ್ಳುತ್ತಲೇ ಇರುತ್ತವೆ.

ಅವನ್ನು ಗೋಪ್ಯವಾಗಿ ಇಡುವುದು ಹೇಗೆ ಎಂಬುದನ್ನು ಅರಿಯಲು ‘ಡೇಟಾ ಪ್ರೈವೆಸಿ ಡೇ’ (ಜ. 28) ಆಚರಿಸುತ್ತೇವೆ. ದತ್ತಾಂಶ ರಕ್ಷಣೆ ಮತ್ತು ಗೋಪ್ಯತೆ ಎರಡೂ ಅತ್ಯಂತ ಮುಖ್ಯ. ಮನೆಯ ಕಿಟಕಿಗೆ ಕಬ್ಬಿಣದ ಸರಳು ಅಳವಡಿಸಿದರೆ ಅದು ರಕ್ಷಣೆಗೆ. ಅದೇ ಕಿಟಕಿಗೆ ಕರ್ಟನ್ ಹಾಕಿ ಒಳಗಿನ ವ್ಯವಸ್ಥೆ ಕಾಣದಂತೆ ಮಾಡುವುದು ಗೋಪ್ಯತೆ ಎನ್ನಿಸುತ್ತದೆ. ದತ್ತಾಂಶದ ವಿಷಯದಲ್ಲೂ ನಾವು ಇದೇ ಕ್ರಮ ಅನುಸರಿಸಬೇಕು. ನಮ್ಮ ಯೂಸರ್ ಐಡಿ, ಪಾಸ್‌ವರ್ಡ್, ಅಕೌಂಟ್ ನಂಬರ್, ಲಾಗಿನ್ ಐಡಿ, ಪ್ರೊಫೈಲ್ ಪಾಸ್‌ವರ್ಡ್, ಎಟಿಎಂ ಪಿನ್, ಪ್ಯಾನ್ ನಂಬರ್ ಇವನ್ನೆಲ್ಲ ಒಂದು ಕಡೆ ಸ್ಟೋರ್ ಮಾಡಿರುತ್ತೇವೆ ಇಲ್ಲವೆ ಬರೆದಿಟ್ಟುಕೊಂಡಿರುತ್ತೇವೆ. ಇವು ಬೇರೆಯವರ ಪಾಲಾಗದಂತೆ ತೀವ್ರ ನಿಗಾ ವಹಿಸಬೇಕು.



ಡಿಜಿಟಲ್ ತಂತ್ರಜ್ಞಾನವನ್ನು ಹೆಚ್ಚು ಅವಲಂಬಿಸುತ್ತಿರುವ ನಾವೆಲ್ಲ ನಮ್ಮ ದತ್ತಾಂಶವನ್ನು ಯಾರೊಂದಿಗೆ, ಯಾವಾಗ ಮತ್ತು ಎಲ್ಲಿ ಹಂಚಿಕೊಳ್ಳುತ್ತಿದ್ದೇವೆ ಎಂಬುದರ ಬಗ್ಗೆ ಜಾಗರೂಕರಾಗಿರಬೇಕು. ಸಂದೇಶಗಳನ್ನು ಗೂಢ ಲಿಪಿಯಲ್ಲಿ (ಎನ್‌ಕ್ರಿಪ್ಟ್) ಇಡಬೇಕು. ನಾವು ಕಳಿಸುವ ಪ್ರತೀ ಸಂದೇಶವೂ ಸಂಭಾಷಣೆಯೂ ಕೋಡ್ ರೂಪದಲ್ಲಿರುತ್ತದೆ. ಎನ್‌ಕ್ರಿಪ್ಟ್ ಆಗಿಯೇ ಮುಂದೆ ಸಾಗುತ್ತದೆ.

ಬಳಸುವ ಲ್ಯಾಪ್‌ಟಾಪ್, ಕಂಪ್ಯೂಟರ್‌ಗಳಿಗೆ ಆ್ಯಂಟಿವೈರಸ್ ಹಾಕಿಸುವುದು, ಸಾರ್ವಜನಿಕ ನೆಟ್‌ವರ್ಕ್‌ಗಳಲ್ಲಿ ಆದಷ್ಟು ಕಡಿಮೆ ವ್ಯವಹರಿಸುವುದು, ಅನುಮಾನಾಸ್ಪದ ಮೇಲ್‌ಗಳಿಗೆ ಉತ್ತರಿಸದಿರುವುದು, ವೈ- ಫೈ ರೌಟರ್‌ಗಳಿಗೆ ಸಂಕೀರ್ಣ ಪಾಸ್‌ವರ್ಡ್ ಇಡುವುದರಿಂದ ದತ್ತಾಂಶ ಕಳ್ಳತನವನ್ನು ತಕ್ಕಮಟ್ಟಿಗೆ ತಡೆಯಬಹುದು. ಎನ್‌ಕ್ರಿಪ್ಟೆಡ್ ಸಂದೇಶಗಳನ್ನು ಕದಿಯಬಹುದು, ಆದರೆ ಬಳಸುವುದು ಸುಲಭವಲ್ಲ.

ವಾಚಕರ ವಾಣಿ

ಶಿಕ್ಷೆ ಆಗಬೇಕಾದುದು ಯಾರಿಗೆ?!

ಬಳ್ಳಾರಿಯ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯದಲ್ಲಿ ಕಳಪೆ ಊಟದ ವಿರುದ್ಧ ದನಿ ಎತ್ತಿದ 25 ವಿದ್ಯಾರ್ಥಿಗಳನ್ನು ವಿದ್ಯಾರ್ಥಿ ನಿಲಯದಿಂದ ಹೊರಕ್ಕೆ ಹಾಕುವ ಮೂಲಕ ಶಿಸ್ತು ಕಲಿಸಲು ಜಿಲ್ಲಾಧಿಕಾರಿ ಮುಂದಾಗಿರುವುದು ವಿಚಿತ್ರವೆನಿಸುತ್ತದೆ. ಸಮಸ್ಯೆಗಳ ವಿರುದ್ಧ ಪ್ರತಿಭಟಿಸಲೇಬಾರದೆಂಬ ಇವರ ನಿಲುವು ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆ ತರುವಂತಿದೆ. ಜಿಲ್ಲಾಧಿಕಾರಿ ಬಳಿ ನ್ಯಾಯ ಸಿಗಬಹುದೆಂದು ರಾತ್ರಿಯಲ್ಲೇ ಅವರನ್ನು ಭೇಟಿಯಾಗಲು ಮುಂದಾದ ಆ ವಿದ್ಯಾರ್ಥಿಗಳು ಮಾಡಿದ ತಪ್ಪಾದರೂ ಏನು? ಶಿಸ್ತು ಕಲಿಸಬೇಕಾಗಿರುವುದು ಅಡುಗೆ ಕಳಪೆಯಾಗಲು ಕಾರಣರಾದವರಿಗೆ. ವಿದ್ಯಾರ್ಥಿಗಳ ಸಣ್ಣ ದನಿಯನ್ನೂ ಹತ್ತಿಕ್ಕುವ ವ್ಯವಸ್ಥೆ ಬಂದರೆ ಮುಂದೆ ಈ ಸಮಾಜದ ದೊಡ್ಡ ಸಮಸ್ಯೆಗಳಿಗೆ ಅವರು ಹೇಗೆ ಪ್ರತಿಕ್ರಿಯಿಸಬೇಕು? ಊಟವೇ ಸರಿಯಿಲ್ಲದೆ ಆ ಮಕ್ಕಳ ಆರೋಗ್ಯವಾದರೂ ಹೇಗೆ ಸುಧಾರಿಸೀತು?

ಹಿಂದೆ ನಾನು ಹಾಸ್ಟೆಲ್‌ನಲ್ಲಿದ್ದಾಗ ಕಳಪೆ ಅಡುಗೆಯ ವಿರುದ್ಧ ವಿದ್ಯಾರ್ಥಿ ನಿಲಯದ ಎಲ್ಲಾ ಹುಡುಗಿಯರು ಸೇರಿ ಅಡುಗೆ ಮನೆಗೆ ಬೀಗ ಹಾಕಿ ಪ್ರತಿಭಟಿಸಿದ್ದೆವು. ಸಂಬಂಧಪಟ್ಟ ಅಧಿಕಾರಿಗಳು ಬಂದು ಸಮಸ್ಯೆ ಬಗೆಹರಿಸುವವರೆಗೂ ಧರಣಿ ಕೂತೆವು. ವಿದ್ಯಾರ್ಥಿ ನಿಲಯದ ಊಟ ಸರ್ಕಾರ ಕೊಡುವ ಭಿಕ್ಷೆ ಅಲ್ಲವಲ್ಲ, ಅದು ವಿದ್ಯಾರ್ಥಿಗಳ ಹಕ್ಕು. ಸಾರ್ವಜನಿಕರೇ ಕಟ್ಟಿದ ತೆರಿಗೆ ಹಣದ ಫಸಲದು. ಸರ್ಕಾರ ಈ ಕುರಿತು ಸರಿಯಾಗಿ ಕ್ರಮ ವಹಿಸಿ, ಆ ಓದುವ ಮಕ್ಕಳ ಸಮಸ್ಯೆಗಳ ಕಡೆ ಗಮನ ನೀಡಲಿ.

ಆಶಾ ಎ., ಶಿವಮೊಗ್ಗ

ಜೀವ ಅಮೂಲ್ಯ ನಿಜ, ಆದರೆ...

ತಿ.ನರಸೀಪುರ ತಾಲ್ಲೂಕಿನಲ್ಲಿ ಬೋನಿಗೆ ಬಿದ್ದ ಚಿರತೆಯನ್ನು ಕೊಲ್ಲಲು ಸ್ಥಳೀಯರು ಪಟ್ಟು ಹಿಡಿದಿದ್ದು (ಪ್ರ.ವಾ. ಜ. 27) ಚಿಂತಿಸುವಂತಿದೆ. ಜನಸಾಮಾನ್ಯರ ಜೀವ ತೆಗೆದ ಚಿರತೆಯನ್ನು ಕೊಲ್ಲಿ ಎಂಬ ಜನರ ಆಗ್ರಹ ಒಂದು ಲೆಕ್ಕದಲ್ಲಿ ಸರಿಯಿರಬಹುದು. ಆದರೆ ಅದು ಊರೊಳಕ್ಕೆ ನುಗ್ಗಲು, ಆಹಾರ ಸಿಗದೇ ಒದ್ದಾಡಲು, ಸೂಕ್ತ ಆಶ್ರಯ ಇಲ್ಲದಿರಲು ನಮ್ಮ ದುರಾಸೆಯು ಕಾರಣ ತಾನೆ?

ವನ್ಯಜೀವಿ ಅಂದರೆ ಜೀವ ತಲ್ಲಣಿಸುತ್ತದೆ. ಊರೊಳಗೆ ನುಗ್ಗಿ ಅಮಾಯಕರನ್ನು ಬಲಿ ಪಡೆದ ಆ ಜೀವಿಯನ್ನು ಮಾನವರಾದ ನಾವೂ ಕೊಲ್ಲುವುದು ತರವೇ? ಜೀವ ಕಳೆದುಕೊಂಡವರ, ಬಂಧು ಬಾಂಧವರ ಸಂಕಟ ಅಪಾರವಾದುದು. ಹಾಗೆಂದು ಮೂಕ ಜೀವಿಗಳನ್ನು ಕೊಲ್ಲಲು ನಮಗೇನು ಹಕ್ಕಿದೆ?

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಹಕ್ಕೇ ಮೊದಲಿರಲಿ, ಬಳಿಕ ಕರ್ತವ್ಯ

ಭಾರತ ಸಂವಿಧಾನದ ಬಗ್ಗೆ ವಿವರಿಸಿರುವ ಅಬ್ದುಲ್ ರೆಹಮಾನ್ ಪಾಷ ಅವರು (ಸಂಗತ, ಜ. 26) ನಾಗರಿಕರಿಗೆ ಕರ್ತವ್ಯಗಳೇ ಹಕ್ಕುಗಳ ನಿಜವಾದ ಮೂಲವಾಗಿವೆ ಎಂದು ಹೇಳಿದ್ದಾರೆ. ವಾಸ್ತವದಲ್ಲಿ ಮನುಷ್ಯನಿಗೆ ಮೊದಲು ಬೇಕಾಗಿರುವುದು ಹಕ್ಕುಗಳು. ಸಂವಿಧಾನ ಪ್ರತಿಪಾದಿಸಿರುವ ಜೀವಿಸುವ ಹಕ್ಕು ಇಲ್ಲದೆ ಮನುಷ್ಯ ಬದುಕುವುದಕ್ಕೇ ಆಗುವುದಿಲ್ಲ, ಇನ್ನು ಅವರು ಕರ್ತವ್ಯಪಾಲನೆ ಮಾಡುವುದು ಯಾವಾಗ?

ಅಷ್ಟಕ್ಕೂ ಹಕ್ಕಿಗೂ ಕರ್ತವ್ಯಕ್ಕೂ ಪೈಪೋಟಿಯೇ ಇಲ್ಲ. ಎರಡೂ ತಮ್ಮದೇ ಆದ ಮಹತ್ವ ಹೊಂದಿವೆ. ಹಾಗೆಂದು ಅವುಗಳ ಮಧ್ಯೆ ಪೈಪೋಟಿ ಆಗಿ ಯಾವುದು ಮೇಲುಗೈ ಅಂದರೆ ಆಗ ಅವಶ್ಯವಾಗಿ ಹಕ್ಕುಗಳದೇ ಮೇಲುಗೈ ಎಂಬುದರಲ್ಲಿ ಎರಡು ಮಾತಿಲ್ಲ.

ರಂಗಸ್ವಾಮಿ ಮಾರ್ಲಬಂಡಿ, ಪೆದ್ದ ಹರಿವಾಣಂ, ಆದೋನಿ

ಹೇಳಿಕೆಗೆ ವ್ಯತಿರಿಕ್ತವಾದ ವಾಸ್ತವ ಸ್ಥಿತಿ

ಪದ್ಮಭೂಷಣ ಪುರಸ್ಕಾರ ದೊರಕಿದ್ದಕ್ಕೆ ಜಿಲ್ಲಾಡಳಿತದಿಂದ ಅಭಿನಂದನೆ ಸ್ವೀಕರಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರು, ‘2024 ಹಾಗೂ 2029ರ ಲೋಕಸಭಾ ಚುನಾವಣೆಯಲ್ಲೂ ನರೇಂದ್ರ ಮೋದಿ ಅವರು ಹೆಚ್ಚೆಚ್ಚು ಬಹುಮತದಿಂದ ಗೆಲ್ಲಬೇಕು. ನಂತರ ನಿವೃತ್ತಿಗೊಳ್ಳಬೇಕು. ಅಲ್ಲಿಯವರೆಗೆ, ಅವರಂತೆಯೇ ಇರುವವರನ್ನು ತಯಾರು ಮಾಡಬೇಕು’ ಎಂದು ಹೇಳಿರುವುದು (ಪ್ರ.ವಾ., ಜ. 27) ಅನಿರೀಕ್ಷಿತವೇನಲ್ಲ ಹಾಗೂ ಭಾರತದಂತಹ ಬಹುತ್ವವನ್ನುಳ್ಳ ದೇಶದ ನಾಯಕತ್ವದ ಬಗೆಗಿನ ಅವರ ಸೈದ್ಧಾಂತಿಕ ನೆಲೆ ಏನು ಎಂಬುದನ್ನು ಸೂಚಿಸುವಂತಹುದಾಗಿದೆ.

‘ಮೋದಿ ಕಾರಣದಿಂದಲೇ ನನಗೆ ಪುರಸ್ಕಾರ ದೊರೆತಿದೆ. ಇಲ್ಲದಿದ್ದರೆ ಬರುತ್ತಿರಲಿಲ್ಲ...’ ಎಂದು ಭೈರಪ್ಪ ಹೇಳಿರುವುದು ಗಮನಾರ್ಹ! ‘ಈಗ ದೇಶ ಬಹಳ ಪ್ರಗತಿ ಸಾಧಿಸಿದೆ’ ಎಂಬ ಅವರ ಹೇಳಿಕೆಗೆ ವ್ಯತಿರಿಕ್ತವಾದ ಅಂಕಿ ಅಂಶಗಳು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನೋಡುತ್ತಲೇ ಇದ್ದೇವೆ. ಉದಾಹರಣೆಗೆ, ಆಕ್ಸ್‌ಫಾಮ್ ಎಂಬ ಸಂಸ್ಥೆ ತನ್ನ ‘ಸರ್ವೈವಲ್ ಆಫ್ ದಿ ರಿಚೆಸ್ಟ್: ದಿ ಇಂಡಿಯಾ ಸ್ಟೋರಿ’ ಎಂಬ ವರದಿಯಲ್ಲಿ, ಭಾರತದ ಜನಸಂಖ್ಯೆಯ ಶೇ 1ರಷ್ಟು ಮಂದಿ ಇಡೀ ದೇಶದ ಸಂಪತ್ತಿನ ಶೇ 40ರಷ್ಟನ್ನು ಪಡೆದಿದ್ದಾರೆ, 70 ಕೋಟಿ ಜನರು ಪಡೆದಿರುವ ಐಶ್ವರ್ಯಕ್ಕೆ ಸಮಾನವಾದ ಐಶ್ವರ್ಯವನ್ನು 21 ಮಂದಿ ಹೊಂದಿದ್ದಾರೆ, ದೇಶದ ಒಟ್ಟು ಜನಸಂಖ್ಯೆಯ ಶೇ 50ರಷ್ಟು ಮಂದಿ ಪಡೆದಿರುವುದು ಶೇ 3ರಷ್ಟು ಸಂಪತ್ತು ಮಾತ್ರ ಎಂದೆಲ್ಲಾ ಗುರುತಿಸಿದೆ.

ನಿರುದ್ಯೋಗ ಪ್ರಮಾಣ ಏರುತ್ತಲೇ ಇದೆ. ಬೆಲೆ ಏರಿಕೆ ಮಿತಿಮೀರಿದೆ. ದೇಶದ ಸಾಲ 2014ರಲ್ಲಿ ಸರಿಸುಮಾರು ₹ 45 ಲಕ್ಷ ಕೋಟಿ ಇದ್ದದ್ದು 2021ರ ಮಾರ್ಚ್ ವೇಳೆಗೆ ₹ 147 ಲಕ್ಷ ಕೋಟಿ. ವಸೂಲಾಗದ ಸಾಲ (ಎನ್‌ಪಿಎ) ₹ 66.5 ಲಕ್ಷ ಕೋಟಿ. ಕಳೆದ ಐದು ವರ್ಷಗಳಲ್ಲಿ ಬ್ಯಾಂಕ್‌ಗಳು ರೈಟ್ ಆಫ್ ಮಾಡಿದ ಸಾಲ ಸುಮಾರು ₹ 10 ಲಕ್ಷ ಕೋಟಿ! ಮೇಲೆಲ್ಲ ಥಳುಕು ಒಳಗೆಲ್ಲ ಹುಳುಕು ಎಂಬಂತಾಗಿದೆ ನಮ್ಮ ದೇಶದ ಪರಿಸ್ಥಿತಿ!

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕನ್ನಡ ಪತ್ರಿಕೋದ್ಯಮದ 'ಕ್ರೀಡಾಜ್ಯೋತಿ'



1974ರಲ್ಲಿ ರಣಜಿ ಟ್ರೋಫಿ ಜಯಿಸಿದ ಕರ್ನಾಟಕ ತಂಡದ ಆಟಗಾರರಾದ ಬಿ.ಎಸ್. ಚಂದ್ರಶೇಖರ್, ಜಿ.ಆರ್. ವಿಶ್ವನಾಥ್ ಮತ್ತು ಸೈಯದ್ ಕಿರ್ಮಾನಿ ಅವರು ಪ್ರಜಾವಾಣಿ ಕಚೇರಿಗೆ ಭೇಟಿ ನೀಡಿದ್ದರು



1962ರಲ್ಲಿ ಜಕಾರ್ತನಲ್ಲಿ ನಡೆದ ಏಷ್ಯನ್ ಗೇಮ್ಸ್ ಸಾಕ್ಷಾತ್ ವರದಿಗಳು



ಪೂರ್ಣಪ್ರಮಾಣದ ಕ್ರೀಡಾ ಪುಟ



ಮುಖಪುಟದಲ್ಲಿ ಟೆಸ್ಟ್ ಕ್ರಿಕೆಟ್ ವರದಿ

• ಗಿರೀಶ ದೊಡ್ಡಮನಿ

'ಜಟ್ಟಿ ಕಾಳಗದಿ ಗೆಲ್ಲದೊಡೆ
ಸಾಮು, ಪಟ್ಟು ವರಸೆಗಳೆಲ್ಲ ವಿಫಲವೆನ್ನುವೆಯೇಂ
ಮುಟ್ಟಿ ನೋಡವನ ಮೈಕಟ್ಟು, ಕಬ್ಬಿಣದ ಗಟ್ಟಿ
ಗಟ್ಟಿತನ ಗರಡಿಫಲ ಮಂಕುತಿಮ್ಮ..'

ಡಿ.ವಿ. ಗುಂಡಪ್ಪನವರು ಅಂಗಸಾಧನೆಯ ಮಹತ್ವದ ಕುರಿತು ಬರೆದಿರುವ ಕಗ್ಗದ ಸಾಲುಗಳು ಕ್ರೀಡಾಪಟುಗಳಿಗೂ ಅನ್ವಯಿಸುತ್ತವೆ. ಸ್ಪರ್ಧೆಗಳಲ್ಲಿ ಗೆಲುವು ಮತ್ತು ಸೋಲು ಸಹಜ. ಆದರೆ ಫಲಿತಾಂಶ ಏನೇ ಇರಲಿ. ಆಟೋಟಗಳಲ್ಲಿ ತೊಡಗಿಕೊಂಡವರಿಗೆ ವ್ಯಕ್ತಿತ್ವ ನಿರ್ಮಾಣ ಮತ್ತು ಆರೋಗ್ಯ ನಿರ್ವಹಣೆ ಸಾಧ್ಯ. ಆರೋಗ್ಯವಂತ ವ್ಯಕ್ತಿಗಳಿಂದ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯ. ಆದ್ದರಿಂದಲೇ ಸಮಾಜ ಮತ್ತು ಜೀವನದಲ್ಲಿ ಕ್ರೀಡಾ ಚಟುವಟಿಕೆಗಳು ಮುಖ್ಯವಾದ ಸಂಗತಿಗಳು.



ಕೆ.ಎ. ನೆಟ್ಟಕಲ್ಲಪ್ಪ

ಆದ್ದರಿಂದಲೇ ಪ್ರಜಾವಾಣಿಯಲ್ಲಿ 50ರ ದಶಕದಿಂದಲೇ ಕ್ರೀಡಾ ಚಟುವಟಿಕೆಗಳ ಸುದ್ದಿಗಳ ಪ್ರಕಟಣೆಗೆ ಆದ್ಯತೆ ನೀಡಲಾಗಿದೆ. 60ರ ದಶಕದಲ್ಲಿ ಕ್ರೀಡೆಗಾಗಿಯೇ ಒಂದು ಪುಟ ಆರಂಭಿಸಿದ ಹೆಗ್ಗಳಿಕೆ ಪ್ರಜಾವಾಣಿಗೇ ಸಲ್ಲುತ್ತದೆ. ಕನ್ನಡ ಕ್ರೀಡಾ ಪತ್ರಿಕೋದ್ಯಮಕ್ಕೆ ಪ್ರಜಾವಾಣಿಯೇ ಜನನಿ.

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕಾ ಬಳಗದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಕೆ.ಎ. ನೆಟ್ಟಕಲ್ಲಪ್ಪನವರು ಕ್ರೀಡಾ ಆಡಳಿತಗಾರರಾಗಿ ಜನಪ್ರಿಯರಾಗಿದ್ದರು. ಅಷ್ಟೇ ಅಲ್ಲ, ಕನ್ನಡ ಪತ್ರಿಕೋದ್ಯಮದಲ್ಲಿ ಕ್ರೀಡಾ ವರದಿಗಾರಿಕೆಗೆ ಸಂಬಂಧಿಸಿದಂತೆ ಹೊಸ ಆಯಾಮ ನೀಡಿದರು. ರಾಜ್ಯದಲ್ಲಿ ನಡೆಯುವ ಪ್ರತಿ ಕ್ರೀಡಾಕೂಟವೂ ಮಹತ್ವದ್ದಾಗಿದ್ದು, ಜನರಿಗೆ ಅವುಗಳ ಸಂಪೂರ್ಣ ಮಾಹಿತಿ ನೀಡಬೇಕೆಂಬ ಬಗ್ಗೆ ಐವತ್ತರ ದಶಕದಲ್ಲಿಯೇ ಯೋಚಿಸಿದ್ದರು. ಅವರ ಕ್ರೀಡಾಪ್ರೀತಿ ಮತ್ತು ಬದ್ಧತೆಯ ಫಲವಾಗಿ ಕನ್ನಡ ಪತ್ರಿಕೋದ್ಯಮದಲ್ಲಿ ಕ್ರೀಡಾ ವರದಿಗಾರಿಕೆಗೆ ಗೌರವಯುತ ಸ್ಥಾನ ದೊರೆಯಿತು..

ಕ್ರೀಡಾ ರಂಗಕ್ಕೆ ಪ್ರಜಾವಾಣಿಯ ಕೊಡುಗೆಗಳನ್ನು 1) ಕ್ರೀಡಾ ಪುಟಗಳ ಆರಂಭ ಹಾಗೂ ಸಾಕ್ಷಾತ್ ವರದಿಗಾರಿಕೆ 2) ಒಲಿಂಪಿಕ್ ಆಂದೋಲನಕ್ಕೆ ಕೊಡುಗೆ 3) ಕ್ರೀಡೆಯ ಏಳ್ಗೆಗೆ ನೀಡಿದ ಕಾಣಿಕೆಗಳು ಎಂಬ ಮೂರು ಆಯಾಮಗಳಲ್ಲಿ ನೋಡಬಹುದು.

ಕ್ರೀಡಾಪುಟಗಳ ಆರಂಭ ಹಾಗೂ ಸಾಕ್ಷಾತ್ ವರದಿಗಾರಿಕೆ

ಭಾರತದ ಸ್ವಾತಂತ್ರ್ಯದ ನಂತರ ಕ್ರೀಡಾರಂಗದಲ್ಲಿಯೂ ಹಲವು ಸಾಧನೆಗಳು, ಬದಲಾವಣೆಗಳು ಮತ್ತು ಬೆಳವಣಿಗೆಗಳು ಆಗಿವೆ. ಈ ಎಲ್ಲವನ್ನೂ ಅಕ್ಷರ ರೂಪದಲ್ಲಿ ದಾಖಲಿಸುತ್ತ ಬಂದಿರುವ ಹೆಗ್ಗಳಿಕೆ ಪ್ರಜಾವಾಣಿಯದ್ದು. ಆದ್ದರಿಂದಾಗಿ ಪತ್ರಿಕೆಯು ನಾಡಿನ ಕ್ರೀಡಾರಂಗದ ಸಾಕ್ಷಿಪ್ರಜ್ಞೆಯಾಗಿದೆ.

1966-67ರ ಸಾಲಿನಿಂದ ಕ್ರೀಡೆಗಾಗಿಯೇ ಒಂದು ಪುಟ ಮೀಸಲಿಡಲಾಯಿತು. ಅದರೆ ಅದಕ್ಕೂ ಮುನ್ನವೇ ಕ್ರೀಡಾಸುದ್ದಿಗಳನ್ನು ಬೇರೆ ಎಲ್ಲ ಸುದ್ದಿಗಳೊಂದಿಗೆ ಪ್ರಮುಖವಾಗಿ ಪ್ರಕಟಿಸಲಾಗುತ್ತಿತ್ತು.

ಅದರಲ್ಲೂ 1950ರ ನಂತರದಲ್ಲಿ ದೇಶ-ವಿದೇಶಗಳಲ್ಲಿ ನಡೆದ ಪ್ರಮುಖ ಕ್ರೀಡಾ ಚಟುವಟಿಕೆಗಳನ್ನು ದಾಖಲಿಸಿದೆ. ಸ್ವಾತಂತ್ರ್ಯದ ಬಳಿಕ, ಕೇಂದ್ರದಲ್ಲಿ ಸರ್ಕಾರ ರಚನೆಯ ನಂತರ ಅಭಿವೃದ್ಧಿ ಯೋಜನೆಗಳು ಎಲ್ಲ ರಂಗಗಳಲ್ಲಿಯೂ ಆಗತೊಡಗಿದವು.



2012ರ ಲಂಡನ್ ಒಲಿಂಪಿಕ್ಸ್ ಪುಟ

ವಿದೇಶಗಳೊಂದಿಗೆ ಸೌಹಾರ್ದ, ವಾಣಿಜ್ಯಕ ಸಂಬಂಧಗಳನ್ನು ಬೆಸೆಯುವ ಕೆಲಸಗಳು ಆಗ ಆರಂಭವಾಗಿದ್ದವು. ಕ್ರೀಡಾ ಕ್ಷೇತ್ರವೂ ಹೊಸತನಗಳ ನಿರೀಕ್ಷೆಯಲ್ಲಿತ್ತು. ಸ್ವಾತಂತ್ರ್ಯಪೂರ್ವದಲ್ಲಿ ಒಲಿಂಪಿಕ್ಸ್‌ನಲ್ಲಿ ಭಾರತದ ಹಾಕಿ ತಂಡಗಳ ಸಾಧನೆಯು ಮನೆಮಾತಾಗಿತ್ತು. ಅದರಂತೆ ಬೇರೆ ಕ್ರೀಡೆಗಳಲ್ಲಿಯೂ ಭಾರತ ಬೆಳೆಯಬೇಕು ಎಂಬ ಆಶಯವೂ ಜನಮಾನಸದಲ್ಲಿ ಗರಿಗೆದರಿತ್ತು.

ಅದೇ ಸಂದರ್ಭದಲ್ಲಿ 1951ರಲ್ಲಿ ದೆಹಲಿಯಲ್ಲಿ ಮೊದಲ ಏಷ್ಯನ್ ಕ್ರೀಡಾಕೂಟ ಆಯೋಜನೆಗೊಂಡಿತು. ಆ ಕೂಟದಲ್ಲಿ ಕ್ರೀಡಾಜ್ಯೋತಿಯನ್ನು ತಂದ ಅಥ್ಲೀಟ್ ದಲೀಪ್ ಸಿಂಗ್ ಅವರ ಚಿತ್ರವು ಪ್ರಜಾವಾಣಿಯ ಮುಖಪುಟದಲ್ಲಿ ಪ್ರಕಟವಾಗಿತ್ತು.

ಕೆಲವು ಕಾಲದ ನಂತರ ಎಲ್ಲ ಸುದ್ದಿಗಳ ನಡುವೆ ಕ್ರೀಡಾಸುದ್ದಿಗಳನ್ನು ಗುರುತಿಸುವಂತಾಗಲು ಕ್ರೀಡಾರಂಗ ಎಂಬ ಟ್ಯಾಗ್ ಬಳಸಲಾಗುತ್ತಿತ್ತು.

ಇಂಗ್ಲೆಂಡ್, ಆಸ್ಟ್ರೇಲಿಯಾ ಸೇರಿದಂತೆ ಬೇರೆ ಬೇರೆ ದೇಶಗಳಲ್ಲಿ ನಡೆಯುತ್ತಿದ್ದ ಕ್ರಿಕೆಟ್, ಕ್ರೀಡಾ ಸ್ಪರ್ಧೆಗಳ ಫಲಿತಾಂಶಗಳನ್ನು ವಿವರವಾಗಿ ನೀಡಲು ಆರಂಭಿಸಲಾಯಿತು. ದೇಶ ಮತ್ತು ರಾಜ್ಯದೊಳಗೆ ನಡೆಯುತ್ತಿದ್ದ ಕ್ರೀಡಾಕೂಟಗಳಿಗೂ ಆದ್ಯತೆ ಕೊಡಲಾಯಿತು. ಅದರಲ್ಲೂ ರಣಜಿ ಕ್ರಿಕೆಟ್ ಟೂರ್ನಿ, ಅಥ್ಲೆಟಿಕ್ಸ್, ಈಜು ಮತ್ತಿತರ ಕ್ರೀಡೆಗಳಿಗೆ ಮೊದಲ ಪ್ರಾಶಸ್ತ್ಯವಿರುತ್ತಿತ್ತು. ಟಿ.ವಿ ಮತ್ತಿತರ ಮಾಧ್ಯಮಗಳು ಇರದ ಆ ಕಾಲದಲ್ಲಿ ಫಲಿತಾಂಶದ ಜೊತೆಗೆ ಆಯಾ ಪಂದ್ಯ ಅಥವಾ ಸ್ಪರ್ಧೆಗಳ ಸ್ವಾರಸ್ಯ ಮತ್ತು ಪ್ರಮುಖ ಅಂಶಗಳಿಗೆ ಒತ್ತು ನೀಡಿದ ಬರವಣಿಗೆ ಶೈಲಿಯೂ ಗಮನ ಸೆಳೆಯುತ್ತಿತ್ತು.

1951ರಲ್ಲಿ ಪ್ರಕಟವಾಗಿದ್ದ ವಾರ್ಸಿಟಿ ಕಪ್ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕ್ರಿಕೆಟ್ ಟೂರ್ನಿಯ ವರದಿ ಇದಕ್ಕೊಂದು ಉತ್ತಮ ನಿದರ್ಶನ. ಆಗಿನ ಮೈಸೂರು ಮತ್ತು ದೆಹಲಿ ತಂಡಗಳ ನಡುವಣ ಆ ಪಂದ್ಯವು ಹೈದರಾಬಾದಿನಲ್ಲಿ ನಡೆದಿತ್ತು. ಮೈಸೂರಿನ ಅನಂತಸ್ವಾಮಿರಾವ್ ಅವರು ಅಜೇಯ 95 ರನ್ ಗಳಿಸಿದ್ದರು. ತಂಡವು ಉತ್ತಮ ಮೊತ್ತ ಗಳಿಸಲು ಅವರು ಕಾರಣರಾಗಿದ್ದರು. ಆದರೆ, ಅಂದು ಉಳಿದ ಬ್ಯಾಟರ್‌ಗಳು ಬೇಗನೇ ಔಟಾಗಿದ್ದರಿಂದ ಅವರಿಗೆ ಅಂದು ಶತಕ ಗಳಿಸಲು ಸಾಧ್ಯವಾಗಿರಲಿಲ್ಲವೆಂಬ ವರದಿ ಗಮನ ಸೆಳೆದಿತ್ತು. ಟಿ.ವಿ. ಇರದ ಆ ಕಾಲದಲ್ಲಿ ಓದುಗರಿಗೆ ಆಟದ ಚಿತ್ರಣವನ್ನು ಆ ವರದಿಯಲ್ಲಿ ಕಟ್ಟಿಕೊಡಲಾಗಿತ್ತು.

1958ರಲ್ಲಿ ಏಷ್ಯನ್ ಗೇಮ್ಸ್‌ನಲ್ಲಿ ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಅವರು ದಾಖಲೆ ನಿರ್ಮಿಸಿದ ಸುದ್ದಿಯನ್ನು ಮುಖಪುಟದಲ್ಲಿ ಚಿತ್ರಸಹಿತ ಪ್ರಮುಖವಾಗಿ ಪ್ರಕಟಿಸಲಾಗಿತ್ತು. ಅದರೊಂದಿಗೆ ಜಪಾನಿ ಈಜುಗಾರರ ದಾಖಲೆಯ ಪುಟ್ಟ ಬಾಕ್ಸ್ ಕೂಡ ಗಮನ ಸೆಳೆಯುವಂತಿತ್ತು.

ತಂತ್ರಜ್ಞಾನ ಬೆಳೆದಂತೆ ಕ್ರೀಡೆ ಮತ್ತು ಪತ್ರಿಕಾರಂಗಗಳಲ್ಲಿಯೂ ಬದಲಾವಣೆಗಳಾದವು. ಸಾರಿಗೆ, ಸಂವಹನದಲ್ಲಿಯೂ ಆಮೂಲಾಗ್ರ ಸುಧಾರಣೆಗಳಾಗತೊಡಗಿದವು. ಅದರಿಂದಾಗಿ ಭಾರತದಲ್ಲಿಯೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳು ಹೆಚ್ಚು ಆಯೋಜನೆಗೊಳ್ಳಲಾರಂಭಿಸಿದವು. ಈ ಬದಲಾವಣೆಗಳಿಗೆ ಪ್ರಜಾವಾಣಿಯೂ ತ್ವರಿತವಾಗಿ ಹೊಂದಿಕೊಂಡಿತು.

ಕನ್ನಡ ಪತ್ರಿಕೋದ್ಯಮದಲ್ಲಿ ಕ್ರೀಡೆಗಳ ಸಾಕ್ಷಾತ್ ವರದಿಗಾರಿಕೆಗಾಗಿ ಮೊದಲ ಬಾರಿಗೆ ವರದಿಗಾರರನ್ನು ನಿಯೋಜಿಸಿದ ಶ್ರೇಯವೂ ಪ್ರಜಾವಾಣಿಗೇ ಸಲ್ಲುತ್ತದೆ. ಇದಕ್ಕೆ ಶ್ರೀಕಾರ ಹಾಕಿದವರೂ ನೆಟ್ಟಕಲ್ಲಪ್ಪನವರು. ಅವರು ವಿದೇಶಕ್ಕೆ ತೆರಳಿ ಕ್ರೀಡಾವರದಿಗಳನ್ನು ಬರೆದ ಕನ್ನಡದ ಮೊದಲ ವರದಿಗಾರರೂ ಹೌದು.

1962ರ ಏಷ್ಯನ್ ಗೇಮ್ಸ್, 1972ರ ಮ್ಯೂನಿಕ್ ಒಲಿಂಪಿಕ್ಸ್‌ಗಳಿಗೆ ತೆರಳಿದ್ದ ನೆಟ್ಟಕಲ್ಲಪ್ಪನವರು ವರದಿ ಮಾಡಿದ್ದರು. ಅಲ್ಲದೇ ಇನ್ನೂ ಹಲವು ಅಂತರರಾಷ್ಟ್ರೀಯ ಕ್ರೀಡಾಕೂಟಗಳ ವರದಿಯನ್ನೂ ಅವರು ಮಾಡಿದ್ದರು.

ಸಾಕ್ಷಾತ್ ವರದಿಗಾರಿಕೆಗೆ ಪ್ರವಾಸ ತೆರಳುವುದು ಒಲಿಂಪಿಕ್ಸ್‌ಗೆ ಮಾತ್ರ ಸೀಮಿತವಾಗಲಿಲ್ಲ. ಕ್ರೀಡಾ ವರದಿಗಾರರನ್ನೂ ದೇಶದ ಪ್ರಮುಖ ನಗರಗಳಲ್ಲಿ ನಡೆಯುತ್ತಿದ್ದ ರಣಜಿ, ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಿಗೆ ಕಳುಹಿಸುವ ಪದ್ಧತಿ ಆರಂಭವಾಯಿತು.

ಇದರಿಂದಾಗಿ ಹಲವಾರು ದಾಖಲೆಗಳನ್ನು ವಿವರವಾಗಿ ವರದಿ ಮಾಡಲು ಸಾಧ್ಯವಾಯಿತು. ಆಟಗಾರರು, ಕೋಚ್‌ಗಳೊಂದಿಗೆ ನೇರ ಸಂಪರ್ಕ ಸಾಧ್ಯವಾಯಿತು. ಇದರಿಂದ ಪ್ರಥಮ ಮಾಹಿತಿಯ ಅಂಕಿ, ಅಂಶ ವರದಿಗಳನ್ನು ನೀಡುವಲ್ಲಿ ಪತ್ರಿಕೆ ಮೇಲುಗೈ ಸಾಧಿಸಿತು. ಆಗ ಬಾನುಲಿಯ ಕಾಮೆಂಟ್ರಿ ಬಿಟ್ಟರೆ, ಪ್ರಜಾವಾಣಿಯನ್ನೇ ಕ್ರೀಡಾ ಸುದ್ದಿಗಳಿಗಾಗಿ ಕ್ರೀಡಾಪ್ರಿಯರು ಅವಲಂಬಿಸಿದ್ದರು.

1973ರಲ್ಲಿ ಚೆನ್ನೈನಲ್ಲಿ (ಆಗಿನ ಮದರಾಸು) ನಡೆದಿದ್ದ ಭಾರತ ಮತ್ತು ಇಂಗ್ಲೆಂಡ್ ವರದಿಯನ್ನು ಪ್ರಜಾವಾಣಿಯ ಮೊದಲ ಕ್ರೀಡಾ ಸಂಪಾದಕರಾದ ಎಚ್.ಎಸ್. ಸೂರ್ಯನಾರಾಯಣ (ಸೂರಿ) ಅವರು ಮಾಡಿದ್ದರು. ಆ ಪಂದ್ಯದಲ್ಲಿ ಮಿಂಚಿದ್ದ ಸ್ಪಿನ್ ದಿಗ್ಗಜ ಬಿ.ಎಸ್. ಚಂದ್ರಶೇಖರ್ ಮತ್ತು ಬ್ಯಾಟಿಂಗ್ ದಂತಕಥೆ ಜಿ.ಆರ್. ವಿಶ್ವನಾಥ್ ಅವರ ಚಿತ್ರಗಳ ಸಹಿತ ವರದಿಯು ಮುಖಪುಟದಲ್ಲಿ ಪ್ರಕಟವಾಗಿತ್ತು.

1986ರಲ್ಲಿ ಮದರಾಸಿನಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವಣ ಟೆಸ್ಟ್ ಪಂದ್ಯವು ಟೈ ಆಗಿತ್ತು. ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಎರಡನೇ ಮತ್ತು ಭಾರತದ ಏಕೈಕ ಟೈ ಟೆಸ್ಟ್ ಅದಾಗಿತ್ತು. ಆ ಪಂದ್ಯವನ್ನು ಸಾಕ್ಷಾತ್ ವರದಿ ಮಾಡಿದ್ದು ಪ್ರಜಾವಾಣಿಯ ಹೆಗ್ಗಳಿಕೆ. ಭಾರತದಲ್ಲಿ ನಡೆದಿದ್ದ 1996ರ ಏಕದಿನ ಕ್ರಿಕೆಟ್ ವಿಶ್ವಕಪ್, 2010ರಲ್ಲಿ ಸಚಿನ್ ತೆಂಡೂಲ್ಕರ್ ಗ್ವಾಲಿಯರ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಪಂದ್ಯದಲ್ಲಿ ಸಿಡಿಸಿದ್ದ ಮೊದಲ ದ್ವಿಶತಕದ ವಿಶ್ವದಾಖಲೆ, 2011ರ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯಗಳನ್ನು ಪತ್ರಿಕೆಯ ವರದಿಗಾರರು ವರದಿ ಮಾಡಿದ್ದರು. ಇದಲ್ಲದೇ ದ್ವಿಪಕ್ಷೀಯ ಕ್ರಿಕೆಟ್ ಸರಣಿ, ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯಗಳ ನೇರ ವರದಿಗಾರಿಕೆಯನ್ನು ಪತ್ರಿಕೆಯು ಮಾಡುತ್ತಿದೆ.

ಕ್ರಿಕೆಟ್ ಅಷ್ಟೇ ಅಲ್ಲ. ಬೇರೆ ಬೇರೆ ಕ್ರೀಡೆಗಳಿಗೂ ಆದ್ಯತೆ ಕೊಡಲಾಗಿದೆ. ವಿದೇಶಗಳಲ್ಲಿ ನಡೆದಿದ್ದ ಏಷ್ಯನ್ ಗೇಮ್ಸ್, ಸ್ಯಾಫ್ ಗೇಮ್ಸ್, ಏಷ್ಯಾ ಚಾಂಪಿಯನ್‌ಷಿಪ್, ಭಾರತದಲ್ಲಿಯೇ ಆಯೋಜನೆಗೊಂಡಿದ್ದ ಆಫ್ರೋ ಏಷ್ಯನ್ ಗೇಮ್ಸ್, ವಿಶ್ವ ಡಿಫೆನ್ಸ್ ಗೇಮ್ಸ್, ವಿಶ್ವ ಹಾಕಿ, ಏಷ್ಯನ್ ಹಾಕಿ ಸೇರಿದಂತೆ ಹಲವಾರು ಟೂರ್ನಿಗಳನ್ನು ನೇರ ವರದಿ ಮಾಡಿರುವುದು ಗಮನಾರ್ಹ.

90ರ ದಶಕದ ನಂತರ ಕರ್ನಾಟಕದ ಗ್ರಾಮಾಂತರ ವಿಭಾಗಗಳಲ್ಲಿಯೂ ಕ್ರೀಡಾ ಚಟುವಟಿಕೆಗಳು ಹೆಚ್ಚಿದವು. ಇದರಿಂದಾಗಿ ಪ್ರಾದೇಶಿಕ ಸುದ್ದಿಗಳ ಪ್ರವಾಹವೂ ಹೆಚ್ಚಾಯಿತು. ಹೀಗಾಗಿ ಎರಡು ಕ್ರೀಡಾಪುಟಗಳು ಪ್ರಕಟಗೊಳ್ಳತೊಡಗಿದವು. ಒಂದೇ ಪುಟ ಇದ್ದಾಗಲೂ ಜಾಹೀರಾತು ಮತ್ತು ಸುದ್ದಿಗಳು ಹೆಚ್ಚು ಇದ್ದಾಗ ಬೇರೆ ಪುಟದಲ್ಲಿ ಅಗತ್ಯಕ್ಕನುಗುಣವಾಗಿ ಸುದ್ದಿಗಳನ್ನು ಪ್ರಕಟಿಸಲಾಗುತ್ತಿತ್ತು. ತಂತ್ರಜ್ಞಾನ ಮುಂದುವರಿದಂತೆ ಎರಡು ಪುಟಗಳ ಮುದ್ರಣ ನಿರಂತರವಾಯಿತು. ಪ್ರಜಾವಾಣಿಯ ಸುವರ್ಣಮಹೋತ್ಸವದ ಹೊತ್ತಿಗೆ ಕ್ರೀಡಾ ಪುರವಣಿಯೂ ಆರಂಭವಾಯಿತು. ಮೊದಲಿಗೆ ಕ್ರೀಡೆ ಮತ್ತು ಸಿನಿಮಾ ಸೇರಿ ನಾಲ್ಕು ಪುಟಗಳ ಪುರವಣಿ ಪ್ರಕಟವಾಯಿತು.


ಜಿಲ್ಲಾ ಆವೃತ್ತಿಗಳು ಆರಂಭವಾದ ನಂತರ ಕ್ರೀಡಾ ಸುದ್ದಿಗಳಿಗೆ ಉತ್ತೇಜನ ನೀಡುವಲ್ಲಿಯೂ ಪತ್ರಿಕೆಯು ಮೇಲುಗೈ ಸಾಧಿಸಿದೆ. ಅದರಲ್ಲೂ ಉತ್ತರ ಕರ್ನಾಟಕ ಹಾಗೂ ಕರಾವಳಿ ಭಾಗದ ಕ್ರೀಡಾ ಸುದ್ದಿಗಳಿಗೆ ಆದ್ಯತೆ ಲಭಿಸಿದೆ. ಗ್ರಾಮೀಣ ಮಟ್ಟದಿಂದ ರಾಜ್ಯಮಟ್ಟದವರೆಗಿನ ಕ್ರೀಡಾ ಸ್ಪರ್ಧೆಗಳ ಫಲಿತಾಂಶಗಳನ್ನು ನೀಡುತ್ತಿದೆ. ಸ್ಥಳೀಯ ಆವೃತ್ತಿಯ ಪುಟಗಳಲ್ಲಿಯೂ ಕ್ರೀಡಾ ಸುದ್ದಿಗಳು ಪ್ರಕಟಗೊಳ್ಳುತ್ತಿವೆ. ಇದರಿಂದಾಗಿ ಅಲ್ಲಿಯ ಪ್ರತಿಭೆಗಳು ರಾಜ್ಯಮಟ್ಟದಲ್ಲಿ ಗಮನ ಸೆಳೆದ ಉದಾಹರಣೆಗಳು ಹಲವಾರಿವೆ.

ಚಿತ್ರಗಳು : ಪ್ರಜಾವಾಣಿ ಸಂಗ್ರಹ



ನೆಟ್ಟಕಲ್ಲಪ್ಪ ಅವರದ್ದು ತುಂಬಾ ಅಪರೂಪದ ಮತ್ತು ಅನುಕರಣೀಯ ವ್ಯಕ್ತಿತ್ವ. ಅವರು ಬಹಳ ದೊಡ್ಡ ಕ್ರೀಡಾಪ್ರೇಮಿ ಹಾಗೂ ಪ್ರೋತ್ಸಾಹಕರಾಗಿದ್ದರು. ನೇರ ನಡೆ, ನುಡಿಯ ವ್ಯಕ್ತಿ. ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಅವರನ್ನು ಭೇಟಿಯಾಗಿದ್ದೆ. ಆ ಟೂರ್ನಿಯಲ್ಲಿ ನಮ್ಮ ತಂಡವು ಚೆನ್ನಾಗಿ ಆಡಿ ಪಂದ್ಯಗಳನ್ನು ಗೆದ್ದಿತ್ತು. ಕೆ.ಡಿ. ಸಿಂಗ್ ಬಾಬು ಕೋಚ್ ಆಗಿದ್ದರು. ಅದೊಂದು ಪಂದ್ಯ ಮುಗಿದ ಸಂದರ್ಭದಲ್ಲಿ ನೆಟ್ಟಕಲ್ಲಪ್ಪನವರು ಬಂದು ನನ್ನನ್ನು ಪರಿಚಯ ಮಾಡಿಕೊಂಡಿದ್ದರು. ಕನ್ನಡದಲ್ಲಿಯೇ ಮಾತನಾಡಿದ್ದೆವು. ನಮ್ಮ ತಂಡದವರನ್ನೂ ಪರಿಚಯ ಮಾಡಿಸಿದ್ದೆ. ಪಂದ್ಯದ ಬಗ್ಗೆ ಆಟಗಾರರ ಬಗ್ಗೆ ಬಹಳ ಹೊತ್ತು ಮಾತನಾಡಿದ್ದೆವು. ಆನಂತರ ಅವರು ಒಲಿಂಪಿಕ್ ಗ್ರಾಮಕ್ಕೂ ಒಂದು ಸಲ ಆಗಮಿಸಿದ್ದರು. ಆಗಲೂ ನಮ್ಮನ್ನು ಮಾತನಾಡಿಸಿದ್ದರು. ಅವರಿಗೆ ಆಟದ ಕುರಿತು ಇದ್ದ ಆಸಕ್ತಿ ಮತ್ತು ಉತ್ಸಾಹ ಅಪರಿಮಿತವಾದದ್ದು.

ಎಂ.ಪಿ. ಗಣೇಶ್, ಭಾರತ ಹಾಕಿ ತಂಡದ ಮಾಜಿ ನಾಯಕ, ಕೋಚ್



ಕ್ರೀಡೆಯ ಕುರಿತು ಓದುಗರೊಬ್ಬರು 1962ರಲ್ಲಿ ವಾಚಕರವಾಣಿಗೆ ಬರೆದ ಪತ್ರ

ಡಿಜಿಟಲ್ ಕ್ರಾಂತಿ

ಕಳೆದ ಎರಡು ದಶಕಗಳಲ್ಲಿ ಆಗಿರುವ ಡಿಜಿಟಲ್ ಕ್ರಾಂತಿಯಿಂದಾಗಿ ಪತ್ರಿಕೋದ್ಯಮದಲ್ಲಿ ಹಲವಾರು ಬದಲಾವಣೆಗಳಾಗಿವೆ. ಬೇರೆ ತಾಣಗಳಿಗೆ ಹೋಗಿ ವರದಿ ಮಾಡಿ ಸಂಪರ್ಕ ಸಾಧಿಸುವುದು ಸುಲಭವಾಗಿದೆ. ಇಮೇಲ್, ವಾಟ್ಸ್‌ಆ್ಯಪ್ ಮತ್ತಿತರ ತಾಂತ್ರಿಕ ಅನುಕೂಲಗಳಾಗಿವೆ. ಪಂದ್ಯಗಳು, ಆಟಗಾರರ ಬಗ್ಗೆ ಮಾಹಿತಿ ಪಡೆಯುವುದು ಸರಳವಾಗುತ್ತಿದೆ.

ಈ ಹಂತದಲ್ಲಿ ಪ್ರಜಾವಾಣಿಯು ಕ್ರೀಡಾ ಸುದ್ದಿಗಳು, ಲೇಖನಗಳು ಮತ್ತು ವಿಡಿಯೊಗಳು ಪ್ರಕಟವಾಗುತ್ತಿವೆ. ಮಾಹಿತಿ ಮಹಾಪೂರದೊಳಗಿನಿಂದ ನಿಖರವಾದ ಸುದ್ದಿಗಳನ್ನು ಹೆಕ್ಕಿ ವೆಬ್‌ಸೈಟ್ ಮತ್ತು ಪತ್ರಿಕೆಗಳ ಮೂಲಕ ಓದುಗರಿಗೆ ನೀಡುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಜೊತೆಗೆ ಕಾಲಕ್ಕೆ ತಕ್ಕಂತೆ ಬದಲಾವಣೆಯ ಶೈಲಿ ಮತ್ತು ವಿಶ್ಲೇಷಣೆಗಳೂ ಪ್ರಕಟವಾಗುತ್ತಿವೆ.




2011ರ ವಿಶ್ವಕಪ್ ಫೈನಲ್ ಪಂದ್ಯದ ವರದಿ

ಪದಬಂಧ 5213

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇದು ಬರೀ ಊಹೆ (3)
3.ಎಲ್ಲಕ್ಕಿಂತ ಮುಖ್ಯವಾದುದು (3)
5.ಮನುಷ್ಯನನ್ನು ತಿನ್ನುವ ಪ್ರಾಣಿ (5)
6.ಚಿಲಿಪಿಲಿ ಪದದಲ್ಲಿರುವ ವರ್ಣ (2)
8.ಸಂತತಿಯಲ್ಲಿರುವ ಸಾಧು (2)
9.ರಂಧ್ರ ಇಲ್ಲಿ ಕಾಣುತ್ತಿದೆ (2)
10.ನಾಯಿ ಜಾತಿಗೆ ಸೇರಿದ ಕಾಡುಮೃಗ ಉಲ್ಟಾ ನಿಂತಿದೆ (2)
11.ನಾಗರಿಕತೆ ಸಾರುತ್ತಿರುವ ಸ್ತ್ರೀ (2)
12.ದಾಖಲೆ,ಪತ್ರಗಳ ಕೊನೆಯಲ್ಲಿ ಸೇರಿಸುವ ವಿಶೇಷಾಂಶ (2)
16.ಮತ ಧರ್ಮವನ್ನು ಅನುಸರಿಸದವ (5)
17.ಯಾವ ವಸ್ತುವೂ ಸಿಗದ ಹಳ್ಳಿ (3)
18.ಸರವಿಟ್ಟು ಮಾಡಿರುವ ಉಪಚಾರ (3)

ಮೇಲಿಂದ ಕೆಳಕ್ಕೆ
1.ಅತ್ಯಂತ ಪರಾಕ್ರಮಿ (4)
2.ಆಗಿಹೋಗಿದ್ದನ್ನು ಮನಸ್ಸಿಗೆ ತಂದುಕೊಳ್ಳುವುದು (3)
3.ಮುಚ್ಚುಮರೆ ಇಲ್ಲದೆ ನಿಚ್ಚಳವಾದುದು (3)
4.ಅದೇ ತಾನೆ ಹುಟ್ಟಿದುದು (4)
7.ತೂರಿಕೊಂಡು ನಡೆಸಿರುವ ಸಂಚು (3)
8.ಆನಂದ ಹೀಗೆ ಬಂದಿದೆ (3)
11.ಹೆಸರು ಮುಂದಿಟ್ಟುಕೊಂಡು ಮೋಸ ಮಾಡು! (4)
13.ಕೊನೆಗೆ ಒಜ್ಜೆಯೆನಿಸಿದ ಸಂಧಾನ (4)
14.ಅಲ್ಲಿದ್ದು ಧಮಕಿ ಹಾಕುತ್ತಿರುವ ನೀಚ (3)
15.ಅವಸರದಲ್ಲಿರುವ ರಾಜ ಕಾಣುತ್ತಿದ್ದಾನೆಯೇ? (3)



5212ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ರಾಗ
3.ನಟರಾಜ 5.ರಮಣಿ
6.ಸುಧಾರಕ
8.ಸಮಾಗಮ
12.ಅಂತರ್ಧಾನ
14.ಅವಧೂತ 15.ಕಣಜ
16.ತಳಮಳ 17.ಭವಿ

ಮೇಲಿಂದ ಕೆಳಕ್ಕೆ:
1.ಉರವಣಿಗೆ
2.ರಾಣಿವಾಸ
3.ನವಸುಮ 4.ಜಟಕ
7.ರಚ್ಚು 9.ಗಣಿತ
10.ಅಪ್ರಯೋಜಕ
11.ಜಾವ 12.ಅಂತರಾಳ
13.ನವ್ಯಕವಿ 14.ಅಹಿತ

ಸುಡೊಕು 5599

	5		7		2		8	6
						3	7	4
	7	8	3		9		1	
1		4			5		2	3
				3				
8		7	6				5	9
		3	9		6	5	4	8
5								
	8		5		4		3	


5598 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜನವರಿ 28, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ಸಪ್ತಮಿ ಗಂ. 08-44 ನಕ್ಷತ್ರ: ಅಶ್ವಿನಿ ಗಂ. 19-06, ಯೋಗ: ಸಾಧ್ಯ ಗಂ. 11-54, ಕರಣ: ವಣಿಜ ಗಂ. 08-44, ಮಕರ ಮಾಸದ 14 ನೇ ದಿನ. ರಾಹುಕಾಲ : ಬೆಳಿಗ್ಗೆ 09-00 – 10-30, ಸೂರ್ಯೋದಯ : 07-01 ಸೂರ್ಯಾಸ್ತ : 06-25, ಮುಸ್ಲಿಂ ದಿನಾಂಕ : 05 ರಜಬ್, ದಿನ ವಿಶೇಷ : ರಥಸಪ್ತಮಿ (ಪೂರ್ವಾರುಣೋದಯ), ವಿಧಾನ ಸಪ್ತಮಿ, ಆರೋಗ್ಯ ಸಪ್ತಮಿ, ಭೀಷ್ಮಾಷ್ಟಮಿ, ಲಾಲಾಲಜಪತರಾಯ್ ಜನ್ಮದಿನ
ಅದೃಷ್ಟ ಸಂಖ್ಯೆ : 4, 10

ಮೇಷ: ವ್ಯಾಪಾರ ಹಾಗೂ ವಾಣಿಜ್ಯೋದ್ಯಮ ವ್ಯವಹಾರಗಳಿಗೆ ಇದು ಒಳ್ಳೆಯ ದಿನ. ಇಂದಿನ ಅವಕಾಶಗಳನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳಿ. ಪ್ರೀತಿ ಪಾತ್ರರೊಂದಿಗೆ ಈ ದಿನ ಕಳೆಯುವ ಸಮಯ ಲವಲವಿಕೆ ಮೂಡಿಸುತ್ತದೆ.

ವೃಷಭ: ಭೂ ವ್ಯವಹಾರದಲ್ಲಿ ಲಾಭವಿದೆ. ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೂ ಆಯ-ವ್ಯಯದಲ್ಲಿ ಗಮನವಿರಲಿ. ಅವಶ್ಯಕ ವಸ್ತುಗಳ ಗಳಿಕೆಯಿಂದ ಸಂತೋಷ ಉಂಟಾಗುತ್ತದೆ. ಅವಿವಾಹಿತರಿಗೆ ವಿವಾಹ ಯೋಗವು ಕೂಡಿ ಬರುವುದು.

ಮಿಥುನ: ಅಧಿಕಾರಿಗಳಿಗೆ ಸಹಾಯಕ ದರ್ಜೆಯವರಿಂದ ನಿರೀಕ್ಷೆಗೆ ಮೀರಿದ ಸಹಾಯ ಸಿಗುವುದು. ತರಕಾರಿ, ಹಣ್ಣು, ಹೂವು ವ್ಯಾಪಾರಿಗಳಿಗೆ ಉದ್ಯೋಗದಲ್ಲಿ ಲಾಭ. ಮಾನಸಿಕಪೀಡೆಗಳಿಗೆ ಒಳಗಾಗದಂತೆ ಕಾಳಜಿ ವಹಿಸಿ.

ಕರ್ಕಾಟಕ: ಸಹೋದರರಲ್ಲಿ ಮೂಡಿದ ಭಿನ್ನಾಭಿಪ್ರಾಯ ತಂದೆ ತಾಯಿಯ ಹಿತವಚನಗಳಿಂದ ಉತ್ತಮವಾಗಿ ಬಾಂಧವ್ಯ ಬೆಳೆಯಲಿದೆ. ವ್ಯಾಪಾರ ವ್ಯವಹಾರಗಳಿಂದ ಸಮಾಧಾನಕರ ಆದಾಯವಿರುವುದು.

ಸಿಂಹ: ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಲಭ್ಯವಾಗಲಿದೆ. ಕೌಟುಂಬಿಕ ಸಮಸ್ಯೆಗಳಿಗೆ ತಾಳ್ಮೆಯಿಂಥ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿ. ಇಂದು ಸ್ನೇಹಿತರ ಹತ್ತಿರ ಯಾವುದೇ ಗೌಪ್ಯತೆ ಹಂಚಿಕೊಳ್ಳಬೇಡಿ.

ಕನ್ಯಾ: ಮಹತ್ವವಾದ ಕೆಲಸದ ಪೂರ್ವ ತಯಾರಿಗಾಗಿ ದೂರ ಸಂಚಾರದ ಯೋಗವಿದೆ. ಬಂಧುಗಳ ಸಹಾಯದಿಂದ ಪುತ್ರನಿಗೆ ಕಾರ್ಯಾನುಕೂಲ ಅಥವಾ ಆಶ್ರಯ ಸಿಗುವುದು. ಮಲ್ಲಿಕಾರ್ಜುನನ ಆರಾಧನೆ ಮಾಡುವುದರಿಂದ ಶುಭ.

ತುಲಾ: ಸ್ವಂತ ಪ್ರಯತ್ನದಿಂದ ನನೆಗುದಿಯಲ್ಲಿದ್ದ ಸಮಸ್ಯೆಗಳಿಗೆ ಪರಿಹಾರ ದೊರೆತು ಮನಸ್ಸಿಗೆ ಸಂತಸವಾಗುತ್ತದೆ. ನಿಮ್ಮ ನಿರ್ಲಿಪ್ತತೆ, ಮೌನದಿಂದ ಶತ್ರುಗಳು ದೂರಾಗುವರು. ಕೆಂಪು ಬಣ್ಣ ಶುಭ ಉಂಟುಮಾಡುತ್ತದೆ.

ವೃಶ್ಚಿಕ: ಅವಿವಾಹಿತ ಹೆಣ್ಣು ಮಕ್ಕಳಿಗೆ ಅನಿರೀಕ್ಷಿತವಾಗಿ ಕಂಕಣಬಲ ಕೂಡಿಬರುವುದು. ದುಡ್ಡಿನ ವಿಷಯದಲ್ಲಿ ಮೋಸ ಹೋಗುವ ಅಥವಾ ಬೇಜವಾಬ್ದಾರಿತನದಿಂದಾಗಿ ಕಳೆದುಕೊಳ್ಳುವ ಸಂಭವವಿದೆ. ಹೆಚ್ಚಿನ ಗಮನವಿರಲಿ.

ಧನು: ಇತರರನ್ನು ಹೀಯಾಳಿಸುವ ಅಥವಾ ನಿಂದನೆ ಮಾಡುವ ಮನೋಭಾವವನ್ನು ಕಡಿಮೆ ಮಾಡಿಕೊಳ್ಳಿ. ನಿಮ್ಮ ಗೌರವವು ಅದರಿಂದ ಹೆಚ್ಚುತ್ತದೆ. ರಸ ಪದಾರ್ಥ, ಆಲಂಕಾರಿಕ ವಸ್ತುಗಳ ಮಾರಾಟದಿಂದ ನೆಮ್ಮದಿ.

ಮಕರ: ಕೆಲವೊಂದು ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ತೋರುವುದರಿಂದ ನಿರಾಳವಾಗಿ ಮುಂದುವರೆಯಿರಿ. ಕುಲದೇವರ ದರ್ಶನದಿಂದ ನಿಮ್ಮೆಲ್ಲಾ ವ್ಯವಹಾರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಬಲ್ಲಿರಿ.

ಕುಂಭ: ಎಣಿಕೆಯಂತೆ ಕಾರ್ಯಗಳು ಸಿದ್ಧಿಸುವುವು. ಆದರೆ ನೂತನವಾಗಿ ಯಾವುದೇ ಉದ್ಯೋಗ ಅಥವಾ ಕರಾರಿಗೆ ಆತುರದಲ್ಲಿ ಸಹಿ ಹಾಕಬೇಡಿ. ಸಾಧನೆಗಳಿಗಾಗಿ ಪ್ರಶಂಸೆಯ ನುಡಿ ಮತ್ತು ಸನ್ಮಾನ ಪಡೆಯುವಿರಿ.

ಮೀನ: ನಿಮಗೆ ಸಂತೋಷ ಮತ್ತು ಶಾಂತಿಯು ಸಮವಾಗಿರುತ್ತದೆ. ದುರಹಂಕಾರ ವ್ಯಕ್ತಪಡಿಸಿದಲ್ಲಿ ತೊಂದರೆಗೆ ಸಿಲುಕುವ ಸಂಭವವಿದೆ. ನಡವಳಿಕೆಯಲ್ಲಿ ಮೃದುತ್ವವನ್ನು ಅಳವಡಿಸಿಕೊಳ್ಳುವುದು ಉತ್ತಮ.

ಸೂರ್ಯ: ಸೃಷ್ಟಿಯ ಅಳತೆಗೋಲು

● ಎಸ್. ಸೂರ್ಯಪ್ರಕಾಶ ಪಂಡಿತ್


ಇಂದು ರಥಸಪ್ತಮಿ

ವೇದಗಳಲ್ಲಿ ಸೂರ್ಯನನ್ನು ಸೃಷ್ಟಿಕ್ರಿಯೆಯ ಮಾನದಂಡ ಎಂದು ಕರೆಯಲಾಗಿದೆ. ಇದೊಂದು ವಿಶೇಷವಾದ ವಿಶೇಷಣ. ಯಾವುದೇ ನಿರ್ಮಾಣಕಾರ್ಯಕ್ಕೂ ನಮಗೊಂದು ಅಳತೆಗೋಲು ಬೇಕು. ಹೀಗೆಯೇ ಸೃಷ್ಟಿಕಾರ್ಯಕ್ಕೂ ದೇವತೆಗಳಿಗೆ ಅಳತೆಗೋಲೊಂದು ಬೇಕಾಯಿತಂತೆ. ಯಾವ ಲೆಕ್ಕಾಚಾರದಲ್ಲಿ ಸೃಷ್ಟಿಯ ವಿವರಗಳು ಸಿದ್ಧವಾಗಬೇಕು ಎಂಬ ಎಣಿಕೆಗೆ ಒದಗುವ ಮಾನದಂಡ. ಹೀಗೆ ಒದಗಿದ ಮಾನದಂಡವೇ ಸೂರ್ಯ.

ಸೃಷ್ಟಿಕಾರ್ಯದಲ್ಲಿ ಸೂರ್ಯನು ಮಾನದಂಡವಾಗಿ ಒದಗಿದ್ದು ಒಂದು ಸಂಕೇತವೇ ಇರಬಹುದು. ಆದರೆ ನಮ್ಮ ನಿತ್ಯಜೀವನದ ನಿರ್ಮಾಣಕ್ಕಂತೂ ಸೂರ್ಯನೇ ಮಾನದಂಡ ಎನ್ನುವುದು ದಿಟ. ಇಡಿಯ ನಮ್ಮ ಜೀವನವೇ ಸೂರ್ಯನನ್ನು ಆಶ್ರಯಿಸಿದೆ; ಅವನ ಬೆಳಕು ಮತ್ತು ಶಾಖ – ಎರಡೂ ಜೀವಸಂಕುಲಕ್ಕೆ ಅನಿವಾರ್ಯವಾಗಿರುವ ಶಕ್ತಿಯ ಮೂಲಗಳೇ ಹೌದು. ಈ ವಾಸ್ತವವನ್ನು ನಮ್ಮವರು ಬಹಳ ಹಿಂದೆಯೇ ತಿಳಿದುಕೊಂಡಿದ್ದರು. ನಮ್ಮ ಜೀವನವನ್ನು ಕಟ್ಟಿಕೊಡುವ ಸೂರ್ಯನಿಗೆ ಸಲ್ಲಿಸುವ ಕೃತಜ್ಞತೆಯ ದ್ಯೋತಕವಾಗಿ ಅವನನ್ನು ಆರಾಧಿಸುವ ಪದ್ಧತಿಯೂ ಆರಂಭವಾಯಿತು. ನಮ್ಮ ಹಲವು ಹಬ್ಬ–ಹರಿದಿನಗಳು ಸೂರ್ಯಕೇಂದ್ರಿತವಾಗಿಯೇ ಆಚರಣೆಗೆ ಬಂದಿರುವುದು ಸ್ಪಷ್ಟ. ಸೂರ್ಯನು ಕಾಲಗಣನೆಗೂ ಸಂಕೇತವಷ್ಟೆ. ಸೂರ್ಯನ ರಥಗಳು ಏಳು; ಇದು ವಾರಗಳಿಗೆ ಸಂಕೇತ. ಅವನ ರಥಕ್ಕೆ ಹನ್ನೆರಡು ಅರಗಳು; ಇವು ಮಾಸಗಳಿಗೆ ಸಂಕೇತ. ಹೀಗೆಲ್ಲ ಎಣಿಕೆ ಮಾಡಬಹುದೆನ್ನಿ.

ಸೂರ್ಯನ ಹೆಸರಿನಲ್ಲಿ ನಡೆಯುವ ಪರ್ವಗಳಲ್ಲಿ ಪ್ರಮುಖವಾಗಿರುವುದು 'ರಥಸಪ್ತಮಿ'. ಸೂರ್ಯನು ಇಂದು ರಥವನ್ನು ಏರುತ್ತಾನಂತೆ. ನಾವು ಈ ನಂಬಿಕೆಯ ಧ್ವನಿಯನ್ನು ವಾತಾವರಣದಲ್ಲಿ ಉಂಟಾಗುವ ಬದಲಾವಣೆಗಳ ಮೂಲಕ ಗ್ರಹಿಸಬಹುದು. ರಥವನ್ನು ಏರುವುದು – ಎಂದರೆ ಸೂರ್ಯನು ಸಂಚಾರಕ್ಕೆ ಹೊರಟ ಎಂದು ಅರ್ಥ. ಎಂದರೆ ಅವನ ಶಾಖ–ಬೆಳಕುಗಳು ನಮಗೆ ಸಮೃದ್ಧವಾಗಿ ಸಿಗುವ ಕಾಲ ಸನ್ನಿಹಿತವಾಯಿತು ಎಂದು ತಾತ್ಪರ್ಯ. ಚಳಿ ಕಡಿಮೆಯಾಗುತ್ತಿದೆ; ನಾವು ಬೇಸಿಗೆಗೆ ಹತ್ತಿರವಾಗುತ್ತಿದ್ದೇವೆ ಎಂಬುದನ್ನು ರಥಸಪ್ತಮಿ ಸೂಚಿಸುತ್ತದೆ. ಇಂದು ಸೂರ್ಯನು ಜನಿಸಿದ ದಿನ ಎಂಬ ಎಣಿಕೆಯೂ ಉಂಟು.

ರಥಸಪ್ತಮಿಯಂದು ಸೂರ್ಯನ ಪೂಜೆಯನ್ನು ಹಲವು ವಿಧಗಳಲ್ಲಿ ನೆರವೇರಿಸುವುದುಂಟು. ಅವನಿಗೆ ಇಂದು ವಿಶೇಷ ಅರ್ಘ್ಯವನ್ನು ಕೊಡಲಾಗುತ್ತದೆ. ವೈದಿಕ ಮಾರ್ಗದಲ್ಲಿಯೋ ಅಥವಾ ಅವೈದಿಕ ಮಾರ್ಗದಲ್ಲಿರೋ – ಒಟ್ಟಿನಲ್ಲಿ ಪ್ರತಿಯೊಬ್ಬ ಶ್ರದ್ಧಾಳುವೂ ಬೆಳಗ್ಗೆ ಎದ್ದ ಕೂಡಲೇ ಮಾಡುವ ಮೊದಲ ಕರ್ತವ್ಯ ಎಂದರೆ ಸೂರ್ಯನಿಗೆ ಕೈ ಮುಗಿಯುವುದೇ ಹೌದು. ಪ್ರತಿದಿನದ ಸಂಧ್ಯಾವಂದನೆಯಲ್ಲೂ ನಾವು ಮಾಡುವುದು ಸೂರ್ಯನ ಪ್ರಾರ್ಥನೆಯನ್ನೇ. ನಮ್ಮ ಬುದ್ಧಿಶಕ್ತಿಯು ಒಳ್ಳೆಯ ದಿಕ್ಕಿನ ಕಡೆಗೆ ಮುಖ ಮಾಡಲಿ ಎಂಬುದೇ ಗಾಯತ್ರೀ–ಮಂತ್ರದ ತಾತ್ಪರ್ಯ. ಸೂರ್ಯನು ಜ್ಞಾನಕ್ಕೂ ಸಂಕೇತ. ಬೆಳಕನ್ನು ನಾವು ಅರಿವಿನ ರೂಪ ಎಂದೇ ಎಣಿಸುತ್ತೇವೆ. ಬೆಳಕಿಲ್ಲದೆ ಏನೂ ಕಾಣದು; ಹೀಗೆಯೇ ಅರಿವಿಲ್ಲದೆ ಜೀವನವೇ ಕಾಣದು – ಎಂಬ ಸೂತ್ರವನ್ನು ಸೂರ್ಯೋಪಾಸನೆಯಲ್ಲಿ ಕಾಣಬಹುದು.

ಆರೋಗ್ಯಕ್ಕೂ ಸೂರ್ಯನಿಗೂ ನೇರ ನಂಟು. ಸೂರ್ಯನ ಕಿರಣಗಳು ನಮ್ಮ ಆರೋಗ್ಯದ ರಕ್ಷಣೆಗೆ ಅತ್ಯಂತ ಆವಶ್ಯಕ. ನಮ್ಮೆಲ್ಲರ ಚಟುವಟಿಕೆಗಳು ಅವನ ಬೆಳಕನ್ನೇ ಆಶ್ರಯಿಸಿವೆ. ಈ ತತ್ತ್ವವನ್ನು ಸೂಚಿಸಲು ಈ ದಿನ 'ಸೂರ್ಯನಮಸ್ಕಾರ'ವನ್ನು ಮಾಡುವುದುಂಟು. ಸೂರ್ಯನಮಸ್ಕಾರದ ಮಂತ್ರಗಳು ಇಡಿಯ ಸೂರ್ಯತತ್ತ್ವದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಇಂದು ಎಕ್ಕದ ಎಲೆಗಳನ್ನು ನಮ್ಮ ಶರೀರಕ್ಕೆ ಅಲಂಕರಿಸಿಕೊಂಡು ಸ್ನಾನ ಮಾಡುವುದುಂಟು. ಎಕ್ಕದ ಗಿಡ ಸೂರ್ಯನ ಪ್ರತಿನಿಧಿ. ಒಟ್ಟಿನಲ್ಲಿ ರಥಸಪ್ತಮಿಯ ಸೂರ್ಯನ ಆರಾಧನೆಯಲ್ಲಿ ನಾವು ನಮ್ಮ ನೆಲದ ಸಾಂಸ್ಕೃತಿಕ ಆಧ್ಯಾತ್ಮಿಕ ಆಧಿಭೌತಿಕ ವಿವರಗಳನ್ನು ಧಾರಾಳವಾಗಿಯೇ ಕಾಣಬಹುದು.

ಭೂಮಿಕಾ ಓದಿರಿ

ಕರ್ನಾಟಕ ಪ್ರದೇಶ ಬಲಿಜ ಸಂಘದ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ

'2ಎ ಮೀಸಲು ಪೂರ್ಣ ಕೊಡಿ'

ಪ್ರಜಾವಾಣಿ ವಾರ್ತೆ


ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಕರ್ನಾಟಕ ಪ್ರದೇಶ ಬಲಿಜ ಸಂಘ ಆಯೋಜಿಸಿದ್ದ ಬಲಿಜ ಸಂಕಲ್ಪ ಸಭೆಯಲ್ಲಿ ಸೇರಿದ್ದ ಬಲಿಜ ಸಮುದಾಯದವರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಪೂರ್ಣ ಪ್ರಮಾಣದಲ್ಲಿ 2'ಎ' ಮೀಸಲಾತಿ ವಾಪಸ್ ನೀಡಲು ಆಗ್ರಹಿಸಿ ಕರ್ನಾಟಕ ಪ್ರದೇಶ ಬಲಿಜ ಸಂಘದ ನೇತೃತ್ವದಲ್ಲಿ ನಗರದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ಹಾಗೂ ಬಲಿಜ ಸಂಕಲ್ಪ ಸಭೆ ನಡೆಯಿತು.

ವಿವಿಧ ಜಿಲ್ಲೆಗಳಿಂದ ಬಂದಿದ್ದ ಪ್ರತಿಭಟನಕಾರರು, ಸ್ವಾತಂತ್ರ್ಯ ಉದ್ಯಾನದಲ್ಲಿ ಜಮಾಯಿಸಿ ಆಗಿರುವ ಅನ್ಯಾಯ ಸರಿಪಡಿಸುವಂತೆ ಆಗ್ರಹಿಸಿದರು.

'ಬಲಿಜ ಸಮುದಾಯದವರು ಹಿಂದುಳಿದಿದ್ದಾರೆ. ರಸ್ತೆ ಬದಿ, ದೇವಸ್ಥಾನಗಳ ಎದುರು ವ್ಯಾಪಾರ ನಡೆಸಿ ಬದುಕು ಸಾಗಿಸುತ್ತಿದ್ದಾರೆ. ಅವರ ಮಕ್ಕಳ ಭವಿಷ್ಯಕ್ಕೆ ಮೀಸಲಾತಿ ಅಗತ್ಯ' ಎಂದು ಪ್ರತಿಭಟನಕಾರರು ಪ್ರತಿಪಾದಿಸಿದರು.

'ಬಲಿಜರಿಗೆ ಹಲವು ದಶಕಗಳಿಂದ ಶಿಕ್ಷಣ ಹಾಗೂ ಉದ್ಯೋಗಕ್ಕೆ 2'ಎ' ಮೀಸಲಾತಿ ಸೌಲಭ್ಯ ನೀಡಲಾಗಿತ್ತು. ಆದರೆ, 1994ರ ಸೆ.17ರಂದು ಯಾವುದೇ ಆಯೋಗದ ಶಿಫಾರಸು ಹಾಗೂ ಕಾರಣವಿಲ್ಲದೇ 3'ಎ'ಗೆ ವರ್ಗಾಯಿಸುವ ಮೂಲಕ ಅನ್ಯಾಯ ಎಸಗಲಾಯಿತು' ಎಂದು ಆಕ್ರೋಶ ಹೊರಹಾಕಿದರು.

'ನಿರಂತರ ಹೋರಾಟದ ಫಲವಾಗಿ 2011ರ ಜುಲೈ 16ರಂದು ಕೇವಲ ಶಿಕ್ಷಣದ ಸೌಲಭ್ಯಕ್ಕಾಗಿ 2'ಎ' ಮೀಸಲಾತಿ ನೀಡಲಾಗಿದೆ. ಉದ್ಯೋಗದ ವಿಷಯದಲ್ಲಿ 3'ಎ' ಪಟ್ಟಿಯಲ್ಲೇ ಉಳಿಸಲಾಗಿದೆ' ಎಂದು ದೂರಿದರು.

'ನಮ್ಮಿಂದ ಕಸಿದುಕೊಂಡಿರುವ ಸೌಲಭ್ಯವನ್ನು ವಾಪಸ್ ಕೇಳುತ್ತಿದ್ದೇವೆ. ದೊಡ್ಡ ಸಮುದಾಯದವರು ನಾಯಕರಿಗೆ ಅಧಿಕಾರ ಸಿಕ್ಕಾಗ ಚಿಕ್ಕ–ಪುಟ್ಟ ಸಮುದಾಯಗಳಿಗೆ ನ್ಯಾಯ ನೀಡಿ ಸಮಾನವಾಗಿ ಕರೆದೊಯ್ಯುವುದೇ ಧರ್ಮ. ಆ ಕೆಲಸವನ್ನು ಸರ್ಕಾರ ಮಾಡಬೇಕು' ಎಂದು ಎಂ.ಎಸ್.ರಾಮಯ್ಯ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಎಂ.ಆರ್. ಜಯರಾಮ್ ಒತ್ತಾಯಿಸಿದರು.

ಚಿಕ್ಕಪೇಟೆಯಲ್ಲಿರುವ ಬಲಿಜ ಸಮಾಜದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಹಾಜರಿದ್ದು ಹೋರಾಟಕ್ಕೆ ಬೆಂಬಲ ನೀಡಿದರು.

ಕಾಂಗ್ರೆಸ್ ಮುಖಂಡ ಎಂ.ಆರ್. ಸೀತಾರಾಂ, ಎಸ್.ಸಂಪಂಗಿ, ಮಾಜಿ ಮೇಯರ್ ಪದ್ಮಾವತಿ, ಮಂಜುಳಾ ನಾಯ್ಡು, ಸಂಘದ ಅಧ್ಯಕ್ಷ ಪೆರಿಕಲ್ ಎಂ.ಸುಂದರ್, ಪ್ರಧಾನ ಕಾರ್ಯದರ್ಶಿ ಸಿ.ಕೆ.ಜಗದೀಶ್, ಸಮಗ್ರ ಬಲಿಜ ವೇದಿಕೆ ಪ್ರಧಾನ ಕಾರ್ಯದರ್ಶಿ ರಮೇಶ್ ಹಾಜರಿದ್ದರು.

'15 ದಿನದಲ್ಲಿ ಸಿ.ಎಂ ಸಮ್ಮುಖದಲ್ಲಿ ಸಭೆ'

'2ಎ ಮೀಸಲಾತಿ ವಾಪಸ್ ಕೊಡಿಸುವ ಸಂಬಂಧ 15ರಿಂದ 20 ದಿನಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಬಲಿಜ ಸಮುದಾಯದ ಮುಖಂಡರ ಸಭೆ ಕರೆಯಲು ನಾನೇ ನೇತೃತ್ವ ವಹಿಸುತ್ತೇನೆ' ಎಂದು ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ತಿಳಿಸಿದರು.

ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿ ಮಾತನಾಡಿದ ಅವರು, 'ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಸಮಾಜ ಕಲ್ಯಾಣ ಸಚಿವರ ಜೊತೆ ಈ ವಿಷಯದಲ್ಲಿ ಮುಖಂಡರೊಂದಿಗೆ ಮಾತನಾಡುತ್ತೇನೆ. ಮುಖ್ಯಮಂತ್ರಿ ಅವರಿಗೆ ವಿಷಯ ಮನವರಿಕೆ ಮಾಡುತ್ತೇನೆ' ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೂಡ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು. 'ಬಿಜೆಪಿ ಸರ್ಕಾರಕ್ಕೆ ಕಣ್ಣು, ಕಿವಿ, ಹೃದಯ ಏನೂ ಇಲ್ಲ. ವಿಧಾನಸಭೆ ಚುನಾವಣೆಯ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಈ ವಿಷಯ ಸೇರಿಸಲಾಗುವುದು' ಎಂದು ತಿಳಿಸಿದರು. ಶಾಸಕರ ರಮೇಶ್‌ಕುಮಾರ್, ದಿನೇಶ್ ಗುಂಡೂರಾವ್ ಕೂಡ ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಆಲಿಸಿದರು.

ಮೌಲ್ಯಮಾಪನಕ್ಕೆ ಅವಕಾಶ: ಅತಿಥಿ ಉಪನ್ಯಾಸಕರ ಒತ್ತಾಯ

ಬೆಂಗಳೂರು: ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರನ್ನು ದ್ವಿತೀಯ ಪಿಯು ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಬಳಸಿಕೊಳ್ಳಬೇಕು ಎಂದು ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ಒತ್ತಾಯಿಸಿದೆ.

ರಾಜ್ಯದ ವಿವಿಧ ಪದವಿಪೂರ್ವ ಕಾಲೇಜುಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸಮರ್ಥವಾಗಿ ಪಾಠ ಮಾಡುತ್ತಿದ್ದಾರೆ. ಪ್ರತಿ ತಿಂಗಳು ಕೇವಲ ₹ 12 ಸಾವಿರಕ್ಕೆ ದುಡಿಯುತ್ತಿದ್ದಾರೆ. ಆದರೆ, ಮೌಲ್ಯಮಾಪನ ಕಾರ್ಯಕ್ಕೆ ಬಳಸಿಕೊಳ್ಳುತ್ತಿಲ್ಲ. ಖಾಸಗಿ ಪದವಿಪೂರ್ವ ಕಾಲೇಜು ಉಪನ್ಯಾಸಕರಿಗೆ ಅವಕಾಶ ನೀಡಿದ್ದರೂ, ಅತಿಥಿ ಉಪನ್ಯಾಸಕರನ್ನು ಕಡೆಗಣಿಸಲಾಗಿದೆ. ಅತಿಥಿ ಉಪನ್ಯಾಸಕರನ್ನೂ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಿ ತಕ್ಷಣ ಇಲಾಖೆಯ ಮುಖ್ಯಸ್ಥರು ಆದೇಶ ಹೊರಡಿಸಬೇಕು ಎಂದು ಸಂಘದ ರಾಜ್ಯ ಕಾರ್ಯದರ್ಶಿ ರಾಜೇಶ್ ಭಟ್ ಒತ್ತಾಯಿಸಿದ್ದಾರೆ.

6,846 ನಕಲಿ ಅಂಕಪಟ್ಟಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಅಂಕಪಟ್ಟಿ ತಯಾರಿಸಿ, ₹ 25 ಸಾವಿರದಿಂದ ₹ 30 ಸಾವಿರಕ್ಕೆ ಮಾರಾಟ ಮಾಡುತ್ತಿದ್ದ ಜಾಲವನ್ನು ಪತ್ತೆಹಚ್ಚಿರುವ ಸಿಸಿಬಿ ಪೊಲೀಸರು 6,846 ನಕಲಿ ಅಂಕಪಟ್ಟಿ, 22 ಲ್ಯಾಪ್‌ಟಾಪ್–ಕಂಪ್ಯೂಟರ್ ಹಾಗೂ 13 ಮೊಬೈಲ್ ವಶ ಪಡಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ.

ರಾಜಾಜಿನಗರದ ನ್ಯೂ ಕ್ರೆಸ್ಟ್ ಟೆಕ್ನಾಲಜಿ, ಜೆ.ಪಿ ನಗರದ ಸಿಸ್ಕೊ ಕ್ರೆಸ್ಟ್, ದಾಸರಹಳ್ಳಿಯ ವಿಶ್ವಜ್ಯೋತಿ ಕಾಲೇಜು, ವಿಜಯನಗರದ ಬೆನಕ ಕರೆಸ್ಪಾಂಡೆನ್ಸ್ ಕಾಲೇಜಿನ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದಾಗ ಈ ಅಕ್ರಮ ಪತ್ತೆಯಾಗಿದೆ.

'ಶಿಕ್ಷಣದ ಬಗ್ಗೆ ಸಲಹೆ ನೀಡುವುದಾಗಿ ಹೇಳಿಕೊಂಡು ನಗರದಲ್ಲಿ ಈ ನಾಲ್ಕೂ ಸಂಸ್ಥೆಗಳು ತಲೆಯೆತ್ತಿದ್ದವು. ಕೆಲವು ವಿಶ್ವವಿದ್ಯಾಲದ ಸಿಬ್ಬಂದಿಯ ಜತೆಗೆ ಶಾಮೀಲಾಗಿಯೂ ಅಕ್ರಮ ನಡೆಸುತ್ತಿರುವುದು ಪ್ರಾಥಮಿಕ ತನಿಖೆಯಿಂದ ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

'ರಾಜ್ಯ ಹಾಗೂ ಹೊರ ರಾಜ್ಯಗಳ ಒಟ್ಟು 15 ವಿಶ್ವವಿದ್ಯಾಲಯದ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿಯ ನಕಲಿ ಅಂಕಪಟ್ಟಿ ತಯಾರಿಸಿ ಮಾರಾಟ ಮಾಡಲಾಗುತ್ತಿತ್ತು. ನ್ಯೂ ಕ್ರೆಸ್ಟ್ ಟೆಕ್ನಾಲಜಿ ಹಾಗೂ ಸಿಸ್ಕೊ ಕ್ರೆಸ್ಟ್ ಸಂಸ್ಥೆಗೆ ಸೇರಿದ ವಿಕಾಸ್ ಭಗತ್ ಎಂಬ ವ್ಯಕ್ತಿಯನ್ನು ಬಂಧಿಸಲಾಗಿದೆ' ಎಂದು ತಿಳಿಸಿವೆ.

'ಅಧಿಕೃತ ವಿಶ್ವವಿದ್ಯಾಲಯ ಅಥವಾ ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆದುಕೊಂಡಿರಲಿಲ್ಲ. ಉಳಿದ ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಯಾವ ವಿ.ವಿ ಹೆಸರಿನಲ್ಲಿ ಎಷ್ಟು?: 'ಅಣ್ಣಾಮಲೈ ವಿ.ವಿ ಹೆಸರಿನಲ್ಲಿ 238, ಸಿಕ್ಕಿಂ ವಿ.ವಿಯ 5,497, ಗೀತಂ ವಿ.ವಿಯ 728, ಬಿಐಎಸ್‌ಸಿ ವಿ.ವಿಯ 6, ಜನಾರ್ದನ್ ರೈ ನಗರ್ ವಿ.ವಿ 2, ಐಬಿವಿಇ ವಿ.ವಿಯ 12, ಕುವೆಂಪು ವಿ.ವಿಯ 159, ಜೈಪುರದ ಜೈನ್ ವಿಹಾರ್ ವಿ.ವಿಯ 27, ರಾಜಸ್ಥಾನದ ಸಿಂಗಾನಿಯ ವಿಶ್ವವಿದ್ಯಾಲಯದ 152, ಅರುಣಾಚಲ ಪ್ರದೇಶದ ವೆಂಕಟೇಶ್ವರ ವಿ.ವಿಯ 4, ಮಂಗಳೂರು ವಿ.ವಿಯ 7, ಛತ್ತೀಸಗಢದ ಆರ್‌ಪಿಎಸ್ ವಿಶ್ವವಿದ್ಯಾಲಯದ 5, ಹುಬ್ಬಳ್ಳಿಯ ಬಿವಿಬಿ ಕಾಲೇಜಿನ 1, ಬೆಂಗಳೂರು ವಿ.ವಿಯ 1, ಕೆಎಸ್‌ಒಯು ವಿ.ವಿ ಹೆಸರಿನಲ್ಲಿ 7 ಸೇರಿ ಒಟ್ಟು 6,846 ನಕಲಿ ಅಂಕಪಟ್ಟಿ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಹೇಳಿವೆ.

'ಆರೋಪಿ ವಿಕಾಸ್ ರಾಜ್ಯದ ಬೇರೆ ಬೇರೆ ವಿ.ವಿಗಳ ಜತೆಗೆ ನೋಂದಣಿ ಮಾಡಿಕೊಂಡು ದೂರ ಶಿಕ್ಷಣ ಕೋರ್ಸ್ ನಡೆಸುತ್ತಿದ್ದ. ಸುಳ್ಳು ಹೇಳಿಕೊಂಡು ಅಂಕಪಟ್ಟಿ ನೀಡುತ್ತಿದ್ದ. ವಿದ್ಯಾರ್ಥಿಗಳಿಗೆ ಯಾವುದೇ ಪರೀಕ್ಷೆ ಬರೆಸದೆ ಪದವಿ ಕೋರ್ಸ್‌ಗಳ ಪ್ರಮಾಣಪತ್ರ ಹಾಗೂ ಅಂಕಪಟ್ಟಿ ವಿತರಿಸುತ್ತಿದ್ದ. ಇದೇ ರೀತಿ ಅಕ್ರಮ ಎಸಗುತ್ತಿರುವ ಹಲವು ಸಂಸ್ಥೆಗಳು ನಗರದಲ್ಲಿರುವ ಮಾಹಿತಿಯಿದೆ. ಕಾರ್ಯಾಚರಣೆ ಮುಂದುವರಿಸಲಾಗುವುದು' ಎಂದು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ತಿಳಿಸಿದ್ದಾರೆ.

ಪಿಎಸ್ಐ ಹಗರಣ: ವಿಚಾರಣೆಯಿಂದ ಹಿಂದೆ ಸರಿದ ಹೈಕೋರ್ಟ್ ಸಿಜೆ ಪೀಠ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ದಾಖಲಾಗಿರುವ ಎಫ್‌ಐಆರ್ ಹಾಗೂ ತನಿಖೆಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಆದೇಶಿಸಬೇಕು' ಎಂದು ಕೋರಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯಿಂದ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಹಿಂದೆ ಸರಿದಿದೆ.

ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಸಲ್ಲಿಸಿರುವ ಈ ಅರ್ಜಿಯು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠದ ಮುಂದೆ ಶುಕ್ರವಾರ ವಿಚಾರಣೆಗೆ ನಿಗದಿಯಾಗಿತ್ತು. ಪ್ರಕರಣವನ್ನು ಬೇರೊಂದು ಪೀಠದ ಮುಂದೆ ನಿಗದಿಗೊಳಿಸಲು ಪೀಠವು ಆದೇಶಿಸಿತು.

ಅರ್ಜಿಯಲ್ಲಿ ಏನಿದೆ?: 'ಪಿಎಸ್‌ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ವಿವಿಧೆಡೆ ದಾಖಲಾಗಿರುವ ಎಫ್‌ಐಆರ್ ಮತ್ತು ದೂರುಗಳಿಗೆ ಸಂಬಂಧಿಸಿದ ಸಂಪೂರ್ಣ ತನಿಖಾ ದಾಖಲೆಗಳನ್ನು ಸಲ್ಲಿಸುವಂತೆ ಸಿಐಡಿಗೆ ಆದೇಶಿಸಬೇಕು. ತನಿಖೆ ನಡೆಸಿರುವ ಸಿಐಡಿಗೆ ಪೊಲೀಸ್ ನೇಮಕಾತಿ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಮೃತ್ ಪೌಲ್ ಬಂಧನದ ನಂತರದ ಸ್ಥಿತಿಗತಿಯ ಕುರಿತು ಮಾಹಿತಿ ನೀಡಲು ನಿರ್ದೇಶಿಸಬೇಕು. ನ್ಯಾಯಯುತ, ಸ್ವತಂತ್ರ ಮತ್ತು ಪಾರದರ್ಶಕ ತನಿಖೆ ನಡೆಸಲು ಸರ್ಕಾರ, ಸಿಐಡಿಗೆ ನಿರ್ದೇಶಿಸಬೇಕು' ಎಂದು ಕೋರಲಾಗಿದೆ.

ಬ್ರಾಹ್ಮಣರ ಮಾಲೀಕತ್ವದ ಪತ್ರಿಕೆಗಳಿಗೆ ವಿಶೇಷ ಜಾಹೀರಾತು

ಬೆಂಗಳೂರು: ಬ್ರಾಹ್ಮಣ ಸಮುದಾಯದ ಒಡೆತನದ ಪತ್ರಿಕೆಗಳಿಗೆ ಪ್ರತಿ ತಿಂಗಳು ಎರಡು ಪುಟಗಳ ಜಾಹೀರಾತು ನೀಡಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸುತ್ತೋಲೆ ಹೊರಡಿಸಿದೆ.

ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಇರುವ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಈ ನಿಯಮ ಅನ್ವಯಿಸಲಿದ್ದು, ಪತ್ರಿಕೆಗಳ ಸಂಪಾದಕರು, ಮಾಲೀಕರು ಆರ್‌ಎನ್‌ಐ ಪ್ರಮಾಣಪತ್ರ, ಘೋಷಣಾ ಪತ್ರ, ಜಾತಿ, ಆದಾಯ ಪ್ರಮಾಣಪತ್ರ, ಐದು ವರ್ಷಗಳಲ್ಲಿ ಆರ್‌ಎನ್‌ಐಗೆ ಸಲ್ಲಿಸಿರುವ ವಾರ್ಷಿಕ ವರದಿ, ಐದು ವರ್ಷಗಳ ಪತ್ರಿಕಾ ಪ್ರಕಟಣೆಯ ಹಾಜರಾತಿ ವರದಿ, ಒಂದು ತಿಂಗಳ ಪತ್ರಿಕಾ ಸಂಚಿಕೆಗಳನ್ನು ಸಲ್ಲಿಸಲು ಸೂಚಿಸಲಾಗಿದೆ.


ಬಿಜೆಪಿ ಸರ್ಕಾರ ಬ್ರಾಹ್ಮಣರ ಪತ್ರಿಕೆಗಳಿಗೆ ಪ್ರತಿ ತಿಂಗಳು 2 ಪುಟಗಳ ಜಾಹೀರಾತು ನೀಡಲು ಹೊರಟಿದೆ. ಉಳಿದವರದ್ದು ಪತ್ರಿಕೆಗಳಲ್ಲವೇ?
ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ಶಾಸಕ

ಈಗಾಗಲೇ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಮಾಲೀಕತ್ವದ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು ನೀಡಲಾಗುತ್ತಿದ್ದು, ಇದೇ ಮೊದಲ ಬಾರಿ ಒಂದು ನಿರ್ದಿಷ್ಟ ಜಾತಿಯ ಮಾಲೀಕತ್ವದ ಪತ್ರಿಕೆಗಳಿಗೆ ಜಾಹೀರಾತು ನೀಡಲು ಸೂಚಿಸಿದೆ.

ಅಶೋಕ, ಸಿಂಧೂರಗೆ ಗಡಿನಾಡ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಅಶೋಕ ಚಂದರಗಿ


ಎಂ.ಎಸ್. ಸಿಂಧೂರ

ಬೆಂಗಳೂರು: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು 2022–23ನೇ ಸಾಲಿನ ಗಡಿನಾಡ ಚೇತನ ಪ್ರಶಸ್ತಿಯನ್ನು ಶುಕ್ರವಾರ ಪ್ರಕಟಿಸಿದೆ.

'ಭಾಲ್ಕಿಯ ಡಾ. ಚನ್ನಬಸವ ಪಟ್ಟದ್ದೇವರು', 'ಕಯ್ಯಾರ ಕಿಞ್ಞಣ್ಣ ರೈ' ಮತ್ತು 'ಜಯದೇವಿ ತಾಯಿ ಲಿಗಾಡೆ' ಹೆಸರಿನಲ್ಲಿ ಗಡಿನಾಡ ಚೇತನ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

'ಭಾಲ್ಕಿಯ ಡಾ. ಚನ್ನಬಸವ ಪಟ್ಟದ್ದೇವರು' ಹೆಸರಿನ ಗಡಿನಾಡ ಚೇತನ ಪ್ರಶಸ್ತಿಗೆ ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಗಡಿನಾಡಿನ ಕನ್ನಡ ಹೋರಾಟಗಾರ ಮತ್ತು ನಿವೃತ್ತ ಕನ್ನಡ ಶಿಕ್ಷಕ ಎಂ.ಎಸ್. ಸಿಂಧೂರ ಅವರು ಆಯ್ಕೆಯಾಗಿದ್ದಾರೆ.

ಕನ್ನಡದ ಏಕೀಕರಣ ಹೋರಾಟದ ವೀರಾಗ್ರಣಿ ಡಾ.ಜಯದೇವಿತಾಯಿ ಲಿಗಾಡೆ ಹೆಸರಿನ ಪ್ರಶಸ್ತಿಗೆ ಗಡಿನಾಡ ಬೆಳಗಾವಿಯಲ್ಲಿ ಕನ್ನಡಪರ ಹೋರಾಟಗಳಲ್ಲಿ ಕ್ರಿಯಾಶೀಲರಾಗಿರುವ ಅಶೋಕ ಚಂದರಗಿ ಅವರು ಆಯ್ಕೆಯಾಗಿದ್ದಾರೆ.

'ಡಾ. ಕಯ್ಯಾರ ಕಿಞ್ಞಣ್ಣ ರೈ' ಹೆಸರಿನ ಪ್ರಶಸ್ತಿಗೆ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಕನ್ನಡ ಪರ ಹೋರಾಟಗಳಲ್ಲಿ ನಿರತವಾಗಿರುವ ಕಾಸರಗೋಡಿನ ಎಡನೀರು ಮಠವನ್ನು ಆಯ್ಕೆ ಮಾಡಲಾಗಿದೆ.

ಈ ಮೂರು ಪ್ರಶಸ್ತಿಗಳನ್ನು ಫೆ.2ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಸಂಜೆ 5.30ಕ್ಕೆ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರದಾನ ಮಾಡಲಿದ್ದಾರೆ.

ಕಾರ್ಯಕ್ಷಮತೆ ಪರೀಕ್ಷೆ ರದ್ದು

ಬೆಂಗಳೂರು: 'ಸಿ' ವೃಂದದ ಬೋಧಕೇತರ ನೌಕರರಿಗೆ ಶನಿವಾರ (ಜ.28) ನಡೆಸಬೇಕಿದ್ದ ಕಾರ್ಯಕ್ಷಮತೆ ಪರೀಕ್ಷೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರದ್ದು ಮಾಡಿದೆ. ಲಿಪಿಕ ಸಿಬ್ಬಂದಿ ವರ್ಗದಲ್ಲಿ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣತಿ ಹೆಚ್ಚಿಸಲು ಪರೀಕ್ಷೆ ನಡೆಸಲು ಆಯುಕ್ತರ ಕಚೇರಿ ಸೂಚಿಸಿತ್ತು. ಆದರೆ, ಪರೀಕ್ಷೆ ನಡೆಸುವ ನಿರ್ಧಾರಕ್ಕೆ ಹಿರಿಯ ಸಿಬ್ಬಂದಿ ಆಕ್ಷೇಪ ವ್ಯಕ್ತಪಡಿಸಿದ್ದರು. ಇಂತಹ ಪರೀಕ್ಷೆಗಳಿಂದ ಸಿಬ್ಬಂದಿ ಮನೋಬಲ ಕುಗ್ಗುತ್ತದೆ ಎಂದು ಮನವಿ ಸಲ್ಲಿಸಿದ್ದರು. ಮನವಿ ಪುರಸ್ಕರಿಸಿ ಇಲಾಖೆ ಪರೀಕ್ಷೆ ರದ್ದು ಮಾಡಿ ಆದೇಶಿಸಿದೆ.

ಪ್ರಚಾರದ ವಿಡಿಯೊ: ಸರ್ಕಾರದ ಕ್ರಮ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಬಂಡವಾಳ ಆಕರ್ಷಿಸಲು 2022ರ ನವೆಂಬರ್‌ನಲ್ಲಿ ನಡೆದಿದ್ದ ಜಾಗತಿಕ ಹೂಡಿಕೆದಾರರ ಸಮಾವೇಶದ (ಜಿಐಎಂ-2022) ಪ್ರಚಾರ ವಿಡಿಯೊದ ಕಾರ್ಯಾದೇಶವನ್ನು ರದ್ದುಗೊಳಿಸಿದ್ದ ರಾಜ್ಯ ಸರ್ಕಾರದ ಕ್ರಮ ಏಕಪಕ್ಷೀಯವಾಗಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಮುಂಬೈನ ಬಿಬಿಪಿ ಸ್ಟುಡಿಯೊ ವರ್ಚ್ಯುವಲ್ ಭಾರತ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಕಂಪನಿಗೆ ನೀಡಿದ್ದ ಕಾರ್ಯಾದೇಶವನ್ನು ಚಿತ್ರದ ಅರ್ಹತೆ ಅಥವಾ ಗುಣಮಟ್ಟ ಆಧರಿಸಿ ರದ್ದುಪಡಿಸಿಲ್ಲ. ಏಕಪಕ್ಷೀಯವಾಗಿ ನಿರ್ಧರಿಸಿದ್ದು, ಇದರಲ್ಲಿ ರಾಜಕೀಯ ಹಸ್ತಕ್ಷೇಪ ಕಂಡುಬರುತ್ತಿದೆ. ಇದರಿಂದ ಸಂವಿಧಾನದ 14ನೇ ವಿಧಿಯನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗುತ್ತದೆ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

'ಒಪ್ಪಂದದ ಅನುಸಾರ ಬಿಬಿಪಿ ಸ್ಟುಡಿಯೊಗೆ ₹ 1.5 ಕೋಟಿ ಮುಂಗಡ ಪಾವತಿಸಿರುವ ಸರ್ಕಾರ ಬಾಕಿ ಮೊತ್ತವನ್ನೂ ಪಾವತಿಸಬೇಕು' ಎಂದು ನ್ಯಾಯಪೀಠ ಸೂಚಿಸಿದೆ.

ಕಳೆದ ವರ್ಷ ಆಗಸ್ಟ್ 11ರಂದು ಕಂಪನಿಗೆ ಕಾರ್ಯಾದೇಶ (ವರ್ಕ್ ಆರ್ಡರ್) ನೀಡಿದ್ದು, 2022ರ ಅಕ್ಟೋಬರ್ 25 ರಂದು, 'ರದ್ದುಗೊಳಿಸಲಾಗಿದೆ' ಎಂದು ಕಂಪನಿಗೆ ಇಮೇಲ್ ರವಾನಿಸಲಾಗಿತ್ತು. ಇದನ್ನು ಪ್ರಶ್ನಿಸಿ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು.

ಕಾರ್ಕಳ: ಪರಶುರಾಮ ಥೀಂ ಪಾರ್ಕ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಿ.ಎಂ. ಬೊಮ್ಮಾಯಿ ಹೇಳಿಕೆ

‘ಜನಸಾಗರ ಕಂಡು ಸಿದ್ದರಾಮಯ್ಯಗೆ ಭಯ’

ಪ್ರಜಾವಾಣಿ ವಾರ್ತೆ

ಉಡುಪಿ: ‘ಕಲಬುರಗಿ, ಮೈಸೂರು, ಬೆಂಗಳೂರು, ಮಂಗಳೂರಿನಲ್ಲಿ ನಡೆದ ಪ್ರಧಾನಿ ಮೋದಿ ಸಮಾವೇಶಗಳಲ್ಲಿ ಜನಸಾಗರ ಕಂಡು ಸಿದ್ದರಾಮಯ್ಯಗೆ ಭಯವಾಗಿದೆ. ಭಯ ಮುಚ್ಚಿಕೊಳ್ಳಲು ಮೋದಿ ವಿರುದ್ಧ ಟೀಕೆ ಮಾಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಾರ್ಕಳದಲ್ಲಿ ಪರಶುರಾಮ ಥೀಂ ಪಾರ್ಕ್ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ವೇಳೆ ಮಾತನಾಡಿದ ಅವರು, ‘ಕಾಂಗ್ರೆಸ್ ತುಷ್ಟೀಕರಣದ ರಾಜಕಾರಣ ಮಾಡುತ್ತಿದ್ದು ಒಂದು ವರ್ಗವನ್ನು ತಲೆ ಮೇಲೆ ಕೂರಿಸಿಕೊಂಡು ಕುಣಿಸುತ್ತಿದೆ. ಬಡವರು, ದೀನ ದಲಿತರು, ಹಿಂದುಳಿದ ವರ್ಗದವರನ್ನು ಕಾಂಗ್ರೆಸ್ ಕೈಬಿಟ್ಟಿದೆ’ ಎಂದರು.

‘ಸಿದ್ದರಾಮಯ್ಯ ಆರೋಪಿಸಿದಂತೆ ಕರಾವಳಿಯನ್ನು ಹಿಂದುತ್ವದ ಪ್ರಯೋಗ ಶಾಲೆಯನ್ನಾಗಿ ಮಾಡಲು ಹೊರಟಿಲ್ಲ. ರಾಜ್ಯದ ಪ್ರಮುಖ ಆರ್ಥಿಕ ವಲಯವಾಗಿರುವ ಕರಾವಳಿಯ ಬಂದರುಗಳ ಅಭಿವೃದ್ಧಿಗೆ, ಮೂಲ ಉದ್ಯೋಗಕ್ಕೆ ಹಾಗೂ ಪ್ರವಾಸೋದ್ಯಮ ಕ್ಷೇತ್ರದ ವಿಸ್ತರಣೆಗೆ ಬಜೆಟ್‌ನಲ್ಲಿ ಆದ್ಯತೆ ನೀಡುತ್ತೇವೆ’ ಎಂದು ತಿಳಿಸಿದರು.



ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಉಮಿಕಲ್ ಬೆಟ್ಟದ ಮೇಲೆ ಒಟ್ಟಾರೆ 17 ಕೋಟಿ ವೆಚ್ಚದಲ್ಲಿ ರಾಜ್ಯ ಸರ್ಕಾರದಿಂದ ನಿರ್ಮಿಸಿರುವ ಪರಶುರಾಮ ಥೀಂ ಪಾರ್ಕ್ ಹಾಗೂ 33 ಅಡಿ ಎತ್ತರದ ಪರಶುರಾಮನ ಕಂಚಿನ ಪ್ರತಿಮೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಲೋಕಾರ್ಪಣೆಗೊಳಿಸಿದರು. ನಟ ರಿಷಬ್ ಶೆಟ್ಟಿ, ಸಚಿವರಾದ ಎಸ್‌.ಅಂಗಾರ, ವಿ.ಸುನೀಲ್ ಕುಮಾರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಇದ್ದರು

ಸಚಿವ ವಿ.ಸುನಿಲ್ ಕುಮಾರ್ ಮಾತನಾಡಿ, ಹಿಂದುತ್ವ ಎಂದರೆ ರಾಷ್ಟ್ರೀಯತೆ ಹಾಗೂ ಭಾರತೀಯ ಸಂಸ್ಕೃತಿಯಾಗಿದ್ದು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆ ರಾಷ್ಟ್ರೀಯತೆಯ ಪ್ರಯೋಗ ಶಾಲೆ. ದೇಶ ಮೊದಲು ಎಂದು ಯೋಚಿಸುವ ಜನರು ಇಲ್ಲಿದ್ದಾರೆ ಎಂದರು.

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

ಶಾದಿ ಭಾಗ್ಯವೇ ಸಿದ್ದರಾಮಯ್ಯ, ಕಾಂಗ್ರೆಸ್‌ಗೆ ದೌರ್ಭಾಗ್ಯವಾಯ್ತು

ಮೈಸೂರು: ‘ಶಾದಿ ಭಾಗ್ಯ ಯೋಜನೆಯೇ ಸಿದ್ದರಾಮಯ್ಯ ಹಾಗೂ ಅವರ ಪಕ್ಷಕ್ಕೆ ದೌರ್ಭಾಗ್ಯವಾಗಿದೆ. ಅಂತಹ ದೌರ್ಭಾಗ್ಯವೇ ಬೇಕೆಂದರೆ ತಮ್ಮ ನಿಲುವನ್ನು ಮುಂದುವರಿಸಿಕೊಂಡು ಹೋಗಲಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ‘ನಾವು ಮುಸ್ಲಿಮರನ್ನು ಓಲೈಸುವ ಪ್ರಶ್ನೆಯೇ ಇಲ್ಲ. ಮುಸ್ಲಿಮರನ್ನು ಬಿಜೆಪಿಯತ್ತ ಸೆಳೆಯಿರಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿಲ್ಲ. ಎಲ್ಲ ಸಮುದಾಯವನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ಶಿಕ್ಷಣ ನೀಡಿ ಸಮಾಜದ ಮುಖ್ಯವಾಹಿನಿಗೆ ತರಬೇಕು. ಆಗ, ಅವರೂ ದೇಶ ಕಟ್ಟಲು ಕೊಡುಗೆ ನೀಡಲು ಸಾಧ್ಯವಿದೆ ಎಂದಿದ್ದಾರಷ್ಟೆ’ ಎಂದರು.

‘ಬಿಜೆಪಿಗೆ ಮುಸ್ಲಿಮರ ಮತವೇ ಬೇಡವೆಂದು ನಿಮ್ಮದೇ ಪಕ್ಷದ ಕೆಲವರು ಹೇಳುತ್ತಾರಲ್ಲಾ’ ಎಂಬ ಪ್ರಶ್ನೆಗೆ, ‘ಅವರವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವೈಯಕ್ತಿಕವಾಗಿ ಹೇಳಿದ್ದಾರೆ. ಆದರೆ, ಆಡಳಿತ ನಡೆಸುವಾಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎನ್ನುವುದು ಪ್ರಧಾನಿಯ ನಿಲುವು. ಹಾಗೆಂದು, ಯಾರ ಬಗ್ಗೆಯೂ ಒಲವು–ಗೆಲುವಿನ ಪ್ರಶ್ನೆಯೇ ಇಲ್ಲ’ ಎಂದು ಹೇಳಿದರು.

‘ಆರ್.ಅಶೋಕ್ ಅವರನ್ನು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಿದ್ದಕ್ಕೆ ವಿರೋಧವೇನಿಲ್ಲ. ಗೋಬ್ಯಾಕ್ ಪೋಸ್ಟರ್ ಅಂಟಿಸಿರುವುದು ಮಹತ್ವದ್ದೇನಲ್ಲ. ಯಾರೋ ನಾಲ್ವರು ಮಾಡಿದ್ದಕ್ಕೆ ಪ್ರಾಧಾನ್ಯತೆ ಕೊಡಬೇಕಿಲ್ಲ’ ಎಂದು ಪ್ರತಿಕ್ರಿಯಿಸಿದರು.

ಸಿದ್ದರಾಮಯ್ಯ ರಾಜಕೀಯ ನಿವೃತ್ತಿ ಬಗ್ಗೆ ಆಗಾಗ ಮಾತನಾಡುತ್ತಿರುವುದನ್ನು ನೋಡಿದರೆ, ಅವರ ಹತಾಶ ಮನೋಭಾವವನ್ನು ತಿಳಿದುಕೊಳ್ಳಬಹುದಾಗಿದೆ ಎಂದರು.

ಚಿರತೆ ಕಾರ್ಯಪಡೆ ಮುಂದುವರಿಕೆ- ಸಿಎಂ: ‘ಚಿರತೆ ಕಾರ್ಯಪಡೆ ಶಾಶ್ವತವಾಗಿರಲಿದೆ. ಒಂದು ಚಿರತೆ ಸೆರೆಯಾದ ತಕ್ಷಣ ಕಾರ್ಯಪಡೆಯ ಕಾರ್ಯ ನಿಲ್ಲುವುದಿಲ್ಲ. ಅದಕ್ಕೆ ಅಗತ್ಯ ಮಾನವ ಸಂಪನ್ಮೂಲ, ವಾಹನಗಳು ಹಾಗೂ ವಿಶೇಷ ಅನುದಾನವನ್ನೂ ಒದಗಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಅರಣ್ಯದಂಚಿನಲ್ಲಿರುವ ಹಳ್ಳಿಗಳ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಸ್ವಯಂಸೇವಕರನ್ನು ಗುರುತಿಸಿ ತರಬೇತಿ ನೀಡಿ, ಗಸ್ತು ವೇಳೆ ಅವರನ್ನೂ ಒಳಗೊಳಿಸಿಕೊಳ್ಳುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.

ಹಾಸ್ಟೆಲ್‌ಗೆ ಮರಳಿದ ವಿದ್ಯಾರ್ಥಿಗಳು

ಬಳ್ಳಾರಿ: ಕಳಪೆ ಊಟದ ವಿರುದ್ಧ ದನಿ ಎತ್ತಿದ್ದಕ್ಕಾಗಿ ಹಾಸ್ಟೆಲ್‌ನಿಂದ ಹೊರ ಹಾಕಲಾಗಿದ್ದ ಇಲ್ಲಿನ ಕೌಲ್ ಬಜಾರ್ ಪ್ರದೇಶದ ಪರಿಶಿಷ್ಟ ಪಂಗಡದ ಹಾಸ್ಟೆಲ್ ವಿದ್ಯಾರ್ಥಿಗಳು ಶುಕ್ರವಾರ ಹಾಸ್ಟೆಲ್‌ಗೆ ಮರಳಿದರು.

ಹಾಸ್ಟೆಲ್‌ನ ಕೆಲವು ವಿದ್ಯಾರ್ಥಿಗಳು ಬೆಳಿಗ್ಗೆ ಜಿಲ್ಲಾಧಿಕಾರಿ ಪವನ್ ಕುಮಾರ್ ಮಾಲಪಾಟಿ ಅವರನ್ನು ಭೇಟಿ ಮಾಡಿದ್ದರು. ಅವರು ಮಕ್ಕಳಿಗೆ ಬುದ್ಧಿಮಾತು ಹೇಳಿದರು. ‘ಮಾಲಪಾಟಿ ನಮ್ಮ ಮಾತುಗಳನ್ನು ಸಮಾಧಾನದಿಂದ ಕೇಳಿಸಿಕೊಂಡರು’ ಎಂದು ವಿದ್ಯಾರ್ಥಿಗಳು ಸ್ಪಷ್ಟಪಡಿಸಿದರು.

‘ಕಳಪೆ ಊಟ ಸೇರಿದಂತೆ ಏನೇ ಹಾಸ್ಟೆಲ್ ಸಮಸ್ಯೆಗಳಿದ್ದರೂ ಸಮಾಜ ಕಲ್ಯಾಣ ಇಲಾಖೆ ತಾಲ್ಲೂಕು ಅಧಿಕಾರಿ ಇಲ್ಲವೆ ಜಿಲ್ಲಾ ಅಧಿಕಾರಿಗಳನ್ನು ಭೇಟಿಯಾಗಿ. ಸಮಸ್ಯೆ ಬಗೆಹರಿಯದಿದ್ದರೆ ಕಚೇರಿ ವೇಳೆಯಲ್ಲಿ ನನ್ನ ಬಳಿಗೆ ಬನ್ನಿ. ರಾತ್ರಿ ನಿಮಗೆ ಏನಾದರೂ ತೊಂದರೆಯಾದರೆ ಯಾರು ಹೊಣೆ? ನಿಮ್ಮ ತಾಯಿ–ತಂದೆಗೆ ಆಗುವ ನಷ್ಟ ತುಂಬಲು ಸಾಧ್ಯವೇ? ಎಂಬ ಕಿವಿಮಾತು ಹೇಳಿದರು’ ಎಂದೂ ವಿದ್ಯಾರ್ಥಿಗಳು ತಿಳಿಸಿದರು.

ಜಿಲ್ಲಾಧಿಕಾರಿ ಅವರು ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸಕೀನಾ ಅವರನ್ನು ಕರೆಸಿಕೊಂಡು ಚರ್ಚಿಸಿದರು. ವಿದ್ಯಾರ್ಥಿಗಳು ಆ ನಂತರ ಹಾಸ್ಟೆಲ್‌ಗೆ ಮರಳಿದರು.

ಸಿದ್ದರಾಮಯ್ಯ ಸೋಲಿಸಲು ತಂತ್ರ: ಯತೀಂದ್ರ ಆರೋಪ

ಕೊಪ್ಪಳ: ‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಂದೆ ಸಿದ್ದರಾಮಯ್ಯ ಅವರನ್ನು ಸೋಲಿಸಲು ಇತರೆ ಪಕ್ಷಗಳು ಇಲ್ಲಸಲ್ಲದ ತಂತ್ರ ಮಾಡುತ್ತಿವೆ’ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದರು.

‘ಮುಖ್ಯಮಂತ್ರಿಯಾಗಿದ್ದವರಿಗೆ ನಿಶ್ಚಿತ ಕ್ಷೇತ್ರವಿಲ್ಲ ಎಂದು ಅಪಪ್ರಚಾರ ಮಾಡುವುದು ತಂತ್ರದ ಭಾಗ. ರಾಜ್ಯದ ಎಲ್ಲಾ ಕ್ಷೇತ್ರಗಳಿಂದ ಅವರಿಗೆ ಆಹ್ವಾನವಿದೆ. ಕೊಪ್ಪಳದಿಂದಲೂ ಸ್ಪರ್ಧಿಸುವಂತೆ ಶಾಸಕ ರಾಘವೇಂದ್ರ ಹಿಟ್ನಾಳ ಹೇಳಿದ್ದಾರೆ. ವರುಣಾ ಕ್ಷೇತ್ರಕ್ಕೆ ಯಾವಾಗಲೂ ಮುಕ್ತ ಆಹ್ವಾನವಿದೆ’ ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು. ‘ಯಾವ ಕ್ಷೇತ್ರದಿಂದ ಸ್ಪರ್ಧಿಸುವರು ಎಂಬುದನ್ನು ಈಗಲೇ ಅಂತಿಮಗೊಳಿಸಲು ಆಗದು. ಚುನಾವಣಾ ದಿನಾಂಕ ಘೋಷಣೆಯಾದ ಬಳಿಕ ನಿರ್ಧರಿಸಲಾಗುವುದು’ ಎಂದರು.

‘ಬಿಎಸ್‌ವೈಗೆ ಕಲ್ಲು ಎಸೆದರೆ ಪಕ್ಷಕ್ಕೆ ಪೆಟ್ಟು’

ವಿಜಯಪುರ: ‘ಯಡಿಯೂರಪ್ಪ ಅವರಿಗೆ ಕಲ್ಲು ಎಸೆದರೆ ಅದು ಪಕ್ಷಕ್ಕೆ ಪೆಟ್ಟು ಎನ್ನುವುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಬಿಎಸ್‌ವೈ ಬಗ್ಗೆ ಶಾಸಕ ಬಸನಗೌಡ ಯತ್ನಾಳ ಇನ್ನು ಟೀಕೆ ಮಾಡುವುದಿಲ್ಲ ಎಂದು ಹೇಳಿಕೆ ನೀಡಿರುವುದು ಪಕ್ಷದ ಭವಿಷ್ಯದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ’ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದರು.

ವಿಜಯಪುರ ಜಿಲ್ಲೆಯ ಹೊರ್ತಿ ಗ್ರಾಮದಲ್ಲಿ ಶುಕ್ರವಾರ ಮಾಧ್ಯಮದ ಜೊತೆ ಮಾತನಾಡಿದ ಅವರು, ‘ಯತ್ನಾಳ ಬಗ್ಗೆ ನಮಗೆ ವೈಯಕ್ತಿಕ ವಿರೋಧವಿಲ್ಲ. ನಮ್ಮ ಹೇಳಿಕೆಗಳು ಪಕ್ಷಕ್ಕೆ ಪೂರಕವಾಗಿರಬೇಕೇ ಹೊರತು ಪಕ್ಷಕ್ಕೆ ಧಕ್ಕೆ ತರುವಂತಿರಬಾರದು’ ಎಂದರು.

ಆಕಾಂಕ್ಷಿಗಳಿಂದ ಕೋಲಾರಮ್ಮನ ಮೇಲೆ ಆಣೆ

ಕೋಲಾರ: ‘ಜಿಲ್ಲೆಯ ಬಂಗಾರಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದ್ದು, ಯಾರನ್ನೇ ಅಭ್ಯರ್ಥಿ ಮಾಡಿದರೂ ಪಕ್ಷಕ್ಕೆ ದ್ರೋಹ ಬಗೆಯಬಾರದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ, ರೆಸಾರ್ಟ್‌ವೊಂದರಲ್ಲಿ ಆಕಾಂಕ್ಷಿಗಳಿಂದ ‘ಕೋಲಾರಮ್ಮ’ ದೇವತೆ ಹೆಸರಲ್ಲಿ ಆಣೆ ಮಾಡಿಸಿದ್ದಾರೆ.

ಈ ಕ್ಷೇತ್ರದಲ್ಲಿ ಮಾಜಿ ಶಾಸಕ ಬಿ.ಪಿ. ವೆಂಕಟಮುನಿಯಪ್ಪ, ಅವರ ಪುತ್ರ ಬಿ.ವಿ. ಮಹೇಶ್, ಮಾಜಿ ಶಾಸಕ ಎಂ. ನಾರಾಯಣಸ್ವಾಮಿ ಸೇರಿದಂತೆ ಆರು ಮಂದಿ ಟಿಕೆಟ್ ಆಕಾಂಕ್ಷಿಗಳಿದ್ದಾರೆ. ಟಿಕೆಟ್ ಸಿಗದಿದ್ದರೆ ಬೇರೆ ಪಕ್ಷಕ್ಕೆ ಹೋಗುವುದಾಗಿಯೂ ಬೆಂಬಲಿಗರೊಂದಿಗೆ ಹೇಳಿಕೊಂಡಿದ್ದಾರೆ.

ಈ ವಿಚಾರ ಗೊತ್ತಾಗುತ್ತಿದ್ದಂತೆ ಗುರುವಾರ ಸಂಜೆ ಎಲ್ಲಾ ಆಕಾಂಕ್ಷಿಗಳನ್ನು ರೆಸಾರ್ಟ್‌ಗೆ ಕರೆದು ಆಣೆ ಮಾಡಿಸಿಕೊಂಡಿದ್ದಾರೆ.

‘ಭರವಸೆ’ ಅಭಿಯಾನಕ್ಕೆ ‘ಕೈ’ ಪಡೆ ಸಜ್ಜು

ರಾಜ್ಯದ ಎಲ್ಲ ಮನೆಗಳನ್ನೂ ತಲುಪಲು ಟಿಕೆಟ್ ಆಕಾಂಕ್ಷಿಗಳು, ಮುಖಂಡರಿಗೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹ ಜ್ಯೋತಿ’, ‘ಗೃಹ ಲಕ್ಷ್ಮಿ’ ಸೇರಿದಂತೆ ಕಾಂಗ್ರೆಸ್ ಪಕ್ಷವು ಪ್ರಕಟಿಸಿರುವ ಎಲ್ಲ ಭರವಸೆಗಳನ್ನು ರಾಜ್ಯದ ಪ್ರತಿ ಮನೆಗೂ ತಲುಪಿಸುವ ಅಭಿಯಾನವನ್ನು ಫೆಬ್ರುವರಿ 3ರಿಂದ ಆರಂಭಿಸಲಾಗುತ್ತಿದೆ. ಒಂದು ತಿಂಗಳೊಳಗೆ ರಾಜ್ಯದ 1.8 ಕೋಟಿ ಮನೆಗಳನ್ನು ತಲುಪುವ ಗುರಿ ನಿಗದಿಪಡಿಸಲಾಗಿದೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಪಕ್ಷದ ಪ್ರಮುಖ ನಾಯಕರ ನೇತೃತ್ವದಲ್ಲಿ ಶುಕ್ರವಾರ ರಾತ್ರಿ ನಡೆದ ಸಭೆಯಲ್ಲಿ ಈ ಕಾರ್ಯಸೂಚಿಯನ್ನು ಪಕ್ಷದ ಪದಾಧಿಕಾರಿಗಳು ಮತ್ತು ಮುಖಂಡರಿಗೆ ನೀಡಲಾಗಿದೆ.

ಶಾಸಕರು, ಸಂಸದರು, ಮಾಜಿ ಸಂಸದರು, ಮಾಜಿ ಶಾಸಕರು, ವಿಧಾನಸಭೆ, ವಿಧಾನ ಪರಿಷತ್ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಪರಾಜಿರಾದ ಕಾಂಗ್ರೆಸ್ ಅಭ್ಯರ್ಥಿಗಳು, ಕೆಪಿಸಿಸಿ ಪದಾಧಿಕಾರಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ಸಭೆಯಲ್ಲಿ ಪಾಲ್ಗೊಂಡಿದ್ದರು. ಫೆ.3ರಿಂದ ಒಂದು ವಾರ ಮತ್ತು ಒಂದು ತಿಂಗಳ ಎರಡು ಗುರಿಗಳನ್ನು ಇರಿಸಿಕೊಂಡು ಅಭಿಯಾನ ನಡೆಸುವಂತೆ ಸೂಚನೆ ನೀಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಪ್ರತಿ ಗ್ರಾಮ ಮತ್ತು ವಾರ್ಡ್‌ಗಳಲ್ಲಿ ಕನಿಷ್ಠ ಎರಡು ಸಭೆಗಳನ್ನು ನಡೆಸಬೇಕು. ಕಾಂಗ್ರೆಸ್ ನೀಡಿರುವ ಭರವಸೆಗಳ ಕುರಿತು ಜನರಿಗೆ ಮನವರಿಕೆ ಮಾಡಬೇಕು. ‘ಬಿಜೆಪಿಯ ಪಾಪದ ಪುರಾಣ’ ಕರಪತ್ರವನ್ನು ಹಂಚುವ ಮೂಲಕ ಸರ್ಕಾರದ ವೈಫಲ್ಯಗಳ ಕುರಿತು ಜಾಗೃತಿ ಮೂಡಿಸಬೇಕು. ಸ್ಥಳೀಯವಾಗಿ ಪ್ರಭಾವಿಯಾಗಿರುವ ವ್ಯಕ್ತಿಗಳನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕು ಎಂಬುದು ಯೋಜನೆಯಲ್ಲಿ ಸೇರಿದೆ.

ಒಂದು ತಿಂಗಳ ಅವಧಿಯಲ್ಲಿ ಪ್ರತಿ ಮನೆಗೂ ‘ಕಾಂಗ್ರೆಸ್ ಗ್ಯಾರಂಟಿ ಕಾರ್ಡ್’ ತಲುಪಿಸಬೇಕು. 50 ಸದಸ್ಯರ ತಂಡವು ಪ್ರತಿದಿನ 2,500 ಮನೆಗಳಿಗೆ ಭೇಟಿ ನೀಡಬೇಕು. 30 ದಿನಗಳಲ್ಲಿ ವಿಧಾನಸಭಾ ಕ್ಷೇತ್ರದಲ್ಲಿನ 75 ಸಾವಿರ ಮನೆಗಳನ್ನೂ ತಲುಪಬೇಕು ಎಂಬ ಗುರಿ ನೀಡಲಾಗಿದೆ. ಪಕ್ಷದ ಕರಪತ್ರಗಳು, ‘ಗ್ಯಾರಂಟಿ ಕಾರ್ಡ್’ ವಿತರಣೆಯ ಜತೆಗೆ ಪ್ರತಿ ಮನೆಗೂ ಕಾಂಗ್ರೆಸ್‌ನ ‘ಸ್ಟಿಕ್ಕರ್’ ಅಂಟಿಸಬೇಕು ಎಂಬ ಗುರಿ ನೀಡಲಾಗಿದೆ.

ಪ್ರತಿ ಹತ್ತು ಮತಗಟ್ಟೆಗಳಿಗೆ ಒಂದು ನೋಂದಣಿ ಕೇಂದ್ರ ತೆರೆಯಬೇಕು. ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ 25 ನೋಂದಣಿ ಕೇಂದ್ರಗಳನ್ನು ತೆರೆದು ಹೊಸ ಸದಸ್ಯರನ್ನು ನೋಂದಣಿ ಮಾಡಬೇಕು ಎಂಬ ನಿರ್ದೇಶನ ನೀಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಫೆ.3ರಿಂದ ಎರಡನೇ ಹಂತದ ಯಾತ್ರೆ

ಫೆಬ್ರುವರಿ 3ರಿಂದ ತಮ್ಮ ಹಾಗೂ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರತ್ಯೇಕವಾಗಿ ಎರಡನೇ ಹಂತದ ಪ್ರಜಾ ಧ್ವನಿ ಯಾತ್ರೆ ಆರಂಭವಾಗಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಭೆಯಲ್ಲಿ ಪ್ರಕಟಿಸಿದ್ದಾರೆ.

‘ಉತ್ತರ ಕರ್ನಾಟಕದ 112 ವಿಧಾನಸಭಾ ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಮತ್ತು ದಕ್ಷಿಣ ಕರ್ನಾಟಕದ 112 ಕ್ಷೇತ್ರಗಳಲ್ಲಿ ನನ್ನ ನೇತೃತ್ವದಲ್ಲಿ ಯಾತ್ರೆ ನಡೆಯಲಿದೆ. ಸಿದ್ದರಾಮಯ್ಯ ಬಸವಕಲ್ಯಾಣದಿಂದ ಯಾತ್ರೆ ಆರಂಭಿಸುತ್ತಾರೆ. ಮೂರನೇ ಹಂತದಲ್ಲಿ ಉತ್ತರಕ್ಕೆ ನಾನು ಮತ್ತು ದಕ್ಷಿಣಕ್ಕೆ ಅವರು ಯಾತ್ರೆ ಆರಂಭಿಸುತ್ತೇವೆ’ ಎಂದು ಅವರು ಪಕ್ಷದ ಮುಖಂಡರ ಜತೆ ಮಾಹಿತಿ ಹಂಚಿಕೊಂಡಿದ್ದಾರೆ.

ಹಾಲು ಉತ್ಪಾದನೆಯಲ್ಲಿ ಕುಸಿತ; ಬಿಜೆಪಿ ಸರ್ಕಾರದ ವಿರುದ್ಧ ಸಿದ್ದರಾಮಯ್ಯ ಆಕ್ರೋಶ

‘ಕಾಂಗ್ರೆಸ್ ಗೆದ್ದರೆ ಹಾಲಿನ ಪ್ರೋತ್ಸಾಹಧನ ₹ 6ಕ್ಕೆ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಹಾಲು ಉತ್ಪಾದಕರಿಗೆ ನೀಡಲಾಗುತ್ತಿರುವ ಪ್ರತಿ ಲೀಟರ್ ಹಾಲಿನ ಪ್ರೋತ್ಸಾಹಧನವನ್ನು ₹5 ರಿಂದ ₹ 6ಕ್ಕೆ ಹೆಚ್ಚಿಸಲಾಗುವುದು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ ನೀಡಿದರು.


ಶುಕ್ರವಾರ ನಡೆದ ಕಾಂಗ್ರೆಸ್ ಪ್ರಜಾಧ್ವನಿ ಸಮಾವೇಶದಲ್ಲಿ ಮಾತನಾಡಿದ ಅವರು, ‘ನಾವು ಅಧಿಕಾರದಲ್ಲಿದ್ದಾಗ ₹ 5 ಪ್ರೋತ್ಸಾಹಧನ ನೀಡುತ್ತಿದ್ದೆವು. ನಂತರ ಬಂದ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್‌.ಡಿ.ಕುಮಾರಸ್ವಾಮಿ ₹ 1 ಹೆಚ್ಚಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಹೆಚ್ಚಿಸಲಿಲ್ಲ. ಬಿಜೆಪಿ ಸರ್ಕಾರವೂ ಕ್ರಮ ವಹಿಸಲಿಲ್ಲ’ ಎಂದರು.

‘ರಾಜ್ಯದಲ್ಲಿ ಲಕ್ಷಾಂತರ ಜಾನುವಾರುಗಳು ಚರ್ಮಗಂಟು ರೋಗದಿಂದ ಬಳಲುತ್ತಿವೆ. ಇದರಿಂದ ಹಾಲು ಉತ್ಪಾದನೆಯಲ್ಲಿ ಕುಸಿತ ಉಂಟಾಗಿದೆ. 94 ಲಕ್ಷ ಲೀಟರ್ ಇದ್ದ ಹಾಲು ಉತ್ಪಾದನೆ ಈಗ 78 ಲಕ್ಷ ಲೀಟರ್‌ಗೆ ಕುಸಿದಿದೆ. ಚರ್ಮಗಂಟು ರೋಗ ಉಲ್ಬಣವಾಗಿರುವುದೇ ಇದಕ್ಕೆ ಕಾರಣ’ ಎಂದು ದೂರಿದರು.

‘ಪಶು ಆಸ್ಪತ್ರೆಯಲ್ಲಿ ವೈದ್ಯರು, ಪಶು ನಿರೀಕ್ಷಕರು ಇಲ್ಲದ ಕಾರಣ ಚರ್ಮಗಂಟು ರೋಗಕ್ಕೆ ಚಿಕಿತ್ಸೆ ದೊರೆಯುತ್ತಿಲ್ಲ. ಪಶುಸಂಗೋಪನಾ ಸಚಿವ ಅಧಿವೇಶನದಲ್ಲಿ ಉತ್ತರ ನೀಡದೇ ಓಡಿ ಹೋದರು’ ಎಂದು ಟೀಕಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ‘ಕೆಪಿಸಿಸಿ ಅಧ್ಯಕ್ಷನಾದ ನಂತರ ನನ್ನ ಮೇಲೆ 25 ಪ್ರಕರಣ ದಾಖಲಿಸಲಾಗಿದೆ. ಐಟಿ, ಇಡಿ, ಸಿಬಿಐ ಬಿಟ್ಟು ನಮ್ಮನ್ನು ಕಟ್ಟಿ ಹಾಕಲಾಗದು’ ಎಂದರು.

‘ಬಿಜೆಪಿಯವರು ಬೆಂಗಳೂರು–ಮೈಸೂರು ದಶಪಥ ಯೋಜನೆಯನ್ನು ತಮ್ಮದು ಎಂದು ಉದ್ಘಾಟನೆ ಮಾಡಲು ಸಿದ್ಧರಾಗುತ್ತಾರೆ. ಆದರೆ, ಆ ಯೋಜನೆಗೆ ಆರಂಭಿಸಿದ್ದು ಕಾಂಗ್ರೆಸ್ ಸರ್ಕಾರ, ಆಸ್ಕರ್ ಫರ್ನಾಂಡಿಸ್ ಹೆದ್ದಾರಿ ಸಚಿವರಾಗಿದ್ದಾಗ ಯೋಜನೆಗೆ ಅನುಮೋದನೆ ದೊರೆತಿತ್ತು’ ಎಂದು ಹೇಳಿದರು.



ಮಂಡ್ಯದಲ್ಲಿ ಶುಕ್ರವಾರ ನಡೆದ ಪ್ರಜಾಧ್ವನಿ ಸಮಾವೇಶದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಹೋರಿಯನ್ನು ಉಡುಗೊರೆಯಾಗಿ ನೀಡಿದರು

ಡಿಕೆಶಿಗೆ ಹೋರಿ ಉಡುಗೊರೆ

‘ಗೂಳಿಯಂತೆ ನುಗ್ಗಿ ಮುಖ್ಯಮಂತ್ರಿ ಆಗಲಿ’ ಎಂದು ಹಾರೈಸಿ ಡಿ.ಕೆ. ಶಿವಕುಮಾರ್ ಅವರಿಗೆ ಕಾಂಗ್ರೆಸ್ ಕಾರ್ಯಕರ್ತ ಕಲ್ಲಹಳ್ಳಿ ಕಾರ್ತಿಕ್ ₹ 50 ಸಾವಿರ ಮೌಲ್ಯದ ಹಳ್ಳಿಕಾರ್ ಹೋರಿಯನ್ನು ಉಡುಗೊರೆ ನೀಡಿದರು.

ಅಲಂಕೃತ ಹೋರಿಗೆ ಶಿವಕುಮಾರ್ ನಮಸ್ಕರಿಸಿ ಸ್ವೀಕರಿಸಿದರು.

ಮನುಷ್ಯರ ಕೊಲ್ಲುವ ಚಿರತೆಗೆ ಗುಂಡಿಕ್ಕುವುದೇ ಪರಿಹಾರ: ಕೃಪಾಕರ

ಪ್ರಜಾವಾಣಿ ವಾರ್ತೆ

ಮೈಸೂರು: ‘ಬೇಟೆಯಾಡುವ ಸಾಮರ್ಥ್ಯ ಕಳೆದುಕೊಂಡಿರುವ, ಗಾಯಗೊಂಡ ಅಥವಾ ವಯಸ್ಸಾದ ಚಿರತೆಗಳು ಮನುಷ್ಯರ ಮೇಲೆ ದಾಳಿ ಮಾಡುತ್ತವೆ. ಅಂಥವುಗಳನ್ನು ನಿಖರವಾಗಿ ಗುರುತಿಸಿ ಗುಂಡಿಕ್ಕುವುದೇ ಪರಿಹಾರ’ ಎಂದು ವನ್ಯಜೀವಿ ತಜ್ಞ ಕೃಪಾಕರ ಹೇಳಿದರು.

ಇಲ್ಲಿನ ಮಹಾರಾಣಿ ಕಲಾ ಕಾಲೇಜಿನಲ್ಲಿ ಶುಕ್ರವಾರ ನಡೆದ ವಿವಿಧ ಸ್ಪರ್ಧೆಗಳ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಒಂದು ಚಿರತೆಯಿಂದ ಎಲ್ಲ ಚಿರತೆಗಳ ಮೇಲೂ ಜನರಲ್ಲಿ ಮೂಡುವ ದ್ವೇಷ ಅವುಗಳ ಸಂತತಿಯನ್ನೇ ನಾಶ ಮಾಡಬಲ್ಲದು. ಹೀಗಾಗಿ ವಿಶೇಷ ವಿಧಾನಗಳಿಂದ ನಿರ್ದಿಷ್ಟ ಚಿರತೆಯನ್ನು ಗುರುತಿಸಿ ಗುಂಡಿಕ್ಕಬೇಕು’ ಎಂದು ಪ್ರತಿಪಾದಿಸಿದರು.

‘ಚಿರತೆ ಗಣತಿ ಕಷ್ಟ. ಕರ್ನಾಟಕದಲ್ಲಿ ಕಾಡಿಗಿಂತಲೂ ನಾಡಿನಲ್ಲೇ ಸಾವಿರಾರು ಚಿರತೆಗಳಿವೆ. ಜನರೇ ಅವುಗಳಿಗೆ ವಿಷ ಹಾಕುವ ಅಥವಾ ಹೇಗಾದರೂ ಕೊಲ್ಲಲು ಮುಂದಾದರೆ ಕಷ್ಟವಾಗುತ್ತದೆ. ಸಂತತಿ ಉಳಿವಿಗಾಗಿ ಒಂದು ಚಿರತೆಯು ಪ್ರಾಣ ತ್ಯಾಗ ಮಾಡಬೇಕಾಗುತ್ತದೆ’ ಎಂದರು.

‘ಮನುಷ್ಯ, ಭೂಮಿಯ ಮೇಲಿರುವ 80 ಲಕ್ಷ ಜೀವಿಗಳ ವಿರುದ್ಧವಿದ್ದಾನೆ. ವನ್ಯಜೀವಿಗಳ ಸಮಸ್ಯೆ ಗ್ರಹಿಸುವ ಸಾವಧಾನ ಅವನಿಗೆ ಇಲ್ಲವಾಗಿದೆ. ಸೂಕ್ಷ್ಮತೆಗಳು ಮಾಯವಾಗಿವೆ. ಅದೇ ಮಾನವ– ವನ್ಯಜೀವಿ ಸಂಘರ್ಷ ಹೆಚ್ಚಾಗಲು ಕಾರಣವಾಗಿದೆ’ ಎಂದರು.

ಖಾಲಿ ಕುರ್ಚಿ ನಡುವೆ ‘ಹಂಪಿ ಉತ್ಸವ’ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಹಂಪಿ (ಹೊಸಪೇಟೆ): ಖಾಲಿ ಕುರ್ಚಿಗಳ ನಡುವೆ ಮೂರು ದಿನಗಳ ‘ಹಂಪಿ ಉತ್ಸವ’ದ ಉದ್ಘಾಟನಾ ಸಮಾರಂಭ ಶುಕ್ರವಾರ ಸಂಜೆ ಇಲ್ಲಿನ ಗಾಯತ್ರಿ ಪೀಠದಲ್ಲಿ ನಡೆಯಿತು.

ವೇದಿಕೆ ಎದುರು 40 ಸಾವಿರ ಆಸನಗಳಿಗೆ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಎರಡು ಸಾವಿರ ಜನರೂ ಇರಲಿಲ್ಲ. ಅತಿ ಗಣ್ಯರು, ಗಣ್ಯರು ಹಾಗೂ ಸಾರ್ವಜನಿಕರಿಗೆ ಹಾಕಿದ್ದ ಕುರ್ಚಿಗಳೆಲ್ಲ ಖಾಲಿ ಇದ್ದವು. ‘ಜನವೇ ಇಲ್ವಲ್ಲ’ ಎಂದು ಎಲ್ಲರೂ ಮಾತಾಡಿಕೊಳ್ಳುತ್ತಿದ್ದರು. ಸಂಜೆ 6 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಬೇಕಿತ್ತು. ಆದರೆ, ಜನರಿಲ್ಲದ ಕಾರಣ ಒಂದು ಗಂಟೆ ವಿಳಂಬ ಮಾಡಲಾಯಿತು.

ಖಾಲಿ ಕುರ್ಚಿಗಳ ನಡುವೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉತ್ಸವ ಉದ್ಘಾಟಿಸಿದರು. ಒಂದು ಗಂಟೆಯಲ್ಲಿ ವೇದಿಕೆ ಕಾರ್ಯಕ್ರಮ ಕೊನೆಗೊಂಡಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಶುರುವಾದವು. ರಾತ್ರಿ 9ರ ನಂತರವೂ ಜನ ಬರಲಿಲ್ಲ. ಪ್ರಚಾರದ ಕೊರತೆಯೇ ಇದಕ್ಕೆ ಕಾರಣ ಎಂಬ ಆರೋಪಗಳು ಕೇಳಿ ಬಂದಿವೆ.

‘ಎರಡು ವರ್ಷಗಳ ನಂತರ ಹಂಪಿ ಉತ್ಸವ ಆಗುತ್ತಿದೆ. ಬಹಳಷ್ಟು ಜನರಲ್ಲಿ ಉತ್ಸಾಹ ಇದೆ. ಇನ್ಮೇಲೆ ಜನ ಬರುತ್ತಾರೆ’ ಎಂದು ಬೊಮ್ಮಾಯಿ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಂಪಿಯ ಗಾಯತ್ರಿ ಪೀಠದಲ್ಲಿ ಶುಕ್ರವಾರ ಸಂಜೆ ‘ಹಂಪಿ ಉತ್ಸವ’ಕ್ಕೆ ಚಾಲನೆ ನೀಡಿದರು

ಶಿಕ್ಷಣ ಸುಧಾರಣೆ ಸಲಹೆಗಾರ ಪ್ರೊ. ದೊರೆಸ್ವಾಮಿ ಸಲಹೆ

‘ಶಾಲೆ ದತ್ತುಪಡೆಯದ ಶಾಸಕರನ್ನು ಪ್ರಶ್ನಿಸಿ’

ಮಂಗಳೂರು: ‘ಸರ್ಕಾರಿ ಶಾಲೆಗಳನ್ನು ದತ್ತು ಪಡೆಯದ ಶಾಸಕರು ಮುಂಬರುವ ಚುನಾವಣೆಯಲ್ಲಿ ಮತ ಕೇಳಲು ಬಂದಾಗ ಮತದಾರರು ಅವರನ್ನು ಪ್ರಶ್ನಿಸಬೇಕು’ ಎಂದು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಸಲಹೆ ನೀಡಿದರು.

‘ಶಾಸಕರು, ವಿಧಾನ ಪರಿಷತ್ ಸದಸ್ಯರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಕನಿಷ್ಠ ಮೂರು ಸರ್ಕಾರಿ ಶಾಲೆಗಳನ್ನು ದತ್ತು ಪಡೆಯುವಂತೆ ನೀಡಿದ್ದ ಶಿಫಾರಸನ್ನು 2020–21ರ ರಾಜ್ಯ ಬಜೆಟ್‌ನಲ್ಲಿ ಸೇರಿಸಲಾಗಿದ್ದರೂ, ಶೇ 10ರಷ್ಟು ಜನಪ್ರತಿನಿಧಿಗಳು ಮಾತ್ರ ಈ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದಾರೆ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘224 ಕ್ಷೇತ್ರಗಳ ಶಾಸಕರು, ವಿಧಾನ ಪರಿಷತ್ ಸದಸ್ಯರಿಗೆ ಈ ಸಂಬಂಧ ಪತ್ರ ಬರೆದು ಗಮನ ಸೆಳೆದಿದ್ದೇನೆ. ಆದರೆ, ಬೆರಳೆಣಿಕೆ ಶಾಸಕರು ಸರ್ಕಾರಿ ಶಾಲೆ ದತ್ತು ಪಡೆದು, ಅಭಿವೃದ್ಧಿಗೊಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಕ್ಷೇತ್ರದಲ್ಲಿ ಕೆಲ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ 48ಸಾವಿರ ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ. ಶೇ 40ರಷ್ಟು ಶಾಲೆಗಳಲ್ಲಿ ಕುಡಿಯುವ ನೀರು, ಕಾಂಪೌಂಡ್ ಸೌಲಭ್ಯ ಇಲ್ಲ. ಶೇ 30ರಷ್ಟು ಶಾಲೆಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿವೆ. ಸ್ವತಃ ಶಿಕ್ಷಣ ಸಚಿವರೇ ಈ ವಿಷಯ ಹೇಳಿದ್ದಾರೆ. ರಾಜ್ಯ ಸರ್ಕಾರವು ಮುಂಬರುವ ಬಜೆಟ್‌ನಲ್ಲಿ ಸರ್ಕಾರಿ ಶಾಲೆಗಳ ಉನ್ನತೀಕರಣಕ್ಕೆ ₹10ಸಾವಿರ ಕೋಟಿ ಮೊತ್ತವನ್ನು ಮೀಸಲಿಟ್ಟು, ಏಕಕಂತಿನಲ್ಲಿ ಬಿಡುಗಡೆಗೊಳಿಸಿ, ಶಾಲೆಗಳ ಅಭಿವೃದ್ಧಿಗೆ ಆಸಕ್ತಿ ತೋರಬೇಕು ಎಂದು ಆಗ್ರಹಿಸಿದರು. ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಎರಡು ವರ್ಷಗಳ ಹಿಂದೆ 18 ಶಿಫಾರಸುಗಳನ್ನು ನೀಡಲಾಗಿತ್ತು. ಅದರಲ್ಲಿ ಕೆಲವು ಮಾತ್ರ ಅನುಷ್ಠಾನಗೊಂಡಿವೆ ಎಂದರು.

ಸಂಕ್ಷಿಪ್ತ ಸುದ್ದಿ

ಗಾಜಾಪಟ್ಟಿಯಲ್ಲಿ ಉದ್ವಿಗ್ನ ಸ್ಥಿತಿ

ಜೆರುಸಲೇಂ (ಎ.ಪಿ): ಇಸ್ರೇಲ್ ಸೇನೆ ಮತ್ತು ಪ್ಯಾಲೆಸ್ಟೀನ್ ಉಗ್ರರ ಗುಂಪುಗಳ ನಡುವೆ ಗಾಜಾಪಟ್ಟಿಯಲ್ಲಿ ಪರಸ್ಪರ ಕ್ಷಿಪಣಿ, ರಾಕೆಟ್ ದಾಳಿ ನಡೆದಿದ್ದು, ಈ ಬೆಳವಣಿಗೆ ಜೆರುಸಲೇಂನ ನಿವಾಸಿಗಳಲ್ಲಿ ಆತಂಕವನ್ನು ಮೂಡಿಸಿದೆ.

ಪ್ಯಾಲೆಸ್ಟೀನ್ ಉಗ್ರರ ಗುಂಪು ರಾಕೆಟ್ ದಾಳಿಯನ್ನು ನಿಲ್ಲಿಸಿದಲ್ಲಿ ಪ್ರತಿಯಾಗಿ ಸೇನೆ ಕೂಡಾ ವಾಯುದಾಳಿಯನ್ನು ಸ್ಥಗಿತಗೊಳಿಸಲಿದೆ ಎಂದು ಇಸ್ರೇಲ್‌ನ ರಕ್ಷಣಾ ಸಚಿವರು ಸುಳಿವು ನೀಡಿದ್ದಾರೆ. ಇದೇ ಸಂದರ್ಭದಲ್ಲಿ ‘ಅಗತ್ಯ’ ಎನಿಸಿದಲ್ಲಿ ಗಾಜಾ ಪಟ್ಟಿಯಲ್ಲಿ ತೀವ್ರ ದಾಳಿಯನ್ನು ನಡೆಸಲು ಸಜ್ಜಾಗಿರಬೇಕು ಎಂದೂ ತನ್ನ ಸೇನೆಗೆ ಅವರು ಸೂಚನೆ ನೀಡಿದ್ದಾರೆ.

ಜೆನಿನ್ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ಸೇನೆಯು ದಾಳಿ ನಡೆಸಿದ ಹಿಂದೆಯೇ ಉಭಯತ್ರರ ನಡುವಿನ ಸಂಘರ್ಷವೂ ತೀವ್ರಗೊಂಡಿದೆ. ಕ್ಷಿಪಣಿ, ಗುಂಡಿನ ದಾಳಿಯಲ್ಲಿ 61 ವರ್ಷದ ಮಹಿಳೆ, ಕನಿಷ್ಠ ಏಳು ಮಂದಿ ಉಗ್ರರು ಅಸುನೀಗಿದ್ದಾರೆ.

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್‌ನ ನಡುವೆ ದಶಕಗಳಿಂದಲೂ ಸಂಘ ರ್ಷದ ಸ್ಥಿತಿ ಇದೆ. ಇತ್ತೀಚೆಗೆ ಮರು ಆಯ್ಕೆಗೊಂಡಿರುವ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರಿಗೆ ಇದು ಅಗ್ನಿಪರೀಕ್ಷೆಯಾಗಿದೆ.

ರಷ್ಯಾ ಮೇಲೆ ಜಪಾನ್ ನಿರ್ಬಂಧ ಬಿಗಿ

ಟೋಕಿಯೊ (ರಾಯಿಟರ್ಸ್): ಉಕ್ರೇನ್ ಮೇಲೆ ರಷ್ಯಾ ಪಡೆಗಳು ಹೊಸದಾಗಿ ಕ್ಷಿಪಣಿ ಮತ್ತು ಸ್ವಯಂ ಸ್ಫೋಟಿಸುವ ಡ್ರೋನ್‌ಗಳಿಂದ ಮಾರಕ ದಾಳಿ ನಡೆಸಿರುವುದನ್ನು ಖಂಡಿಸಿರುವ ಜಪಾನ್, ರಷ್ಯಾ ಮೇಲೆ ಹೇರಿರುವ ನಿರ್ಬಂಧಗಳನ್ನು ಮತ್ತಷ್ಟು ಬಿಗಿಗೊಳಿಸಿದೆ.

ಅಮೆರಿಕ ಮತ್ತು ಜರ್ಮನಿ ಹಾಗೂ ಅದರ ಮಿತ್ರ ರಾಷ್ಟ್ರಗಳು ಅತ್ಯಾಧುನಿಕ ಯುದ್ಧ ಟ್ಯಾಂಕ್‌ಗಳನ್ನು ಉಕ್ರೇನ್‌ಗೆ ಪೂರೈಸಲು ಸಮ್ಮತಿಸಿದ ಮರು ದಿನವೇ ರಷ್ಯಾ, ಗುರುವಾರ ನಸುಕಿನವರೆಗೆ ಮಾರಕ ದಾಳಿ ನಡೆಸಿತ್ತು. ಇದರಿಂದ ಉಕ್ರೇನ್ ಪ್ರಮುಖ ಇಂಧನ ಮೂಲಸೌಕರ್ಯಗಳು ಹಾನಿಗೀಡಾಗಿವೆ. ಅಲ್ಲದೆ, 11 ಮಂದಿ ನಾಗರಿಕರು ಮೃತಪಟ್ಟಿದ್ದರು. ಶುಕ್ರವಾರ ಕೆರ್ಸಾನ್ ನಗರದ ಮೇಲೆ ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಯಲ್ಲಿ ಉಕ್ರೇನ್‌ನ 10 ನಾಗರಿಕರು ಸಾವನ್ನಪ್ಪಿದ್ದಾರೆ.

ಸೇನಾ ಸಾಮರ್ಥ್ಯ ಹೆಚ್ಚಿಸುವಂತಹ ವಸ್ತುಗಳನ್ನು ರಷ್ಯಾದ 49 ಸಂಸ್ಥೆಗಳಿಗೆ ರಫ್ತು ಮಾಡದಂತೆ ನಿಷೇಧಿಸಲಾಗಿದೆ. ಇದು ಫೆ.3ರಿಂದ ಜಾರಿಯಾಗಲಿದೆ. ಹೊಸ ನಿರ್ಬಂಧಗಳ ಪಟ್ಟಿಯಲ್ಲಿ ಜಲಫಿರಂಗಿಗಳು, ಅನಿಲ ಪರಿಶೋಧನಾ ಉಪಕರಣಗಳು, ಸೆಮಿಕಂಡಕ್ಟರ್‌ಗಳು, ಲಸಿಕೆಗಳು, ಸ್ಫೋಟಕಗಳು ಮತ್ತು ರೋಬೋಟ್ ಉತ್ಪನ್ನಗಳು ಸೇರಿವೆ ಎಂದು ಆರ್ಥಿಕ, ವ್ಯಾಪಾರ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ರಂಗೋಲಿ: ಭಾರತೀಯ ತಾಯಿ– ಮಗಳ ಸಾಧನೆ

ಸಿಂಗಪುರ(ಪಿಟಿಐ): ತಮಿಳಿನ ಪ್ರಸಿದ್ಧ ಕವಿಗಳಾದ ತಿರುವಳ್ಳುವರ್, ಅವ್ವಯ್ಯಾರ್, ಭಾರತೀಯಾರ್ ಹಾಗೂ ಭಾರತೀದಾಸನ್ ಅವರನ್ನು 26 ಸಾವಿರ ಐಸ್‌ಕ್ರೀಮ್ ಕಡ್ಡಿಗಳಿಂದ 6 ಅಡಿ ಉದ್ದ, 6 ಅಡಿ ಅಗಲದಲ್ಲಿ ಭಾರತೀಯ ತಾಯಿ–ಮಗಳ ಜೋಡಿ ಬಿಡಿಸಿದ ರಂಗೋಲಿಯು ಈಗ ಸಿಂಗಪುರ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆಗೊಂಡಿದೆ.

ತಮಿಳು ಸಾಂಸ್ಕೃತಿಕ ಸಂಘ ‘ಕಲಾಮಂಜರಿ’ ಹಾಗೂ ಲಿಟಲ್ ಇಂಡಿಯಾ ಶಾಪ್‌ಕೀಪರ್ಸ್ ಆ್ಯಂಡ್ ಹೆರಿಟೇಜ್ ಅಸೋಸಿಯೇಷನ್ ಅವರು ಸಂಕ್ರಾಂತಿ ಸಂಬಂಧ ಇಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸುಧಾ ರವಿ ಅವರು ರಂಗೋಲಿ ಬಿಡಿಸಿದರು.

ಸುಧಾ ರವಿ ಅವರು ತಮ್ಮ ಮಗಳು ರಕ್ಷಿತಾ ಅವರೊಂದಿಗೆ 2016ರಲ್ಲಿ 3 ಸಾವಿರ ಚದರ ಅಡಿ ಅಳತೆಯಲ್ಲಿ ಬಿಡಿಸಿದ ರಂಗೋಲಿಯೂ ದಾಖಲೆ ಪುಸ್ತಕದ ಪಟ್ಟಿಯಲ್ಲಿದೆ.

‘ಯಾದಗಿರಿಯಿಂದ ಸಿದ್ದರಾಮಯ್ಯ ಸ್ಪರ್ಧಿಸಿದರೆ ₹ 1 ಕೋಟಿ’

ಯಾದಗಿರಿ: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಯಾದಗಿರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದರೆ ನನ್ನ ಆಸ್ತಿ ಮಾರಿ ₹1 ಕೋಟಿ ನೀಡುವೆ’ ಎಂದು ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಚಂದ್ರರಾಯ ನಾಗರಾಳ ಹುಲಕಲ್ ಹೇಳಿದರು.

‘ನಾನು ಬಿಜೆಪಿ ಕಾರ್ಯಕರ್ತನಾಗಿದ್ದರೂ ಪಕ್ಷ ತೊರೆದು ಕಾಂಗ್ರೆಸ್ ಸೇರುವೆ. ಸಿದ್ದರಾಮಯ್ಯ ಅವರ ಚುನಾವಣಾ ಖರ್ಚು ನಿಭಾಯಿಸುವೆ. ಅವರು ಸ್ಪರ್ಧಿಸಿದರೆ, ಯಾದಗಿರಿ ಸೇರಿ ಇಡೀ ಜಿಲ್ಲೆ ಅಭಿವೃದ್ಧಿಯಾಗುವುದು’ ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಯತ್ನಾಳಗೆ ನೋಟಿಸ್

ಹುಬ್ಬಳ್ಳಿ: ‘ಸರ್ಕಾರ ಮತ್ತು ಪಕ್ಷದ ನಾಯಕರ ವಿರುದ್ಧ ಬಹಿರಂಗವಾಗಿ ಅವಹೇಳನಕಾರಿ ಭಾಷೆ ಬಳಸಿ ಮಾತನಾಡುವ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಪಕ್ಷದಿಂದ ನೋಟಿಸ್ ನೀಡಲಾಗಿದೆ. ಮುಂದೆ ಈ ರೀತಿ ಮಾತಾಡುವುದಿಲ್ಲ ಎಂದೂ ಅವರು ಹೇಳಿದ್ದಾರೆ’ ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಸ್ಪಷ್ಟಪಡಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಯಾರ ಬಗ್ಗೆಯೂ ಹೀಗಳೆಯುವ ಭಾಷೆಯಲ್ಲಿ ಮಾತನಾಡದಂತೆ ಯತ್ನಾಳ ಅವರಿಗೆ ಹಿಂದೆಯೂ ಸೂಚನೆ ನೀಡಲಾಗಿತ್ತು’ ಎಂದರು.

ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ವಿಶ್ವಾಸ

‘ಕೆಎಲ್‌ಇ ಸಂಸ್ಥೆಗಳ ಸಂಖ್ಯೆ 500ಕ್ಕೆ ತಲುಪಲಿದೆ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕೆಎಲ್‌ಇ ಸಂಸ್ಥೆಯು ಈಗ 300 ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದು, ಮುಂದಿನ 20 ವರ್ಷಗಳಲ್ಲಿ ಈ ಸಂಖ್ಯೆ 500ಕ್ಕೆ ತಲುಪಲಿದೆ’ ಎಂದು ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಹೇಳಿದರು.

ವಿದ್ಯಾನಗರದಲ್ಲಿರುವ ಕೆಎಲ್‌ಇ ಸಂಸ್ಥೆಯ ಬಿ.ವಿ. ಭೂಮರಡ್ಡಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜಿನ ಅಮೃತ ಮಹೋತ್ಸವದ ಅಂಗವಾಗಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ, 75 ವರ್ಷ ಪೂರ್ಣಗೊಳಿಸಿದ ತಮಗೆ ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

‘ಸಂಸ್ಥೆಯಲ್ಲಿ 1.48 ಲಕ್ಷ ವಿದ್ಯಾರ್ಥಿಗಳು, 18 ಸಾವಿರ ಶಿಕ್ಷಕರಿದ್ದಾರೆ. ಶಿಕ್ಷಣ ಸಂಸ್ಥೆಯಲ್ಲಿ ಓದಿದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್ ಮುಖ್ಯಮಂತ್ರಿ ಹುದ್ದೆಗೇರಿದ್ದಾರೆ. ಲೇಖಕಿ ಸುಧಾ ನಾರಾಯಣಮೂರ್ತಿ ವಿಶ್ವಮಟ್ಟಕ್ಕೆ ಬೆಳೆದಿದ್ದಾರೆ. ಇಂತಹ ನೂರಾರು ಜನರು ದೇಶ–ವಿದೇಶಗಳಲ್ಲಿ ಹೆಸರು ಮಾಡಿದ್ದಾರೆ’ ಎಂದು ಪ್ರಶಂಸಿಸಿದರು. ಉದ್ಯಮಿ ವಿಜಯ ಸಂಕೇಶ್ವರ ಮಾತನಾಡಿ, ‘ಜಗತ್ತೇ ನಿಬ್ಬೆರಗಾಗಿ ನೋಡುವಂತೆ 300 ಶಿಕ್ಷಣ ಸಂಸ್ಥೆಗಳನ್ನು, ವೈದ್ಯಕೀಯ ಕಾಲೇಜು, ಕ್ಯಾನ್ಸರ್ ಆಸ್ಪತ್ರೆ, ಆಯುರ್ವೇದ ಕಾಲೇಜುಗಳನ್ನು ಕೋರೆ ಸ್ಥಾಪಿಸಿದ್ದಾರೆ’ ಎಂದರು.



ಹುಬ್ಬಳ್ಳಿಯ ವಿದ್ಯಾನಗರದಲ್ಲಿರುವ ಕೆಎಲ್‌ಇ ಸಂಸ್ಥೆಯ ಬಿವಿಬಿ ಎಂಜಿನಿಯರಿಂಗ್ ಕಾಲೇಜಿನ 75ನೇ ವರ್ಷಾಚರಣೆ ಸಂದರ್ಭದಲ್ಲಿ ಶುಕ್ರವಾರ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಪತ್ನಿ ಆಶಾ ಕೋರೆ ಅವರನ್ನು ಸನ್ಮಾನಿಸಲಾಯಿತು. ಶಾಸಕ ಜಗದೀಶ ಶೆಟ್ಟರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಕೌಜಲಗಿ, ವಿಶ್ವನಾಥ ಪಾಟೀಲ, ಉದ್ಯಮಿ ವಿಜಯ ಸಂಕೇಶ್ವರ, ಕುಲಪತಿ ಅಶೋಕ ಶೆಟ್ಟರ್ ಉಪಸ್ಥಿತರಿದ್ದರು

ದೇಶದ ಹಲವೆಡೆ 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ವೀಕ್ಷಣೆಗೆ ವಿದ್ಯಾರ್ಥಿಗಳ ಯತ್ನ, ವಿ.ವಿಗಳಿಂದ ತಡೆ

ಸಾಕ್ಷ್ಯಚಿತ್ರ ಪ್ರದರ್ಶನ: ನಿಲ್ಲದ ಜಟಾಪಟಿ

ಬಿಬಿಸಿ ನಿರ್ಮಿಸಿರುವ 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರ ಪ್ರದರ್ಶನ ವಿಚಾರದಲ್ಲಿ ನಡೆಯುತ್ತಿರುವ ಜಟಾಪಟಿ ಮುಂದುವರಿದಿದೆ. ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ 'ದಿ ಕಾಶ್ಮೀರ್ ಫೈಲ್ಸ್' ಚಲನಚಿತ್ರವನ್ನು ಪ್ರದರ್ಶಿಸಲಾಗಿದೆ. ದೆಹಲಿಯ ಅಂಬೇಡ್ಕರ್ ವಿಶ್ವವಿದ್ಯಾಲಯ, ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಪ್ರದರ್ಶನಕ್ಕೆ ತಡೆ ಒಡ್ಡಲಾಗಿದೆ. ಜೆಎನ್‌ಯು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ

● **'ಅಂಬೇಡ್ಕರ್ ವಿ.ವಿಯಲ್ಲಿ ವಿದ್ಯುತ್ ಕಡಿತ':** ದೆಹಲಿಯ ಅಂಬೇಡ್ಕರ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಪೊಲೀಸರು ತಡೆ ನೀಡಿದ್ದಾರೆ ಎಂದು ಎಸ್‌ಎಫ್‌ಐ ಆರೋಪಿಸಿದೆ. ಸ್ಥಳದಲ್ಲಿ ಶಾಂತಿ ಕಾಪಾಡುವ ಉದ್ದೇಶದಿಂದ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಭೇಟಿ ನೀಡಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ. ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಸಾಕ್ಷ್ಯಚಿತ್ರ ಪ್ರದರ್ಶನಕ್ಕೂ ಮುನ್ನ ವಿದ್ಯುತ್ ಪೂರೈಕೆಯನ್ನು ಕಡಿತಗೊಳಿಸಿತ್ತು ಎಂದು ಸಂಘಟನೆ ಆರೋಪಿಸಿದೆ. ಆದರೂ, ವಿದ್ಯಾರ್ಥಿಗಳು ಮೊಬೈಲ್ ಫೋನ್‌ಗಳಲ್ಲಿ ಸಾಕ್ಷ್ಯಚಿತ್ರ ವೀಕ್ಷಿಸಿದರು. ಜೆಎನ್‌ಯು ಹಾಗೂ ಜಾಮಿಯಾ ವಿಶ್ವವಿದ್ಯಾಲಯದಲ್ಲಿ ಎಬಿವಿಪಿ ನಡೆಸಿದ ಹಿಂಸಾಚಾರವನ್ನು ಖಂಡಿಸಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ (ಎಐಎಸ್‌ಎ) ಪ್ರತಿಭಟನೆಗೆ ಕರೆ ನೀಡಿತ್ತು. ಅಂಬೇಡ್ಕರ್ ವಿಶ್ವವಿದ್ಯಾಲಯದ ಆವರಣವನ್ನು ಪೊಲೀಸರು ಪ್ರವೇಶಿಸಿದ್ದು ಏಕೆ ಎಂದು ಎಐಎಸ್‌ಎ ಪ್ರಶ್ನಿಸಿದೆ.

● **ಜೆಎನ್‌ಯುದಲ್ಲಿ ಎಬಿವಿಪಿ ವಿರುದ್ಧ ಪ್ರತಿಭಟನೆ:** ಆರ್‌ಎಸ್‌ಎಸ್ ಬೆಂಬಲಿತ ವಿದ್ಯಾರ್ಥಿ ಸಂಘಟನೆ ಎಬಿವಿಪಿಯ ಗೂಂಡಾಗಿರಿ ಖಂಡಿಸಿ ಎಡಪಕ್ಷಗಳ ವಿವಿಧ ವಿದ್ಯಾರ್ಥಿ ಸಂಘಟನೆಗಳು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಗುರುವಾರ ಪ್ರತಿಭಟನೆ ನಡೆಸಿದವು. ವಿಶ್ವವಿದ್ಯಾಲಯದಲ್ಲಿ ಮಂಗಳವಾರ ರಾತ್ರಿ ಸಾಕ್ಷ್ಯಚಿತ್ರ ಪ್ರದರ್ಶನ ಆಯೋಜಿಸಿದ್ದಾಗ ಕಲ್ಲುತೂರಾಟ ನಡೆಸಿದ್ದನ್ನು ಪ್ರತಿಭಟನಾನಿರತರು ಖಂಡಿಸಿದರು. ಕ್ಯಾಂಪಸ್‌ನ ಗಂಗಾ ಢಾಬಾದಿಂದ ಚಂದ್ರಭಾಗ್ ಹಾಸ್ಟೆಲ್‌ವರೆಗೆ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು.



ಕೋಲ್ಕತ್ತದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರ ಪ್ರದರ್ಶಿಸಲಾದ ಬಿಬಿಸಿ ಸಾಕ್ಷ್ಯಚಿತ್ರವನ್ನು ಎಸ್‌ಎಫ್‌ಐ ಸದಸ್ಯರು ವೀಕ್ಷಿಸಿದರು —ಪಿಟಿಐ ಚಿತ್ರ

● **'ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಪ್ರದರ್ಶನ':** ತಮಿಳುನಾಡಿನಲ್ಲಿ ಬಿಬಿಸಿ ಸಾಕ್ಷ್ಯಚಿತ್ರ ವೀಕ್ಷಿಸಿದ ಆರೋಪದ ಮೇಲೆ ಸಿಪಿಎಂ ಕೌನ್ಸಿಲರ್ ಸೇರಿದಂತೆ ಕೆಲವರನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದನ್ನು ಸಿಪಿಎಂ ಖಂಡಿಸಿದೆ. ರಾಜ್ಯದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಸಾಕ್ಷ್ಯಚಿತ್ರ ಪ್ರದರ್ಶಿಸಲು ಬೆಂಬಲ ನೀಡುವುದಾಗಿ ಪಕ್ಷದ ಕಾರ್ಯದರ್ಶಿ ಕೆ. ಬಾಲಕೃಷ್ಣನ್ ಅವರು ಹೇಳಿದ್ದಾರೆ. ಪಕ್ಷದ ಕಚೇರಿಯಲ್ಲಿ ಶುಕ್ರವಾರ ಸಂಜೆ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಆದರೆ ಮದ್ರಾಸ್ ವಿಶ್ವದ್ಯಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರದರ್ಶನಕ್ಕೆ ತಡೆ ಒಡ್ಡಲಾಯಿತು. ಹೀಗಾಗಿ, ವಿದ್ಯಾರ್ಥಿಗಳು ಲ್ಯಾಪ್‌ಟಾಪ್ ಹಾಗೂ ಮೊಬೈಲ್‌ಗಳಲ್ಲಿ ಸಾಕ್ಷ್ಯಚಿತ್ರ ವೀಕ್ಷಿಸಿದರು. 'ಇದು ಸರ್ಕಾರದ ವಿಶ್ವವಿದ್ಯಾಲಯವಾಗಿದ್ದು, ಏನೇ ಮಾಡುವುದಿದ್ದರೂ ಸರ್ಕಾರದ ನಿರ್ದೇಶನ ಬೇಕು' ಎಂದು ಕುಲಪತಿ ಡಾ. ಎಸ್. ಗೌರಿ ಅವರು ಹೇಳಿದ್ದಾರೆ. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಗುರುವಾರ ಪ್ರದರ್ಶನ ನಡೆಯಿತು.

● **100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ವೀಕ್ಷಣೆ:** ಕೋಲ್ಕತ್ತದ ಜಾಧವಪುರ ವಿಶ್ವವಿದ್ಯಾಲಯದಲ್ಲಿ ಬಿಬಿಸಿ ಸಾಕ್ಷ್ಯಚಿತ್ರವನ್ನು ಗುರುವಾರ ರಾತ್ರಿ ಪ್ರದರ್ಶಿಸಲಾಯಿತು. ಎಸ್‌ಎಫ್‌ಐ ಆಯೋಜಿಸಿದ್ದ ಸಾಕ್ಷ್ಯಚಿತ್ರ ಪ್ರದರ್ಶನದಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

● **ಜಾಮಿಯಾ– ಶುಕ್ರವಾರದ ತರಗತಿ ಬಂದ್:** ಸಾಕ್ಷ್ಯಚಿತ್ರ ಪ್ರದರ್ಶನ ವಿಚಾರಕ್ಕೆ ಗಲಾಟೆ ನಡೆದಿದ್ದ ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯದಲ್ಲಿ ಶುಕ್ರವಾರದ ತರಗತಿಗಳನ್ನು ರದ್ದುಗೊಳಿಸಿ ಆಡಳಿತ ಮಂಡಳಿ ಆದೇಶಿಸಿತ್ತು

ಆಧಾರ: ಪಿಟಿಐ

'ದಿ ಕಾಶ್ಮೀರ್ ಫೈಲ್ಸ್' ಚಿತ್ರ ಪ್ರದರ್ಶನ

ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಎಸ್‌ಎಫ್‌ಐ ವತಿಯಿಂದ ಗುರುವಾರ ಏರ್ಪಡಿಸಿದ್ದ ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನವನ್ನು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೀಕ್ಷಿಸಿದರು ಎಂದು ಸಂಘಟನೆ ಹೇಳಿದೆ. ಇದಕ್ಕೆ ತಿರುಗೇಟು ನೀಡುವ ರೀತಿಯಲ್ಲಿ, ಇದೇ ಕ್ಯಾಂಪಸ್‌ನಲ್ಲಿ ಎಬಿವಿಪಿ ವತಿಯಿಂದ 'ದಿ ಕಾಶ್ಮೀರ್ ಫೈಲ್ಸ್' ಚಿತ್ರ ಪ್ರದರ್ಶನವೂ ನಡೆಯಿತು. ಆದರೆ, ಚಿತ್ರ ಪ್ರದರ್ಶನಕ್ಕೆ ಆಡಳಿತ ಮಂಡಳಿ ಆರಂಭದಲ್ಲಿ ಅಡ್ಡಿಪಡಿಸಿತು ಎಂದು ಎಬಿವಿಪಿ ಆರೋಪಿಸಿದೆ. ವಿದ್ಯಾರ್ಥಿಗಳ ಮೇಲೆ ಭದ್ರತಾ ಸಿಬ್ಬಂದಿ ಹಲ್ಲೆ ನಡೆಸಿದರು ಎಂದು ಸಂಘಟನೆ ಆರೋಪಿಸಿದೆ. ಎಸ್‌ಎಫ್‌ಐಗೆ ಸಾಕ್ಷ್ಯಚಿತ್ರ ಪ್ರದರ್ಶಿಸಲು ಅನುಮತಿ ನೀಡಿರುವಾಗ, ತಮಗೆ ಕಾಶ್ಮೀರ್ ಫೈಲ್ಸ್ ಚಿತ್ರ ಪ್ರದರ್ಶಿಸಲು ಏಕೆ ಅವಕಾಶ ಇಲ್ಲ ಎಂದು ಪ್ರಶ್ನಿಸಿ ಪ್ರತಿಭಟನೆಯನ್ನೂ ನಡೆಸಲಾಯಿತು ಎಂದು ಎಬಿವಿಪಿ ಹೇಳಿದೆ. ಜನವರಿ 21ರಂದು ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಗಮನಕ್ಕೆ ತಾರದೇ ಫ್ರಟರ್ನಿಟಿ ಮೂವ್‌ಮೆಂಟ್ ವಿದ್ಯಾರ್ಥಿ ಸಂಘಟನೆಯು ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶಿಸಿದ್ದರ ಬಗ್ಗೆ ವರದಿ ನೀಡುವಂತೆ ಸೂಚಿಸಲಾಗಿದೆ.


ಸುದ್ದಿ 2 ನಿಮಿಷ

ದಕ್ಷಿಣ ಆಫ್ರಿಕಾದಿಂದ ಮುಂದಿನ ತಿಂಗಳು 12 ಚೀತಾ ಭಾರತಕ್ಕೆ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ 12 ಚೀತಾಗಳನ್ನು ತರುವುದಕ್ಕೆ ಸಂಬಂಧಿಸಿದಂತೆ ನವದೆಹಲಿ ಮತ್ತು ಪ್ರಿಟೋರಿಯಾ ನಡುವೆ ಕಳೆದ ವಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ಕೇಂದ್ರ ಪರಿಸರ ಸಚಿವಾಲಯದ ಅಧಿಕಾರಿ ತಿಳಿಸಿದ್ದಾರೆ.

ಫೆಬ್ರುವರಿ ಮಧ್ಯಭಾಗದ ವೇಳೆಗೆ ಏಳು ಗಂಡು ಮತ್ತು ಐದು ಹೆಣ್ಣು ಚೀತಾಗಳನ್ನು ಮಧ್ಯ ಪ್ರದೇಶದ ಕೂನೊ ರಾಷ್ಟ್ರೀಯ ಉದ್ಯಾನಕ್ಕೆ ಕರೆ ತರುವ ನಿರೀಕ್ಷೆಯಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅವರು ತಿಳಿಸಿದ್ದಾರೆ.

ಕಳೆದ ಆರು ತಿಂಗಳಿಗೂ ಹೆಚ್ಚು ಸಮಯದಿಂದ ಕ್ವಾರಂಟೈನ್‌ನಲ್ಲಿರುವ ಚೀತಾಗಳನ್ನು, ಇದೇ ತಿಂಗಳಲ್ಲಿ ಭಾರತಕ್ಕೆ ತರುವ ನಿರೀಕ್ಷೆ ಇಟ್ಟುಕೊಳ್ಳಲಾಗಿತ್ತು. ಆದರೆ ದಕ್ಷಿಣ ಆಫ್ರಿಕಾದ ಅಧ್ಯಕ್ಷರ ಸಹಿ ವಿಳಂಬಗೊಂಡಿದ್ದರಿಂದ ಹಸ್ತಾಂತರ ವಿಳಂಬಗೊಂಡಿತು. ಪ್ರತಿಯೊಂದು ಚೀತಾಕ್ಕೂ 3 ಸಾವಿರ ಡಾಲರ್ ಪಾವತಿಸಲಾಗುತ್ತದೆ ಎಂದು ಹೇಳಿದ್ದಾರೆ.



ಕಳೆದ ವರ್ಷ ಸೆಪ್ಟೆಂಬರ್ 17ರಂದು ನಮೀಬಿಯಾದಿಂದ ಎಂಟು ಚೀತಾಗಳನ್ನು ಕೂನೊ ರಾಷ್ಟ್ರೀಯ ಉದ್ಯಾನಕ್ಕೆ ತರಲಾಗಿತ್ತು.

ಮೋರ್ಬಿ ದುರಂತ: 1,252 ಪುಟಗಳ ಆರೋಪಪಟ್ಟಿ ದಾಖಲು

ಅಹಮದಾಬಾದ್: ಮೋರ್ಬಿ ತೂಗು ಸೇತುವೆ ಕುಸಿತ ಅವಘಡದ ಆರೋಪಿ, ಗಡಿಯಾರ ತಯಾರಿಕೆ ಕಂಪನಿ ಒರೆವಾ ಸಮೂಹದ ಮಾಲೀಕ ಜಯ್‌ಸುಖ್ ಪಟೇಲ್ ವಿರುದ್ಧ ಪೊಲೀಸರು ದೋಷಾರೋಪ ಪಟ್ಟಿ ದಾಖಲಿಸಿದ್ದಾರೆ.

10 ಮಂದಿ ವಿರುದ್ಧ ಆರೋಪಪಟ್ಟಿ ದಾಖಲಿಸಿದ್ದು, ಪಟೇಲ್‌ರನ್ನು 10ನೇ ಆರೋಪಿಯಾಗಿ ಹೆಸರಿಸಲಾಗಿದೆ. ಅಕ್ಟೋಬರ್ 30ರಂದು ನಡೆದಿದ್ದ ಅವಘಡದಲ್ಲಿ 135 ಜನ ಮೃತಪಟ್ಟಿದ್ದು, 50 ಮಂದಿ ಗಾಯಗೊಂಡಿದ್ದರು.

ತೂಗು ಸೇತುವೆ ನಿರ್ವಹಣೆಯಲ್ಲಿ ಅಗತ್ಯ ಕ್ರಮವಹಿಸದೇ ನಿರ್ಲಕ್ಷ್ಯ ವಹಿಸಿದ ಆರೋಪದಡಿ ಎಂದು ಮೋರ್ಬಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ತ್ರಿಪಾಠಿ ತಿಳಿಸಿದ್ದಾರೆ. ಪಟೇಲ್ ಹೊರತುಪಡಿಸಿ ಇತರ 9 ಆರೋಪಿಗಳನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ.

ಒಟ್ಟು 1,252 ಪುಟಗಳ ಆರೋಪ ಪಟ್ಟಿಯಲ್ಲಿ ಮೃತರ ವಿವರಗಳು, ವಿಶೇಷ ತನಿಖಾ ತಂಡದ ವರದಿಗಳು ಇವೆ. ಒಟ್ಟು 357 ಸಾಕ್ಷಿಗಳನ್ನು ಹೆಸರಿಸಲಾಗಿದೆ. ಜಯ್‌ಸುಖ್ ಪಟೇಲ್ ಪ್ರಕರಣದ ಪ್ರಮುಖ ಆರೋಪಿ. ಆದರೆ, ಹಲವು ಬಾರಿ ಸಮನ್ಸ್ ಜಾರಿ ಮಾಡಿದ್ದರೂ ಅವರು ಒಮ್ಮೆಯೂ ಪೊಲೀಸರ ಎದುರು ವಿಚಾರಣೆಗೆ ಹಾಜರಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

'ಪರೀಕ್ಷಾ ಪೇ ಚರ್ಚಾ' ಸಂವಾದದಲ್ಲಿ ಪ್ರಧಾನಿ ಮೋದಿ ಅಭಿಮತ

'ಸಾಮಾನ್ಯ'ರಿಂದಲೇ ಬೆಳಗುತ್ತಿದೆ ಭಾರತ

ನವದೆಹಲಿ (ಪಿಟಿಐ): 'ನಮ್ಮ ಸಂಪತ್ತು 'ಸಾಮಾನ್ಯ' ಪ್ರತಿಭೆಗಳಿಂದ ತುಂಬಿದೆ. ಅಂಥವರಿಂದ ಆರ್ಥಿಕ ನಿರ್ವಹಣೆ ನಡೆಯುತ್ತಿದೆ ಎಂದು ಟೀಕಿಸಲಾಗಿತ್ತು. ಆದರೆ, ಅಂಥ 'ಸಾಮಾನ್ಯ' ಪ್ರತಿಭೆಯುಳ್ಳ ಜನರಿಂದಲೇ ಇಂದು ಜಗತ್ತಿನಲ್ಲಿ ಭಾರತವು ಪ್ರಕಾಶಿಸುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಲ್ಲಿನ ತಾಲ್‌ಕಟೋರಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 'ಪರೀಕ್ಷಾ ಪೇ ಚರ್ಚಾ 2023'ರ ಆರನೇ ಆವೃತ್ತಿಯಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 'ಟೀಕೆಗಳಿಂದಲೇ ಪ್ರಜಾಪ್ರಭುತ್ವವು ಸದೃಢವಾಗಿ ಹೊರಹೊಮ್ಮಲು ಸಾಧ್ಯ. ಟೀಕೆಯು ನಮ್ಮನ್ನು ಬಲಪಡಿಸುವ ಅಂಶವಾಗಿದೆ. ಆದರೆ, ಟೀಕೆ ಮತ್ತು ಆರೋಪಗಳ ನಡುವೆ ವಿಶಾಲವಾದ ಅಂತರವಿದೆ' ಎಂದರು.

ವಿದ್ಯಾರ್ಥಿಯೊಬ್ಬರ ಪ್ರಶ್ನೆಗೆ ಉತ್ತರಿಸಿದ ಅವರು, 'ಎರಡು–ಮೂರು ವರ್ಷಗಳ ಹಿಂದೆ ನಮ್ಮ ಸರ್ಕಾರದಲ್ಲಿ ಆರ್ಥಿಕ ತಜ್ಞರಿಲ್ಲ ಎಂದು ಬರೆಯಲಾಗಿತ್ತು. ನಮ್ಮ ಸರ್ಕಾರದಲ್ಲಿ 'ಸಾಮಾನ್ಯ' ಜನರೇ ಇದ್ದಾರೆ. ಪ್ರಧಾನಿಗೂ ಆರ್ಥಿಕ ತಿಳಿವಳಿಕೆ ಇಲ್ಲ ಎಂದೂ ಬರೆಯಲಾಗಿತ್ತು ಎಂಬುದನ್ನು ನೀವು ನೋಡಿದ್ದೀರಿ. ಆದರೆ, ಈಗ ಅದೇ 'ಸಾಮಾನ್ಯ'ರ ಆಡಳಿತವಿರುವ ದೇಶವು ಜಗತ್ತಿನಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತಿದೆ. ಜಾಗತಿಕ ಆರ್ಥಿಕತೆಯ ವಿಷಯವು ಚರ್ಚೆಯಾಗುವಾಗ, ಕೋವಿಡೋತ್ತರ ಯುಗದಲ್ಲಿ ಭಾರತವು ಭರವಸೆಯ ಕಿರಣವಾಗಿ ಹೊರಹೊಮ್ಮಿದೆ' ಎಂದರು.

'ಜಗತ್ತಿನಲ್ಲಿ ಅರ್ಥಶಾಸ್ತ್ರಜ್ಞರ ಕೊರತೆಯಿಲ್ಲ. ಆರ್ಥಿಕ ಪರಿಸ್ಥಿತಿಯಲ್ಲಿ ಯಾವ ರೀತಿಯ ಅವಕಾಶವು ಪರಿಣಾಮ ಬೀರುತ್ತದೆ ಎಂಬುದರ ಕುರಿತು ಮಾರ್ಗದರ್ಶನ ನೀಡಲು ಅನೇಕ ನೊಬೆಲ್ ಪ್ರಶಸ್ತಿ ಪುರಸ್ಕೃತರು ಇದ್ದಾರೆ. ಈ ದಿನಗಳಲ್ಲಿ ತಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸುವ ಜನರು ಮೂಲೆಮೂಲೆಗಳಲ್ಲಿ ಸಿಗುತ್ತಾರೆ' ಎಂದು ಅವರು ಪ್ರತಿಪಾದಿಸಿದರು.



ನವದೆಹಲಿಯ ತಾಲ್‌ಕಟೋರಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 'ಪರೀಕ್ಷಾ ಪೇ ಚರ್ಚಾ 2023' ಆರನೇ ಆವೃತ್ತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು —ಪಿಟಿಐ ಚಿತ್ರ

ಯಶಸ್ಸಿಗಾಗಿ ಅಡ್ಡದಾರಿ ಹಿಡಿಯದಿರಿ: ಮೋದಿ ಕಿವಿಮಾತು

ವಿದ್ಯಾರ್ಥಿಗಳು ಪರೀಕ್ಷಾ ಯಶಸ್ಸಿಗಾಗಿ ಎಂದಿಗೂ ಅಡ್ಡದಾರಿ ಹಿಡಿಯಬಾರದು. ಮೋಸದ ಪ್ರವೃತ್ತಿಯು ನಿಮಗೆ ಅಥವಾ ಮತ್ತೊಬ್ಬರಿಗೆ ಪರೀಕ್ಷೆಯಲ್ಲಿ ಸಹಾಯಕ್ಕೆ ಬರಬಹುದು. ಆದರೆ, ದೀರ್ಘಾವಧಿಯಲ್ಲಿ ಅದು ಉಪಯೋಗಕ್ಕೆ ಬರುವುದಿಲ್ಲ. ಜೀವನದಲ್ಲಿ ಮುನ್ನಡೆ ಸಾಧಿಸಲು ಕಠಿಣ ಪರಿಶ್ರಮ ಮಾತ್ರ ಸಹಾಯವಾಗುತ್ತದೆ' ಎಂದು ಪ್ರಧಾನಿ ಮೋದಿ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ.

'ಗ್ಯಾಜೆಟ್‌ಗಳ ಅತಿಯಾದ ಬಳಕೆಯು ಅಪಾಯಕಾರಿ. ಮೊಬೈಲ್ ಫೋನ್‌ನ ಸ್ಮಾರ್ಟ್‌ನೆಸ್ ಅನ್ನು ನಂಬುವುದಕ್ಕಿಂತ ನಿಮ್ಮಲ್ಲಿನ ಸ್ಮಾರ್ಟ್‌ನೆಸ್ ಮೇಲೆ ನಂಬಿಕೆ ಇಡಿ. ತಂತ್ರಜ್ಞಾನದಿಂದ ವಿಚಲಿತರಾಗಬೇಡಿ. ಸಾಮಾಜಿಕ ಮಾಧ್ಯಮಗಳಲ್ಲಿನ ಸಂವಹನಕ್ಕಾಗಿ ನೀವು ಮೊಬೈಲ್ ಫೋನ್ ಬಳಸುವಾಗ ಅದಕ್ಕಾಗಿಯೇ ಪ್ರತ್ಯೇಕ ಸಮಯ ನಿಗದಿಪಡಿಸಿಕೊಳ್ಳಿ' ಎಂದೂ ಅವರು ಹೇಳಿದ್ದಾರೆ.

'ಪರೀಕ್ಷಾ ಫಲಿತಾಂಶದ ಬಗ್ಗೆ ಕುಟುಂಬದ ಸದಸ್ಯರು ನಿರೀಕ್ಷೆಗಳನ್ನು ಹೊಂದಿರುವುದು ಸಹಜ. ಆದರೆ, ಅದನ್ನೇ ಸಾಮಾಜಿಕ ಪ್ರತಿಷ್ಠೆಯನ್ನಾಗಿ ಪರಿಗಣಿಸುವುದು ತಪ್ಪು. ಅಂತೆಯೇ, ವಿದ್ಯಾರ್ಥಿಗಳು ಪರೀಕ್ಷಾ ಫಲಿತಾಂಶವೇ ಜೀವನದ ಅಂತ್ಯವಲ್ಲ ಎಂಬುದನ್ನು ಮನಗಾಣಬೇಕು' ಎಂದೂ ಮೋದಿ ಕಿವಿಮಾತು ಹೇಳಿದ್ದಾರೆ.

'10 ಮತ್ತು 12ನೇ ತರಗತಿಯ ಪರೀಕ್ಷೆಗಳು ಮುಗಿದ ಬಳಿಕ ಪೋಷಕರು ತಮ್ಮ ಮಕ್ಕಳಿಗೆ ಸ್ವಲ್ಪ ಹಣವನ್ನು ಸಣ್ಣ ಪ್ರವಾಸ ಕೈಗೊಳ್ಳಲು ಸೂಚಿಸಬೇಕು. ಆ ಪ್ರವಾಸಿ ತಾಣಗಳ ಬಗ್ಗೆ ಬರೆಯಲು ಹೇಳಬೇಕು' ಎಂದು ಪ್ರಧಾನಿ ಅವರು ಪೋಷಕರಿಗೆ ಸಲಹೆ ನೀಡಿದ್ದಾರೆ.

44 ದಿನದ ಕೂಲಿ ಕೊಡಿಸಿ: ಪ್ರಧಾನಿಗೆ ಮೊರೆ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವ ಪರೇಡ್‌ನಲ್ಲಿ ವಿಶೇಷ ಅತಿಥಿಯಾಗಿ ಪಾಲ್ಗೊಂಡಿದ್ದ ಹೂದೋಟದ ಕೆಲಸಗಾರ ಸುಖ್ ನಂದನ್ ಅವರು ಗುತ್ತಿಗೆದಾರನಿಂದ ಬರಬೇಕಾದ 44 ದಿನದ ಕೂಲಿ ಕೊಡಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ಸೆಂಟ್ರಲ್ ವಿಸ್ತಾ ಕೆಲಸದಲ್ಲಿ ತೊಡಗಿದ್ದ ಕಾರ್ಮಿಕರಿಗೆ ಗಣರಾಜ್ಯೋತ್ಸವಕ್ಕೆ ವಿಶೇಷ ಆಹ್ವಾನ ನೀಡಲಾಗಿತ್ತು. ಅವರಲ್ಲಿ 44 ವರ್ಷದ ಸುಖ್ ನಂದನ್ ಕೂಡ ಒಬ್ಬರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಕ್ಕೆ ಸಂತೋಷವಾಗಿತ್ತು.

'ಅವಕಾಶ ನೀಡಿದರೆ ಪ್ರಧಾನಿಯವರಲ್ಲಿ ಏನು ಕೇಳುತ್ತೀರಿ' ಎಂಬ ಪ್ರಶ್ನೆಗೆ, 'ಹಿಂದೆ ಕೆಲಸ ಮಾಡಿದ್ದ ಆಂಧ್ರ ಭವನ್ ಯೋಜನೆ ಗುತ್ತಿಗೆದಾರ ತಿಂಗಳಿಗೆ ₹14,586ರಂತೆ ₹21 ಸಾವಿರ ಕೂಲಿ ನೀಡಬೇಕು. ಆದರೆ ಕೇವಲ ₹6 ಸಾವಿರ ನೀಡುತ್ತೇನೆ ಎನ್ನುತ್ತಿದ್ದಾರೆ. ಕೂಲಿ ಬಾಕಿ ಇಟ್ಟಿದ್ದಕ್ಕಾಗಿ ಅವರ ಬ್ರಷ್ ಕಟರ್ ನನ್ನ ಬಳಿ ಇಟ್ಟುಕೊಂಡಿದ್ದೇನೆ. ಬಾಕಿ ಹಣ ಕೊಟ್ಟರೆ ಕಟರ್ ಹಿಂದಿರುಗಿಸುತ್ತೇನೆ. ಪ್ರಧಾನಿ ಬಾಕಿ ಹಣ ಕೊಡಿಸಲಿ' ಎಂದರು.

ಗುತ್ತಿಗೆದಾರ ಸಹ ಕೂಲಿ ಬಾಕಿ ಇರುವುದನ್ನು ಒಪ್ಪಿಕೊಂಡಿದ್ದಾರೆ.

24 ವಿದ್ಯಾರ್ಥಿಗಳು ಪೊಲೀಸ್ ವಶಕ್ಕೆ

ಒಂದನೇ ಪುಟದಿಂದ...

ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಮುಂದಾದವರು ವಿದ್ಯಾರ್ಥಿಗಳಲ್ಲ, ಹೊರಗಿನವರು. ಈ ಬಗ್ಗೆ ನಾವು ದೂರು ನೀಡಿದ್ದರಿಂದಲೇ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ ಎಂದು ವಿ.ವಿಯ ಕುಲಸಚಿವ ವಿಕಾಸ್ ಗುಪ್ತಾ ಹೇಳಿದ್ದಾರೆ. ಆದರೆ, ವಶಕ್ಕೆ ಪಡೆದ 24 ಮಂದಿಯೂ ವಿದ್ಯಾರ್ಥಿಗಳು ಎಂದು ಉತ್ತರ ದೆಹಲಿ ಡಿಸಿಪಿ ಸಾಗರ್ ಸಿಂಗ್ ಕಲ್ಸಿ ದೃಢಪಡಿಸಿದ್ದಾರೆ.

ಜಾಕ್ವೆಲಿನ್ ಪ್ರವಾಸಕ್ಕೆ ದೆಹಲಿ ಕೋರ್ಟ್ ಅನುಮತಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆರೋಪಿಯಾಗಿರುವ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಅವರು ದುಬೈ ಪ್ರವಾಸ ಕೈಗೊಳ್ಳಲು ದೆಹಲಿ ಕೋರ್ಟ್ ಶುಕ್ರವಾರ ಅನುಮತಿ ನೀಡಿದೆ.

ವಿದೇಶದಲ್ಲಿ ನಡೆಯುವ ಸಮಾವೇಶ ಒಂದರಲ್ಲಿ ಭಾಗವಹಿಸಲು ತಮಗೆ ಅನುಮತಿ ನೀಡಬೇಕೆಂದು ಕೋರಿ ನಟಿ ಅರ್ಜಿ ಸಲ್ಲಿಸಿದ್ದರು.

ಅಕ್ಕಿ ತಿನ್ನುವ ಆಸೆ: ಕಾಡಾನೆಯಿಂದ ಪಡಿತರ ಅಂಗಡಿ ಧ್ವಂಸ

ಇಡುಕ್ಕಿ (ಪಿಟಿಐ): ಅಕ್ಕಿ ತಿನ್ನುವ ಆಸೆಯಿಂದ ಕಾಡಾನೆಯೊಂದು ಪಡಿತರ ಅಂಗಡಿಯನ್ನೇ ಧ್ವಂಸಗೊಳಿಸಿದ ಪ್ರಸಂಗ ಜಿಲ್ಲೆಯ ಸಂತಾನಪಾರಾ ಎಂಬಲ್ಲಿ ಶುಕ್ರವಾರ ಬೆಳಿಗ್ಗೆ ನಡೆದಿದೆ.

ಗುಡ್ಡಗಾಡು ಪ್ರದೇಶವಾಗಿರುವ ಇಲ್ಲಿನ ಪನ್ನಿಯಾರ್ ಎಸ್ಟೇಟ್‌ನಲ್ಲಿರುವ ಪಡಿತರ ಅಂಗಡಿಯ ಮೇಲೆ ಕಳೆದ ಹತ್ತು ದಿನಗಳಲ್ಲಿ ಆನೆ ನಾಲ್ಕನೇ ಬಾರಿ ದಾಳಿ ನಡೆಸಿದೆ. ಶುಕ್ರವಾದ ದಾಳಿಗೆ ಇಡೀ ಅಂಗಡಿ ಧ್ವಂಸವಾಗಿ ಹೋಗಿದೆ. ಈ ಆನೆ ಅಕ್ಕಿಯನ್ನಷ್ಟೇ ಅಲ್ಲ, ಸಕ್ಕರೆ, ಗೋಧಿಯ ಚೀಲವನ್ನೂ ಬೀಳಿಸಿ, ತಿನ್ನುವ ಚಾಳಿ ಇಟ್ಟುಕೊಂಡಿದೆ. ಆನೆಯ ಅಕ್ಕಿ ಪ್ರೀತಿಗಾಗಿ ಊರವರು 'ಅರಿಕೊಂಬನ್' (ಅರಿ–ಅಕ್ಕಿ, ಕೊಂಬನ್–ಆನೆ) ಎಂಬ ಹೆಸರಿಟ್ಟಿದ್ದಾರೆ.

ಲೋಹದ ಬೀಗ ಒಡೆದು ಅಂಗಡಿಯ ಬಾಗಿಲು ಮುರಿದು ಒಳನುಗ್ಗುವುದು ಆನೆಗೆ ಸಲೀಸಾಗಿದೆ ಎಂದು ಅಂಗಡಿಯ ಮಾಲೀಕ ಆಂಟನಿ ಹೇಳಿದ್ದಾರೆ.

ಪದೇ ಪದೇ ಆನೆ ದಾಳಿ ನಡೆಸುತ್ತಿರುವ ಕಾರಣ ಅಂಗಡಿಯಿಂದ ಪಡಿತರವನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಆದರೆ ಶುಕ್ರವಾರ ಮತ್ತೆ ಅಂಗಡಿಗೆ ನುಗ್ಗಿದ ಆನೆ ಅದನ್ನು ಧ್ವಂಸಗೊಳಿಸಿದೆ. ಪಕ್ಕದ ಚೊಕ್ಕನಾಡ್ ಎಸ್ಟೇಸ್ಟ್‌ನಲ್ಲಿರುವ ಅಂಗಡಿ ಮೇಲೆಯೂ ಕೆಲ ದಿನಗಳ ಹಿಂದೆ ಆನೆಗಳು ಇದೇ ರೀತಿ ದಾಳಿ ಮಾಡಿದ್ದವು.

ಆನೆಗಳನ್ನು ಸೆರೆ ಹಿಡಿಯುವುದೇ ಇದಕ್ಕಿರುವ ಪರಿಹಾರ ಎಂದು ಊರವರು ಹೇಳುತ್ತಿದ್ದಾರೆ. ಪಡಿತರ ಅಂಗಡಿ ಆನೆಗಳು ಸಾಗುವ ದಾರಿಯಲ್ಲಿವೆ. ಇದೊಂದು ಆನೆ ಸಂಚಾರದ ಸಾಂಪ್ರದಾಯಿಕ ದಾರಿಯಾಗಿದ್ದು, ಅವುಗಳ ಹಾದಿ ಬದಲಿಸಲು ಸಾಧ್ಯವಿಲ್ಲ. ಪ್ರತಿ ಬಾರಿಯೂ ಒಂದೇ ಆನೆ ಅಕ್ಕಿ ತಿನ್ನುತ್ತಿದೆಯೇ ಎಂಬುದನ್ನು ಪತ್ತೆ ಮಾಡಿದರೆ ಮುಂದಿನ ಕ್ರಮ ಕೈಗೊಳ್ಳಬಹುದು ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಬಹುಭಾಷಾ ನಟಿ ಜಮುನಾ ನಿಧನ

ಹೈದರಾಬಾದ್ (ಪಿಟಿಐ): ಬಹುಭಾಷಾ ನಟಿ ಜಮುನಾ (87) ವಯೋಸಹಜ ಸಮಸ್ಯೆಗಳಿಂದ ಶುಕ್ರವಾರ ಇಲ್ಲಿ ನಿಧನರಾದರು.

ಬಾಲ್ಯದಿಂದಲೇ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದ ಅವರು ಕನ್ನಡ, ತೆಲುಗು, ತಮಿಳು ಹಿಂದಿ ಸೇರಿ ಸುಮಾರು 134 ಚಿತ್ರಗಳಲ್ಲಿ ನಟಿಸಿದ್ದರು. ಕನ್ನಡ ಚಿತ್ರಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ ಅವರು, ಹೆಚ್ಚು ನಟಿಸಿದ್ದು ತೆಲುಗು ಚಿತ್ರಗಳಲ್ಲಿ. 15ರ ಹರೆಯದಲ್ಲಿಯೇ 'ಪುಟ್ಟಿಲು' ಚಿತ್ರದ ಮೂಲಕ ಬೆಳ್ಳಿ ತೆರೆಗೆ ಪ್ರವೇಶಿಸಿದರು. ಪೌರಾಣಿಕ ಪಾತ್ರಗಳ ಮೂಲಕ ಹೆಚ್ಚು ಜನಪ್ರಿಯತೆ ಪಡೆದಿದ್ದ ಜಮುನಾ ಅವರು, ದಿಗ್ಗಜ ನಟ ಎನ್‌.ಟಿ. ರಾಮರಾವ್ ಸೇರಿದಂತೆ ಅನೇಕ ಮೇರು ನಟರೊಂದಿಗೆ ನಟಿಸಿದ್ದರು.

ಚಂದನವನದಲ್ಲಿ...: ಆದರ್ಶ ಸತಿ, ತೆನಾಲಿ ರಾಮಕೃಷ್ಣ, ಭೂಕೈಲಾಸ, ರತ್ನಗಿರಿ ರಹಸ್ಯ, ಸಾಕ್ಷಾತ್ಕಾರ, ಮಾಯೆಯ ಮುಸುಕು, ಗುರು ಸಾರ್ವಭೌಮ ಶ್ರೀ ರಾಘವೇಂದ್ರ ಕರುಣೆ, ಪೊಲೀಸ್ ಮತ್ತು ದಾದಾ ಅವರು ನಟಿಸಿದ ಕನ್ನಡ ಚಿತ್ರಗಳು. 'ಮಿಸ್ಸಮ್ಮ', 'ಗುಂಡಮ್ಮ ಕಥೆ' ಮತ್ತು 'ಶ್ರೀ ಕೃಷ್ಣ ತುಲಾಭಾರಂ' ಅವರ ಅಭಿನಯದ ಪ್ರಮುಖ ತೆಲುಗು ಚಿತ್ರಗಳು. ಹಿಂದಿ ಚಲನಚಿತ್ರ ಮಿಲನ್‌ನ ಅಭಿನಯಕ್ಕಾಗಿ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದಿದ್ದರು. ತಮಿಳುನಾಡು ಸರ್ಕಾರದ ಎಂಜಿಆರ್ ಗೌರವ ಪ್ರಶಸ್ತಿ, ಎನ್‌ಟಿಆರ್ ರಾಷ್ಟ್ರಪ್ರಶಸ್ತಿ, ಡಾ.ಬಿ.ಸರೋಜಾದೇವಿ ರಾಷ್ಟ್ರೀಯ ಪ್ರಶಸ್ತಿ, ಜೀವಮಾನದ ಶ್ರೇಷ್ಠ ಸಾಧನೆಗಾಗಿ ಸಂತೋಷಂ ಚಲನಚಿತ್ರ ಪ್ರಶಸ್ತಿ ಅವರಿಗೆ ಸಂದಿವೆ.



ಜಮುನಾ

ಹಂಪಿ ಹುಟ್ಟೂರು: ಜಮುನಾ ಅವರು ಹುಟ್ಟಿದ್ದು 1936ರಲ್ಲಿ. ಮೂಲ ಹೆಸರು ಜನಾಬಾಯಿ. ಹುಟ್ಟೂರು ವಿಜಯನಗರ ಜಿಲ್ಲೆಯ ಹಂಪಿ. ಬಳಿಕ ಅವರ ಕುಟುಂಬ ಆಂಧ್ರಪ್ರದೇಶದ ದುಗ್ಗಿರಾಳದಲ್ಲಿ ನೆಲೆಯಾಯಿತು. ದಿವಂಗತ ಜೂಲೂರಿ ರಮಣರಾವ್ ಇವರ ಪತಿ. ಜಮುನಾ ದಂಪತಿಗೆ ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿ ಇದ್ದಾರೆ.

ರಾಜಕಾರಣ: 1989ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಆಂಧ್ರ ಪ್ರದೇಶದ ರಾಜಮಂಡ್ರಿಯಿಂದ ಜಮುನಾ ಅವರು ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾಗಿದ್ದರು.

ತುಂಬು ಸ್ವಾಭಿಮಾನಿಯಾಗಿದ್ದ ಅವರ ವೃತ್ತಿಬದುಕಿನಲ್ಲಿ ಸಿನಿ ಕ್ಷೇತ್ರದ ಪ್ರಮುಖರೊಂದಿಗೆ ನಡೆದ ಮನಸ್ತಾಪಗಳು ಅವರಿಗೆ ಬೇಸರ ತರಿಸಿದ್ದವು. 'ಮಹಿಳೆ ಯಾವುದೇ ಕ್ಷೇತ್ರದಲ್ಲಿರಲಿ. ತನ್ನ ಆತ್ಮಗೌರವವನ್ನು ಕಳೆದುಕೊಳ್ಳಬಾರದು. ಎಂಥ ಸವಾಲುಗಳು ಬಂದರೂ ಎದುರಿಸಿ ಬಾಳಬೇಕು' ಎಂದು ಜಮುನಾ ಹೇಳುತ್ತಿದ್ದರು.

ಮಹದಾಯಿ: ಅರಣ್ಯ ಸಚಿವಾಲಯ ತಗಾದೆ

ಒಂದನೇ ಪುಟದಿಂದ...

ಹುಲಿ ಕಾರಿಡಾರ್, ಶಾಸನಬದ್ಧ ಅನುಮೋದನೆಗೆ ಬೇಕಿರುವ ಮಾಹಿತಿಗಳು, ಅರಣ್ಯದ ಮೇಲಾಗುವ ಹಾನಿ ತಪ್ಪಿಸುವ ಯೋಜನೆಗಳ ಕುರಿತು ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅವರಿಂದ ಮತ್ತಷ್ಟು ವಿವರಣೆಗಳನ್ನು ಪಡೆಯಲಾಗುತ್ತದೆ ಎಂದು ಪಿ.ಸುಬ್ರಹ್ಮಣ್ಯಂ ತಿಳಿಸಿದರು.

ಪರಿಹಾರಾತ್ಮಕವಾಗಿ ಹಸಿರು ಬೆಳೆಸಲು ಒಣ ಪ್ರದೇಶವನ್ನು ಕರ್ನಾಟಕ ಅರಣ್ಯ ಇಲಾಖೆ ಗುರುತಿಸಿದ್ದು, ಈ ಯೋಜನೆಯನ್ನು ಇನ್ನಷ್ಟು ಬಲಪಡಿಸಲು ಕರ್ನಾಟಕ ಸರ್ಕಾರ ಗಮನ ಹರಿಸಬೇಕು. ಯೋಜನಾ ಪ್ರದೇಶವು ಹುಲಿ ಕಾರಿಡಾರ್‌ನಲ್ಲಿ ಬರುತ್ತದೆ. ಅರಣ್ಯದ ಮೇಲಿನ ಹಾನಿ ತಗ್ಗಿಸುವ ಯೋಜನೆ ರೂಪಿಸುವ ವೇಳೆಯಲ್ಲಿ ಪಿಸಿಸಿಎಫ್ (ವನ್ಯಜೀವಿ) ಸೂಕ್ತ ಉಪಶಮನ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಮಿತಿ ನಿರ್ದೇಶನ ನೀಡಿದೆ.

ಕಳಸಾ ನಾಲಾ ತಿರುವು ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಏಳು ಗ್ರಾಮಗಳ 33.05 ಹೆಕ್ಟೇರ್ ಅರಣ್ಯ ಬಳಸಲು ಒಪ್ಪಿಗೆ ನೀಡುವಂತೆ ಅರಣ್ಯ ಇಲಾಖೆ ಸಚಿವಾಲಯಕ್ಕೆ 2022ರ ಡಿಸೆಂಬರ್ 30ರಂದು ಪ್ರಸ್ತಾವನೆ ಸಲ್ಲಿಸಿತ್ತು. ಈ ವಿಷಯದ ಬಗ್ಗೆ ಇನ್ನಷ್ಟು ವಿವರಣೆ ನೀಡುವಂತೆ ಎಸಿಎಸ್ ಅವರಿಗೆ ಸಚಿವಾಲಯವು ಜನವರಿ 5ರಂದು ಸೂಚಿಸಿತ್ತು. ಯೋಜನೆಗೆ ಅರಣ್ಯ ಬಳಕೆ ಪ್ರಮಾಣವನ್ನು 33 ಹೆಕ್ಟೇರ್‌ನಿಂದ 26.92 ಹೆಕ್ಟೇರ್‌ಗೆ ಇಳಿಸಿ ಪರಿಷ್ಕೃತ ಪ್ರಸ್ತಾವವನ್ನು ಸಲ್ಲಿಸಲಾಗಿತ್ತು.

'ಯೋಜನೆ ಅನುಷ್ಠಾನಕ್ಕಾಗಿ ಅರಣ್ಯ ಪರಿವರ್ತನೆ ಕೋರಿರುವ ಖಾನಾಪುರ ತಾಲ್ಲೂಕಿನ ಅರಣ್ಯ ಪ್ರದೇಶಗಳು ಅಪರೂಪದ ವನ್ಯಜೀವಿಗಳಿಗೆ ಆಶ್ರಯತಾಣವಾಗಿದ್ದು ಇವುಗಳಿಗೆ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಸ್ಥಾನಮಾನ ಒದಗಿಸಬೇಕು.

ಈ ಮೂಲಕ ಕಳಸಾ, ಹಲ್ತಾರ, ಸುರ್ಲಾ ನಾಲೆಗಳು ಹಾಗೂ ಮಲಪ್ರಭಾ, ಮಹದಾಯಿ ನದಿಗಳ ಜಲಾನಯನ ಪ್ರದೇಶಗಳಿಗೂ ರಕ್ಷಣೆ ದೊರೆತಂತಾಗುತ್ತದೆ' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ತಿಳಿಸಿದರು.

ವಿದ್ಯಾರ್ಥಿನಿಯ ಮರ್ಯಾದೆಗೇಡು ಹತ್ಯೆ: ತಂದೆ ಸೇರಿ ಐವರ ಬಂಧನ

ಮುಂಬೈ (ಪಿಟಿಐ): ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯಲ್ಲಿ 22 ವರ್ಷದ ವೈದ್ಯಕೀಯ ವಿದ್ಯಾರ್ಥಿನಿ ಶುಭಾಂಗಿ ಜೋಗದಂದ್ ಅವರನ್ನು ಆಕೆಯ ತಂದೆ, ಸಹೋದರ ಮತ್ತು ಇತರ ಮೂವರು ಸಂಬಂಧಿಕರು ಕತ್ತು ಹಿಸುಕಿ ಕೊಂದು ಸುಟ್ಟು ಹಾಕಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಲಿಂಬಗಾಂವ್ ಪೊಲೀಸ್ ಠಾಣೆ ವ್ಯಾಪ್ತಿಯ ಪಿಂಪ್ರಿ ಮಹಿಪಾಲ್ ಗ್ರಾಮದಲ್ಲಿ ಇದೇ 22ರಂದು ನಡೆದ ಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು ಶುಕ್ರವಾರ ಐವರನ್ನು ಬಂಧಿಸಿದ್ದಾರೆ. ಶುಭಾಂಗಿಯನ್ನು ಆಕೆಯ ಕುಟುಂಬ ಸದಸ್ಯರು ಹಗ್ಗದಿಂದ ಬಿಗಿದು ಕೊಂದಿದ್ದಾರೆ. ನಂತರ ಆಕೆಗೆ ಬೆಂಕಿ ಹಚ್ಚಿ, ಸಾಕ್ಷಿ ನಾಶಪಡಿಸಲು ಆಕೆಯ ಅವಶೇಷಗಳನ್ನು ಹೊಳೆಯಲ್ಲಿ ಎಸೆದಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂತ್ರಸ್ತ ಯುವತಿ ಬ್ಯಾಚುಲರ್ ಆಫ್ ಹೋಮಿಯೋಪಥಿಕ್ ಮೆಡಿಸಿನ್ ಆ್ಯಂಡ್ ಸರ್ಜರಿ (ಬಿಎಚ್‌ಎಂಎಸ್) ಮೂರನೇ ವರ್ಷದ ವಿದ್ಯಾರ್ಥಿನಿಯಾಗಿದ್ದು, ಆಕೆಯ ಮದುವೆ ನಿಶ್ಚಯವಾಗಿತ್ತು. ಆದರೆ, ಆಕೆ ತನ್ನ ಗ್ರಾಮದ ಇನ್ನೊಬ್ಬ ವ್ಯಕ್ತಿಯನ್ನು ಪ್ರೀತಿಸುತ್ತಿರುವುದಾಗಿ ತನ್ನ ಕುಟುಂಬದವರು ಆಯ್ಕೆ ಮಾಡಿದ ವ್ಯಕ್ತಿಗೆ ತಿಳಿಸಿದ್ದಳು. ಇದರಿಂದ ನಿಶ್ಚಯಗೊಂಡಿದ್ದ ಮದುವೆ ಮುರಿದುಬಿದ್ದಿತ್ತು. ಹೀಗಾಗಿ ಕುಟುಂಬದವರು ಅಸಮಾಧಾನಗೊಂಡು, ಜ.22ರ ರಾತ್ರಿ ಶುಂಭಾಗಿಯ ತಂದೆ, ಸಹೋದರ, ಚಿಕ್ಕಪ್ಪ ಮತ್ತು ಸೋದರ ಸಂಬಂಧಿಗಳು ಆಕೆಯನ್ನು ಜಮೀನಿಗೆ ಕರೆದೊಯ್ದು, ಹತ್ಯೆ ಮಾಡಿ ಸಾಕ್ಷ್ಯ ನಾಶಪಡಿಸಲು ಪ್ರಯತ್ನಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳನ್ನು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 302 (ಕೊಲೆ) ಮತ್ತು ಇತರ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಬಂಧಿಸಲಾಗಿದೆ.

ಮಹದಾಯಿ: ತ್ವರಿತ ವಿಚಾರಣೆಗೆ ಸಮ್ಮತಿ

ನವದೆಹಲಿ: ಮಹದಾಯಿ ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ ಅನುಮೋದನೆ ನೀಡಿರುವುದನ್ನು ಪ್ರಶ್ನಿಸಿ ಗೋವಾ ಸರ್ಕಾರ ಸಲ್ಲಿಸಿರುವ ತಕರಾರು ಅರ್ಜಿಯನ್ನು ತ್ವರಿತ ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿಸಿದೆ.

ಮಹದಾಯಿ ಯೋಜನೆಯ ಕಾಮಗಾರಿಗೆ ಕೈಗೊಳ್ಳದಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದೂ ಗೋವಾ ಸರ್ಕಾರ ಅರ್ಜಿಯಲ್ಲಿ ಮನವಿ ಮಾಡಿದೆ.

ಗೋವಾ ಸರ್ಕಾರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ವೆಂಕಟೇಶ ದೊಂಡ್, 'ಗೋವಾದ ಮಹದಾಯಿ ವನ್ಯಜೀವಿ ಧಾಮದ ಪಕ್ಕದಲ್ಲಿನ ಜಲಮೂಲಗಳ ನೀರನ್ನು ಬಳಸಿಕೊಂಡು ಕಳಸಾ–ಬಂಡೂರಿ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ಇದಕ್ಕೆ ಗೋವಾ ಸರ್ಕಾರದ ತಕರಾರು ಇದೆ. ಈ ಬಗ್ಗೆ ಗೋವಾ ಮುಖ್ಯಮಂತ್ರಿಯವರು ಟ್ವೀಟ್ ಸಹ ಮಾಡಿದ್ದಾರೆ' ಎಂದರು.

ಆಗ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠ, 'ಫೆಬ್ರುವರಿ 13ರಂದು ಅರ್ಜಿಯ ವಿಚಾರಣೆ ನಡೆಸಲು ಈಗಾಗಲೇ ಪಟ್ಟಿ ಮಾಡಲಾಗಿದೆ. ನಾನು ಈ ಅರ್ಜಿಯ ವಿಚಾರಣೆ ನಡೆಸಲು ಆಗುವುದಿಲ್ಲ. ಬೇರೊಂದು ಪೀಠದ ಮುಂದೆ ಅರ್ಜಿ ವಿಚಾರಣೆಗೆ ಬರಲಿದೆ' ಎಂದರು.

ಆಗ ಗೋವಾ ಪರ ವಕೀಲರು, 'ನದಿ ನೀರು ತಿರುವು ಕಾಮಗಾರಿಗೆ ಫೆಬ್ರುವರಿ 13ರೊಳಗೆ ಚಾಲನೆ ಸಿಗಲಿದೆ. ಕರ್ನಾಟಕ ಮುಖ್ಯಮಂತ್ರಿಯವರು ಈ ಕುರಿತು ಹೇಳಿಕೆ ನೀಡಿದ್ದಾರೆ' ಎಂದು ಪೀಠದ ಗಮನ ಸೆಳೆದರು.

ನಂತರ ನ್ಯಾಯಪೀಠ, ಫೆಬ್ರುವರಿ 13ರೊಳಗೆ ಅರ್ಜಿಯ ವಿಚಾರಣೆಯನ್ನು ಪಟ್ಟಿ ಮಾಡಲು ಸಮ್ಮತಿಸಿತು.

ಮಹದಾಯಿ ಯೋಜನೆಯ ಪರಿಷ್ಕೃತ ಡಿಪಿಆರ್ ಅನ್ನು ಅನುಮೋದಿಸಿದ ಕೇಂದ್ರ ಜಲ ಆಯೋಗದ ತೀರ್ಮಾನವನ್ನು ಗೋವಾ ಸರ್ಕಾರ ಪ್ರಶ್ನಿಸಿದೆ. ಒಂದು ವೇಳೆ ಈ ಯೋಜನೆ ಅನುಷ್ಠಾನಗೊಂಡರೆ ಮಹದಾಯಿ ನದಿ ಬತ್ತಿ ಹೋಗಲಿದೆ ಹಾಗೂ ವನ್ಯಜೀವಿ ಧಾಮಕ್ಕೆ ಹಾನಿ ಆಗಲಿದೆ ಎಂದು ಗೋವಾ ದೂರಿದೆ. ಈ ಸಂಬಂಧ 122 ಪುಟಗಳ ದಾಖಲೆಯನ್ನು ಸುಪ್ರೀಂ ಕೋರ್ಟ್‌ಗೆ ಇದೇ 25ರಂದು ಸಲ್ಲಿಸಿದೆ.

ನೀರು ಹಂಚಿಕೆ: ಪಾಕ್‌ಗೆ ಭಾರತ ನೋಟಿಸ್

ನವದೆಹಲಿ (ಪಿಟಿಐ): ಸಿಂಧೂ ನದಿ ನೀರು ಹಂಚಿಕೆ (ಐಡಬ್ಲ್ಯುಟಿ) ಒಪ್ಪಂದ ಮಾರ್ಪಡಿಸಲು ಭಾರತವು ಪಾಕಿಸ್ತಾನಕ್ಕೆ ನೋಟಿಸ್ ನೀಡಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ಶುಕ್ರವಾರ ತಿಳಿಸಿವೆ.

ಗಡಿಯಾಚೆಗಿನ ನದಿಗಳಿಗೆ ಸಂಬಂಧಿಸಿದ ವಿಷಯಗಳ ಒಪ್ಪಂದಕ್ಕೆ ಆರು ದಶಕಗಳ ಹಿಂದೆಯೇ ಸಹಿ ಹಾಕಲಾಗಿದೆ. ಕಿಶನ್‌ಗಂಗಾ ಮತ್ತು ರತಲೆ ಜಲವಿದ್ಯುತ್ ಯೋಜನೆಗಳಲ್ಲಿನ ಭಿನ್ನಾಭಿಪ್ರಾಯ ಪರಿಹರಿಸುವ ಸಲುವಾಗಿ, ಇದರ ಅನುಷ್ಠಾನದಲ್ಲಿ ಇಸ್ಲಾಮಾಬಾದ್ ಅನುಸರಿಸುತ್ತಿರುವ 'ಹಠಮಾರಿತನ' ಗಮನಿಸಿ, ಕೆಲ ಬದಲಾವಣೆ ಮಾಡಲು ಒಪ್ಪಂದದ ವಿಧಿ XII (3)ರ ನಿಬಂಧನೆಗಳ ಪ್ರಕಾರ ನೋಟಿಸ್ ನೀಡಿದೆ ಎಂದು ಮೂಲಗಳು ಹೇಳಿವೆ.

ಗಡಿಯಾಚೆಗಿನ ಹಲವು ನದಿಗಳ ನೀರು ಹಂಚಿಕೆಯಲ್ಲಿ ಉಭಯ ರಾಷ್ಟ್ರಗಳು ಮಾಹಿತಿ ವಿನಿಮಯ ಮತ್ತು ಪರಸ್ಪರ ಸಹಕರಿಸುವ ಕಾರ್ಯವಿಧಾನಕ್ಕೆ ವಿಶ್ವಬ್ಯಾಂಕ್ ಸಹಿ ಒಳಗೊಂಡ ಈ ಒಪ್ಪಂದಕ್ಕೆ ಒಂಬತ್ತು ವರ್ಷಗಳ ಮಾತುಕತೆಗಳ ನಂತರ ಭಾರತ ಮತ್ತು ಪಾಕಿಸ್ತಾನ ಸಹಿ ಹಾಕಿದ್ದವು.

'ಭಾರತ ಸರ್ಕಾರದ ಜತೆಗೆ ಮಾತುಕತೆ ನಡೆಸಿ ತೀರ್ಮಾನಕ್ಕೆ ಬರಲು ಪಾಕಿಸ್ತಾನಕ್ಕಡೆ 90 ದಿನಗಳ ಅವಕಾಶ ಒದಗಿಸುವುದು ನೋಟಿಸ್‌ನ ಉದ್ದೇಶ. ಈ ಒಪ್ಪಂದ ಅನುಷ್ಠಾನದಲ್ಲಿ ಭಾರತ ಜವಾಬ್ದಾರಿಯುತ ಪಾಲುದಾರ ಮತ್ತು ಇದಕ್ಕೆ ಅಚಲ ಬೆಂಬಲವನ್ನು ನೀಡುತ್ತಿದೆ' ಎಂದು ಮತ್ತೊಂದು ಮೂಲ ಹೇಳಿದೆ.

'ಪಾಕಿಸ್ತಾನದ ಕ್ರಮಗಳು ಈ ಒಪ್ಪಂದದ ನಿಬಂಧನೆಗಳು ಮತ್ತು ಅವುಗಳ ಅನುಷ್ಠಾನದ ಮೇಲೆ ಪ್ರತಿಕೂಲ ಪರಿಣಾಮ ಬೀರಿತ್ತು. ಹಾಗಾಗಿ ಒಪ್ಪಂದ ಮಾರ್ಪಡಿಸಲು ಭಾರತವು ನೋಟಿಸ್ ನೀಡಿದೆ' ಎಂದು ಮೂಲ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ದೆಹಲಿ ಮೇಯರ್ ಆಯ್ಕೆ: ಫೆ.3ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಯ ಮೇಯರ್ ಸ್ಥಾನಕ್ಕೆ ಸಕಾಲದಲ್ಲಿ ಚುನಾವಣೆ ನಡೆಸಬೇಕು ಎಂದು ಕೋರಿ ಆಮ್ ಆದ್ಮಿ ಪಕ್ಷದ ಮೇಯರ್ ಅಭ್ಯರ್ಥಿ ಶೆಲ್ಲಿ ಒಬೆರಾಯ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಫೆ. 3ರಂದು ಕೈಗೆತ್ತಿಕೊಳ್ಳುವುದಾಗಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿ ದೀಪಂಕರ್ ದತ್ತಾ ಅವರಿದ್ದ ಪೀಠವು ಹೇಳಿದೆ.

ದೆಹಲಿ ಮಹಾನಗರ ಪಾಲಿಕೆ ಸಭೆಯಲ್ಲಿ ಗದ್ದಲ ನಡೆದಿದ್ದರಿಂದ ಕಳೆದ ಮಂಗಳವಾರ ನಡೆಯಬೇಕಿದ್ದ ಮೇಯರ್ ಸ್ಥಾನದ ಚುನಾವಣೆ ನಡೆದಿರಲಿಲ್ಲ. ಗದ್ದಲದಿಂದ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅವರಿಂದ ನೇಮಕಗೊಂಡಿದ್ದ ಚುನಾವಣಾ ಅಧಿಕಾರಿಯು ಸಭೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದರು

ಪೂರ್ವ ಗಡಿಯಲ್ಲಿ ಅನಿಶ್ಚಿತ ಸ್ಥಿತಿ –ಸೇನೆ

ಕೋಲ್ಕತ್ತ (ಪಿಟಿಐ): ಚೀನಾ ಜೊತೆಗಿನ ಪೂರ್ವ ಭಾಗದ ಗಡಿಯಲ್ಲಿ ಪರಿಸ್ಥಿತಿ ಸ್ಥಿರವಾಗಿದೆ. ಗಡಿ ಗುರುತು ಆಗದಿರುವ ಕಾರಣ ಅನಿಶ್ಚಿತ ಸ್ಥಿತಿ ಇದೆ ಎಂದು ಸೇನೆಯ ಪೂರ್ವ ಕಮಾಂಡ್‌ನ ಲೆಫ್ಟಿನೆಂಟ್ ಜನರಲ್ ಆರ್.ಪಿ.ಕಲಿಟ ಹೇಳಿದ್ದಾರೆ.

ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂ ವಲಯದಲ್ಲಿ ಇರುವ ವಾಸ್ತವ ಗಡಿ ರೇಖೆಯ ಉಸ್ತುವಾರಿ ನಿರ್ವಹಣೆಯ ಜವಾಬ್ದಾರಿಯು ಪೂರ್ವ ಕಮಾಂಡ್‌ನದ್ದಾಗಿದೆ.

ಭಾರತ ಮತ್ತು ಚೀನಾ ನಡುವಿನ ಗಡಿ ನಿಗದಿ ಆಗದಿರುವುದೇ ಸಮಸ್ಯೆಗೆ ಕಾರಣವಾಗಿದೆ. ವಾಸ್ತವ ಗಡಿ ರೇಖೆ ಕುರಿತಂತೆ ವಿವಿಧ ಗ್ರಹಿಕೆಗಳಿವೆ. ಪ್ರಸ್ತುತ ಸ್ಥಿರವಾಗಿದ್ದರೂ ಪರಿಸ್ಥಿತಿ ಅನಿಶ್ಚಿತವಾಗಿಯೇ ಇದೆ ಎಂದು ಅವರು ಮಾಧ್ಯಮ ಸಂವಾದದಲ್ಲಿ ಹೇಳಿದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಸೆಂಬರ್ 13ರಂದು ಸಂಸತ್ತಿನಲ್ಲಿ ಹೇಳಿಕೆ ನೀಡಿದ್ದು, ಪೂರ್ವ ಭಾಗದಲ್ಲಿ ಗಡಿ ರೇಖೆಯ ವಸ್ತುಸ್ಥಿತಿ ಬದಲಿಸಲು ಚೀನಾ ಸೇನೆಯು ಯತ್ನಿಸುತ್ತಿದೆ ಎಂದು ಆರೋಪಿಸಿದ್ದರು.

ಲಖೀಂಪುರ ಖೀರಿ ಪ್ರಕರಣ: ಆಶಿಶ್ ಮಿಶ್ರಾ ಬಿಡುಗಡೆ

ಲಖೀಂಪುರ ಖೀರಿ (ಪಿಟಿಐ): ಸುಪ್ರೀಂಕೋರ್ಟ್ ಮಧ್ಯಂತರ ಜಾಮೀನು ನೀಡಿದ ಹಿನ್ನೆಲೆಯಲ್ಲಿ, ಲಖೀಂಪುರ ಖೀರಿ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರನ್ನು ಜೈಲಿನಿಂದ ಶುಕ್ರವಾರ ಬಿಡುಗಡೆ ಮಾಡಲಾಯಿತು.

'ಸೆಷನ್ಸ್ ಕೋರ್ಟ್‌ನಿಂದ ಬಿಡುಗಡೆ ಆದೇಶ ಕೈಸೇರಿದ ಹಿನ್ನೆಲೆಯಲ್ಲಿ, ಆಶಿಶ್ ಮಿಶ್ರಾ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು' ಎಂದು ಖೇರಿ ಜಿಲ್ಲಾ ಕಾರಾಗೃಹದ ಹಿರಿಯ ಎಸ್ಪಿ ವಿಪಿನ್‌ಕುಮಾರ್ ಮಿಶ್ರಾ ಹೇಳಿದ್ದಾರೆ.

ಸುಪ್ರೀಂಕೋರ್ಟ್ ಬುಧವಾರ ಮಿಶ್ರಾ ಅವರಿಗೆ ಎಂಟು ವಾರಗಳ ಮಧ್ಯಂತರ ಜಾಮೀನು ನೀಡಿತ್ತು

ಲಕ್ಷದ್ವೀಪ ಸಂಸದರ ಸದಸ್ಯತ್ವ: ಕಾಯ್ದೆ ಪ್ರಕಾರ ಕ್ರಮ

ನವದೆಹಲಿ (ಪಿಟಿಐ): ಲಕ್ಷ್ಮದ್ವೀಪ ಕ್ಷೇತ್ರದ ಸಂಸದರ ಅನರ್ಹತೆ ವಿಷಯದಲ್ಲಿ ಕಾನೂನು ಪ್ರಕಾರವೇ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ಚುನಾವಣಾ ಆಯೋಗವು ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕೊಲೆಯತ್ನ ಪ್ರಕರಣದಲ್ಲಿ ಸಂಸದ ಮೊಹಮ್ಮದ್ ಫೈಝಲ್ ಅವರಿಗೆ ವಿಧಿಸಲಾಗಿದ್ದ ಶಿಕ್ಷೆ ಆದೇಶವನ್ನು ಕೇರಳ ಹೈಕೋರ್ಟ್ ಅಮಾನತುಪಡಿಸಿದೆ ಎಂಬುದನ್ನು ಗಮನಿಸಲಾಗುವುದು ಎಂದು ಆಯೋಗವು ತಿಳಿಸಿತು.

ಲಕ್ಷ್ಮದ್ವೀಪ ಕ್ಷೇತ್ರಕ್ಕೆ ಉಪಚುನಾವಣೆ ಕುರಿತು ಪತ್ರಿಕಾ ಹೇಳಿಕೆ ನೀಡಿದ್ದ ಚುನಾವಣಾ ಆಯೋಗದ ಕ್ರಮವನ್ನು ಪ್ರಶ್ನಿಸಿ ಫೈಜಲ್ ಮೇಲ್ಮನವಿ ಸಲ್ಲಿಸಿದ್ದರು. ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದ ಆಧಾರದಲ್ಲಿ ಆಯೋಗವು ಉಪ ಚುನಾವಣೆಯನ್ನು ಘೋಷಿಸಿತ್ತು.

ಫೈಝಲ್ ಪರ ವಕೀಲ ಕಪಿಲ್ ಸಿಬಲ್ ಅವರು, ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಈಗ ಉಪಚುನಾವಣೆ ನಡೆಸಲಾಗದು ಎಂದು ಪ್ರತಿಪಾದಿಸಿದರು. ಆಗ ಆಯೋಗ ಕಾಯ್ದೆಯಂತೆ ಕ್ರಮವಹಿಸಲಿದೆ ಎಂದು ಆಯೋಗದ ಪರ ವಕೀಲ ಮಣಿಂದರ್ ಸಿಂಗ್ ಹೇಳಿದರು. ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್, ಬಿ.ವಿ.ನಾಗರತ್ನ ಅವರಿದ್ದ ಪೀಠ ಇದನ್ನು ಪರಿಗಣಿಸಿತು.

ವಿದೇಶಿ ವೈದ್ಯಕೀಯ ಪದವಿ: ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚೀನಾದಲ್ಲಿ ಪಡೆದಿರುವ ನನ್ನ ವೈದ್ಯಕೀಯ ಪದವಿ ಮಾನ್ಯ ಮಾಡಿಲ್ಲ' ಎಂದು ಆಕ್ಷೇಪಿಸಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಿಂಬರಹ ಪ್ರಶ್ನಿಸಿ ಡಾ.ಸತ್ಯಕ್ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'ವಿದೇಶಿ ವಿಶ್ವವಿದ್ಯಾಲಯಗಳು ನೀಡುವ ವೈದ್ಯಕೀಯ ಪದವಿಗಳನ್ನು ಉದ್ಯೋಗಕ್ಕೆ ಮಾನ್ಯ ಮಾಡುವ ನಿಟ್ಟಿನಲ್ಲಿ ಮಹಾರಾಷ್ಟ್ರ ರಾಜ್ಯ ಸರ್ಕಾರ ಅನುಸರಿಸುತ್ತಿರುವ ನೀತಿಯನ್ನು ಕರ್ನಾಟಕವೂ ಪಾಲನೆ ಮಾಡುವುದು ಕಡ್ಡಾಯವಲ್ಲ' ಎಂಬ ರಾಜ್ಯ ಸರ್ಕಾರದ ವಾದವನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಎತ್ತಿಹಿಡಿದಿದೆ.

'ಅರ್ಜಿದಾರರು ಈ ಪ್ರಕರಣದಲ್ಲಿ ಸಕ್ಷಮ ಪ್ರಾಧಿಕಾರ ನಿಗದಿಪಡಿಸಿದ್ದ ಅರ್ಹತೆಯ ಮಾನದಂಡವನ್ನು ಹೊಂದಿಲ್ಲ. ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವಾಗ ಅದಕ್ಕೆ ಹೊಂದುವಂತಹ ಅರ್ಹತೆಗಳನ್ನು ನಿಗದಿಪಡಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ: ಸಕ್ಷಮ ಪ್ರಾಧಿಕಾರವು ನಾನಾ ವಿಭಾಗಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು 2020ರ ಸೆಪ್ಟೆಂಬರ್ 10ರಂದು ಅರ್ಜಿ ಆಹ್ವಾನಿಸಿತ್ತು. ಭಾರತದಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾಲಯದಿಂದ ಎಂಬಿಬಿಎಸ್ ಪಡೆದಿರಬೇಕು ಎಂಬ ಅರ್ಹತೆಯನ್ನು ಇದರಲ್ಲಿ ನಿಗದಿಪಡಿಸಲಾಗಿತ್ತು.

ಅರ್ಜಿದಾರ ಡಾ. ಸತ್ಯಕ್ ವೈದ್ಯಾಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಪ್ರಾಧಿಕಾರವು, 'ಇವರು ವಿದೇಶಿ ವಿವಿಯಲ್ಲಿ ವೈದ್ಯ ಪದವಿ ಪಡೆದಿದ್ದಾರೆ' ಎಂಬ ಕಾರಣಕ್ಕೆ ಅರ್ಜಿ ತಿರಸ್ಕರಿಸಿತ್ತು.

ಇದಕ್ಕೆ ಸ್ಪಷ್ಟನೆ ನೀಡಿದ್ದ ಅರ್ಜಿದಾರರು, 'ಹುದ್ದೆಗೆ ನಾನು ಅರ್ಹನಾಗಿದ್ದೇನೆ. ಮಹಾರಾಷ್ಟ್ರದಲ್ಲಿ ವಿದೇಶಿ ವಿವಿಗಳಲ್ಲಿ ಪಡೆದ ವೈದ್ಯ ಪದವಿಯನ್ನು ಮಾನ್ಯ ಮಾಡಲಾಗುತ್ತದೆ. ಅದೇ ರೀತಿ ಕರ್ನಾಟಕ ಸರ್ಕಾರವೂ ಈ ಮಾನದಂಡ ಅನುಸರಿಸಿ ನನ್ನ ಅರ್ಜಿ ಪರಿಗಣಿಸಬೇಕು' ಎಂದು ಕೋರಿದ್ದರು.

ಆದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಈ ಕೋರಿಕೆಯನ್ನು ತಿರಸ್ಕರಿಸಿ, ಡಾ. ಸತ್ಯಕ್ ಅವರಿಗೆ ಹಿಂಬರಹ ನೀಡಿತ್ತು.

ಇಂದಿನಿಂದ ಫೆ.5ರವರೆಗೆ ತರಳಬಾಳು ಹುಣ್ಣಿಮೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಭಾವೈಕ್ಯ ಸಂಗಮ' ಎಂದೇ ಹೆಸರಾಗಿರುವ ತರಳಬಾಳು ಹುಣ್ಣಿಮೆ ಮಹೋತ್ಸವ ವಿಜಯನಗರ ಜಿಲ್ಲೆಯ ಕೊಟ್ಟೂರಿನಲ್ಲಿ ಜ. 28ರಿಂದ ಫೆ. 5ರವರೆಗೆ ನಡೆಯಲಿದೆ. ತರಳಬಾಳು ಮಠದ ಪೀಠಾಧಿಪತಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ 9 ದಿನ ಉತ್ಸವ ಜರುಗಲಿದೆ.

ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಸಿರಿಗೆರೆಯಿಂದ ಹೊರಟು ಜಗಳೂರು, ಉಜ್ಜಯಿನಿ ಮಾರ್ಗವಾಗಿ ಪುರಪ್ರವೇಶ ಮಾಡಲಿದ್ದಾರೆ. ಶನಿವಾರ ಸಂಜೆ 6ಕ್ಕೆ ಉತ್ಸವಕ್ಕೆ ಚಾಲನೆ ದೊರೆಯಲಿದೆ. ಧಾರ್ಮಿಕ ನೇತಾರರ ಆಶೀರ್ವಚನ, ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಕೃಷಿ, ಮಹಿಳೆ, ಯುವ, ಮಠಾಧೀಶರು ಹಾಗೂ ಸಾಹಿತ್ಯ ಚಿಂತನಾ ಗೋಷ್ಠಿ ನಡೆಯಲಿದೆ.

ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಫೆ. 4ರಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಫೆ. 5ರಂದು ಸಿಎಂ ಬಸವರಾಜ ಬೊಮ್ಮಾಯಿ ಪಾಲ್ಗೊಳ್ಳಲಿದ್ದಾರೆ. ತರಳಬಾಳುಶ್ರೀ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಸದ್ಧರ್ಮ ಸಿಂಹಾಸನಾರೋಹಣ ನಡೆಯಲಿದೆ. ರಾಷ್ಟ್ರಸೇವೆಯಲ್ಲಿ ಹುತಾತ್ಮರಾದ ಕರ್ನಾಟಕದ 10 ವೀರಯೋಧರ ಕುಟುಂಬಕ್ಕೆ ಧನಸಹಾಯ ನೀಡಲಾಗುತ್ತದೆ.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ

ಕಾಂಗ್ರೆಸ್ ನಾಗಾಲೋಟ: ಅಸ್ತಿತ್ವಕ್ಕೆ ಬಿಜೆಪಿ ಕಸರತ್ತು

• ಸಚ್ಚಿದಾನಂದ ಕುರಗುಂದ

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕ್ಷೇತ್ರ ಸ್ಥಿತಿ–ಗತಿ

ಬೆಂಗಳೂರು: ನಗರ ಮತ್ತು ಗ್ರಾಮೀಣ ಪ್ರದೇಶವನ್ನು ಒಳಗೊಂಡ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರವು ವೈವಿಧ್ಯ ಹೊಂದಿದೆ. ಪುನರ್ ವಿಂಗಡಣೆ ನಂತರ ಈ ಕ್ಷೇತ್ರದಲ್ಲಿ ನಾಲ್ಕನೇ ಬಾರಿ ಚುನಾವಣೆ ನಡೆಯಲಿದೆ.

ಕಾಂಗ್ರೆಸ್ ಪಕ್ಷದಲ್ಲಿ ಹೊಸ ತಲೆಮಾರಿನ ಮುಂಚೂಣಿ ನಾಯಕನಾಗಿ ಹೊರಹೊಮ್ಮುತ್ತಿರುವ ಹಾಲಿ ಶಾಸಕ ಕೃಷ್ಣ ಬೈರೇಗೌಡ, ಈ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದರು. ಈ ಬಾರಿಯೂ ಅವರೇ ಕಾಂಗ್ರೆಸ್ ಅಭ್ಯರ್ಥಿಯಾಗಿ ಅಖಾಡಕ್ಕಿಳಿಯುವುದು ಬಹುತೇಕ ಖಚಿತ. ಈ ಹಿಂದೆ ಸಚಿವರಾಗಿಯೂ ಕಾರ್ಯನಿರ್ವಹಿಸಿರುವ ಅವರು, ಕ್ಷೇತ್ರದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಶ್ರೀರಕ್ಷೆಯನ್ನೇ ನೆಚ್ಚಿಕೊಂಡು ಸಜ್ಜಾಗುತ್ತಿದ್ದಾರೆ.

ಈ ಕ್ಷೇತ್ರವನ್ನು ವಶಪಡಿಸಿಕೊಳ್ಳುವುದಕ್ಕೆ ಬಿಜೆಪಿ ಸತತ ಪ್ರಯತ್ನ ಮಾಡುತ್ತಿದ್ದು, ಕಾಂಗ್ರೆಸ್‌ನ ನಾಗಾಲೋಟಕ್ಕೆ ಕಡಿವಾಣ ಹಾಕಲು ಕಸರತ್ತು ಆರಂಭಿಸಿದೆ. ಬಿಜೆಪಿಯಿಂದ ಎ. ರವಿ ಅವರೇ ಮತ್ತೊಮ್ಮೆ ಕಣಕ್ಕಿಳಿಯುವ ಸಾಧ್ಯತೆಗಳು ದಟ್ಟವಾಗಿವೆ. ಸಚಿವ ಆರ್. ಅಶೋಕ ಅವರ ಸಹೋದರ ಸಂಬಂಧಿಯಾಗಿರುವ ರವಿ, ಮೂರು ಬಾರಿ ಸೋಲು ಅನುಭವಿಸಿದ್ದಾರೆ. ಮೂರು ಬಾರಿಯೂ ಕೃಷ್ಣ ಬೈರೇಗೌಡ ಅವರ ವಿರುದ್ಧವೇ ಪರಾಭವಗೊಂಡಿದ್ದಾರೆ. ಕಳೆದ ಬಾರಿ ಕೇವಲ 5,671 ಮತಗಳ ಅಂತರದಿಂದ ಸೋಲು ಅನುಭವಿಸಿದ್ದರು. ಸತತ ಸೋಲಿನ ಅನುಕಂಪದ ಅಲೆಯನ್ನು ಗೆಲುವಿನ ಮೆಟ್ಟಿಲುಗಳನ್ನಾಗಿ ಪರಿವರ್ತಿಸುವ ಲೆಕ್ಕಾಚಾರ ಬಿಜೆಪಿಯದ್ದು.


ಕೆ.ಎ. ಮುನೀಂದ್ರ ಕುಮಾರ್, ತಮ್ಮೇಶಗೌಡ, ಎನ್. ಚಕ್ರಪಾಣಿ ಕೂಡ ಈ ಬಾರಿ ಬಿಜೆಪಿ ಟಿಕೆಟ್ ಪಡೆಯಲು ಪ್ರಯತ್ನ ನಡೆಸುತ್ತಿದ್ದಾರೆ ಎಂಬ ಮಾತುಗಳು ಪಕ್ಷದಲ್ಲಿ ಕೇಳಿಬರುತ್ತಿವೆ. ಕೆ.ಎ. ಮುನೀಂದ್ರ ಕುಮಾರ್ ಅವರು ಬಿಬಿಎಂಪಿಯಲ್ಲಿ ಆಡಳಿತ ಪಕ್ಷದ ನಾಯಕರಾಗಿದ್ದರು ಮತ್ತು ಎರಡು ಬಾರಿ ಜಕ್ಕೂರು ವಾರ್ಡ್‌ನಿಂದ ಜಯಗಳಿಸಿದ್ದರು.

ಜೆಡಿಎಸ್, ವೇಣುಗೋಪಾಲ್ ಅವರಿಗೆ ಈಗಾಗಲೇ ಟಿಕೆಟ್ ಘೋಷಿಸಿದೆ. ಕಳೆದ ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಟಿ.ಜಿ. ಚಂದ್ರು, ಕೇವಲ 22,490 ಮತಗಳನ್ನು ಪಡೆದಿದ್ದರು. ಕಾಂಗ್ರೆಸ್ ಮತ್ತು ಬಿಜೆಪಿ ಪೈಪೋಟಿ ನಡುವೆ ಜೆಡಿಎಸ್ ಬಲ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಕ್ಷೇತ್ರದಲ್ಲಿ ಒಕ್ಕಲಿಗರು, ಪರಿಶಿಷ್ಟರು ಮತ್ತು ಮುಸ್ಲಿಂ ಸಮುದಾಯದವರೇ ನಿರ್ಣಾಯಕರು. ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜತೆಗೆ, ವಿವಿಧ ಭಾಷೆಗಳ ಜನರು ಸಹ ಇಲ್ಲಿ ನೆಲೆಸಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗೆ ಹೊಂದಿಕೊಂಡಿರುವ ಬ್ಯಾಟರಾಯನಪುರ ಕ್ಷೇತ್ರ ವಾಣಿಜ್ಯ ವಹಿವಾಟಿನಲ್ಲಿ ಮುಂದುವರಿದಿದೆ. ಆದರೆ, ಕ್ಷೇತ್ರವು ಮೂಲಸೌಕರ್ಯಗಳ ಸಮಸ್ಯೆಯಿಂದ ಹೊರತಾಗಿಲ್ಲ. ಜಕ್ಕೂರು ಮತ್ತು ಯಲಹಂಕ ಸಂಪರ್ಕಿಸುವ ರೈಲ್ವೆ ಮೇಲ್ಸೇತುವೆ ಕಾಮಗಾರಿ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಹೆಗಡೆ ನಗರ ಸೇರಿದಂತೆ ಹಲವು ಬಡಾವಣೆಗಳು ಮೂಲಸೌಕರ್ಯಗಳ ಸಮಸ್ಯೆಯಿಂದ ನಲುಗಿವೆ. ಕೆಲವು ಬಡಾವಣೆಗಳಲ್ಲಿ ಕುಡಿಯುವ ನೀರು, ರಸ್ತೆ, ಒಳಚರಂಡಿ ಸಮಸ್ಯೆಗಳು ನಿರಂತರವಾಗಿ ಕಾಡುತ್ತಿವೆ. ಕಾವೇರಿ ಪೈಪ್‌ಲೈನ್ ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ. ಇಂತಹ ಹತ್ತಾರು ಸಮಸ್ಯೆಗಳ ನಡುವೆಯೂ ಕೆರೆಗಳು ಮತ್ತು ಮುಖ್ಯ ರಸ್ತೆಗಳಿಗೆ ಕಾಯಕಲ್ಪ ನೀಡಿರುವುದು ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳು ಇಲ್ಲಿ ಗೋಚರಿಸುತ್ತವೆ.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ



ಕೃಷ್ಣ ಬೈರೇಗೌಡ
ಹಾಲಿ ಶಾಸಕ (ಕಾಂಗ್ರೆಸ್)



ಹಾಲಿ ಮತದಾರರ ವಿವರ

2,43,755 ಪುರುಷರು
2,25,938 ಮಹಿಳೆಯರು
113 ತೃತೀಯ ಲಿಂಗಿಗಳು
4,69,806 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	1,14,964	96,125	60,979
ಬಿಜೆಪಿ	1,09,293	63,627	51,627
ಜೆಡಿಎಸ್	22,490	41,287	21,598

ಆಂಬುಲೆನ್ಸ್ ಅಪಘಾತ ಪರಿಹಾರಕ್ಕೆ ವಿಮಾ ಕಂಪನಿ ಬಾಧ್ಯಸ್ಥ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಪತ್ರೆಗೆ ದಾಖಲಿಸಲು ಆಂಬುಲೆನ್ಸ್‌ನಲ್ಲಿ ಸಾಗಿಸುವ ವೇಳೆ ಅಪಘಾತ ಸಂಭವಿಸಿದ ಪರಿಣಾಮ ಗಾಯಗಳಾಗಿ ರೋಗಿ ಸಾವಿಗೀಡಾದ ಪ್ರಕರಣವೊಂದರಲ್ಲಿ ಮೃತನ ಕಟುಂಬಸ್ಥರಿಗೆ ಪರಿಹಾರ ನೀಡದೆ ಮೇಲ್ಮನವಿ ಸಲ್ಲಿಸಿದ್ದ ವಿಮಾ ಕಂಪನಿಯ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'ಅಪಘಾತದ ಸಂಭವಿಸಿದ ಪರಿಣಾಮದಿಂದಲೇ ರೋಗಿಯು ತೀವ್ರವಾಗಿ ಗಾಯಗೊಂಡಿದ್ದಾರೆ. ಅದರಿಂದಲೇ ಅವರ ಕಾಯಿಲೆ ಉಲ್ಬಣಿಸಿ ಸಾವಿಗೀಡಾಗಿದ್ದಾರೆ. ಆದ್ದರಿಂದ, ಮೃತನ ಕುಟುಂಬದವರಿಗೆ ಪರಿಹಾರ ನೀಡಬೇಕು' ಎಂದು ನ್ಯಾಯಪೀಠ ವಿಮಾ ಕಂಪನಿಗೆ ತಾಕೀತು ಮಾಡಿದೆ. 'ರೋಗಿಯ ಸಾವಿಗೂ ಅಪಘಾತಕ್ಕೂ ಯಾವುದೇ ಸಂಬಂಧವಿಲ್ಲ. ಕಾಯಿಲೆಯಿಂದಲೇ ರೋಗಿ ಸಾವಿಗೀಡಾಗಿದ್ದು, ಮೃತನ ಕುಟುಂಬಸ್ಥರಿಗೆ ಪರಿಹಾರ ನೀಡಲು ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಮಂಡಳಿ (ಎಂಎಸಿಟಿ) ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ವಿಮಾ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಈ ಪ್ರಕರಣದಲ್ಲಿ ಸಾವೀಗೀಡಾಗಿರುವ ರವಿ ಜಾಂಡಿಸ್ ಕಾಯಿಲೆಯಿಂದ ಬಳಲುತ್ತಿದ್ದರು ಎಂಬುದೇನೊ ಸರಿ. ಜಾಂಡಿಸ್ ಮಾರಣಾಂತಿಕವಲ್ಲ ನಿಜ. ಆದರೆ, ರೋಗಿಯನ್ನು ಕರೆದೊಯ್ಯುತ್ತಿರುವ ಬಗ್ಗೆ ತಿಳಿವಳಿಕೆಯಿದ್ದರೂ ಚಾಲಕ ಆಂಬುಲೆನ್ಸ್ ಅನ್ನು ಅಜಾಗರೂಕತೆಯಿಂದ ಚಲಾಯಿಸಿ ಅಪಘಾತಕ್ಕೆ ಕಾರಣನಾಗಿದ್ದಾನೆ. ಈ ಅಪಘಾತದಿಂದ ಉಂಟಾದ ಗಾಯಗಳು ಕಾಯಿಲೆ ಉಲ್ಬಣಗೊಳ್ಳಲು ಕಾರಣವಾಗಿದೆ. ಇದರಿಂದಲೇ ರವಿ ಮೃತಪಟ್ಟಿದ್ದಾರೆ. ಆದ್ದರಿಂದ, ರವಿಯ ಸಾವಿಗೂ ಮತ್ತು ಅಪಘಾತಕ್ಕೂ ಒಂದಕ್ಕೊಂದು ಸಂಬಂಧವಿದೆ' ಎಂದು ಅಭಿಪ್ರಾಯಪಟ್ಟಿದೆ.

'ನ್ಯುಮೋನಿಯಾ, ಕ್ಷಯರೋಗದಿಂದ ಬಳಲುತ್ತಿದ್ದ ರವಿ ಈ ಕಾಯಿಲೆಗಳಿಂದ ಮೃತ ಹೊಂದಿದ್ದಾರೆಯೇ ಹೊರತು ಅಪಘಾತದಿಂದ ಅಲ್ಲ' ಎಂಬ ವಿಮಾ ಕಂಪನಿ ಪರ ವಕೀಲರ ವಾದವನ್ನು ನ್ಯಾಯಪೀಠ ತಳ್ಳಿ ಹಾಕಿದೆ.

ಪರಿಹಾರದ ಮೊತ್ತವನ್ನು 8 ವಾರಗಳಲ್ಲಿ ಮೃತನ ಕುಟುಂಬದವರಿಗೆ ಪಾವತಿಸಲು ವಿಮಾ ಕಂಪನಿಗೆ ನಿರ್ದೇಶಿಸಿದೆ.

ಚಿಕ್ಕಮಗಳೂರಿನ ಕಬ್ಬಿನಹಳ್ಳಿ ರವಿ ಎಂಬುವರು ಜಾಂಡಿಸ್ ಕಾಯಿಲೆಯಿಂದ ಬಳಲುತ್ತಿದ್ದರು. ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ದಾಖಲಿಸಲು ಆಂಬುಲೆನ್ಸ್‌ನಲ್ಲಿ 2010ರ ಏಪ್ರಿಲ್ 13ರಂದು ಕರೆದೊಯ್ಯಲಾಗುತ್ತಿತ್ತು. ಆಂಬುಲೆನ್ಸ್ ಮಾರ್ಗಮಧ್ಯೆ ಮುಗುಚಿ ಬಿದ್ದಿತ್ತು. ಇದರಿಂದ ಆಂಬುಲೆನ್ಸ್ ಒಳಗಿದ್ದ ರವಿ ಗಾಯಗೊಂಡಿದ್ದರು. ಅವರನ್ನು ಮಂಗಳೂರಿನ ಆಸ್ಪತ್ರೆಗೆ ಸೇರಿಸಿದ್ದು, ಅಲ್ಲಿ ಅವರು ಮೃತಪಟ್ಟಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಹಾರ ಕ್ಲೇಮಿನ ಅರ್ಜಿ ವಿಚಾರಣೆ ನಡೆಸಿದ್ದ ಮಂಗಳೂರಿನ ಎಂಎಸಿಟಿ, ಮೃತನ ಕುಟುಂಬದವರಿಗೆ ವಾರ್ಷಿಕ ಶೇ.6ರ ಬಡ್ಡಿ ದರದೊಂದಿಗೆ ₹ 5.50 ಲಕ್ಷ ಪರಿಹಾರ ಪಾವತಿಸುವಂತೆ 2014ರ ಮಾರ್ಚ್ 3ರಂದು ಆದೇಶಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ವಿಮಾ ಕಂಪನಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಹೊಳೆನರಸೀಪುರದಲ್ಲಿ ಬಿಜೆಪಿಯಿಂದ ಭವಾನಿ ಕಣಕ್ಕಿಳಿಸುವ ಆಸೆ: ಸಿ.ಟಿ.ರವಿ

ಚಿಕ್ಕಮಗಳೂರು: 'ಹಾಸನ ಜಿಲ್ಲೆಯ ಹೊಳೆನರಸೀಪುರ ಕ್ಷೇತ್ರದಲ್ಲಿ ಸ್ಪರ್ಧಿಸಲು ಭವಾನಿ ಹೊರತು ಅತ್ಯುತ್ತಮ ಅಭ್ಯರ್ಥಿ ಬೇರಾರೂ ಇಲ್ಲ, ಬಿಜೆಪಿಯಿಂದ ಕಣಕ್ಕಿಳಿಯುವಂತೆ ಅವರನ್ನು ಆಹ್ವಾನಿಸುವ ಮನಸ್ಸಿತ್ತು. ಆದರೆ, ಭವಾನಿ ಅಕ್ಕ ಮತ್ತು ಎಚ್.ಡಿ.ರೇವಣ್ಣ ನಡುವೆ ಜಗಳ ಹಚ್ಚಬಾರದು ಎಂದು ಹೇಳಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಕಿಚಾಯಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಹಾಸನದಲ್ಲಿ ಸ್ಪರ್ಧೆಗೆ ಸಂಬಂಧಿಸಿದಂತೆ ಜೆಡಿಎಸ್ ಪಕ್ಷದ ಎಚ್.ಡಿ. ಕುಮಾರಸ್ವಾಮಿ ಮತ್ತು ಭವಾನಿ ಹೇಳಿಕೆಗಳನ್ನು ಗಮನಿಸಿದ್ದೇನೆ. ಅವರ ಮನೆಯಲ್ಲಿ ಜಗಳ ಹಚ್ಚಲು ನಾನು ಬಯಸಲ್ಲ' ಎಂದರು.

ಚಿತ್ರಾವಳಿ



ಚೊಕ್ಕಸಂದ್ರ ವಾರ್ಡ್ ಎಎಪಿ ಕಚೇರಿಯನ್ನು ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ ಉದ್ಘಾಟಿಸಿದರು. ಪಕ್ಷದ ಮುಖಂಡ ಸೌಂದರ್ಯ ಪಿ. ಮಂಜಪ್ಪ, ದಾಸರಹಳ್ಳಿ ಎಎಪಿ ನಿಯೋಜಿತ ಅಭ್ಯರ್ಥಿ ಎಂ. ಕೀರ್ತನ್ ಕುಮಾರ್, ವಾರ್ಡ್ ಅಧ್ಯಕ್ಷೆ ವಿದ್ಯಾ ನವೀನ್, ಪತ್ರಕರ್ತ ಬಿ.ಎಂ. ಹನೀಫ್ ಇದ್ದರು.



ಎಲೆಕ್ಟ್ರಾನಿಕ್ ಸಿಟಿಯ ಎಸ್‌ಎನ್‌ಎನ್ ರಾಜ್ ಗ್ರೀನ್ ಬೇ ಅಪಾರ್ಟ್‌ಮೆಂಟ್ ಸಮುಚ್ಚಯದ ಜಿಬಿ ಬೆಂಗಾಲಿ ಅಸೋಸಿಯೇಷನ್ ವತಿಯಿಂದ 7 ಅಡಿ ಎತ್ತರದ ಸರಸ್ವತಿ ವಿಗ್ರಹವನ್ನು ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲಾಯಿತು.

ಸರ್ವಜ್ಞ ಸ್ಕಿಲ್ ಡೆವಲಪ್ಮೆಂಟ್ ಸೆಂಟರ್

ಉದ್ಯೋಗ ಮತ್ತು ಆರ್ಥಿಕ ಭದ್ರತೆಗಾಗಿ ಕೌಶಲ್ಯಗಳು

ಉದ್ಯೋಗ ಮತ್ತು ಆರ್ಥಿಕ ಭದ್ರತೆಗಾಗಿ ಕೌಶಲ್ಯಗಳು ಸರ್ವಜ್ಞನಗರದ ಶಾಸಕ ಕೆ ಜೆ ಜಾರ್ಜ್ ಅವರ ಉಸ್ತುವಾರಿಯ ಈ ಕೇಂದ್ರವು ವಿದ್ಯಾರ್ಥಿಗಳಿಗೆ ತಾಂತ್ರಿಕ ತರಬೇತಿಯನ್ನು ಉಚಿತವಾಗಿ ನೀಡುತ್ತದೆ. ಅವರು ಉದ್ಯೋಗವನ್ನು ಹುಡುಕಲು ಅಥವಾ ಸ್ವತಂತ್ರ ವೃತ್ತಿಪರರಾಗಲು ಇದು ಸಹಾಯಕ.

ಉದ್ಯೋಗವು ಉದ್ಯೋಗಾವಕಾಶದೊಂದಿಗೆ ಬರುತ್ತದೆ. ಹೆಚ್ಚಿನ ಸಂಖ್ಯೆಯ ಯುವಕರು ಮತ್ತು ಪ್ರತಿಭಾವಂತ ಚುರುಕು ಬುದ್ದಿಯ ಯುವಕರು ಲಾಭದ ಉದ್ಯೋಗವನ್ನು ಹುಡುಕುವಲ್ಲಿ ವಿಫಲರಾಗಿದ್ದಾರೆ. ಏಕೆಂದರೆ ಅವರು ಉದ್ಯೋಗಪರ ಪದವಿಯನ್ನು ಹೊಂದಿಲ್ಲದಿರುವ ಕಾರಣ.

ಅವರಿಗೆ ಉದ್ಯೋಗಾವಕಾಶದಿಂದ ದೂರವಾಗುತ್ತದೆ. ಕೌಶಲ್ಯದೊಂದಿಗೆ ಕಾಲೇಜು ಶಿಕ್ಷಣವನ್ನು ಪೂರ್ಣಗೊಳಿಸದ ಯುವಕರನ್ನು ಸಬಲೀಕರಣಗೊಳಿಸುವುದು ಅವರ ಆರ್ಥಿಕ ಸೇರ್ಪಡೆಗೆ ಪ್ರಮುಖವಾಗಿದೆ. ತರಬೇತಿಪಡೆದ ಕೌಶಲ್ಯ ಅಥವಾ ಡೊಮೇನ್ ಜ್ಞಾನವನ್ನು ಉದ್ಯಮಶೀಲತೆ ಹೆಚ್ಚಿಸಿಕೊಳ್ಳಲು ಅಥವಾ ಉದ್ಯೋಗದ ಮೂಲಕ ಹಣಗಳಿಕೆಗೆ ದಾರಿಯಾಗುತ್ತದೆ. ಅಂತಹ ಅನೇಕ ನುರಿತ ಜನರು ತರಬೇತಿ ಪಡೆದವರು ಮತ್ತು ಇತರರನ್ನು ನೇಮಿಸಿಕೊಳ್ಳುತ್ತಿದ್ದಾರೆ.

ನಗರದ ಸರ್ವಜ್ಞನಗರದಲ್ಲಿರುವ ಸರ್ವಜ್ಞ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್, ಸರ್ವಜ್ಞನಗರದ ಶಾಸಕ ಕೆ ಜೆ ಜಾರ್ಜ್ ಅವರ ಉಪಕ್ರಮವಾಗಿದ್ದು, ಯುವಕರಿಗೆ ಉದ್ಯೋಗವನ್ನು ಹುಡುಕಲು ಅಥವಾ ವೃತ್ತಿಜೀವನವನ್ನು ಗಳಿಸಲು ಸಹಾಯ ಮಾಡುವ ಉದ್ದೇಶದಿಂದ ಕೌಶಲ್ಯದೊಂದಿಗೆ ಸಜ್ಜುಗೊಳಿಸುವುದು ಇದರ ಉದ್ದೇಶವಾಗಿದೆ.

ಆರ್ಥಿಕ ಸಬಲೀಕರಣವು ದೀರ್ಘಾವಧಿಯ ಯೋಜನೆಯಾಗಬೇಕು. ನೀವು ಉದ್ಯೋಗಾವಕಾಶವನ್ನು ಸೃಷ್ಟಿಸಿದಾಗ ಅಥವಾ ವ್ಯಕ್ತಿ ಉದ್ಯೋಗವನ್ನು ಪಡೆಯುವ ಕೌಶಲ್ಯದಿಂದ ಯಾರನ್ನಾದರೂ ಸಜ್ಜುಗೊಳಿಸಿದಾಗ ನೀವು ಕುಟುಂಬಕ್ಕೆ ಆರ್ಥಿಕ ಭದ್ರತೆಯನ್ನು ಖಚಿತಪಡಿಸುತ್ತೀರಿ. ತಮ್ಮ ಕುಟುಂಬದ ಆರ್ಥಿಕ ಭದ್ರತೆಯನ್ನು ಖಾತ್ರಿಪಡಿಸುವ ಉದ್ಯೋಗಸ್ಥ ಯುವಕರನ್ನು ಸೃಷ್ಟಿಸುವ ಉದ್ದೇಶದಿಂದ ನಾನು ಈ ಕೇಂದ್ರವನ್ನು ಪ್ರಾರಂಭಿಸಿದೆ," ಎಂದು ಕೆ ಜೆ ಜಾರ್ಜ್ ಹೇಳುತ್ತಾರೆ. ಈ ಕೇಂದ್ರವು ಯುವಕರಿಗೆ ಡೇಟಾ ಎಂಟ್ರಿ ಮತ್ತು ಎಲೆಕ್ಟ್ರಿಕಲ್ ಕ್ಷೇತ್ರಗಳಲ್ಲಿ ತರಬೇತಿ ನೀಡುತ್ತದೆ. ಶೀಘ್ರದಲ್ಲೇ ಅವರು ಮೊಬೈಲ್ ರಿಪೇರಿ ಕೋರ್ಸ್ ಅನ್ನು ಪ್ರಾರಂಭಿಸಲು ಯೋಜಿಸಿದ್ದಾರೆ. ಯುವಕರಿಗೆ ಪ್ರಿ-ಯೂನಿವರ್ಸಿಟಿಯ ಮೂಲಭೂತ ಅರ್ಹತೆಯ ಅಗತ್ಯವಿದೆಯೇ ಹೊರತು ಯಶಸ್ವಿಯಾಗಿ ಪೂರ್ಣಗೊಳಿಸಬೇಕಾಗಿಲ್ಲ. ಕೇಂದ್ರವು ಮೂರು ತಿಂಗಳ ಕೋರ್ಸ್‌ಗಳನ್ನು ನೀಡುತ್ತದೆ, ಅಲ್ಲಿ ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಪಠ್ಯದ ಹೊರತಾಗಿ ತರಬೇತಿ ನೀಡಲಾಗುತ್ತದೆ.

ಸರ್ವಜ್ಞ ಕೌಶಲ್ಯ ಅಭಿವೃದ್ಧಿ ಕೇಂದ್ರವು ಪರಿಣಾಮಕಾರಿ ತರಬೇತಿಗಾಗಿ ಮೂಲಸೌಕರ್ಯ ಮತ್ತು ಪ್ರತಿಭೆಯನ್ನು ಹೊಂದಿದೆ. ಕೋರ್ಸ್‌ಗಳು ಸಮಗ್ರವಾಗಿರುತ್ತವೆ ಮತ್ತು ಸುಶಿಕ್ಷಿತ ಸಿಬ್ಬಂದಿಯಿಂದ ನಡೆಸಲ್ಪಡುತ್ತವೆ. ಇಲ್ಲಿ ನೀಡಲಾಗುವ ತರಬೇತಿಯು ವಿದ್ಯಾರ್ಥಿಗಳ ಸಮಗ್ರ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ ಮತ್ತು ಅವರು ಎದುರಿಸಬೇಕಾದ ಸವಾಲುಗಳನ್ನು ನಿರ್ವಹಿಸಲು ಸಹಾಯ ಮಾಡುತ್ತದೆ.

ತಾಂತ್ರಿಕ ಅಂಶದ ಹೊರತಾಗಿ, ಸಂಸ್ಥೆಯು ಉದ್ಯೋಗ ಮತ್ತು ಜೀವನ-ಕೌಶಲ್ಯದ ಮೂಲಭೂತ ಅಂಶಗಳನ್ನು ಒಳಗೊಂಡಿದೆ.

ಕೋರ್ಸ್ ಘಟಕ

ಡೇಟಾ ಎಂಟ್ರಿ ಆಪರೇಟರ್: ಈ ಕೋರ್ಸ್‌ನಲ್ಲಿ, ವಿದ್ಯಾರ್ಥಿಗಳಿಗೆ ವೈಯಕ್ತಿಕ ಕಂಪ್ಯೂಟರ್ ಮತ್ತು ಸೂಕ್ತವಾದ ಸಾಫ್ಟ್‌ವೇರ್ ಬಳಸಿ ಡೇಟಾ ಎಂಟ್ರಿಯಲ್ಲಿ ತರಬೇತಿ ನೀಡಲಾಗುತ್ತದೆ. ಕೋರ್ಸ್ ಅನ್ನು ಸಜ್ಜುಗೊಳಿಸಲು ವಿನ್ಯಾಸಗೊಳಿಸಲಾಗಿದೆ. ಇದರಲ್ಲಿ ತರಬೇತಿ ಹೊಂದುವ ವಿದ್ಯಾರ್ಥಿಗಳು ವಿವಿಧ ಹಂತಗಳಲ್ಲಿ ಡೇಟಾವನ್ನು ನಮೂದಿಸಲು, ನವೀಕರಿಸಲು, ಮರುಶೋಧಿಸಲು, ಪರಿಶೀಲಿಸಲು ಮತ್ತು ಹಿಂಪಡೆಯಲು ಕೌಶಲ್ಯಗಳನ್ನು ಹೊಂದಿರುತ್ತಾರೆ. ಕೋರ್ಸ್ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹುಟ್ಟುಹಾಕುತ್ತದೆ ಮತ್ತು ನಿಖರತೆ, ಗೌಪ್ಯತೆಯನ್ನು ಕಾಪಾಡಿಕೊಳ್ಳುವ ಅಗತ್ಯತೆಯಂತಹ ವ್ಯವಹಾರದ ಮಾನದಂಡಗಳನ್ನು ಮೌಲ್ಯಮಾಪನ ಮಾಡುತ್ತದೆ.

ಅಭ್ಯರ್ಥಿಗಳು, ಕೋರ್ಸ್ ಮುಗಿದ ನಂತರ, ಡೇಟಾವನ್ನು ನಿರ್ವಹಿಸಲು ಮತ್ತು ನಿರ್ಮಿಸಲು ಸಂಕ್ಷಿಪ್ತವಾಗಿ ಸ್ವತಂತ್ರವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ, ಮತ್ತು ದೋಷಗಳನ್ನು ಪರಿಹರಿಸಲು ಅಥವಾ ದೋಷನಿವಾರಣೆ ಮಾಡಲು ಸಹ ಸಾಧ್ಯವಾಗುತ್ತದೆ. ಅವರು ಎಲ್ಲಾ ವಲಯಗಳಲ್ಲಿ ಡೇಟಾ ಎಂಟ್ರಿಯಲ್ಲಿ ಅವಕಾಶವನ್ನು ಕಂಡುಕೊಳ್ಳಲು ಸಜ್ಜುಗೊಳಿಸುತ್ತಾರೆ.



ಸರ್ವಜ್ಞನಗರದ ಸರ್ವಜ್ಞ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್‌ನ ವಿದ್ಯಾರ್ಥಿಗಳು, ಅವರ ಕುಟುಂಬ ಮತ್ತು ಅಧ್ಯಾಪಕರೊಂದಿಗೆ ಕೆ ಜೆ ಜಾರ್ಜ್ ಅವರು ತರಬೇತಿ ಮುಗಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಿ ವಿದ್ಯಾರ್ಥಿಗಳು ಮತ್ತು ತರಬೇತುದಾರರೊಂದಿಗೆ ಸಂವಾದ ನಡೆಸಿದರು.



ಕೋರ್ಸ್‌ಗಳ ಅವಧಿ:
ಮೂರು ತಿಂಗಳು
ಅರ್ಹತೆ: **PUC** (ಪಾಸ್ ಅಥವಾ ಅಪೂರ್ಣ)
ಯಾವುದೇ ಶುಲ್ಕ ಇಲ್ಲ
ಸರ್ವಜ್ಞ ಕೌಶಲ್ಯ ಅಭಿವೃದ್ಧಿ ಕೇಂದ್ರ
ಅಂಬೇಡ್ಕರ್ ಭವನ, ಮುದ್ದಪ್ಪ ಗಾರ್ಡನ್,
ಕಾಕ್ಸ್ ಟೌನ್, ಜೀವನಹಳ್ಳಿ,
ಮಾರುತಿ ಸೇವಾ ನಗರ,
ಬೆಂಗಳೂರು 560 005
ಮೊ: +91 81974 48398

ಎಲೆಕ್ಟ್ರಿಕಲ್ ತಂತ್ರಜ್ಞ

ಈ ಕೋರ್ಸ್ ವಿದ್ಯಾರ್ಥಿಗಳಿಗೆ ವಿದ್ಯುತ್ ಸಂಪರ್ಕಗಳಿಗೆ ವೈರಿಂಗ್, ದೋಷನಿವಾರಣೆ ಮತ್ತು ಪೂರೈಕೆಯಲ್ಲಿನ ದೋಷಗಳ ದುರಸ್ತಿಗೆ ತಾಂತ್ರಿಕ ಜ್ಞಾನವನ್ನು ನೀಡುತ್ತದೆ. ಕೋರ್ಸ್ ಗೃಹ/ಕಚೇರಿ ವಿದ್ಯುತ್ ದುರಸ್ತಿ ಮತ್ತು ನಿರ್ವಹಣೆಯಲ್ಲಿ ಅಭ್ಯರ್ಥಿಗಳಿಗೆ ತರಬೇತಿ ನೀಡುತ್ತದೆ-

ಮೋಟಾರ್‌ಗಳು, ಇನ್‌ವರ್ಟರ್‌ಗಳು, ಸ್ಟೆಬಿಲೈಸರ್‌ಗಳು, ವಾಟರ್ ಪಂಪ್‌ಗಳು ಇತ್ಯಾದಿ ಸೇರಿದಂತೆ ಕ್ಯಾಲ್ ಫಿಟ್ಟಿಂಗ್‌ಗಳು ಮತ್ತು ಫಿಕ್ಚರ್‌ಗಳು ನಿರ್ವಹಿಸಬಹುದು. ತರಬೇತಿಯು ಸುರಕ್ಷತೆ ಮತ್ತು ಮೂಲ ವ್ಯಾಪಾರದ ಮಾನದಂಡಗಳ ಹೊರತಾಗಿ ನಿರ್ವಹಣೆ ಮತ್ತು ದೋಷ ದುರಸ್ತಿಯನ್ನು ಒಳಗೊಂಡಿದೆ.

ಪೂರ್ಣಗೊಂಡ ನಂತರ, ವಿದ್ಯಾರ್ಥಿಗಳು ಸಂಸ್ಥೆಯಲ್ಲಿ ಎಲೆಕ್ಟ್ರಿಷಿಯನ್ ಆಗಿ ಅವಕಾಶವನ್ನು ಕಂಡುಕೊಳ್ಳಬಹುದು ಅಥವಾ ಕರೆಯಲ್ಲಿ ಸ್ವತಂತ್ರ ವೃತ್ತಿಪರರಾಗಿ ಕೆಲಸ ಮಾಡಬಹುದು.

ಸರ್ವಜ್ಞ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್ ಸರ್ವಜ್ಞನಗರ ಕ್ಷೇತ್ರದಲ್ಲಿ ಕೆ ಜೆ ಜಾರ್ಜ್ ಅವರ ಅಧ್ಯಕ್ಷತೆಯಲ್ಲಿ ಸರ್ವಜ್ಞ ಹೆಲ್ತ್ ಕೇರ್ ಇನ್‌ಸ್ಟಿಟ್ಯೂಟ್ (SHCI)ನ ಅಂಗಸಂಸ್ಥೆಯಾಗಿದೆ. ಗುಣಮಟ್ಟದ ಕೌಶಲ್ಯ ತರಬೇತಿಯ ಮೂಲಕ ಸಮಾಜದ ಹಿಂದುಳಿದ ವರ್ಗದ ಮಹಿಳೆಯರನ್ನು ಸಬಲೀಕರಣಗೊಳಿಸುವುದು ಇದರ ಗುರಿಯಾಗಿದೆ. ಇದು ಅವರಿಗೆ ಜೀವನೋಪಾಯಕ್ಕೆ ಸಹಾಯ ಮಾಡುತ್ತದೆ

ಮೊದಲ ಕೇಂದ್ರವು 2017ರ ಏಪ್ರಿಲ್‌ನಲ್ಲಿ ಕಾಡುಗೊಂಡನಹಳ್ಳಿಯ ವಿನೋಭಾ ನಗರದಲ್ಲಿ ಮಹಿಳೆಯರಿಗೆ ಗುಣಮಟ್ಟದ ಕೌಶಲ್ಯ ತರಬೇತಿಯನ್ನು ನೀಡುವ ಉದ್ದೇಶದಿಂದ ಕಾರ್ಯನಿರ್ವಹಿಸಲು ಪ್ರಾರಂಭಿಸಿತು.

ಕೇಂದ್ರದ ಪ್ರಮುಖ ತರಬೇತಿ ಕಾರ್ಯಕ್ರಮಗಳೆಂದರೆ ಮೂಲ ಕಂಪ್ಯೂಟರ್ ತರಬೇತಿ, ಟೈಲರಿಂಗ್ ಮತ್ತು ಕಸೂತಿ, ಮತ್ತು ಕಲೆ ಮತ್ತು ಕರಕುಶಲ.

ನುರಿತವರಿಗೆ ಹೆಚ್ಚಿನ ಬೇಡಿಕೆ

ಉತ್ತಮ ತರಬೇತಿ ಪಡೆದ ಮತ್ತು ಬದ್ಧತೆಯಿರುವ ವೃತ್ತಿಪರರು ಇಂದಿನ ಬೇಡಿಕೆಗೆ ಅನುಗುಣವಾಗಿ ಯಾವಾಗಲೂ ಅವಕಾಶವನ್ನು ಕಂಡುಕೊಳ್ಳುತ್ತಾರೆ. "ಈ ತರಬೇತಿ ಕೇಂದ್ರವು ಈ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಮತ್ತು ಉತ್ತಮ ಜೀವನವನ್ನು ಗಳಿಸಲು ವಿದ್ಯಾರ್ಥಿಗಳನ್ನು ಸಿದ್ಧಪಡಿಸುತ್ತದೆ. ಕೌಶಲ್ಯ ಮತ್ತು ವೃತ್ತಿಪರ ಮನೋಭಾವವನ್ನು ಹೊಂದಿರುವ ಜನರನ್ನು ರೂಪುಗೊಳಿಸುವ ಆಲೋಚನೆಯು ಅವರಿಗೆ ಅಗತ್ಯವಿರುವ ಲಾಭದಾಯಕ ಉದ್ಯೋಗವನ್ನು ನೀಡುತ್ತದೆ" ಎಂದು ಜಾರ್ಜ್ ವಿವರಿಸುತ್ತಾರೆ.

⌘



ತರಹೇವಾರಿ ತರಕಾರಿ ತಿನಿಸು

ಆಹಾರ

ಸೀಜನ್ ಬಂತೆಂದರೆ ದೊಡ್ಡಗಾತ್ರದ ಕ್ಯಾಬೇಜ್, ಕುಂಬಳಕಾಯಿ ಕಡಿಮೆ ದರದಲ್ಲಿ ಸಿಗುತ್ತದೆ. ಹಾಗಿದ್ದಾಗ ಇವೆಲ್ಲವನ್ನೂ ಬಳಸಿ ಕೇವಲ ಪಲ್ಯ ಸಾಂಬಾರ್ ಮಾಡಿ ಖಾಲಿ ಮಾಡಲು ಸಾಧ್ಯವಿಲ್ಲ. ಬೆಳಗಿನ ತಿಂಡಿ ಮಾಡಲು ಇಂತಹ ತರಕಾರಿ ಬಳಸಿದರೆ ರುಚಿ ಜೊತೆಗೆ ಆರೋಗ್ಯ ಒಟ್ಟಿಗೆ ಸಿಗುತ್ತದೆ.
ಇಂಥ ವಿಶಿಷ್ಟ ಖಾದ್ಯಗಳ ರೆಸಿಪಿಯನ್ನು ಪರಿಚಯಿಸಿದ್ದಾರೆ **ಜಾನಕಿ ಎಸ್.**

ಕಬ್ಬಿನ ಹಾಲು ಹಲ್ವ (ಮಣ್ಣಿ)

ಬೇಕಾಗುವ ಪದಾರ್ಥಗಳು: ಕಬ್ಬಿನ ಹಾಲು ಅರ್ಧ ಲೀಟರ್, ಅಕ್ಕಿ ಒಂದು ಕಪ್, ಏಲಕ್ಕಿ 1-2, ತುಪ್ಪ ಸ್ವಲ್ಪ, ಬೆಲ್ಲ ಸ್ವಲ್ಪ.
ಮಾಡುವ ವಿಧಾನ: ಅಕ್ಕಿಯನ್ನು ತೊಳೆದು ಸ್ವಲ್ಪ ನೀರಿನಲ್ಲಿ 2 ಗಂಟೆ ನೆನೆಸಿ ಇಟ್ಟು ಸ್ವಲ್ಪ ಕಬ್ಬಿನ ರಸ ಸೇರಿಸಿ ಏಲಕ್ಕಿ ಹಾಕಿ ನುಣ್ಣಗೆ ರುಬ್ಬಬೇಕು.ದಪ್ಪ ಬಾಣಲೆಗೆ ಮಿಶ್ರಣವನ್ನು ಹಾಕಿ ಇನ್ನಷ್ಟು ಕಬ್ಬಿನ ರಸ ಸೇರಿಸಿ ಬೆಲ್ಲ ಸ್ವಲ್ಪ ಸೇರಿಸಿ ತಳ ಬಿಡುವವರೆಗೆ ಕಾಯಿಸಿ ಬೆಂದ ನಂತರ ತುಪ್ಪ ಸವರಿದ ಪ್ಲೇಟ್ ಗೆ ಸುರವಿ ಸಮನಾಗಿ ಹರಡ ಬೇಕು.ತಣ್ಣಗಾದಮೇಲೆ ಬೇಕಾದ ಆಕಾರಕ್ಕೆ ಕಟ್ ಮಾಡಿದರೆ ರುಚಿಯಾದ ಹಲ್ವ ರೆಡಿ.



ಸಿಹಿ ಕುಂಬಳಕಾಯಿ ಇಡ್ಲಿ

ಬೇಕಾಗುವ ಪದಾರ್ಥಗಳು: ತುರಿದ ಸಿಹಿ ಕುಂಬಳಕಾಯಿ ಒಂದು ದೊಡ್ಡ ಬೌಲ್, ಇಡ್ಲಿ ರವೆ 11/2 ಕಪ್, ಮೊಸರು 1 ಸೌಟು, ಒಗ್ಗರಣೆಗೆ ಎಣ್ಣೆ ಸಾಸಿವೆ ಕರಿಬೇವು ಹಸಿಮೆಣಸು ಒಂದೆರಡು,ರುಚಿಗೆ ಉಪ್ಪು.
ಮಾಡುವ ವಿಧಾನ: ರವೆ ಸ್ವಲ್ಪ ಹುರಿದುಕೊಳ್ಳಿ. ಒಗ್ಗರಣೆಗೆ ಎಣ್ಣೆ ಹಾಕಿ ಸಾಸಿವೆ ಕರಿಬೇವು ಹಸಿಮೆಣಸು ಸೇರಿಸಿ ಕಾಯಿಸಿ ನಂತರ ಒಲೆಯಿಂದ ಇಳಿಸಿ, ರವೆ ಚೆನ್ನಾಗಿ ತೊಳೆದು ನೀರು ಬಸಿದು ಮೊಸರು , ಕುಂಬಳಕಾಯಿ ತುರಿ ಎಲ್ಲಾ ಸೇರಿಸಿ ಕಲಸಿ ಒಂದು ತಾಸು ನೆನೆಯಲು ಬಿಡಬೇಕು. ಇಡ್ಲಿ ಅಚ್ಚಿಗೆ ಹಾಕಿ 15 ನಿಮಿಷ ಬೇಯಿಸಿದರೆ ಸಾರು ಅಥವಾ ಚಟ್ನಿ ಯೊಂದಿಗೆ ಇಡ್ಲಿ ಸವಿಯಲು ಸಿದ್ಧ.



ಕ್ಯಾಬೇಜ್ ವಡಪ್ಪೆ

ಬೇಕಾಗುವ ಪದಾರ್ಥಗಳು: ಸಣ್ಣಗೆ ಕತ್ತರಿಸಿದ ಕ್ಯಾಬೇಜ್ 1 ದೊಡ್ಡ ಬೌಲ್, ಹಸಿಮೆಣಸು 2, ಈರುಳ್ಳಿ 2, ಕೊತ್ತಂಬರಿ ಸೊಪ್ಪು ಸ್ವಲ್ಪ, ಮೊಸರು ಒಂದು ಸೌಟು, ಅಕ್ಕಿ ಹಿಟ್ಟು ಒಂದು ಬಟ್ಟಲು, ಎಣ್ಣೆ.
ಮಾಡುವ ವಿಧಾನ: ಎಲ್ಲಾ ಪದಾರ್ಥಗಳನ್ನು ಉಪ್ಪು ಹಾಕಿ ಚೆನ್ನಾಗಿ ಕಲೆಸಬೇಕು. ಅದಕ್ಕೆ ಅಕ್ಕಿ ಹಿಟ್ಟು ಸ್ವಲ್ಪ ಸ್ವಲ್ಪ ಸೇರಿಸಿ ಕಲಸಿ ಅರ್ಧ ತಾಸು ಬಿಡಬೇಕು. ಒಂದು ಮುದ್ದೆಯಷ್ಟು ಕಲಸಿದ ಹಿಟ್ಟನ್ನು ತೆಗೆದುಕೊಂಡು ತೆಳುವಾಗಿ ಹೋಳಿಗೆ ಲಟ್ಟಿಸುವ ಹಾಳೆಯಮೇಲೆ ತಟ್ಟಿ ತವದ ಮೇಲೆ ಹಾಕಿ ಪೇಪರ್ ತೆಗೆದು ಎಣ್ಣೆ ಬಿಟ್ಟು ಎರಡು ಕಡೆ ಬೇಯಿಸಿದರೆ ರುಚಿಕರವಾದ ಕ್ಯಾಬೇಜ್ ವಡಪೆ ತಿಂಡಿ ರೆಡಿ.

ಹೊಸ ತಂತ್ರಜ್ಞಾನ, ಅತ್ಯಾಧುನಿಕ ಸೌಲಭ್ಯಗಳುಳ್ಳ ಮಯ್ಯ ಆಸ್ಪತ್ರೆ



ಪುನರ್ ಸಮರ್ಪಣಗೊಂಡ ಮಯ್ಯ ಆಸ್ಪತ್ರೆ

ಮಯ್ಯ ಆಸ್ಪತ್ರೆಯೆಂದಾಕ್ಷಣ ಬೆಂಗಳೂರಿಗರ ಕಣ್ಮುಂದೆ ಬರುವ ಚಿತ್ರಣವೆಂದರೇ, ಐತಿಹಾಸಿಕ ಅಶೋಕಸ್ಥಂಬ ಮತ್ತು ಜನ ಸಾಮಾನ್ಯರಿಗೆ ಅಂತಃಕರಣದಿಂದ ವೈದ್ಯಕೀಯ ಸೇವೆಗಳು ಎಟುಕುವಂತೆ ಮಾಡಿದ ಮಯ್ಯ ಆಸ್ಪತ್ರೆ ಕಾರ್ಪೊರೇಟ್ ಹಂಗುಗಳಿಂದ ದೂರ ಉಳಿದು ಸೇವೆಯನ್ನೇ ತನ್ನತನವನ್ನಾಗಿಸಿಕೊಂಡು 44 ವರ್ಷಗಳ ಸಾರ್ಥಕ ಸೇವೆ ಒದಗಿಸಿ ತನ್ನ ಹೆಸರನ್ನು ಜನರ ಮನಸ್ಸಿನಲ್ಲಿ ನೆಲೆಯೂರುವಂತೆ ಮಾಡಿಕೊಂಡಿದೆ.

44 ವರ್ಷಗಳ ಭವ್ಯ ಪರಂಪರೆಯ ಸವಿ ನೆನಪಿನಲ್ಲಿ ಇತ್ತೀಚೆಗಷ್ಟೆ ಜನರಿಗೆ ಉನ್ನತ ಸೇವೆ ಒದಗಿಸಲು ಮತ್ತು ಆಧುನೀಕರಣದ ಮೆರುಗುಗಳನ್ನ ತನ್ನದಾಗಿಸಿಕೊಂಡಿರುವ ಮಯ್ಯ ಆಸ್ಪತ್ರೆ ಇದೇ ತಿಂಗಳ 16ರಂದು ಪುನರ್ ಸಮರ್ಪಣೆಗೊಂಡಿದೆ.

1979 ರಲ್ಲಿ ಮಹಾಬಲೇಶ್ವರ್ ಮಯ್ಯ ಮತ್ತು ಸಮಾನ ಮನಸ್ಕ ವೈದ್ಯರಿಂದ ಪ್ರಾರಂಭಗೊಂಡಿದ್ದ ಮಯ್ಯ ಆಸ್ಪತ್ರೆ ಹಲವು ಆಯಾಮಗಳನ್ನು ಅನ್ವಯಿಸಿಕೊಳ್ಳುತ್ತಾ ಜನಸಾಮಾನ್ಯರಿಗೆ ಅಂತಃಕರಣ ಮತ್ತು ಸೇವಾ ಮನೋಭಾವದಿಂದ ಪ್ರಾರಂಭಗೊಂಡಿದ್ದು ಅವರ ನಿರ್ಗಮನದ ನಂತರವೂ ಅದೇ ಸದುದ್ದೇಶ ಮತ್ತು ಸೇವಾ ಮನೋಭಾವವನ್ನು ಉಳಿಸಿಕೊಂಡು ಹೆಮ್ಮೆಯ ಹಾದಿಯಲ್ಲಿ ನಡೆದಿದೆ.

ಸುಮಾರು 15 ರಿಂದ 40 ವರ್ಷಗಳು ಇದೇ ಆಸ್ಪತ್ರೆಯಲ್ಲಿ ನಿರಂತರ ಸೇವೆಯಲ್ಲಿ ತೊಡಗಿಸಿಕೊಂಡ ವೈದ್ಯರ ಸಹಕಾರದೊಂದಿಗೆ ಡಾ.ಗುರಪ್ಪನಾಯ್ಡು ರವರ ನೇತ್ರತ್ವದಲ್ಲಿ ಆಸ್ಪತ್ರೆ ಬಹಳಷ್ಟು ಅಭಿವೃದ್ಧಿಗೊಂಡಿದೆ, ವೈದ್ಯಕೀಯ ಕ್ಷೇತ್ರದಲ್ಲಿ ನಡೆದಂತಹ ಹತ್ತು ಹಲವು ಬೆಳವಣಿಗೆಗಳನ್ನ ಒಳಗೊಂಡಂತೆ ಆಧುನಿಕ ತಂತ್ರಜ್ಞಾನದ ಎಲ್ಲಾ ಸೌಲಭ್ಯಗಳನ್ನು ಒದಗಿಸಿ, ತನ್ನ 44 ವರ್ಷಗಳ ಹೆಮ್ಮೆಯ ಸೇವಾ ಸಾಧನೆಗಾಗಿ ನವೀಕರಿಸಿದ ಸೌಲಭ್ಯಗಳು ಕಟ್ಟಡ ಮತ್ತು



ಡಾ.ಬಿ.ಗುರಪ್ಪ ನಾಯ್ಡು



ಡಾ.ಬಿ.ಜಿ ಮಹೇಶ್

ನೂತನ ಯೋಜನೆಗಳನ್ನು ಡಾ.ಗುರಪ್ಪನಾಯ್ಡು ರವರು ಆಸ್ಪತ್ರೆಗೆ ಕೊಡುಗೆಯನ್ನಾಗಿ ನೀಡಿ ಪುನರ್ ಸಮರ್ಪಣೆ ನಡೆಸಿದ್ದಾರೆ.

ಈ ನವೀಕರಣದ ಕಾಮಗಾರಿಯಲ್ಲಿ ಸಿಬ್ಬಂದಿಗಾಗಲೀ, ವೈದ್ಯರಿಗಾಗಲೀ ಮತ್ತು ಮುಖ್ಯವಾಗಿ ರೋಗಿಗಳಿಗೆ ಯಾವುದೇ ತೊಂದರೆ ಮತ್ತು ಸೇವೆಗೆ ಅಡಚಣೆಯಾಗದಂತೆ ಕ್ರಮವಹಿಸಿ ಕೇವಲ 4 ತಿಂಗಳಲ್ಲಿ ನವೀಕರಿಸಿದ ಆಸ್ಪತ್ರೆಯನ್ನು ಬೆಂಗಳೂರಿನ ಜನರ ಸೇವೆಗಾಗಿ ಸಿದ್ಧಪಡಿಸಿದ್ದಾರೆ.

ನವ ಚೈತನ್ಯದ ಚಿಲುಮೆ ಮತ್ತು ವೈದ್ಯಕೀಯ ಪರಿಣತಿ ಹೊಂದಿದ ಹೊಸ ರೂವಾರಿ ಡಾ.ಬಿ. ಜಿ. ಮಹೇಶ್ ರವರು ತಮ್ಮ ತಂದೆಯವರಿಂದ ವ್ಯವಸ್ಥಾಪಕ ನಿರ್ದೇಶಕರಾಗಿ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ.

ಸ್ವತಃ ರೇಡಿಯೋಲಜಿಸ್ಟ್ ಆಗಿರುವ ಡಾ. ಮಹೇಶ್‌ರವರು ಆಧುನಿಕ ತಂತ್ರಜ್ಞಾನದ ಸೌಲಭ್ಯಗಳನ್ನ ಒದಗಿಸಿರುವುದರಲ್ಲಿ ಅತ್ಯಂತ ನಿಷ್ಠೆಯಿಂದ ಶ್ರಮವಹಿಸಿದ್ದಾರೆ, ವಿಶ್ವದರ್ಜೆಯ ಮಾಡ್ಯೂಲರ್ OT. Gynec OT ಎಮರ್ಜೆನ್ಸಿ, ಡಿಜಿಟಲ್ ಎಕ್ಸ್‌ರೇ, ಮುಂತಾದ ಹತ್ತು ಹಲವು ಸೌಲಭ್ಯಗಳನ್ನು ಒದಗಿಸುವಂತಹ ಈ ನವೀಕರಿಸಿದ ಆಸ್ಪತ್ರೆಯನ್ನು ಇದೇ ಮಾಹೆಯ 16 ರಂದು ನಡೆದ ಪುನರ್ ಸಮರ್ಪಣಾ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ವಿರೋಧಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ ರವರೊಂದಿಗೆ ರಾಮಲಿಂಗಾರೆಡ್ಡಿ, ದಿನೇಶ್ ಗುಂಡುರಾವ್, ಕೃಷ್ಣ ಭೈರೇಗೌಡ, ಡಾ. ಅಜೆಯ್ ಸಿಂಗ್, ಜಮೀರ್ ಅಹಮದ್ ಅವರೊಂದಿಗೆ ಬೆಂಗಳೂರಿನ ಹಲವು ಶಾಸಕರು, ಮಾಜಿ ಸಚಿವರು ಮತ್ತು ನಾಯಕರು ಭಾಗವಹಿಸಿದ್ದರು.

ಮಯ್ಯ ಆಸ್ಪತ್ರೆ ಎಲ್ಲಾ ಆಧುನಿಕ ಹಾಗೂ ತಂತ್ರಜ್ಞಾನದ ಸೌಲಭ್ಯಗಳನ್ನ ಒದಗಿಸಿಕೊಂಡಿದ್ದರೂ ಇದರ ಘನೋದ್ದೇಶ ಮತ್ತು ಮುನ್ನೋಟ ಬದಲಾಗಿಲ್ಲ ಎಂದು ಡಾ.ಬಿ.ಜಿ. ಮಹೇಶ್ ರವರು ತಿಳಿಸಿದ್ದಾರೆ.

15 ರಿಂದ 40 ವರ್ಷ ನಿರಂತರ ಸೇವೆ ಸಲ್ಲಿಸುತ್ತಿರುವ ವೈದ್ಯರೇ ನಮ್ಮ ಶಕ್ತಿ ಎಂದು ಹೆಮ್ಮೆಯಿಂದ ಹೇಳುವ ಡಾ.ಬಿ.ಜಿ.ಮಹೇಶ್ ರವರು ಆಸ್ಪತ್ರೆಯಲ್ಲಿ ಇತ್ತೀಚೆಗಷ್ಟೆ ಸೇರ್ಪಡೆಯಾದ ಹೊಸ ವಿಭಾಗಗಳು ಹಾಗೂ ಸ್ಪೆಷಾಲಿಟಿ ಸೇವೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಎಲ್ಲಾ ತರಹದ ಶಸ್ತ್ರಚಿಕಿತ್ಸೆಗಳು ವೈದ್ಯಕೀಯ ಸೇವೆಗಳು 24X7 ಒದಗಿಸುವಲ್ಲಿ ಅಡಚಣೆಯಾಗದಂತೆ ಮಯ್ಯ ಫಾರ್ಮಸಿ ಮತ್ತು ಮಯ್ಯ ಡಯಾಗ್ನಾಸ್ಟಿಕ್ ಕುರಿತು ಮಾಹಿತಿ ನೀಡಿದ್ದಾರೆ.

ಯುವ ಪೀಳಿಗೆಯ ಪ್ರತೀಕವಾಗಿರುವ ಡಾ.ಬಿ. ಜಿ. ಮಹೇಶ್ ಅವರು ಮಯ್ಯ ಆಸ್ಪತ್ರೆಯ ಹೊಸ ಕನಸುಗಳನ್ನ ಸಾಕಾರಗೊಳಿಸುವ ಭರವಸೆಯನ್ನು ಹೊಂದಿದ್ದಾರೆ

ಎಲ್ಲಾ ಆಸ್ಪತ್ರೆಗಳಿಗೆ ಭಿನ್ನವಾದ ಮಯ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಎಲ್ಲಿ ನೋಡಿದರೂ ಹಸಿರು ಗಿಡಗಳು ಮನೆಯ ನೆಮ್ಮದಿ ಮತ್ತು ಭರವಸೆಯ ವಾತಾವರಣವನ್ನು ಕಾಣಬಹುದಾಗಿದೆ, ಬೆಂಗಳೂರು ನಗರದ ಜನರಿಗೆ ಸೇವಾ ಮನೋಭಾವನೆಯಿಂದ ಸೇವೆ ಸಲ್ಲಿಸುತ್ತಾ ಬಂದಿರುವ ಈ ಆಸ್ಪತ್ರೆ ಆಧುನಿಕತೆಯ ರಂಗುಗಳನ್ನ ತನ್ನದಾಗಿಸಿಕೊಂಡರೂ ಕಾರ್ಪೋರೇಟ್ ಹಂಗುಗಳಿಂದ ದೂರ ಉಳಿದು ಕೊಂಡಿರುವುದು ಭರವಸೆಯ ದ್ಯೋತಕವಾಗಿದೆ.

⌘

ಗರ್ಭಿಣಿಯರಲ್ಲಿ ಸ್ಟ್ರೆಚ್‌ಮಾರ್ಕ್: ಪರಿಹಾರ ಏನು?

ಡಾ. ವೀಣಾ ಎಸ್. ಭಟ್

ಆರೋಗ್ಯ

ಗರ್ಭಧಾರಣೆ ಸಮಯದಲ್ಲಿ ದೇಹದಲ್ಲಿ ಸ್ಟ್ರೆಚ್‌ಮಾರ್ಕ್‌ಗಳು ಕಾಣಿಸಿಕೊಳ್ಳುವುದು ಸಾಮಾನ್ಯ. ಅಲ್ಲದೇ ಈ ಅವಧಿಯಲ್ಲಿ ಮುಖದಲ್ಲಿ ಕಲೆ, ಮೊಡವೆ, ಚರ್ಮದಲ್ಲಿ ಬದಲಾವಣೆಗಳು ಇರುತ್ತವೆ. ಗರ್ಭಿಣಿಯಾಗಿದ್ದಾಗ ದೇಹದಲ್ಲಿ ಮೆಲನೋಸೈಟ್ ಸ್ಟಿಮ್ಯೂಲೇಟಿಂಗ್ ಮತ್ತು ಪ್ರೊಜೆಸ್ಟ್ರಾನ್ ಹಾರ್ಮೋನುಗಳು ಹೆಚ್ಚಾಗುವ ಕಾರಣ, ಈ ರೀತಿ ಚರ್ಮದ ಮೇಲೆ ಕಲೆಗಳಾಗುತ್ತವೆ. ಈ ಹಾರ್ಮೋನುಗಳ ಪ್ರಭಾವದಿಂದ ಸಿಬೇಶಿಯಸ್ ಗ್ರಂಥಿಗಳು ಹೆಚ್ಚು ಪ್ರಚೋದಿಸಲ್ಪಟ್ಟು ಅದರ ಸ್ರಾವ ಹೆಚ್ಚಾಗುತ್ತದೆ. ಈ ಕಾರಣದಿಂದಲೂ ಮೊಡವೆಗಳು ಹೆಚ್ಚು ಕಾಣಿಸಿಕೊಳ್ಳುತ್ತವೆ. ಚರ್ಮದ ಸಮಸ್ಯೆ ಪರಿಹಾರಕ್ಕಾಗಿ ಬಳಸುವ ಮುಲಾಮು, ಕ್ರೀಮ್, ಇತ್ಯಾದಿಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಏಕೆಂದರೆ ಇವುಗಳನ್ನು ಅತಿಯಾಗಿ ಬಳಸಿದಾಗ, ಕೆಲವೊಮ್ಮೆ ಗರ್ಭಸ್ಥ ಶಿಶುವಿಗೂ ಅಪಾಯ ಉಂಟಾಗುವ ಸಾಧ್ಯತೆ ಇರುತ್ತದೆ.

ಉದಾಹರಣೆಗೆ; ಟ್ರೆಟಿನಾಯಿನ್, ಹೈಡ್ರೋಕ್ವಿನೋನ್, ಅರ್ಬುಟಿನ್ ಇತ್ಯಾದಿ ಅಂಶಗಳಿರುವ ಮುಲಾಮುಗಳನ್ನು ಗರ್ಭಿಣಿಯರು ಬಳಸುವುದು ಬೇಡ. ಕ್ಲಿಂಡಾಮೈಸಿನ್, ಬೆಂಜಾಯಿಲ್ ಪರಾಕ್ಸೈಡ್, ನಿಯಾಮೈಸಿನ್‌ನಂತಹ ಅಂಶಗಳಿರುವ ಕ್ರೀಮ್‌ಗಳನ್ನು ಬಳಸಬಹುದು. ಆದರೂ ವೈದ್ಯರ ಸಲಹೆ ಇಲ್ಲದೇ ಯಾವುದೇ ಔಷಧ ಬಳಸಬೇಡಿ.



ಸಾಂದರ್ಭಿಕ ಚಿತ್ರ

ನೀವು ಹೀಗೆ ಮಾಡಬಹುದು; ನಿತ್ಯ 3 ರಿಂದ 4 ಲೀಟರ್ ನೀರು ಕುಡಿಯಿರಿ. ದಿನಕ್ಕೆ 3 ರಿಂದ 4 ಬಾರಿ ಉಗುರು ಬೆಚ್ಚಗಿನ ನೀರಿನಿಂದ ಮುಖ ತೊಳೆದುಕೊಳ್ಳಿ. ರಾತ್ರಿ 7 ರಿಂದ 8 ತಾಸು ಚೆನ್ನಾಗಿ ನಿದ್ರಿಸಿ. ಅಗತ್ಯವೆನಿಸಿದರೆ ಮನೆ ಬಳಕೆಯ ಶುದ್ಧ ಅರಿಶಿನ, ಶ್ರೀಗಂಧ, ಸೌತೆಕಾಯಿ ರಸ, ಆಲೂಗಡ್ಡೆ ರಸ.. ಇಂಥವುಗಳನ್ನು ಚರ್ಮಕ್ಕೆ ಲೇಪಿಸಬಹುದು. ಸ್ಟ್ರೆಚ್‌ಮಾರ್ಕ್, ಶೇ 90ರಷ್ಟು ಗರ್ಭಿಣಿಯರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಗರ್ಭಸ್ಥ ಶಿಶುವಿನ ಬೆಳವಣಿಗೆಯಿಂದ ಗರ್ಭಕೋಶ ಹಿಗ್ಗುವುದರಿಂದ ಹೊಟ್ಟೆಯ ಭಾಗ ಹಿಗ್ಗುತ್ತದೆ. ಇದರಿಂದ ಚರ್ಮದಲ್ಲಿರುವ ಕೊಲಾಜೆನ್ ಮತ್ತು ಇಲಾಸ್ಟಿನ್ ಎಂಬ ಅಂಶಗಳು ಹಿಗ್ಗಿ ತುಂಡರಿಸಿದಾಗ ಸ್ಟ್ರೆಚ್‌ಮಾರ್ಕ್‌ಗಳು ಉಂಟಾಗುತ್ತವೆ. ಒಂದೇ ಸಮನೆ ತೂಕ ಹೆಚ್ಚಾದಾಗಲೂ ತೊಡೆ, ಪೃಷ್ಟ, ಸ್ತನಗಳು ಹಾಗೂ ತೋಳಿನ ಭಾಗದಲ್ಲಿ ಇಂಥ ಗುರುತುಗಳು ಕಂಡುಬರಬಹುದು.

ಗರ್ಭಿಣಿಯರಲ್ಲಿ ಆರಂಭದಲ್ಲಿ ಸ್ಟ್ರೆಚ್‌ಮಾರ್ಕ್ ಗೆರೆಯ ರೀತಿ ಕಾಣಿಸುತ್ತದೆ. ಹೆರಿಗೆ ವೇಳೆ ನೇರಳೆ ಅಥವಾ ಕಂದುಬಣ್ಣಕ್ಕೆ ತಿರುಗಬಹುದು. ಹೆರಿಗೆಯಾದ ನಂತರ ಬಿಳಿಬಣ್ಣಕ್ಕೆ ತಿರುಗುತ್ತವೆ. 6 ರಿಂದ 12 ತಿಂಗಳವರೆಗೆ ಈ ರೀತಿ ಗುರುತುಗಳಿರುತ್ತವೆ. ನಂತರ ನಿಧಾನವಾಗಿ ಕಡಿಮೆಯಾಗುತ್ತವೆ. ಆದರೆ, ಸಂಪೂರ್ಣ ಮಾಯವಾಗುವುದಿಲ್ಲ. ಇದು ಕೆಲವರಲ್ಲಿ ಹೆಚ್ಚು, ಇನ್ನು ಕೆಲವರಲ್ಲಿ ಕಡಿಮೆ ಇರುತ್ತದೆ. ಆದರೆ ಇದನ್ನು ತಡೆಗಟ್ಟಲು ಸಾಧ್ಯವಿಲ್ಲ. ಏಕೆಂದರೆ ಚರ್ಮದಲ್ಲಿನ ಇಲಾಸ್ಟಿನ್ ಫೈಬರ್ ಅಂಶ ಕಡಿಮೆ ಇದ್ದಾಗ ಸ್ಟ್ರೆಚ್‌ಮಾರ್ಕ್ ಹೆಚ್ಚಾಗುತ್ತದೆ. ಇದನ್ನು ಕಡಿಮೆ ಮಾಡಲು ಕ್ರೀಮ್, ಲೋಷನ್‌ಗಳಿವೆ ಎಂದು ಹೇಳುತ್ತಾರೆ. ಆದರೆ ಅವುಗಳಿಂದ ಹೆಚ್ಚು ಪ್ರಯೋಜನವಿಲ್ಲ.

ಚರ್ಮದ ಆರ್ದ್ರತೆ ಸ್ವಲ್ಪಮಟ್ಟಿಗೆ ಕಾಪಾಡಬಹುದಷ್ಟೇ. ಚರ್ಮದ ಆರ್ದ್ರತೆ ಕಾಪಾಡಲು ಮೇಲೆ ತಿಳಿಸಿದಂತೆ ನಿತ್ಯ ನೀರು ಕುಡಿಯಬೇಕು. ಹೆಚ್ಚು ವಿಟಮಿನ್ 'ಸಿ' ಅಂಶವಿರುವ ಸೊಪ್ಪು, ತರಕಾರಿ, ಹಣ್ಣುಗಳನ್ನು ತಿನ್ನುಬೇಕು.

ಆಗಾಗ್ಗೆ ಉತ್ತಮ ಕೊಬ್ಬರಿಎಣ್ಣೆ/ಎಳ್ಳೆಣ್ಣೆ/ಬಾದಾಮಿ ಎಣ್ಣೆಯನ್ನು ನಿಧಾನವಾಗಿ ಚರ್ಮಕ್ಕೆ ಮಸಾಜ್ ಮಾಡಬಹುದು. ಇದರಿಂದ ಸ್ವಲ್ಪಮಟ್ಟಿಗೆ ಸ್ಟ್ರೆಚ್‌ಮಾರ್ಕ್ ತೀವ್ರತೆ ಕಡಿಮೆ ಮಾಡಬಹುದು.

ಲೇಖಕರು: ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ



ಕೇರಳ ಸರ್ಕಾರ ಇತ್ತೀಚೆಗೆ ಋತುಚಕ್ರದ ರಜೆ ಘೋಷಿಸಿದೆ. ನಮ್ಮ ರಾಜ್ಯವೂ ಸೇರಿದಂತೆ ದೇಶದ ಬೇರೆ ಬೇರೆ ಕಡೆ ಆ ಮೂರು ದಿನಗಳ ವಿರಾಮದ ಕುರಿತು ಚರ್ಚೆ ಆರಂಭವಾಗಿದೆ. ಈ ರಜೆಯ ಸುತ್ತಲೂ ನಡೆಯುತ್ತಿರುವ ಚರ್ಚೆಯನ್ನು ವಿವಿಧ ಕ್ಷೇತ್ರಗಳ ತಜ್ಞರ ಅಭಿಪ್ರಾಯದೊಂದಿಗೆ ವಿಶ್ಲೇಷಿಸಿದ್ದಾರೆ ಸುಶೀಲಾ ಡೋಣೂರ.

‘ಆ ದಿನಗಳ’ ವಿರಾಮ ಯಾಕೆ ಬೇಕು...

ಮತ್ತೆ ಮುನ್ನೆಲೆಗೆ ಬಂದಿದೆ ‘ಆ ದಿನಗಳ’ ಸಮಾಚಾರ. ಋತುಚಕ್ರದ ರಜೆ ಅಥವಾ ಮುಟ್ಟಿನ ರಜೆ ಬೇಕೇ? ಬೇಡವೆ? ಬೇಕು ಎಂದಾದರೆ ಯಾಕೆ ಬೇಕು, ಎಷ್ಟು ದಿನ ಬೇಕು, ಈ ರಜೆಯ ದುರುಪಯೋಗ ಸಾಧ್ಯತೆಯನ್ನು ತಡೆಯುವುದು ಹೇಗೆ... ಇಂಥವೇ ಪ್ರಶ್ನೆಗಳನ್ನು, ಅನುಮಾನಗಳೊಂದಿಗೆ ಇದೀಗ ‘ಆ ದಿನಗಳ’ ವಿಚಾರ ಮತ್ತೊಮ್ಮೆ ಚರ್ಚೆಗೆ ಬಂದಿದೆ.

ವಿದ್ಯಾರ್ಥಿಗಳ ಒಕ್ಕೂಟದ ಬೇಡಿಕೆಯನ್ನು ಆಧರಿಸಿ ಕೇರಳ ಸರ್ಕಾರ ತನ್ನ ರಾಜ್ಯದ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಋತುಚಕ್ರದ ರಜೆ ಘೋಷಿಸಿದೆ. ಅನಂತರ ಅನೇಕ ಖಾಸಗಿ ಸಂಸ್ಥೆಗಳು ಸಹ ಸ್ವಯಂಪ್ರೇರಿತವಾಗಿ ತಮ್ಮ ಮಹಿಳಾ ಉದ್ಯೋಗಿಗಳಿಗೆ ಈ ವಿಶೇಷ ರಜೆಯನ್ನು ನೀಡಿವೆ. ಈ ನಿರಾಳತೆ ಇತರೆಲ್ಲಾ ಉದ್ಯೋಗಸ್ಥ ಮಹಿಳೆಯರಲ್ಲಿ ಹೊಸದೊಂದು ಆಶಾಭಾವವನ್ನು ಹುಟ್ಟಿಸಿದೆ.



ಡಾ. ಚಂದ್ರಿಕಾ ಆನಂದ್

ಯಾಕೆ ಬೇಕು ಆ ರಜೆ?

ಋತುಚಕ್ರ ಒಂದು ಸಹಜ ಕ್ರಿಯೆಯೇ ಆದರೂ ಆ ದಿನಗಳಲ್ಲಿ ಹಾರ್ಮೋನು ವ್ಯತ್ಯಾಸದಿಂದ ದೇಹವೂ, ಮನಸೂ ಬಳಲುತ್ತದೆ. ಇದು ಒಬ್ಬರಿಂದ ಒಬ್ಬರಿಗೆ ಭಿನ್ನವಾಗಿರುತ್ತದೆ. ಆದಾಗ್ಯೂ, ಸಣ್ಣಮಟ್ಟದ ಅಸಹನೆಯಂತೂ ಎಲ್ಲರಲ್ಲೂ ಇದ್ದೇ ಇರುತ್ತದೆ.

‘ಋತುಸ್ರಾವದ ನೋವು ಯಾರೋ ಒಂದಿಬ್ಬರ ಸಮಸ್ಯೆಯಲ್ಲ. ಶೇ 80ರಷ್ಟು ಮಹಿಳೆಯರು ಈ ಅವಧಿಯಲ್ಲಿ ಒಂದಲ್ಲ ಒಂದು ರೀತಿಯ ನೋವು ಅನುಭವಿಸುತ್ತಾರೆ. ನೋವಿನ ಪ್ರಮಾಣ ಹೆಚ್ಚೂ-ಕಡಿಮೆ ಇರಬಹುದು. ನೋವು ಕೆಲವರಿಗೆ ಅತಿಯಾದರೆ, ಕೆಲವರಿಗೆ ಸಾಮಾನ್ಯವಾಗಿರಬಹುದು. ಕೆಲವರಿಗೆ ಒಂದು ದಿನದ ನೋವಿದ್ದರೆ, ಮತ್ತೆ ಕೆಲವರು ಐದೂ ದಿನಗಳ ಕಾಲ ನೋವು ಅನುಭವಿಸಬಹುದು’ ಎನ್ನುತ್ತಾರೆ ಬೆಂಗಳೂರಿನ ಸರಸ್ವತಿ ಸ್ಪೆಷಾಲಿಟಿ ಕ್ಲಿನಿಕ್‌ನ ಸ್ತ್ರೀರೋಗ ತಜ್ಞೆ ಡಾ. ಚಂದ್ರಿಕಾ ಆನಂದ್.

‘ಕೆಲವೊಮ್ಮೆ ಮುಟ್ಟಿನ ನೋವಿಗೆ ವೈದ್ಯಕೀಯ ಕಾರಣಗಳೂ ಇರುತ್ತವೆ. ಈ ನೋವಿನ ಪ್ರಮಾಣವನ್ನು ಆಧರಿಸಿ ಈ ಸ್ಥಿತಿಯನ್ನು ವೈದ್ಯಕೀಯ ಭಾಷೆಯಲ್ಲಿ ‘ಪ್ರೈಮರಿ ಡಿಸ್ಮೆನೋರಿಯಾ’ ಮತ್ತು ‘ಸೆಕೆಂಡರಿ ಡಿಸ್ಮೆನೋರಿಯಾ’ ಎಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ ಪ್ರೊಸ್ಟಗ್ಲಾಂಡಿನ್ (Prostaglandin) ಎಂಬ ರಾಸಾಯನಿಕ ಉತ್ಪತ್ತಿಯಾಗುತ್ತದೆ. ಇದರಿಂದಾಗಿ ಮಹಿಳೆಯರಲ್ಲಿ ಋತುಚಕ್ರದ ಅವಧಿ ಕಷ್ಟಕರವಾಗುತ್ತದೆ. ಭಾರತದಲ್ಲಿ ಶೇ 36.6ರಷ್ಟು ಮಹಿಳೆಯರು ತೀವ್ರವಾದ ರಕ್ತಸ್ರಾವ, ಕಿಬ್ಬೊಟ್ಟೆಯ ನೋವು, ವಿಪರೀತ ಸುಸ್ತು, ಆಯಾಸ, ಸ್ನಾಯು ಸೆಳೆತ, ಬೆನ್ನು ನೋವು, ತಲೆ ನೋವು ಹಾಗೂ ಮಾನಸಿಕ ಕಿರಿಕಿರಿಯಿಂದ ಪರಿತಪಿಸುವುದೂ ಇದೆ. ಇವರಿಗೆ ತಮ್ಮ ದೈನಂದಿನ ಕೆಲಸವನ್ನು ಮಾಡಿಕೊಳ್ಳುವುದೂ ಕಷ್ಟವಾಗುತ್ತದೆ. ಈ ಸ್ಥಿತಿಯಲ್ಲಿ ಇರುವವರಿಗೆ ಚಿಕಿತ್ಸೆಯ ಅಗತ್ಯವಿರುತ್ತದೆ. ಜೊತೆಗೆ ಆ ದಿನಗಳಲ್ಲಿ ವಿಶ್ರಾಂತಿಯೂ ಬೇಕೇ ಬೇಕು’ ಎನ್ನುತ್ತಾರೆ ಡಾ. ಚಂದ್ರಿಕಾ.

ವರ್ಕ್ ಫ್ರಮ್ ಹೋಮ್

ಕೆಲವೊಮ್ಮೆ ಬಹಳ ನಿರ್ಣಾಯಕ ಹುದ್ದೆಗಳಲ್ಲಿರುವ ಮಹಿಳೆಯರಿಗೆ ಆ ಸಮಯದಲ್ಲಿ ರಜೆ ಪಡೆಯಲು ಸಾಧ್ಯವೇ ಆಗುವುದಿಲ್ಲ. ಹೀಗಿದ್ದಾಗ, ಮನೆಯಿಂದಲೇ ಕಚೇರಿ ಕೆಲಸ ಮಾಡಲು (ವರ್ಕ್ ಫ್ರಮ್ ಹೋಮ್) ಅವಕಾಶ ಇರಬೇಕು. ಕೆಲಸದ ಸ್ವಭಾವವನ್ನು, ಅಗತ್ಯವನ್ನು ಆಧರಿಸಿ ಆಕೆ ಮನೆಯಿಂದ ಕೆಲ ಗಂಟೆ ಕೆಲಸ ಮಾಡಿ ವಿಶ್ರಾಂತಿ ಪಡೆಯಬಹುದು. ಇದರಿಂದ ಅನಿವಾರ್ಯ ಕೆಲಸಗಳನ್ನು ಪೂರ್ಣಗೊಳಿಸುವ ಜೊತೆಗೆ ತನ್ನ ಯೋಗಕ್ಷೇಮವನ್ನೂ ನೋಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಕ್ರಮ ಅನೇಕ ಖಾಸಗಿ ಸಂಸ್ಥೆಗಳಲ್ಲಿ ಜಾರಿಯಲ್ಲಿದೆ.

‘ನಮ್ಮಲ್ಲಿ ಅನಿವಾರ್ಯ ರಜೆ (Indispensable Leave) ಎಂಬ ಪ್ರಯೋಗ ಚಾಲ್ತಿಯಲ್ಲಿದೆ. ಸಿಎಲ್(ಸಾಮಾನ್ಯ ರಜೆ) ಅಥವಾ ಎಸ್‌ಎಲ್(ಅನಾರೋಗ್ಯ ನಿಮಿತ್ತ ರಜೆ) ಗಳನ್ನು ಈ ವರ್ಗದಲ್ಲಿ ತೆಗೆದುಕೊಳ್ಳಬಹುದು. ಅನಿವಾರ್ಯ ಕಾರಣದ (Indispensable Reason) ಆಧಾರದಲ್ಲಿ ಅವರು ಮನೆಯಿಂದಲೇ ಕಚೇರಿ ಕೆಲಸಮಾಡಬಹುದು. ನಮ್ಮ ಮಹಿಳಾ ಉದ್ಯೋಗಿಗಳು ತಿಂಗಳಲ್ಲಿ ಆ ಒಂದು ಅಥವಾ ಎರಡು ದಿನ ಈ ವರ್ಗದಲ್ಲಿ ವರ್ಕ್ ಫ್ರಮ್ ಹೋಮ್ ತೆಗೆದುಕೊಳ್ಳುವುದುಂಟು. ಆದರೆ, ಇದಕ್ಕೆ ನಿರ್ದಿಷ್ಟವಾದ ನಿಯಮಗಳು ರೂಪುಗೊಂಡಿಲ್ಲ, ಎಲ್ಲಾ ಹೊಂದಾಣಿಕೆಯ ಮೇರೆಗೆ ನಡೆಯುತ್ತಿದೆ. ಇದು ಕಾನೂನು ವ್ಯಾಪ್ತಿಗೆ ಒಳಪಟ್ಟರೆ ಹೆಚ್ಚು ಉಪಯುಕ್ತ’ ಎನ್ನುತ್ತಾರೆ ಮಾನವ ಸಂಪನ್ಮೂಲ ಏಜೆನ್ಸಿಯೊಂದರ ಸಿಇಒ ಮೇಘನಾ ರಾವ್.

ಅನೇಕರು ತಮ್ಮ ಸಿಎಲ್, ಎಸ್‌ಎಲ್‌ಗಳನ್ನು ಈ ಅವಧಿಗಾಗಿ ಬಳಸಿಕೊಳ್ಳುವುದುಂಟು. ಆದರೆ, ಈ ಸಮಯದಲ್ಲಿ ಮಹಿಳೆಯರಿಗೆ ವಿಶೇಷ ರಜೆಗಳು ಇದ್ದರೆ, ಅದು ಕಾನೂನಿನ ಚೌಕಟ್ಟಿನಲ್ಲಿ ಬಂದರೆ ಹೆಚ್ಚು ನೆಮ್ಮದಿ. ಇಷ್ಟೆಲ್ಲ ಅಸಹನೆ, ಕಿರಿಕಿರಿ ಯನ್ನು ಹೊತ್ತು ಕಚೇರಿಗೆ ಹೋದರೂ ಕೆಲಸದಲ್ಲಿ ಏಕಾಗ್ರತೆಯ ಕೊರತೆ ಎದುರಾಗಬಹುದು. ಶೇ 100ರಷ್ಟು ಕಾರ್ಯಕ್ಷಮತೆಯನ್ನು ಪ್ರದರ್ಶಿಸುವುದು ಕಷ್ಟ. ಇದರಿಂದ ಉತ್ಪಾದನಾ ಗುಣಮಟ್ಟದಲ್ಲಿಯೂ ವ್ಯತ್ಯಾಸ ಉಂಟಾಗಬಹುದು. ಒಂದೆರಡು ದಿನಗಳ ವಿರಾಮ ಅವರ ಚೈತನ್ಯವನ್ನು ಇಮ್ಮಡಿಗೊಳಿಸುವ ಜೊತೆಗೆ, ಕೆಲಸದ ಶ್ರದ್ಧೆಯನ್ನೂ, ಆ ಮೂಲಕ ಉತ್ಪಾದಕತೆಯನ್ನೂ ಹೆಚ್ಚಿಸಬಲ್ಲದು ಎನ್ನುವುದಾದರೆ ಈ ರಜೆ ಕಂಪನಿಗಳಿಗೂ ಲಾಭದಾಯಕವೇ ಅಲ್ಲವೆ? ಸದ್ಯಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮುಟ್ಟಿನ ರಜೆ ಜಾರಿಯಲ್ಲಿರುವುದು ಬಿಹಾರದಲ್ಲಿ ಮಾತ್ರ. ಮಹಿಳಾ ಉದ್ಯೋಗಿಗಳಿಗೆ ತಮ್ಮ ಸಾಮಾನ್ಯ ರಜೆಯ ಹೊರತಾಗಿ ಪ್ರತಿ ತಿಂಗಳು ಎರಡು ವಿಶೇಷ ರಜೆ ಪಡೆಯುವ ಹಕ್ಕು ಅಲ್ಲಿನ ಮಹಿಳೆಯರಿಗೆ ದಕ್ಕಿದೆ. ಇದು ಕಾನೂನು ವ್ಯಾಪ್ತಿಗೆ ಒಳಪಡಲಿ ಬಿಡಲಿ. ಎಲ್ಲಾ ರಾಜ್ಯಗಳೂ, ಎಲ್ಲಾ ಸಂಸ್ಥೆಗಳೂ ಈ ಮಹಿಳಾ ಸ್ನೇಹಿ ನೀತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಸೌಜನ್ಯ ಮೆರೆಯಬೇಕಿದೆ. ❖



ಈಟಿಯಂತಹ ಮಾತಿಗೆ ಎದೆಗುಂದಬೇಕಿಲ್ಲ..

ಈ ರಜೆ ಇನ್ನೂ ನಮ್ಮಲ್ಲಿ ಜಾರಿಯೇ ಆಗಿಲ್ಲ. ಆಗಲೇ, ಕುಹಕದ ಮಾತುಗಳು, ಅಪಹಾಸ್ಯ, ಅನುಕಂಪಗಳು ಒಟ್ಟೊಟ್ಟಿಗೇ ಹರಿದು ಬರುತ್ತಿವೆ. ‘ಪುರುಷ ಸಹೋದ್ಯೋಗಿಗಳು, ಮೇಲ್ವಿಚಾರಕರ ಬಳಿ ಆ ರಜೆಯನ್ನು ಕೇಳುವುದೇ ಸವಾಲು. ಈ ವಿಷಯ ಚರ್ಚೆಗೆ ಬಂದಾಗ ಸಹೋದ್ಯೋಗಿಯೊಬ್ಬರು ‘ನೀವು ಅದೇ ಕಾರಣಕ್ಕೆ ರಜೆ ಕೇಳಿದ್ದೀರಿ ಅಂತ ಯಾವ ಗ್ಯಾರಂಟಿ?’ ಎಂದು ನಗಾಡಿದರು’ ಎಂದು ಖಾಸಗಿ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿರುವ ಪ್ರಜ್ಞಾ ನೋವು ತೋಡಿಕೊಂಡರು.

ಆ ರಜೆಗಳ ಬಗ್ಗೆ ಸಹೋದ್ಯೋಗಿಗಳು ಕಿರಿಕಿರಿ ಮಾಡಬಹುದು, ಹಾಸ್ಯ ಮಾಡಬಹುದು ಎನ್ನುವ ಅಳುಕು ಅನೇಕರದ್ದು. ಆದರೆ, ‘ಮುಟ್ಟಿನ ರಜೆ ಪಡೆಯಲು ನಾಚಿಕೆ ಪಡಬೇಕಾಗಿಲ್ಲ. ಎದುರು ಹೋಗಿ ನಿಂತು ಪರವಾನಗಿ ಕೇಳಬೇಕಾಗಿಲ್ಲ. ಇದನ್ನು Inexplicable Reason (ವಿವರಿಸಲಾಗದ ಕಾರಣ) ಎನ್ನುವ ವರ್ಗಕ್ಕೆ ಸೇರಿಸಬೇಕು. ಮಹಿಳಾ ಉದ್ಯೋಗಿಗಳು ತಮಗೆ ವಿವರಿಸಲಾಗದ ಕಾರಣದ ರಜೆ ಬೇಕು ಎಂದು ಮನೆಯಿಂದಲೇ ಸಂದೇಶ ಅಥವಾ ಇ-ಮೇಲ್ ಕಳುಹಿಸಲು ಅವಕಾಶ ನೀಡಬೇಕು. ಇದು ಇನ್ನೂ ಚರ್ಚೆಯ ಹಂತದಲ್ಲಿ ಇರುವುದರಿಂದ ಈ ಎಲ್ಲಾ ಅಂಶಗಳನ್ನು ಗಮನಿಸಿ ನಿಯಮ ರೂಪಿಸಬೇಕು’ ಎನ್ನುತ್ತಾರೆ ಮೇಘನಾ ರಾವ್.

ಇದೊಂದು ಸೌಜನ್ಯದ ನಡೆ



ಭವ್ಯಾ ವಿಶ್ವನಾಥ

ಹತ್ತಾರು ಒತ್ತಡಗಳಿಗೆ ಒಟ್ಟಿಗೇ ಹೆಗಲುಕೊಡುತ್ತ ಹೈರಾಣಾಗುವ ದುಡಿಯುವ ಹೆಣ್ಣಿಗೆ ಋತುಚಕ್ರದ ರಜೆ ಒಂದು ಕೃತಜ್ಞತಾ ಹೆಜ್ಜೆ ಎಂದೇ ಹೇಳಬಹುದು ಎನ್ನುತ್ತಾರೆ ಮನಃಶಾಸ್ತ್ರಜ್ಞೆ ಭವ್ಯಾ ವಿಶ್ವನಾಥ.

ಮುಟ್ಟು ಕೇವಲ ದೈಹಿಕ ಪ್ರಕ್ರಿಯೆ ಅಲ್ಲ. ಇದು ಮನಸ್ಸಿನ ಸ್ವಾಸ್ಥ್ಯ ಹಾಗೂ ಸಮತೋಲನದ ಮೇಲೆಯೂ ಪರಿಣಾಮ ಬೀರುತ್ತದೆ. ಈ ಅವಧಿಯಲ್ಲಿ ಹಾರ್ಮೋನುಗಳು ಅತಿಹೆಚ್ಚು ಚಟುವಟಿಕೆಯಿಂದ ಕೂಡಿರುತ್ತವೆ. ಭಾವನಾತ್ಮಕವಾಗಿಯೂ ಬಹಳ ಸೂಕ್ಷ್ಮರಾಗಿರುತ್ತಾರೆ. ಮನಸೂ ನಾಜೂಕಾಗಿರುತ್ತದೆ. ಸಹನಶೀಲತೆ ಕಡಿಮೆ ಇರುತ್ತದೆ. ಪ್ರತಿಯೊಂದಕ್ಕೂ ಅತಿಯಾಗಿ, ಕೆಲವೊಮ್ಮೆ ಅನಗತ್ಯವಾಗಿ ಪ್ರತಿಕ್ರಿಯಿಸುವ ಸಾಧ್ಯತೆ ಹೆಚ್ಚು. ಸಿಟ್ಟು, ಆಕ್ರೋಶ, ಅಸಹನೆ ಹೆಚ್ಚು. ಇದೆಲ್ಲ ಅವರ ಕೆಲಸದ ಮೇಲೆ, ಸಹೋದ್ಯೋಗಿಗಳೊಂದಿಗಿನ ಅವರ ಸಂಬಂಧದ ಮೇಲೆ ಪರಿಣಾಮ ಬೀರುತ್ತದೆ. ‘ಇಂತಹ ಒಂದು ಅಥವಾ ಎರಡು ದಿನಗಳ ರಜೆಗಳು ಅವಳ ಸ್ವಾಸ್ಥ್ಯವನ್ನೂ-ಸಂಬಂಧಗಳನ್ನೂ ಸುಸ್ಥಿತಿಯಲ್ಲಿಡಲು ನೆರವಾಗುತ್ತವೆ’ ಎನ್ನುವುದು ಭವ್ಯಾ ಅವರ ಮನೋವೈಜ್ಞಾನಿಕ ವಿಶ್ಲೇಷಣೆ.

“

ಒಂದು ರಜೆಯಾದರೂ ಸಿಗಲಿ

ತಾಯ್ತನದ ರಜಾ ಸೌಲಭ್ಯದಂತೆ ಮುಟ್ಟಿನ ಸಂದರ್ಭದಲ್ಲಿಯೂ ಕನಿಷ್ಠ ಒಂದು ದಿನವಾದರೂ ರಜೆ ಇರಬೇಕು. ಆದರೆ ಒಂದೇ ವಿಭಾಗದಲ್ಲಿ ಇಬ್ಬರು ಹೆಣ್ಣುಮಕ್ಕಳಿದ್ದು, ಇಬ್ಬರಿಗೂ ಮುಟ್ಟಿನ ಸಂದರ್ಭ ಬಂದರೆ ಆಗ ವಿರಾಮದ ಅವಧಿ ಹಾಗೂ ದಿನವನ್ನು ಅವರಿಬ್ಬರ ನಿರ್ಣಯಕ್ಕೆ ಬಿಟ್ಟುಬಿಡಬೇಕು. ಇದರಿಂದ ಅವರು ಪರಸ್ಪರ ಮಾತನಾಡಿಕೊಂಡು ತಮ್ಮ ಅನುಕೂಲಕ್ಕೆ ತಕ್ಕ ಹಾಗೇ ರಜೆ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಶಾಂತಾಕುಮಾರಿ, ಮೆಕ್ಯಾನಿಕ್, ಕೆಎಸ್‌ಆರ್‌ಟಿಸಿ, ಬೆಂಗಳೂರು

ಪರ್ಯಾಯ ಉದ್ಯೋಗಿ ಇರಲಿ

ಇಂಥ ಸಂದರ್ಭದಲ್ಲಿ ಕನಿಷ್ಠ ಎರಡು ದಿನವಾದರೂ ರಜೆ ಬೇಕು. ಆದರೆ, ಕೆಲಸವೂ ಬಹಳ ಮುಖ್ಯವಾಗಿರುವುದರಿಂದ ಈ ಸಂದರ್ಭದಲ್ಲಿ ಪರ್ಯಾಯ ಉದ್ಯೋಗಿಯನ್ನು ನೇಮಿಸಬೇಕು. ನಮಗೆ ವರ್ಕ್ ಫ್ರಂ ಹೋಂ ಆಯ್ಕೆ ಇಲ್ಲದೇ ಇರುವುದರಿಂದ ರಜೆ ಹಾಗೂ ಕೆಲಸ ಎರಡನ್ನೂ ಸರಿದೂಗಿಸುವ ಕೆಲಸವಾದರೆ ಚೆನ್ನಾಗಿರುತ್ತೆ

ಮಧುರಾ, ಬಸ್ ನಿರ್ವಾಹಕಿ, ಕೆಎಸ್‌ಆರ್‌ಟಿಸಿ

”

ಅದಾನಿ ಸಮೂಹದ ವಹಿವಾಟು ಪರಿಶೀಲನೆ ಹೆಚ್ಚಿಸಿದ ಸೆಬಿ

ಮುಂಬೈ (ರಾಯಿಟರ್ಸ್): ಅದಾನಿ ಸಮೂಹವು ಕಳೆದ ವರ್ಷದಲ್ಲಿ ನಡೆಸಿದ ವಹಿವಾಟುಗಳ ಪರಿಶೀಲನೆಯನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಇನ್ನಷ್ಟು ಹೆಚ್ಚಿಸಿದೆ. ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆ ಸಿದ್ಧಪಡಿಸಿರುವ ವರದಿಯನ್ನು ಕೂಡ ಸೆಬಿ ಪರಿಶೀಲಿಸಲಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹದ ಕುರಿತು ಬುಧವಾರ ವರದಿಯೊಂದನ್ನು ಬಿಡುಗಡೆ ಮಾಡಿ, ಸಮೂಹದ ಸಾಲ ತೀರಾ ಹೆಚ್ಚಾಗಿದೆ ಎಂಬ ಕಳವಳವನ್ನು ವ್ಯಕ್ತಪಡಿಸಿದೆ. ಇದಾದ ನಂತರದಲ್ಲಿ, ಅದಾನಿ ಸಮೂಹದ ಷೇರುಪೇಟೆ ನೋಂದಾಯಿತ ಕಂಪನಿಗಳ ಷೇರುಗಳ ಮೌಲ್ಯವು ಭಾರಿ ಪ್ರಮಾಣದಲ್ಲಿ ಕುಸಿದಿದೆ.

'ಷೇರುಪೇಟೆಯಲ್ಲಿ ನೋಂದಾಯಿತವಾಗಿರುವ ಕಂಪನಿಗಳ ವಿಚಾರವಾಗಿ ಅದಾನಿ ಸಮೂಹ ನಡೆಸಿರುವ ಎಲ್ಲ ವಹಿವಾಟುಗಳನ್ನು ಸೆಬಿ ಹೆಚ್ಚೆಚ್ಚು ಪರಿಶೀಲಿಸುತ್ತಿದೆ' ಎಂದು ಮೂಲಗಳು ತಿಳಿಸಿವೆ. ಸೆಬಿ, ತಾನು ಸಾಮಾನ್ಯ ಸಂದರ್ಭಗಳಲ್ಲಿ ಕೇಳದಿರುವಷ್ಟು ವಿವರಗಳನ್ನು ಕೇಳಲು ಆರಂಭಿಸಿದೆ.

ಸಮಗ್ರ ತನಿಖೆಗೆ ಕಾಂಗ್ರೆಸ್ ಆಗ್ರಹ

ನವದೆಹಲಿ (ಪಿಟಿಐ): ಅದಾನಿ ಸಮೂಹದ ವಿರುದ್ಧದ ಹಣಕಾಸು ಅಕ್ರಮಗಳಿಗೆ ಸಂಬಂಧಿಸಿದ ಆರೋಪಗಳ ಕುರಿತು ಸೆಬಿ ಹಾಗೂ ಆರ್‌ಬಿಐ ಸಮಗ್ರ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಪಕ್ಷ ಶುಕ್ರವಾರ ಆಗ್ರಹಿಸಿದೆ.

ಅದಾನಿ ಸಮೂಹದ ವಹಿವಾಟುಗಳ ಕುರಿತು ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ವಿಶ್ಲೇಷಣೆ ನಡೆಸಿ, ವರದಿ ಸಿದ್ಧಪಡಿಸಿದೆ. ಹೀಗಾಗಿ ಈ ವರದಿಯಲ್ಲಿನ ಅಂಶಗಳ ಕುರಿತು ತನಿಖೆ ಅಗತ್ಯ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

ಈ ವಿಚಾರವಾಗಿ ಅದಾನಿ ಸಮೂಹದಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಹಿಂಡನ್‌ಬರ್ಗ್ ರಿಸರ್ಚ್‌ನ ವರದಿಯನ್ನು ಅದಾನಿ ಸಮೂಹವು ಅಲ್ಲಗಳೆದಿದ್ದು, ಸಂಸ್ಥೆಯ ವಿರುದ್ಧ ಕಾನೂನು ಕ್ರಮ ಜರುಗಿಸುವ ಬಗ್ಗೆ ಪರಿಶೀಲನೆ ನಡೆಸುತ್ತಿರುವುದಾಗಿ ಹೇಳಿದೆ.


ಸ್ವಿಜರ್ಲೆಂಡ್ ಮೂಲದ ಹೋಲ್ಸಿಮ್ ಲಿಮಿಟೆಡ್, ಭಾರತದ ಅಂಬುಜಾ ಸಿಮೆಂಟ್ಸ್ ಲಿಮಿಟೆಡ್ ಮತ್ತು ಎಸಿಸಿ ಲಿಮಿಟೆಡ್‌ನಲ್ಲಿ ಹೊಂದಿದ್ದ ಷೇರುಗಳನ್ನು ಅದಾನಿ ಸಮೂಹವು ಸ್ವಾಧೀನಕ್ಕೆ ತೆಗೆದುಕೊಂಡ ವಹಿವಾಟುಗಳಲ್ಲಿ ಸಾಗರದಾಚೆಯ ಸಂಸ್ಥೆಗಳ ಪಾತ್ರವನ್ನು ಸೆಬಿ ಪರಿಶೀಲಿಸಿದೆ.

ಈ ವಹಿವಾಟಿನಲ್ಲಿ ಸಾಗರದಾಚೆಯ ಸಂಸ್ಥೆಗಳ ಭಾಗವಹಿಸುವಿಕೆ ಬಗ್ಗೆ ಸಮೂಹವು ಮಾಹಿತಿ ನೀಡಿದೆ. ಒಟ್ಟು 17 ಸಂಸ್ಥೆಗಳು ಈ ವಹಿವಾಟಿಗೆ ಹಣ ಒದಗಿಸುವಲ್ಲಿ ಭಾಗಿಯಾಗಿರುವುದನ್ನು ಸೆಬಿ ಗುರುತಿಸಿದೆ.

ಈ ಸಂಸ್ಥೆಗಳ ಬಗ್ಗೆ ಸೆಬಿ ಸ್ಪಷ್ಟನೆ ಕೇಳಿತ್ತು. ಇದಕ್ಕೆ ಸಮೂಹ ನೀಡಿರುವ ವಿವರಣೆಗಳನ್ನು ಸೆಬಿ ಪರಿಶೀಲಿಸುತ್ತಿದೆ ಎಂದು ಗೊತ್ತಾಗಿದೆ.

ರಾಮನಗರ ರೇಷ್ಮೆಗೂಡು ಧಾರಣೆ	
ಮಿಶ್ರತಳಿ (ಸಿ.ಬಿ)	₹422-688
ದ್ವಿತಳಿ (ಬಿ.ವಿ)	₹387-798

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,892
ಇಂದಿನ ಅಂತ್ಯ	17,604
▼	288
ದಿನದ ಕನಿಷ್ಠ	17,493

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹495
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹495

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1160 (1170)
ಸೂರ್ಯಕಾಂತಿ (ರಿಫೈನ್ಡ್)	₹1180 (1190)
ಪಾಮೋಲಿನ್	₹915 (895)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹130

ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು ● ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ವಹಿವಾಟು

'ಅದಾನಿ' ವಿರುದ್ಧ ವರದಿ: ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಬ್ಯಾಂಕ್, ಹಣಕಾಸು, ಯುಟಿಲಿಟಿ ಮತ್ತು ತೈಲ ವಲಯದ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ 'ಕರಡಿ ಕುಣಿತ' ಕಂಡುಬಂದಿತು. ಸೂಚ್ಯಂಕಗಳು ಶೇಕಡ 1ಕ್ಕೂ ಹೆಚ್ಚಿನ ಪ್ರಮಾಣದ ಕುಸಿತ ಕಂಡಿದ್ದರಿಂದ ಮೂರು ತಿಂಗಳ ಕನಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಂಡಿತು.

ಅದಾನಿ ಸಮೂಹದ ವಿರುದ್ಧ ಬಂದಿರುವ ಆರೋಪಗಳು ಮತ್ತು ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು ವಹಿವಾಟಿನ ಮೇಲೆ ನಕಾರಾತ್ಮಕ ಪರಿಣಾಮ ಬೀರಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 874 ಅಂಶ ಇಳಿಕೆ ಕಂಡಿತು. ಒಂದು ತಿಂಗಳಿಗೂ ಹೆಚ್ಚಿನ ವಹಿವಾಟು ಅವಧಿಯಲ್ಲಿ ಒಂದು ದಿನದಲ್ಲಿ ಆಗಿರುವ ಗರಿಷ್ಠ ಕುಸಿತ ಇದಾಗಿದೆ. 59,331 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. 2021ರ ಅಕ್ಟೋಬರ್ ನಂತರದ ಕನಿಷ್ಠ ಮಟ್ಟ ಇದು. ವಹಿವಾಟಿನ ಒಂದು ಹಂತದಲ್ಲಿ ಸೆನ್ಸೆಕ್ಸ್ 1,230 ಅಂಶ ಕುಸಿತ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 288 ಅಂಶ ಇಳಿಕೆ ಕಂಡಿತು. 2022ರ ಡಿಸೆಂಬರ್ 23 ನಂತರ ಸೂಚ್ಯಂಕದ ದಿನದ ವಹಿವಾಟಿನ ಗರಿಷ್ಠ ಇಳಿಕೆ ಇದಾಗಿದೆ.

ವಲಯವಾರು ಇಳಿಕೆ (%)	
ಯುಟಿಲಿಟಿ	7.34
ವಿದ್ಯುತ್	6.79
ತೈಲ ಮತ್ತು ಅನಿಲ	5.75
ಇಂಧನ	5.22
ದೂರಸಂಪರ್ಕ	3.79



ಕುಸಿತಕ್ಕೆ ಕಾರಣ: ಅದಾನಿ ಸಮೂಹದ ಕಂಪನಿಗಳು ಮತ್ತು ಬ್ಯಾಂಕಿಂಗ್ ಷೇರುಗಳ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟದ ಒತ್ತಡಕ್ಕೆ ಒಳಗಾದವು. ಇದರಿಂದಾಗಿ ಸೆನ್ಸೆಕ್ಸ್ ಮತ್ತು ನಿಫ್ಟಿ ವಹಿವಾಟುಗಳು ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿಯುವಂತಾಯಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ರಿಟೇಲ್ ರಿಸರ್ಚ್‌ನ ಉಪ ಮುಖ್ಯಸ್ಥ ದೇವರ್ಷ್ ವಕೀಲ್ ಹೇಳಿದ್ದಾರೆ.

₹ 10.73 ಲಕ್ಷ ಕೋಟಿ ನಷ್ಟ

ನವದೆಹಲಿ: ದೇಶದ ಷೇರುಪೇಟೆಗಳಲ್ಲಿ ಎರಡು ದಿನಗಳಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳ ಬಂಡವಾಳ ಮೌಲ್ಯವು ₹ 10.73 ಲಕ್ಷ ಕೋಟಿಗೂ ಹೆಚ್ಚು ಕರಗಿದೆ. ಬಿಎಸ್‌ಇ ಒಟ್ಟು ಮೌಲ್ಯವು ಶುಕ್ರವಾರದ ವಹಿವಾಟಿನ ಅಂತ್ಯದ ವೇಳೆಗೆ ₹ 269.65 ಲಕ್ಷ ಕೋಟಿಗೆ ಇಳಿಕೆ ಕಂಡಿತು.

ಕೇಂದ್ರ ಬಜೆಟ್ ಮತ್ತು ಅಮೆರಿಕದ ಫೆಡರಲ್ ರಿಸರ್ವ್‌ನ ಸಭೆಯ ಕಾರಣಗಳಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಎಚ್ಚರಿಕೆಯಿಂದ ವಹಿವಾಟು ನಡೆಸಿದರು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

'ವಹಿವಾಟುದಾರರು ಎರಡು ಪ್ರಮುಖ ವಿದ್ಯಮಾನಗಳ ಬಗ್ಗೆ ಹೆಚ್ಚು ಗಮನ ಹರಿಸಲಿದ್ದಾರೆ. ಮೊದಲನೆಯದು 2023–24ನೇ ಸಾಲಿನ ಕೇಂದ್ರ ಬಜೆಟ್ ಫೆಬ್ರುವರಿ 1ರಂದು ಮಂಡನೆ ಆಗಲಿರುವುದು. ಎರಡನೆಯದು, ಅಮೆರಿಕದ ಫೆಡರಲ್ ರಿಸರ್ವ್ ಫೆಬ್ರುವರಿ 1ರಂದು ಬಡ್ಡಿದರದ ಕುರಿತು ನಿರ್ಧಾರ ತೆಗೆದುಕೊಳ್ಳಲಿರುವುದು' ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಇಪಿಎಫ್‌ಒ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಬೆಂಗಳೂರಿನ ರಾಜರಾಜೇಶ್ವರಿ ನಗರದ ಪ್ರಾದೇಶಿಕ ಕಚೇರಿ ವತಿಯಿಂದ ಶುಕ್ರವಾರ ಕುಂದು ಕೊರತೆ ಬಗೆಹರಿಸುವ ಅಭಿಯಾನ ನಡೆಯಿತು.

ಬಿಡದಿ ಕೈಗಾರಿಕಾ ಪ್ರದೇಶದ ಹಿಂದುಸ್ತಾನ್ ಕೋಕಾ ಕೋಲಾ ಬೆವರೇಜಸ್ ಲಿಮಿಟೆಡ್ ಆವರಣದಲ್ಲಿ ವಿವಿಧ ಕಂಪನಿಗಳ ಪ್ರತಿನಿಧಿಗಳನ್ನು ಪ್ರಾದೇಶಿಕ ಕಚೇರಿಯ ಅಧಿಕಾರಿಗಳು ಭೇಟಿ ಮಾಡಿದರು. ಹೆಸರು, ಜನ್ಮ ದಿನಾಂಕದಲ್ಲಿ ಬದಲಾವಣೆ, ಯುಎಎನ್ ನಿಷ್ಕ್ರಿಯ ಆಗಿರುವುದು ಸೇರಿದಂತೆ ಪಿಂಚಣಿ ಪಡೆಯುವವರ ಹಲವು ಸಮಸ್ಯೆಗಳನ್ನು ಇದೇ ವೇಳೆ ಬಗೆಹರಿಸಲಾಯಿತು.

ಮುಂಬರುವ ದಿನಗಳಲ್ಲಿ ಪ್ರತಿ ತಿಂಗಳೂ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಸಂಘಟನೆಯ ಜಾರಿ ಅಧಿಕಾರಿ ನವ್‌ನೀತ್ ಪ್ರಕಾಶ್ ಅವರು 'ಪ್ರಜಾವಾಣಿ' ತಿಳಿಸಿದರು.

ರಾಜರಾಜೇಶ್ವರಿ ನಗರದ ಪ್ರಾದೇಶಿಕ ಕಚೇರಿಯ ಕಮಿಷನರ್ ಇನಕೋಟಿ ಶ್ರೀದೇವಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮ ನಡೆಸಲಾಯಿತು.

ಇಪಿಎಫ್‌ಒ ತನ್ನ ಸದಸ್ಯರು, ಉದ್ಯೋಗದಾತರು ಹಾಗೂ ಪಿಂಚಣಿ ಪಡೆಯುವವರನ್ನು ಸಂಪರ್ಕಿಸುವ 'ನಿಧಿ ಆಪ್‌ಕೆ ನಿಕಟ್ 2.0' ಹೆಸರಿನ ಬೃಹತ್ ಅಭಿಯಾನವನ್ನು ಪ್ರತಿ ಜಿಲ್ಲೆಯಲ್ಲಿಯೂ ಹಮ್ಮಿಕೊಂಡಿದೆ.

₹ 100 ಗಡಿ ದಾಟಿದ ವೀಳ್ಯದೆಲೆ

ಪ್ರಜಾವಾಣಿ ವಾರ್ತೆ

ತೋವಿನಕೆರೆ (ತುಮಕೂರು ಜಿಲ್ಲೆ): ಈ ವರ್ಷದಲ್ಲಿ ಇದೇ ಮೊದಲ ಬಾರಿಗೆ ವೀಳ್ಯದೆಲೆ ಬೆಲೆ ಏರಿಕೆಯಾಗಿದ್ದು, ನೂರರ ಗಡಿ ದಾಟಿದೆ. ಶುಕ್ರವಾರ ನಡೆದ ಸಂತೆಯಲ್ಲಿ ಒಂದು ಕಟ್ಟು (100 ಎಲೆ) ₹100ರಿಂದ ₹120ರ ವರೆಗೆ ಮಾರಾಟವಾಯಿತು.

ಮಧುಗಿರಿ, ಗುಬ್ಬಿ, ತುಮಕೂರು ತಾಲ್ಲೂಕು ಸೇರಿದಂತೆ ಆಂಧ್ರಪ್ರದೇಶದ ಹಿಂದೂಪುರ ಭಾಗದ ಜನರು ತೋವಿನಕೆರೆ ಸಂತೆಗೆ ಬಂದು, ವೀಳ್ಯದೆಲೆ ಖರೀದಿಸುತ್ತಾರೆ. ಈ ಭಾಗದಲ್ಲಿ ವೀಳ್ಯದೆಲೆ ಬೆಳೆಯುವ ಪ್ರಮಾಣ ಜಾಸ್ತಿಯಿದ್ದು, ಪ್ರತಿ ವಾರ ನಡೆಯುವ ಸಂತೆಗೆ ತಂದು ರೈತರು ಮಾರಾಟ ಮಾಡುತ್ತಾರೆ.

ಇತ್ತೀಚೆಗೆ ಇಬ್ಬನಿ ಬೀಳುವುದು ಹೆಚ್ಚಾಗಿದ್ದು, ಮೈ ಕೊರೆಯುವ ಚಳಿ ವೀಳ್ಯದೆಲೆ ಬೆಳೆ ಮೇಲೂ ಪರಿಣಾಮ ಬೀರಿದೆ.

ಚಳಿಗಾಲದಲ್ಲಿ ಇದರ ಬೆಳವಣಿಗೆ ಕುಂಠಿತವಾಗಲಿದೆ. ಸಂತೆ, ಮಾರುಕಟ್ಟೆಗಳಲ್ಲಿ ಆವಕ ಕಡಿಮೆಯಾಗಿರುವುದೇ ವೀಳ್ಯದೆಲೆ ದರ ಏರಿಕೆಗೆ ಕಾರಣವಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಬೆಟ್ಟೆ	47589-52700	ಬೆಟ್ಟೆ	34899-43939
ಕೋಕ	12500-25000	ಗೊರಬಲು	17369-35359	ಬಿಳಿಗೋಟು	20222-34300
ಹಳತು	48000-54500	ರಾಶಿ	40299-46949	ಚಾಲಿ	34199-42262
ಹೊಸತು	22500-40000	ಸರಕು	42009-80496	ಕೆಂಪುಗೋಟು	22119-34949
ಕಾರ್ಕಳ		**ಸಿದ್ದಾಪುರ**		ರಾಶಿ	40499-46508
ಹೊಸತು	30000-40000	ಬಿಳಿಗೋಟು	28599-33229	**ಯಲ್ಲಾಪುರ**	
ಹಳತು	40000-54500	ಚಾಲಿ	38499-41099	ಬಿಳಿಗೋಟು	24299-34919
ಹೊಸನಗರ		ಕೋಕ	26599-33699	ಹಳೆಚಾಲಿ	35599-41741
ಚಾಲಿ	32569-39019	ಕೆಂಪುಗೋಟು	29089-36099	ಹೊಸಚಾಲಿ	32699-35199
ಕೆಂಪುಗೋಟು	33400-38399	ರಾಶಿ	42109-47099	ಕೋಕ	16109-31699
ರಾಶಿ	43555-47801	ತಟ್ಟಿಬೆಟ್ಟೆ	37409-45099	ಕೆಂಪುಗೋಟು	24899-35399
ಶಿವಮೊಗ್ಗ		**ಶಿರಸಿ**		ರಾಶಿ	45009-52009
				ತಟ್ಟಿಬೆಟ್ಟೆ	36969-44939

ಫೆಬ್ರುವರಿಯಿಂದ ಟಾಟಾ ಪ್ರಯಾಣಿಕ ವಾಹನ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ಫೆಬ್ರುವರಿ 1ರಿಂದ ಜಾರಿಗೆ ಬರುವಂತೆ ತನ್ನ ಎಲ್ಲ ಪ್ರಯಾಣಿಕ ವಾಹನಗಳ ಬೆಲೆಯನ್ನು ಸರಾಸರಿ ಶೇಕಡ 1.2ರಷ್ಟು ಹೆಚ್ಚಿಸುವುದಾಗಿ ಶುಕ್ರವಾರ ಹೇಳಿದೆ.

ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದರ ಜೊತೆಗೆ ವಾಯುಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ 2023ರ ಏಪ್ರಿಲ್‌ನಿಂದ ಜಾರಿಗೆ ಬರಲಿರುವ ಕಠಿಣ ನಿಯಮಗಳನ್ನು ಪಾಲನೆ ಮಾಡಬೇಕಿರುವ ಕಾರಣದಿಂದಾಗಿ ಒಟ್ಟು ವೆಚ್ಚ ಹೆಚ್ಚಳದಲ್ಲಿ ಕೆಲವಷ್ಟನ್ನು ಬೆಲೆ ಏರಿಕೆಯ ಮೂಲಕ ಗ್ರಾಹಕರಿಗೆ ವರ್ಗಾಯಿಸಲಾಗುವುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಏರ್ ಇಂಡಿಯಾದಿಂದ 220 ವಿಮಾನ ಖರೀದಿ?

ನವದೆಹಲಿ (ರಾಯಿಟರ್ಸ್): ಏರ್ ಇಂಡಿಯಾ ಕಂಪನಿಯು ಖರೀದಿಸಲು ಉದ್ದೇಶಿಸಿರುವ 495 ವಿಮಾನಗಳಲ್ಲಿ ಅರ್ಧದಷ್ಟು ಸಂಖ್ಯೆಯ ವಿಮಾನಗಳಿಗಾಗಿ ಬೋಯಿಂಗ್ ಮತ್ತು ಜನರಲ್ ಎಲೆಕ್ಟ್ರಿಕ್, ಸಿಎಫ್‌ಎಂ ಇಂಟರ್‌ನ್ಯಾಷನಲ್ ಕಂಪನಿಗಳಿಗೆ ಕಾರ್ಯಾದೇಶ ನೀಡಿದೆ ಎಂದು ಮೂಲಗಳು ಹೇಳಿವೆ.

ಕಂಪನಿಯು ಸಣ್ಣ ದೇಹದ 190 ಬೋಯಿಂಗ್ 737 ಮ್ಯಾಕ್ಸ್, 20 ಬೋಯಿಂಗ್ 787 ಮತ್ತು 10 ಬೋಯಿಂಗ್ 777ಎಕ್ಸ್ ಖರೀದಿಗೆ ಕಾರ್ಯಾದೇಶ ನೀಡಿದೆ ಎಂದು ತಿಳಿಸಿವೆ.

ಎರಡನೇ ಹಂತದಲ್ಲಿ, 235 ಏರ್‌ಬಸ್ ಮತ್ತು ಅಗಲ ದೇಹದ 40 ಏರ್‌ಬಸ್ ಎ350 ವಿಮಾನಗಳನ್ನು ಕಂಪನಿ ಖರೀದಿಸಲಿದೆ ಎಂದು ಹೇಳಿವೆ.

ಬೋಯಿಂಗ್, ಏರ್‌ಬಸ್, ಸಿಎಫ್‌ಎಫ್ ಕಂಪನಿಗಳು ಈ ಕುರಿತು ಪ್ರತಿಕ್ರಿಯೆಗೆ ನಿರಾಕರಿಸಿವೆ. ಈ ಕುರಿತು ಏರ್ ಇಂಡಿಯಾ ಕಂಪನಿಯು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಆದರೆ, ಟಾಟಾ ಮಾಲೀಕತ್ವದಲ್ಲಿ ಕಂಪನಿಯು ಮೊದಲ ವರ್ಷಾಚರಣೆಯ ಸಂಭ್ರಮದಲ್ಲಿದ್ದು, ಈ ಕುರಿತು ಉದ್ಯೋಗಿಗಳಿಗೆ ಬರೆದಿರುವ ಪತ್ರದಲ್ಲಿ ಭವಿಷ್ಯದ ಬೆಳವಣಿಗೆಗೆ ಶಕ್ತಿ ತುಂಬಲು ಹೊಸ ವಿಮಾನಗಳನ್ನು ಖರೀದಿಸುವ ಕಾರ್ಯಾದೇಶವನ್ನು ಅಂತಿಮಗೊಳಿಸಲಾಗುತ್ತಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

27–1-2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	10400-10450
ದಪ್ಪ ಗುಜರಾತ್(ಹೊಸ)	11500-11550

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1090 (1090)
ಪಾಮ್ ವಾರದ ಡೆಲಿವರಿ	913 (893)
ಸೂರ್ಯಕಾಂತಿ ಎಣ್ಣೆ ಕಚ್ಚಾ	1070 (1070)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 57,050 (56,850)

ಬೆಳ್ಳಿ ಕೆ.ಜಿ 68,150 (67,800)

ಆವರಣದಲ್ಲಿ ಬುಧವಾರದ ಧಾರಣೆ

ಸಾರ್ವಜನಿಕ ಪ್ರಕಟಣೆ

ಪ್ರಕಟಣೆ

ಶ್ರೀ. ವಸಂತ ಕುಮಾರ್
ಉಚ್ಚಂಗಿ ನಾಗರಾಜು ಬಿಲ್ಡಿಂಗ್
1ನೇ ಮಹಡಿ, ಕೀರ್ತಿ ಲೇಔಟ್
...
ಹೈಕಾಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
ಸರ್ವೆ ನಂ. 46 & 47, ಎಲೆಕ್ಟ್ರಾನಿಕ್ಸ್ ಸಿಟಿ, ಬೆಂಗಳೂರು – 560100
ದಿನಾಂಕ : 27.01.2023

ಪ್ರಕಟಣೆ

ಶ್ರೀ. ಪ್ರದೀಪ್ ಹೆಚ್ ಕೆ
S/o. ಹನುಮಂತರಾಯ
ಕೇರಾಫ್ ಗೋಪಾಲರೆಡ್ಡಿ ಬಿಲ್ಡಿಂಗ್
ನಂ.245, ಸಿಂಗಸಂದ್ರ,
ಹೊಸೂರ್ ರಸ್ತೆ, ಬೆಂಗಳೂರು – 68
ನೀವು ಇತ್ತೀಚೆಗೆ ನೀಡಿದ್ದ ನಿಮ್ಮ ವಿಳಾಸಕ್ಕೆ ಆರ್‌ಪಿಎಡಿ ಮುಖಾಂತರ ರವಾನಿಸಲಾಗಿದ್ದ ...
ಹೈಕಾಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
ಸರ್ವೆ ನಂ. 46 & 47, ಎಲೆಕ್ಟ್ರಾನಿಕ್ಸ್ ಸಿಟಿ, ಬೆಂಗಳೂರು – 560100
ದಿನಾಂಕ : 27.01.2023

ಪ್ರಕಟಣೆ

... ಈ ಸಂದರ್ಭದಲ್ಲಿ, ಕಂಪನಿಯು ನಿಮ್ಮನ್ನು ಸ್ವಇಚ್ಛೆಯ ಮೇರೆಗೆ ಉದ್ಯೋಗವನ್ನು ತೊರೆದಿದ್ದೀರಿ ಮತ್ತು ಸ್ವತಃ ನೀವೇ ಸೇವಾ ಗುತ್ತಿಗೆಯನ್ನು ಉಲ್ಲಂಘಿಸಿದ್ದೀರಿ ಎಂದು ಪರಿಗಣಿಸುತ್ತದೆ.
ಹೈಕಾಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
ಸರ್ವೆ ನಂ. 46 & 47, ಎಲೆಕ್ಟ್ರಾನಿಕ್ಸ್ ಸಿಟಿ, ಬೆಂಗಳೂರು – 560 100
ದಿನಾಂಕ : 27.01.2023

ಪ್ರಕಟಣೆ

ಪ್ರಕಟಣೆ

ಪ್ರಕಟಣೆ

ಕಣ್ಮರ ಗಮನಕ್ಕೆ

TENDER NOTICE

OLD GAS FIRED HEAT TREATMENT FURNACE

Sealed Tenders are invited from interested buyers for disposal of **OLD GAS FIRED HEAT TREATMENT FURNACE** strictly "**AS IS WHERE IS BASIS**" belonging to **M/s. ACE DESIGNERS LIMITED, (Foundry Division)** Survey No. 53/4 - 53/8, Thyamagondlu road, Minnapura Village, Nelamangala Taluk, Bengaluru Rural–562123. Tender documents can be obtained in person on payment of Rs.1000/- in demand draft/ cash from Mr. Srinivas CVV (Cell:No. **7899730990**) and **Mr.** Keerthik.K.N (**cell** No. **9740298248**) Time of collection of tender documents and inspection from site: **10.00 AM to 4.00 PM** on Working days (Monday to Saturday) from **30.01.2023** to **07.02.2023.** Sealed tenders to be submitted by **11.00AM** on or before 08.02.2023 at M/s **Ace Designers Ltd.,** Plot No. 7 & 8, II Phase, Peenya Industrial Area, Bangalore-560 058.

The tenders will be opened on that date at **11.30 AM**

ಭಾವಪೂರ್ಣ ಶ್ರದ್ಧಾಂಜಲಿ



ನಮ್ಮೆಲ್ಲರ ಆತ್ಮೀಯರು, ನಾಗರಬಾವಿ ಕ್ಲಬ್‌ನ ನಿಕಟಪೂರ್ವ ನಿರ್ದೇಶಕರು,
ಶ್ರೀಯುತ ಟಿ. ಎಲ್. ಸುರೇಶ್, 56 ವರ್ಷಗಳು.
Executive Engineer- PWD, KSHIP.
27–01–2023 ರಂದು ವಿಧಿವಶರಾಗಿದ್ದಾರೆ.
ಶ್ರೀಯುತರ ಚೇತನಕ್ಕೆ ಗೌರವಪೂರ್ವಕವಾಗಿ ಅಂತಿಮ ನಮನಗಳು.
ವಿ. ಪ್ರಕಾಶ, ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರುಗಳು ಹಾಗೂ ಕ್ಲಬ್‌ನ ಸರ್ವ ಸದಸ್ಯರುಗಳು.
ನಾಗರಬಾವಿ ಕ್ಲಬ್ (ರಿ) 10 ನೇ ವಿಭಾಗ, ನಾಗರಬಾವಿ 2ನೇ ಹಂತ. ಬೆಂಗಳೂರು–560072.

ಎಂದೆಂದಿಗೂ ನಮ್ಮ ಹೃದಯದಲ್ಲಿ



ಶ್ರೀಮತಿ ಉಮಾ ವಿಶ್ವನಾಥ್
ಜನನ: 18.06.1958 – ಮರಣ: 28.01.2022
ಶ್ರೀಮತಿ ಉಮಾ ವಿಶ್ವನಾಥ್ ಒಬ್ಬ ಉದ್ಯಮಿ, ಪತ್ನಿ, ಅಜ್ಜಿ ಮತ್ತು ಆರ್. ವಿಶ್ವನಾಥ್‌ರವರ ಧರ್ಮಪತ್ನಿಯಾದ ನೀವು ಎಂದೆಂದಿಗೂ ನಮ್ಮ ಹೃದಯದಲ್ಲಿ
ನಿಮ್ಮ ನಿರ್ಭಯ ನಡೆ, ನುಡಿ ಮತ್ತು ನಿಮ್ಮ ಸದ್ಗುಣಗಳಿಂದ ಎಲ್ಲರನ್ನು ಸೆಳೆಯುತ್ತಿದ್ದ ರೀತಿ, ಶಕ್ತಿ, ನಮ್ಮೆಲ್ಲರ ಬಾಳಿಗೆ ದಾರಿದೀಪವಾಗಿದೆ.
ದುಃಖತಪ್ತರು:
ಆರ್. ವಿಶ್ವನಾಥ್, ಮಕ್ಕಳು, ಮೊಮ್ಮಕ್ಕಳು ಮತ್ತು ನಂದಾವನಮ್ ಕುಟುಂಬ.
ಮೊಬೈಲ್: 9448077259

ನಿಧನ



ಶ್ರೀ ಪಿ.ಆರ್. ಶ್ರೀನಿವಾಸ್
ಶ್ರೀಯುತರು ದಿನಾಂಕ: 27–01–2023 ಬೆಳಿಗ್ಗೆ 2.00 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಕುಟುಂಬದವರಿಗೆ ಹಾಗೂ ಸ್ನೇಹಿತರಿಗೆ ಭಗವಂತ ದುಃಖವನ್ನು ಭರಿಸುವ ಶಕ್ತಿಯನ್ನು ಕರುಣಿಸಲಿ ಹಾಗೂ ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ.
ಎ. ಬಾಲಚಂದ್ರ ಹಾಗೂ ಸ್ನೇಹಿತರು

ಡೆವೊನ್, ಡೆರಿಲ್ ಅಬ್ಬರ

ಟಿ20: ನ್ಯೂಜಿಲೆಂಡ್‌ಗೆ ಗೆಲುವು; ವಾಷಿಂಗ್ಟನ್ ಸುಂದರ್ ಹೋರಾಟ ವ್ಯರ್ಥ



ನ್ಯೂಜಿಲೆಂಡ್ ತಂಡದ ಡೆರಿಲ್ ಮಿಚೆಲ್ ಬ್ಯಾಟಿಂಗ್ ಸೊಬಗು –ಎಎಫ್‌ಪಿ ಚಿತ್ರ

ರಾಂಚಿ (ಪಿಟಿಐ): ಡೆವೊನ್ ಕಾನ್ವೆ ಮತ್ತು ಡೆರಿಲ್ ಮಿಚೆಲ್ ಅವರ ಅಬ್ಬರದ ಅರ್ಧಶತಕಗಳ ಬಲದಿಂದ ನ್ಯೂಜಿಲೆಂಡ್ ತಂಡವು ಶುಕ್ರವಾರ ಇಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಭಾರತದ ವಿರುದ್ಧ 21 ರನ್‌ಗಳಿಂದ ಗೆದ್ದಿತು.

ಜೆಕೆಸಿಎ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕಿವೀಸ್ ಬಳಗವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 176 ರನ್ ಗಳಿಸಿತು. ಭಾರತ ತಂಡ ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 155 ರನ್ ಮಾತ್ರ ಪೇರಿಸಿತು.

ಸೂರ್ಯಕುಮಾರ್ ಯಾದವ್ (47 ರನ್, 34 ಎ.) ಮತ್ತು ವಾಷಿಂಗ್ಟನ್ ಸುಂದರ್ (50 ರನ್, 28 ಎ., 4X5, 6X3) ಅವರ ಹೋರಾಟ ಆತಿಥೇಯ ತಂಡವನ್ನು ಗೆಲುವಿನ ದಡ ತಲುಪಿಸಲು ಸಾಕಾಗಲಿಲ್ಲ. ಕಿವೀಸ್ ತಂಡದ ಎಲ್ಲ ಬೌಲರ್‌ಗಳು ಶಿಸ್ತಿನ ದಾಳಿ ನಡೆಸಿದರು.

ಇದಕ್ಕೂ ಮುನ್ನ ಟಾಸ್ ಗೆದ್ದ ಹಾರ್ದಿಕ್ ಪಾಂಡ್ಯ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಕಿವೀಸ್ ಆರಂಭಿಕ ಜೋಡಿ ಫಿನ್ ಅಲೆನ್ (35; 23ಎ) ಮತ್ತು ಕಾನ್ವೆ (52; 35ಎ) ಬಿರುಸಿನ ಆರಂಭ ನೀಡಿತು.

ಐದನೇ ಓವರ್‌ನಲ್ಲಿ ವಾಷಿಂಗ್ಟನ್ ಸುಂದರ್ ಸ್ಪಿನ್ ಎಸೆತದಲ್ಲಿ ಫಿನ್ ಅಲೆನ್ ಔಟಾದರು. ಅದೇ ಓವರ್‌ನಲ್ಲಿ ಮಾರ್ಕ್ ಚಾಪ್ಮನ್ ಖಾತೆ ತೆರೆಯದೇ ಔಟಾದರು. ಈ ಹಂತದಲ್ಲಿ ಕಾನ್ವೆ ಜೊತೆಗೂಡಿದ ಗ್ಲೆನ್ ಫಿಲಿಪ್ಸ್ ಆಟಕ್ಕೆ ವೇಗ ನೀಡಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ ಸೇರಿ 60 ರನ್ ಸೂರೆ ಮಾಡಿದರು. ಇದರಿಂದಾಗಿ ತಂಡದ ಮೊತ್ತವು ನೂರರ ಗಡಿ ದಾಟಿತು.

ಕಾನ್ವೆ ಏಳು ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿದರು. ಆದರೆ ಗ್ಲೆನ್ ತಮ್ಮ ನೈಜ ಆಟದ ಬದಲು ರಕ್ಷಣಾತ್ಮಕವಾಗಿ ಆಡಿದರು. 22 ಎಸೆತಗಳಲ್ಲಿ 17 ರನ್ ಗಳಿಸಿದರು.

18ನೇ ಓವರ್‌ನಲ್ಲಿ ಕಾನ್ವೆ ವಿಕೆಟ್ ಗಳಿಸುವಲ್ಲಿ ವೇಗಿ ಅರ್ಷದೀಪ್ ಸಿಂಗ್ ಯಶಸ್ವಿಯಾದರು. ಆದರೆ, ರನ್ ಗಳಿಕೆಗೆ ಕಡಿವಾಣ ಹಾಕುವ ಭಾರತದ ಬೌಲರ್‌ಗಳ ಯೋಜನೆಗೆ ಡೆರಿಲ್ ಮಿಚೆಲ್ ಅಡ್ಡಿಯಾದರು.

5 ಸಿಕ್ಸರ್, ಮೂರು ಬೌಂಡರಿಸಹಿತ 59 ರನ್‌ಗಳನ್ನು ಗಳಿಸಿದರು. ಅದಕ್ಕಾಗಿ 30 ಎಸೆತಗಳನ್ನು ಎದುರಿಸಿದ ಅವರು ಅಜೇಯರಾಗುಳಿದರು.

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್ 6ಕ್ಕೆ 176 (20 ಓವರ್)
ಫಿನ್ ಸಿ ಸೂರ್ಯಕುಮಾರ್ ಬಿ ಸುಂದರ್ 35 (23ಎ, 4X4, 6X2), ಕಾನ್ವೆ ಸಿ ಹೂಡಾ ಬಿ ಅರ್ಷದೀಪ್ 52 (35ಎ, 4X7, 6X1), ಚಾಪ್‌ಮನ್ ಸಿ ಮತ್ತು ಬಿ ಸುಂದರ್ 0 (4ಎ), ಫಿಲಿಪ್ಸ್ ಸಿ ಸೂರ್ಯಕುಮಾರ್ ಬಿ ಕುಲದೀಪ್ 17 (22ಎ, 4X1), ಡೆರಿಲ್ ಔಟಾಗದೆ 59 (30ಎ, 4X3, 6X5), ಬ್ರೇಸ್‌ವೆಲ್ ರನೌಟ್ (ಇಶಾನ್) 1 (2ಎ), ಸ್ಯಾಂಟ್ನರ್ ಸಿ ತ್ರಿಪಾಠಿ ಬಿ ಶಿವಂ 7 (5ಎ, 4X1), ಸೋಧಿ 0 (0ಎ) **ಇತರೆ:** 5 (ಲೆಗ್‌ಬೈ 1, ನೋಬಾಲ್ 1, ವೈಡ್ 3)
ವಿಕೆಟ್ ಪತನ: 1-43 (ಫಿನ್ ಅಲೆನ್, 4.2), 2-43 (ಮಾರ್ಕ್ ಚಾಪ್‌ಮನ್, 4.6), 3-103 (ಗ್ಲೆನ್ ಫಿಲಿಪ್ಸ್, 12.5), 4-139 (ಡೆವೊನ್ ಕಾನ್ವೆ, 17.2), 5-140 (ಮೈಕಲ್ ಬ್ರೇಸ್‌ವೆಲ್, 17.5), 6-149 (ಮಿಚೆಲ್ ಸ್ಯಾಂಟ್ನರ್, 18.6)
ಬೌಲಿಂಗ್: ಹಾರ್ದಿಕ್ ಪಾಂಡ್ಯ 3–0–33–0, ಅರ್ಷದೀಪ್ ಸಿಂಗ್ 4–0–51–1, ವಾಷಿಂಗ್ಟನ್ ಸುಂದರ್ 4–0–22–2, ದೀಪಕ್ ಹೂಡಾ 2–0–14–0, ಉಮ್ರಾನ್ ಮಲಿಕ್ 1–0–16–0, ಕುಲದೀಪ್ ಯಾದವ್ 4–0–20–1, ಶಿವಂ ಮಾವಿ 2–0–19–1

ಭಾರತ 9ಕ್ಕೆ 155 (20 ಓವರ್)
ಶುಭಮನ್ ಸಿ ಅಲೆನ್ ಬಿ ಸ್ಯಾಂಟನರ್ 7 (6ಎ, 4X1), ಇಶಾನ್ ಬಿ ಬ್ರೇಸ್‌ವೆಲ್ 4 (5ಎ, 4X1), ತ್ರಿಪಾಠಿ ಸಿ ಕಾನ್ವೆ ಬಿ ಡಫ್ಫಿ 0 (6ಎ), ಸೂರ್ಯಕುಮಾರ್ ಸಿ ಅಲೆನ್ ಬಿ ಸೋಧಿ 47 (34ಎ, 4X6, 6X2), ಹಾರ್ದಿಕ್ ಸಿ ಮತ್ತು ಬಿ ಬ್ರೇಸ್‌ವೆಲ್ 21 (20ಎ, 4X1, 6X1), ಸುಂದರ್ ಸಿ ಡಫ್ಫಿ ಬಿ ಫರ್ಗ್ಯುಸನ್ 50 (28ಎ, 4X5, 6X3), ಹೂಡಾ ಸ್ಟಂಪ್ಡ್ ಕಾನ್ವೆ ಬಿ ಸ್ಯಾಂಟನರ್ 10 (10ಎ, 6X1), ಶಿವಂ ರನೌಟ್ (ಸ್ಯಾಂಟನರ್) 2 (3ಎ), ಕುಲದೀಪ್ ಸಿ ಕಾನ್ವೆ ಬಿ ಫರ್ಗ್ಯುಸನ್ 0 (1ಎ), ಅರ್ಷದೀಪ್ ಔಟಾಗದೆ 0 (6ಎ), ಉಮ್ರಾನ್ ಔಟಾಗದೆ 4 (1ಎ, 4X1) **ಇತರೆ:** 10 (ವೈಡ್ 10)
ವಿಕೆಟ್ ಪತನ: 1-10 (ಇಶಾನ್ ಕಿಶನ್, 1.3), 2-11 (ರಾಹುಲ್ ತ್ರಿಪಾಠಿ, 2.4), 3-15 (ಶುಭಮನ್ ಗಿಲ್, 3.1), 4-83 (ಸೂರ್ಯಕುಮಾರ್ ಯಾದವ್, 11.4), 5-89 (ಹಾರ್ದಿಕ್ ಪಾಂಡ್ಯ, 12.2), 6-111 (ದೀಪಕ್ ಹೂಡಾ, 15.4), 7-115 (ಶಿವಂ ಮಾವಿ, 16.1), 8-127 (ಕುಲದೀಪ್ ಯಾದವ್, 17.1), 9-151 (ವಾಷಿಂಗ್ಟನ್ ಸುಂದರ್, 19.5)
ಬೌಲಿಂಗ್: ಜೇಕಬ್ ಡಫ್ಫಿ 3–0–27–1, ಮೈಕಲ್ ಬ್ರೇಸ್‌ವೆಲ್ 4–0–31–2, ಮಿಚೆಲ್ ಸ್ಯಾಂಟನರ್ 4–1–11–2, ಲಾಕಿ ಫರ್ಗ್ಯುಸನ್ 4–1–33–2, ಇಶ್ ಸೋಧಿ 3–0–30–1, ಬ್ಲೇರ್ ಟಿಕ್ನರ್ 2–0–23–0

ಫಲಿತಾಂಶ: ನ್ಯೂಜಿಲೆಂಡ್‌ಗೆ 21 ರನ್ ಗೆಲುವು

ಗೊಂಜಾಲೊ ಹ್ಯಾಟ್ರಿಕ್ ಫೈನಲ್‌ಗೆ ಜರ್ಮನಿ

ಭುವನೇಶ್ವರ (ಪಿಟಿಐ): ಪೆಲ್ಲಾಟ್ ಗೊಂಜಾಲೊ ಗಳಿಸಿದ ಹ್ಯಾಟ್ರಿಕ್ ಗೋಲುಗಳು ಜರ್ಮನಿ ತಂಡವನ್ನು ವಿಶ್ವಕಪ್ ಹಾಕಿ ಟೂರ್ನಿಯ ಫೈನಲ್ ತಲುಪಿಸಿದವು.

ಇಲ್ಲಿ ಶುಕ್ರವಾರ ನಡೆದ ಜಿದ್ದಾಜಿದ್ದಿ ಸೆಮಿಫೈನಲ್ ಪಂದ್ಯದಲ್ಲಿ ಜರ್ಮನಿ 4–3ರಿಂದ ಆಸ್ಟ್ರೇಲಿಯಾ ತಂಡಕ್ಕೆ ಸೋಲುಣಿಸಿತು. ಗೊಂಜಾಲೊ 42, 51 ಮತ್ತು 58ನೇ ನಿಮಿಷಗಳಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ಗಳಿಸಿದರು. ಫೈನಲ್‌ನಲ್ಲಿ ಜರ್ಮನಿ–ಬೆಲ್ಜಿಯಂ ಮುಖಾಮುಖಿಯಾಗಲಿವೆ.

ಆಸ್ಟ್ರೇಲಿಯಾ ತಂಡಕ್ಕಾಗಿ ಹೇವರ್ಡ್ ಜೆರೆಮಿ 11ನೇ ನಿಮಿಷದಲ್ಲೇ (ಪೆನಾಲ್ಟಿ ಕಾರ್ನರ್) ಗೋಲು ಗಳಿಸಿ ಮುನ್ನಡೆ ತಂದುಕೊಟ್ಟಿದ್ದರು. ಇಪರ್ಮಸ್ ನೇಥನ್ 26ನೇ ನಿಮಿಷದಲ್ಲಿ ಗಳಿಸಿದ ಫೀಲ್ಡ್ ಗೋಲು ತಂಡದ ಮುನ್ನಡೆಯನ್ನು 2–0ಗೆ ಹೆಚ್ಚಿಸಿತ್ತು. ನಂತರದ ಆಟದಲ್ಲಿ ಜರ್ಮನಿ ಪ್ರಾಬಲ್ಯ ಸಾಧಿಸಿತ್ತು. ಆದರೆ 57ನೇ ನಿಮಿಷದಲ್ಲಿ ಗೋವರ್ಸ್ ಬ್ಲೇಕ್ ಗಳಿಸಿದ ಗೋಲು ಪಂದ್ಯವನ್ನು 3–3ರಿಂದ ಸಮಬಲಕ್ಕೆ ತಂದಿತ್ತು.

ಇದಾದ ಎರಡನೇ ನಿಮಿಷದಲ್ಲಿ ಫೀಲ್ಡ್ ಗೋಲು ಹೊಡೆದ ವೆಲ್ಲೆನ್ ನಿಕ್ಲಾಸ್ (59ನೇ ನಿಮಿಷ) ಜರ್ಮನಿ ತಂಡವು ಸಂಭ್ರಮದಲ್ಲಿ ಮಿಂದೇಳುವಂತೆ ಮಾಡಿದರು.

ಜರ್ಮನಿ ತಂಡವು 2010ರ ಬಳಿಕ ಮೊದಲ ಬಾರಿ ಫೈನಲ್ ತಲುಪಿದೆ.

ಪ್ರಶಸ್ತಿ ಸುತ್ತಿಗೆ ಬೆಲ್ಜಿಯಂ: ಇನ್ನೊಂದು ಸೆಮಿಫೈನಲ್‌ನಲ್ಲಿ ಬೆಲ್ಜಿಯಂ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ 3-2ರಿಂದ ನೆದರ್ಲೆಂಡ್ಸ್ ತಂಡವನ್ನು ಪರಾಭವಗೊಳಿಸಿ ಫೈನಲ್ ತಲುಪಿತು.

ಇಂದಿನ ಪಂದ್ಯಗಳು

(13-16ನೇ ಸ್ಥಾನ)
- ಮಲೇಷ್ಯಾ–ಜಪಾನ್ ಬೆಳಿಗ್ಗೆ 11.30ರಿಂದ
- ಚಿಲಿ–ಫ್ರಾನ್ಸ್, ಮಧ್ಯಾಹ್ನ 2ರಿಂದ

(9-12ನೇ ಸ್ಥಾನ)
- ಅರ್ಜೆಂಟೀನಾ–ವೇಲ್ಸ್ ಸಂಜೆ 4.30ರಿಂದ
- ದಕ್ಷಿಣ ಆಫ್ರಿಕಾ– ಭಾರತ, ಸಂಜೆ 7ರಿಂದ

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಟೆನಿಸ್: ಕೊನೆಯ ಗ್ರ್ಯಾನ್‌ಸ್ಲಾಮ್‌ನಲ್ಲಿ ಭಾರತದ ಆಟಗಾರ್ತಿಗಿಲ್ಲ ಪ್ರಶಸ್ತಿ

ಸಾನಿಯಾ–ಬೋಪಣ್ಣ ರನ್ನರ್ಸ್‌ಅಪ್



ಮಿಶ್ರ ಡಬಲ್ಸ್‌ನಲ್ಲಿ ಪ್ರಶಸ್ತಿ ಗೆದ್ದ(ಎಡದಿಂದ) ಬ್ರೆಜಿಲ್‌ನ ಲೂಯಿಸಾ ಸ್ಟೆಫಾನಿ ಮತ್ತು ರಫೆಲ್ ಮಟವೊಸ್. ರನ್ನರ್ಸ್ ಅಪ್ ಭಾರತದ ಸಾನಿಯಾ ಮಿರ್ಜಾ ಮತ್ತು ರೋಹನ್ ಬೋಪಣ್ಣ– ಎಎಫ್‌ಪಿ ಚಿತ್ರ

ಮೆಲ್ಬರ್ನ್ (ಪಿಟಿಐ): ಭಾರತದ ಅನುಭವಿ ಆಟಗಾರ್ತಿ ಸಾನಿಯಾ ಮಿರ್ಜಾ ಅವರ ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಪಯಣ ರನ್ನರ್ಸ್‌ಅಪ್ ಸ್ಥಾನದೊಂದಿಗೆ ಕೊನೆಗೊಂಡಿದೆ. ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್‌ನಲ್ಲಿ ಗೆಳೆಯ ರೋಹನ್ ಬೋಪಣ್ಣ ಅವರೊಂದಿಗೆ ಕಣಕ್ಕಿಳಿದಿದ್ದ ಅವರು ಪ್ರಶಸ್ತಿ ಸುತ್ತಿನಲ್ಲಿ ಎಡವಿದರು.

ರಾಡ್ ಲೇವರ್ ಅರೆನಾದಲ್ಲಿ ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ ಸಾನಿಯಾ–ಬೋಪಣ್ಣ 6-7 (2) 2-6ರಿಂದ ಬ್ರೆಜಿಲ್‌ನ ಲೂಯಿಸಾ ಸ್ಟೆಫಾನಿ ಮತ್ತು ರಫೆಲ್ ಮಟವೊಸ್ ವಿರುದ್ಧ ಸೋಲನುಭವಿಸಿದರು.

ಇಲ್ಲಿ ಶ್ರೇಯಾಂಕರಹಿತರಾಗಿದ್ದ ಭಾರತದ ಜೋಡಿ ಹೋರಾಟ ತೋರಿದರೂ ಗೆಲುವು ಒಲಿಸಿಕೊಳ್ಳಲಾಗಲಿಲ್ಲ.

‘ಇಲ್ಲಿ ನಾನು ಅತ್ತರೆ ಅದು ಆನಂದಬಾಷ್ಪ ಮಾತ್ರ. ನಾನು ಇನ್ನಷ್ಟು ಟೂರ್ನಿಗಳಲ್ಲಿ ಆಡುತ್ತೇನೆ. ಆದರೆ ನನ್ನ ವೃತ್ತಿಪರ ಪಯಣ ಆರಂಭವಾಗಿದ್ದು ಮೆಲ್ಬರ್ನ್‌ನಲ್ಲಿ’ ಎಂದು ಭಾವುಕರಾಗಿದ್ದ ಸಾನಿಯಾ ಕಣ್ಣೀರು ತಡೆಹಿಡಿಯುವ ಪ್ರಯತ್ನ ಮಾಡಿದರು.

‘ಮಿಶ್ರ ಡಬಲ್ಸ್ ಮಾದರಿಯಲ್ಲಿ ರೋಹನ್ ನನ್ನ ಮೊದಲ ಜೊತೆಗಾರ. ಆಗ ನನಗೆ ಕೇವಲ 14 ವರ್ಷ. ಆ ವೇಳೆ ನಾವು ರಾಷ್ಟ್ರೀಯ ಚಾಂಪಿಯನ್‌ಷಿಪ್ ಗೆದ್ದಿದ್ದೆವು. ಆತ ನನಗೆ ಅತ್ಯುತ್ತಮ ಗೆಳೆಯ. ವೃತ್ತಿಜೀವನ ಕೊನೆಗೊಳ್ಳುವ ಈ ಸಂದರ್ಭದಲ್ಲಿ ಶ್ರೇಷ್ಠ ಜೊತೆಗಾರರಲ್ಲಿ ಒಬ್ಬ’ ಎಂದು ಸಾನಿಯಾ ನುಡಿದರು.

36 ವರ್ಷದ ಸಾನಿಯಾ ಅವರು ಮಿಶ್ರ ಡಬಲ್ಸ್‌ನಲ್ಲಿ ಮೂರು ಸೇರಿದಂತೆ ಆರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

‘ನನ್ನ ಮಗುವಿನ ಸಮ್ಮುಖದಲ್ಲಿ ಗ್ರ್ಯಾನ್‌ಸ್ಲಾಮ್ ಫೈನಲ್‌ವೊಂದರಲ್ಲಿ ಆಡುತ್ತೇನೆ ಎಂದು ಯೋಚಿಸಿರಲಿಲ್ಲ. ನಾಲ್ಕು ವರ್ಷದ ಮಗ ಇಜಾನ್, ನನ್ನ ಪೋಷಕರು, ರೋಹನ್ ಪತ್ನಿ, ನನ್ನ ತರಬೇತುದಾರರು, ಆಸ್ಟ್ರೇಲಿಯಾದಲ್ಲಿರುವ ನನ್ನ ಕುಟುಂಬಸ್ಥರು ಈ ಪಂದ್ಯಕ್ಕೆ ಸಾಕ್ಷಿಯಾಗಿದ್ದು ನಿಜವಾಗಿಯೂ ವಿಶೇಷ ಕ್ಷಣ’ ಎಂದು ಸಾನಿಯಾ ಹೇಳಿದರು.

ಪಂದ್ಯದ ಆರಂಭದಲ್ಲೇ ಸಾನಿಯಾ–ಬೋಪಣ್ಣ ಹಿನ್ನಡೆ ಅನುಭವಿಸಿದರು.

ಮುಂದಿನ ತಿಂಗಳು ನಡೆಯುವ ದುಬೈ ಓಪನ್ ಟೆನಿಸ್ ಟೂರ್ನಿಯ ಬಳಿಕ ನಿವೃತ್ತಿಯಾಗುವುದಾಗಿ ಸಾನಿಯಾ ಅವರು ಈಗಾಗಲೇ ಪ್ರಕಟಿಸಿದ್ದಾರೆ.

ಸಿಟ್ಸಿಪಸ್–ಜೊಕೊವಿಚ್ ಸೆಣಸು

ಮೆಲ್ಬರ್ನ್(ಎಎಫ್‌ಪಿ ವರದಿ): ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಸ್ ಮತ್ತು ಸರ್ಬಿಯಾದ ನೊವಾಕ್ ಜೊಕೊವಿಚ್ ಮುಖಾಮುಖಿಯಾಗಲಿದ್ದಾರೆ.

ಶುಕ್ರವಾರ ನಡೆದ ಜಿದ್ದಾಜಿದ್ದಿ ಸೆಮಿಫೈನಲ್‌ನಲ್ಲಿ ಸಿಟ್ಸಿಪಸ್ 7-6 (7/2), 6-4, 6-7 (6/8), 6-3ರಿಂದ ರಷ್ಯಾದ ಕರೆನ್ ಕಚನೊವ್ ಅವರನ್ನು ಮಣಿಸಿದರು. ಇಲ್ಲಿ ಮೊದಲ ಬಾರಿ ಫೈನಲ್ ತಲುಪಿರುವ ಗ್ರೀಸ್ ಆಟಗಾರ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರುವತ್ತ ದಾಪುಗಾಲಿಟ್ಟರು.

ಭಾನುವಾರ ನಡೆಯುವ ಪುರುಷರ ಸಿಂಗಲ್ಸ್ ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಜೊಕೊವಿಚ್ ಅವರನ್ನು ಮಣಿಸಿದರೆ ಸಿಟ್ಸಿಪಸ್ ಅಗ್ರ ಕ್ರಮಾಂಕದ ಆಟಗಾರ ಎನಿಸಿಕೊಳ್ಳುವರು. 24 ವರ್ಷದ ಸಿಟ್ಸಿಪಸ್ ಅವರು ಆಸ್ಟ್ರೇಲಿಯಾ ಓಪನ್ ಫೈನಲ್ ತಲುಪಿದ ಎರಡನೇ ಅತಿ ಕಿರಿಯ ಆಟಗಾರ ಎನಿಸಿಕೊಂಡಿದ್ದಾರೆ. 2011ರಲ್ಲಿ 23 ವರ್ಷದ ಜೊಕೊವಿಚ್ ಪ್ರಶಸ್ತಿ ಸುತ್ತು ತಲುಪಿದ್ದರು.

ಇಲ್ಲಿ ಒಂಬತ್ತು ಬಾರಿ ಕಿರೀಟ ಧರಿಸಿರುವ ಜೊಕೊವಿಚ್ ಅವರು, ಇನ್ನೊಂದು ಸೆಮಿಫೈನಲ್‌ನಲ್ಲಿ 7-5, 6-1, 6-2ರಿಂದ ಅಮೆರಿಕದ ಟಾಮಿ ಪಾಲ್ ಅವರನ್ನು ಮಣಿಸಿದರು.

ಹಿಂದೆ ಸರಿದ ಕುಸ್ತಿಪಟುಗಳು

ನವದೆಹಲಿ (ಪಿಟಿಐ): ವಿನೇಶಾ ಪೋಗಟ್ ಮತ್ತು ಬಜರಂಗ್ ಪೂನಿಯಾ ಒಳಗೊಂಡಂತೆ ಎಂಟು ಪ್ರಮುಖ ಕುಸ್ತಿಪಟುಗಳು ಜಗ್ರೆಬ್ ಓಪನ್ ಕುಸ್ತಿ ಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿದಿದ್ದಾರೆ.

ಮೇರಿ ಕೋಮ್ ನೇತೃತ್ವದ ಮೇಲುಸ್ತುವಾರಿ ಸಮಿತಿಯು ಕ್ರೊವೇಷ್ಯಾದ ಜಗ್ರೆಬ್‌ನಲ್ಲಿ ಫೆ.1 ರಂದು ಆರಂಭವಾಗುವ ಟೂರ್ನಿಗೆ 36 ಸದಸ್ಯರ ತಂಡವನ್ನು ಗುರುವಾರ ಪ್ರಕಟಿಸಿತ್ತು.

ಆದರೆ ಟೂರ್ನಿಗೆ ಸರಿಯಾಗಿ ಸಿದ್ಧತೆ ನಡೆಸಲು ಆಗಿಲ್ಲ ಎಂಬ ಕಾರಣ ನೀಡಿರುವ ವಿನೇಶಾ, ಬಜರಂಗ್, ರವಿ ದಹಿಯಾ, ದೀಪಕ್ ಪೂನಿಯಾ, ಅನ್ಶು ಮಲಿಕ್, ಸಂಗೀತಾ ಪೋಗಟ್, ಸರಿತಾ ಮೋರ್ ಮತ್ತು ಜಿತೇಂದ್ರ ಅವರು ಪಾಲ್ಗೊಳ್ಳುವುದಿಲ್ಲ ಎಂದಿದ್ದಾರೆ.

‘ಶೇ 100 ರಷ್ಟು ತಯಾರಿ ನಡೆಸಿಲ್ಲ ಎಂಬ ಕಾರಣ ನೀಡಿ ಈ ಕುಸ್ತಿಪಟುಗಳು ಹಿಂದೆ ಸರಿದಿದ್ದಾರೆ’ ಎಂದು ಸಾಯ್ ಮೂಲಗಳು ಹೇಳಿವೆ.

ಐಸಿಸಿ 19 ವರ್ಷದೊಳಗಿನವರ ಮಹಿಳಾ ಟಿ20 ವಿಶ್ವಕಪ್

ಶ್ವೇತಾ ಮಿಂಚು; ಫೈನಲ್‌ಗೆ ಭಾರತ



ಶ್ವೇತಾ ಶೆರಾವತ್ –ಬಿಸಿಸಿಐ ಟ್ವಿಟರ್ ಚಿತ್ರ

ಪೋಚೆಫ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ (ಪಿಟಿಐ): ಆರಂಭಿಕ ಬ್ಯಾಟರ್ ಶ್ವೇತಾ ಶೆರಾವತ್ (61) ಅವರ ಅರ್ಧಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿದ ಭಾರತ ತಂಡ, ಐಸಿಸಿ 19 ವರ್ಷದೊಳಗಿನವರ ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್ ತಂಡ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 107 ರನ್ ಗಳಿಸಿದರೆ, ಭಾರತ 14.2 ಓವರ್‌ಗಳಲ್ಲಿ 2 ವಿಕೆಟ್‌ಗೆ 110 ರನ್ ಗಳಿಸಿ ಗೆದ್ದಿತು.

45 ಎಸೆತಗಳಲ್ಲಿ 10 ಬೌಂಡರಿಗಳ ನೆರವಿನಿಂದ ಅಜೇಯ 61 ರನ್ ಗಳಿಸಿದ ಶ್ವೇತಾ ಅವರು ಭಾರತದ ಗೆಲುವಿನ ಹಾದಿಯನ್ನು ಸುಗಮಗೊಳಿಸಿದರು. ಸೌಮ್ಯಾ ತಿವಾರಿ 22 ರನ್ ಗಳಿಸಿದರು.

ಇದಕ್ಕೂ ಮುನ್ನ ಲೆಗ್‌ಸ್ಪಿನ್ನರ್ ಪಾರ್ಶವಿ ಚೋಪ್ರಾ (20ಕ್ಕೆ 3) ಅವರ ಚುರುಕಿನ ದಾಳಿಯ ನೆರವಿನಿಂದ ಭಾರತ ತಂಡ ಎದುರಾಳಿಗಳನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿತ್ತು. ನ್ಯೂಜಿಲೆಂಡ್ ಪರ ಜಾರ್ಜಿಯಾ ಪ್ಲಿಮೆರ್ (35) ಮತ್ತು ಇಸಬೆಲಾ ಗೇಜ್ (26) ಮಾತ್ರ ಅಲ್ಪ ಪ್ರತಿರೋಧ ಒಡ್ಡಿದರು.

ಶಫಾಲಿ ವರ್ಮಾ ನೇತೃತ್ವದ ಭಾರತವು ಫೈನಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 107 (ಜಾರ್ಜಿಯಾ ಪ್ಲಿಮೆರ್ 35, ಇಸಬೆಲಾ ಗೇಜ್ 26, ಪಾರ್ಶವಿ ಚೋಪ್ರಾ 20ಕ್ಕೆ 3, ತಿತಾಸ್ ಸಾಧು 17ಕ್ಕೆ 1, ಮನ್ನತ್ ಕಶ್ಯಪ್ 21ಕ್ಕೆ 1, ಶಫಾಲಿ ವರ್ಮಾ 7ಕ್ಕೆ 1)

ಭಾರತ: 14.2 ಓವರ್‌ಗಳಲ್ಲಿ 2 ವಿಕೆಟ್‌ಗೆ 110 (ಶಫಾಲಿ ವರ್ಮಾ 10, ಶ್ವೇತಾ ಶೆರಾವತ್ ಔಟಾಗದೆ 61, ಸೌಮ್ಯ ತಿವಾರಿ 22, ಅನಾ ಬ್ರೌನಿಂಗ್ 18ಕ್ಕೆ 2) ಫಲಿತಾಂಶ: ಭಾರತಕ್ಕೆ 8 ವಿಕೆಟ್ ಗೆಲುವು

ಲಕ್ಷ್ಮಿ, ವೃಂದಾ, ಜನನಿ ನೇಮಕ

ದುಬೈ (ಪಿಟಿಐ): ದಕ್ಷಿಣ ಆಫ್ರಿಕಾದಲ್ಲಿ ನಿಗದಿಯಾಗಿರುವ ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ರೆಫರಿ, ಅಂಪೈರ್‌ಗಳ ಎಲ್ಲ ಸ್ಥಾನಗಳಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ) ಮಹಿಳೆಯರನ್ನು ನೇಮಿಸಿದೆ.

ಎಲ್ಲ ಸ್ಥಾನಗಳಿಗೆ ಮಹಿಳೆಯನ್ನು ನೇಮಿಸಿದ್ದು ವಿಶ್ವ ಕ್ರಿಕೆಟ್‌ನಲ್ಲಿ ಇದೇ ಮೊದಲ ಬಾರಿಯಾಗಿದ್ದು, ಭಾರತದ ಜಿ.ಎಸ್. ಲಕ್ಷ್ಮಿ, ವೃಂದಾ ರಾಠಿ ಮತ್ತು ಜನನಿ ನಾರಾಯಣನ್ ಅವರು ಸ್ಥಾನ ಪಡೆದಿದ್ದಾರೆ. ಟೂರ್ನಿಗೆ ಒಟ್ಟು ಮೂರು ಮಂದಿ ರೆಫರಿಗಳು, 10 ಅಂಪೈರ್‌ಗಳು ನೇಮಕಗೊಂಡಿದ್ದು, ಕ್ರಿಕೆಟ್‌ನಲ್ಲಿ ಮಹಿಳೆಯರ ಒಳಗೊಳ್ಳುವಿಕೆಯನ್ನು ಹೆಚ್ಚಿಸುವ ಐಸಿಸಿಯ ಮಹತ್ವಾಕಾಂಕ್ಷೆಯ ಭಾಗವಾಗಿದೆ.

ವಿಶ್ವಕಪ್ ಟೂರ್ನಿಗೆ ನೇಮಕಗೊಂಡವರು: ಪಂದ್ಯ ರೆಫರಿಗಳು: ಜಿ.ಎಸ್.ಲಕ್ಷ್ಮಿ (ಭಾರತ), ಶಾಂಡ್ರೆ ಫ್ರಿಟ್ಜ್ (ದಕ್ಷಿಣ ಆಫ್ರಿಕಾ), ಮಿಚೆಲ್ ಪೆರೆರಾ (ಶ್ರೀಲಂಕಾ).

ಅಂಪೈರ್‌ಗಳು: ವೃಂದಾ ರಾಠಿ, ಜನನಿ ನಾರಾಯಣನ್ (ಭಾರತ), ಸ್ಯೂ ರೆಡ್‌ಫರ್ನ್, ಅನ್ನಾ ಹ್ಯಾರಿಸ್ (ಇಂಗ್ಲೆಂಡ್), ಇಲೋಸ್ ಶೆರಿಡನ್, ಕ್ಲೇರ್ ಪೊಲೊಸಾಕ್ (ಆಸ್ಟ್ರೇಲಿಯಾ), ಜಾಕ್ವೆಲಿನ್ ವಿಲಿಯಮ್ಸ್ (ವೆಸ್ಟ್ ಇಂಡೀಸ್), ಕಿಮ್ ಕಾಟನ್ (ನ್ಯೂಜಿಲೆಂಡ್), ಲಾರೆನ್ ಅಗೆನ್‌ಬಗ್ (ದಕ್ಷಿಣ ಆಫ್ರಿಕಾ), ನಿರ್ಮಲಾ ಪೆರೆರಾ (ಶ್ರೀಲಂಕಾ).

ಕ್ರಿಕೆಟ್: ಗಗನ್ ಸಾಯಿ ತ್ರಿಶತಕ



ಗಗನ್ ಸಾಯಿ

ಬೆಂಗಳೂರು: ಗಗನ್ ಸಾಯಿ ಕೆ. ಗಳಿಸಿದ ಅಮೋಘ ತ್ರಿಶತಕದ ಬಲದಿಂದ ಗಿರಿಧನ್ವ ಸ್ಕೂಲ್ ತಂಡವು ಬಿಟಿಆರ್ ಶೀಲ್ಡ್ 14 ವರ್ಷದೊಳಗಿನವರ ಒಂದನೇ ಗುಂಪು ಎರಡನೇ ಡಿವಿಷನ್ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸಿತು.

ಇಲ್ಲಿ ನಡೆದ ಪಂದ್ಯದಲ್ಲಿ ಗಿರಿಧನ್ವ 534 ರನ್‌ಗಳಿಂದ ಫ್ಲಾರೆನ್ಸ್ ಪಬ್ಲಿಕ್ ಸ್ಕೂಲ್ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಗಿರಿಧನ್ವ 50 ಓವರ್‌ಗಳಲ್ಲಿ 5 ವಿಕೆಟ್‌ಗೆ 603 ರನ್ ಗಳಿಸಿತು. 150 ಎಸೆತಗಳನ್ನು ಎದುರಿಸಿದ ಗಗನ್ 59 ಬೌಂಡರಿ 10 ಸಿಕ್ಸರ್ ಸಿಡಿಸಿದರು. ಫ್ಲಾರೆನ್ಸ್ 16.4 ಓವರ್‌ಗಳಲ್ಲಿ 69 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರ್: ಗಿರಿಧನ್ವ ಸ್ಕೂಲ್: 50 ಓವರ್‌ಗಳಲ್ಲಿ 5ಕ್ಕೆ 603 (ಶಿವು ಎಂ. 36, ಗಗನ್ ಸಾಯಿ 344, ರೋಹಿತ್ ಸಾಯಿ ಕೇಟಿರೆಡ್ಡಿ ಔಟಾಗದೆ 95; ಅರ್ಜುನ್ ಬಾಲು 73ಕ್ಕೆ 2). ಫ್ಲಾರೆನ್ಸ್ ಪಬ್ಲಿಕ್ ಸ್ಕೂಲ್: 16.4 ಓವರ್‌ಗಳಲ್ಲಿ 69 (ಶಿವು ಎಂ. 15ಕ್ಕೆ 5). ಫಲಿತಾಂಶ: ಗಿರಿಧನ್ವ ಸ್ಕೂಲ್ ತಂಡಕ್ಕೆ 534 ರನ್‌ಗಳ ಜಯ

ವಾಲಿಬಾಲ್: ಧಾರವಾಡಕ್ಕೆ ಗೆಲುವು



ಧಾರವಾಡ ಹಾಗೂ ಬೆಂಗಳೂರು ಕೇಂದ್ರ ತಂಡದ ಪೈಪೋಟಿ –ಪ್ರಜಾವಾಣಿ ಚಿತ್ರ

ಮೈಸೂರು: ದೀಪಾ ಅವರ ಉತ್ತಮ ಆಟದ ನೆರವಿನಿಂದ ಧಾರವಾಡ ತಂಡದವರು ರಾಜ್ಯ ಮಟ್ಟದ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರು ಕೇಂದ್ರ ತಂಡದ ವಿರುದ್ಧ ಗೆದ್ದರು.

ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ನಡೆದ ಮಹಿಳೆಯರ ವಿಭಾಗದ ಪಂದ್ಯದಲ್ಲಿ 25–6, 25–11ರಿಂದ ಎದುರಾಳಿ ತಂಡದವರನ್ನು ಮಣಿಸಿದರು.

45 ನಿಮಿಷಗಳ ಹಣಾಹಣಿಯಲ್ಲಿ ದೀಪಾ ಅವರು ಆಕರ್ಷಕ ಬ್ಲಾಕಿಂಗ್, ಸ್ಪೈಕಿಂಗ್ ಹಾಗೂ ಪಾಸಿಂಗ್ ಮೂಲಕ ಧಾರವಾಡಕ್ಕೆ ಅಂಕ ಹೆಚ್ಚಿಸಿಕೊಟ್ಟರು. ಬೆಂಗಳೂರಿನ ನೇಹಾ ಮ್ಯಾಥ್ಯೂ ಆಟವೂ ಎಲ್ಲರ ಗಮನಸೆಳೆಯಿತು.

ಇದಕ್ಕೂ ಮೊದಲು ನಡೆದ ಪಂದ್ಯದಲ್ಲಿ ಮೈಸೂರು 25–3, 25–9ರಿಂದ ಕೊಪ್ಪಳದ ಎದುರು, ಶಿವಮೊಗ್ಗ 25–4, 21–25, 15–7ರಿಂದ ವಿಜಯನಗರದ ಎದುರು, ಗದಗ 14–20, 25–16ರಿಂದ ಹಾಸನದ ಎದುರು, ಹಾವೇರಿ 25–17, 25–8ರಿಂದ ರಾಯಚೂರು ಎದುರು ಜಯ ಸಾಧಿಸಿದವು.

ಜಯ ಸಾಧಿಸಿದ ತಂಡಗಳು: ಪುರುಷರ ವಿಭಾಗ: ತುಮಕೂರು, ದಾವಣಗೆರೆ, ಬೆಂಗಳೂರು ಕೇಂದ್ರ, ರಾಮನಗರ, ಕೊಡಗು, ಚಿಕ್ಕೋಡಿ, ಕೋಲಾರ, ಬಳ್ಳಾರಿ, ವಿಜಯನಗರ, ಬೆಂಗಳೂರು ಗ್ರಾಮಾಂತರ, ಹಾವೇರಿ, ಕೋಲಾರ, ಶಿವಮೊಗ್ಗ, ಹಾಸನ, ಬೆಂಗಳೂರು ಉತ್ತರ, ಕೊಪ್ಪಳ, ಚಾಮರಾಜನಗರ, ಮೈಸೂರು, ಉತ್ತರ ಕನ್ನಡ, ಚಿಕ್ಕಮಗಳೂರು.

ಮಹಿಳೆಯರ ವಿಭಾಗ: ಗದಗ, ಶಿವಮೊಗ್ಗ, ಹಾಸನ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಹಾವೇರಿ, ಧಾರವಾಡ, ಮೈಸೂರು, ಕೊಪ್ಪಳ, ಬೆಳಗಾವಿ, ಮಂಡ್ಯ, ಚಾಮರಾಜನಗರ.

ಬೆಂಗಳೂರಿನಲ್ಲಿ ರಣಜಿ ಕ್ರಿಕೆಟ್ ಕ್ವಾರ್ಟರ್‌ಫೈನಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಈ ಬಾರಿಯ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟದ ಪಂದ್ಯವನ್ನು ತನ್ನ ತವರಿನಲ್ಲಿಯೇ ಆಡಲಿದೆ.

ಇದೇ 31ರಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ತಂಡವು ಉತ್ತರಾಖಂಡ ಬಳಗವನ್ನು ಎದುರಿಸಲಿದೆ. ಆತಿಥೇಯ ತಂಡವು ಸಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದಿತ್ತು. ಉತ್ತರಾಖಂಡ ಎ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿದೆ.

ಕ್ವಾರ್ಟರ್‌ಫೈನಲ್ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ; ಬಂಗಾಳ ವಿರುದ್ಧ ಜಾರ್ಖಂಡ್ (ಕೋಲ್ಕತ್ತ), ಸೌರಾಷ್ಟ್ರವು ಪಂಜಾಬ್ ಎದುರು (ರಾಜ್‌ಕೋಟ್) ಮತ್ತು ಮಧ್ಯಪ್ರದೇಶ ಎದುರು ಆಂಧ್ರ (ಇಂದೋರ್) ತಂಡಗಳು ಕಣಕ್ಕಿಳಿಯಲಿವೆ ಎಂದು ಬಿಸಿಸಿಐ ಡಾಟ್ ಟಿವಿಯಲ್ಲಿ ಪ್ರಕಟಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಕಾರ್ತಿಕೇಯನ್‌ಗೆ ಐದು ಚಿನ್ನದ ಪದಕ



ಕಾರ್ತಿಕೇಯನ್

ಬೆಂಗಳೂರು: ನಗರದ ನವಕೀಸ್ ಎಜುಕೇಷನ್ ಸೆಂಟರ್‌ನ 10ನೇ ತರಗತಿ ವಿದ್ಯಾರ್ಥಿ ಕಾರ್ತಿಕೇಯನ್ ನಾಯರ್ ಅವರು ಸಿಬಿಎಸ್‌ಇ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಐದು ಚಿನ್ನದ ಪದಕ ಜಯಿಸಿದ್ದಾರೆ.

ರಾಜ್‌ಕೋಟ್‌ನಲ್ಲಿ ಜ.21 ರಿಂದ 24ರ ವರೆಗೆ ನಡೆದ ಕೂಟದಲ್ಲಿ ಅವರು ವೈಯಕ್ತಿಕ ಚಾಂಪಿಯನ್ ಗೌರವವನ್ನೂ ತಮ್ಮದಾಗಿಸಿಕೊಂಡರು.

ಇಂದು, ನಾಳೆ ಬ್ಯಾಡ್ಮಿಂಟನ್ ಟೂರ್ನಿ

ಬೆಂಗಳೂರು: ಚೇಂಜ್‌ಮೇಕರ್ಸ್ ಆಫ್ ಕನಕಪುರ ರೋಡ್ ಅಸೋಸಿಯೇಷನ್ ಆಶ್ರಯದಲ್ಲಿ ಜ.28 ಮತ್ತು 29 ರಂದು ಬ್ಯಾಡ್ಮಿಂಟನ್ ಲೀಗ್ ಟೂರ್ನಿ ಆಯೋಜಿಸಲಾಗಿದೆ.

ಜುಡಿಷಿಯಲ್ ಬಡಾವಣೆಯಲ್ಲಿರುವ ಸೆಲೆನೈಟ್ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ನಡೆಯುವ ಟೂರ್ನಿಯಲ್ಲಿ 13 ವರ್ಷದೊಳಗಿನವರು, 13 ರಿಂದ 20 ವರ್ಷ, 20 ರಿಂದ 30 ವರ್ಷ, 30 ರಿಂದ 40 ವರ್ಷ, 40 ರಿಂದ 50 ವರ್ಷ ಮತ್ತು 50 ವರ್ಷಕ್ಕಿಂತ ಮೇಲಿನವರ ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ.

ಕನಕಪುರ ರಸ್ತೆಯ ಸಾರಕ್ಕಿಯಿಂದ ಕಗ್ಗಲೀಪುರದವರೆಗೆ ಹರಡಿಕೊಂಡಿರುವ ಬಡಾವಣೆಗಳು ಮತ್ತು ಅಪಾರ್ಟ್‌ಮೆಂಟ್‌ಗಳ ನೂರಕ್ಕೂ ಹೆಚ್ಚು ಕ್ಷೇಮಾಭಿವೃದ್ಧಿ ಸಂಘಗಳ ಸದಸ್ಯರು ಟೂರ್ನಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಮೇಶ್ವರಿ ಮಿಂಚು: ಕರ್ನಾಟಕ ಜಯಭೇರಿ

ಬೆಂಗಳೂರು: ರಾಮೇಶ್ವರಿ ಗಾಯಕವಾಡ (13ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ ಮಹಿಳಾ ಏಕದಿನ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಗೆಲುವು ಸಾಧಿಸಿತು.

ಮುಂಬೈನ ಕಂದಿವಿಲಿಯ ಸಚಿನ್ ತೆಂಡೂಲ್ಕರ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕರ್ನಾಟಕ 111 ರನ್‌ಗಳಿಂದ ನಾಗಾಲ್ಯಾಂಡ್ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 48.5 ಓವರ್‌ಗಳಲ್ಲಿ 9ಕ್ಕೆ 186 (ವೃಂದಾ ದಿನೇಶ್ 30, ದಿವ್ಯಾ ಜ್ಞಾನಾನಂದ 31, ವೇದಾ ಕೃಷ್ಣಮೂರ್ತಿ 30; ಗೌತಮಿ ನಾಯಕ್ 35ಕ್ಕೆ 3, ಪಿ.ಎನ್. ಖೇಮ್ನರ್ 34ಕ್ಕೆ 2). ನಾಗಾಲ್ಯಾಂಡ್: 31 ಓವರ್‌ಗಳಲ್ಲಿ 75 (ಕೆ.ಪಿ. ನೆವಿಗ್ರೆ 25, ಪಿ.ಎನ್. ಖೇಮ್ನರ್ 21; ರಾಮೇಶ್ವರಿ ಗಾಯಕವಾಡ 13ಕ್ಕೆ 4, ಶ್ರೇಯಾಂಕಾ ಪಾಟೀಲ್ 10ಕ್ಕೆ 2). ಫಲಿತಾಂಶ: ಕರ್ನಾಟಕ ತಂಡಕ್ಕೆ 111 ರನ್‌ಗಳ ಜಯ

ಲಕ್ಷ್ಯ ಸೇನ್ ಪರಾಭವ

ಜಕಾರ್ತ (ಪಿಟಿಐ): ಇಂಡೋನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಲಕ್ಷ್ಯ ಸೇನ್ ಅವರ ಅಭಿಯಾನ ಅಂತ್ಯಗೊಂಡಿದೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಲಕ್ಷ್ಯ 21-15, 10-21, 13-21ರಿಂದ ಆತಿಥೇಯ ಫೆವರೀಟ್ ಆಟಗಾರ ಜೊನಾಥನ್ ಕ್ರಿಸ್ಟಿ ಎದುರು ಎಡವಿದರು.

ಐಎಸ್‌ಎಲ್ ಫುಟ್‌ಬಾಲ್: ಬಿಎಫ್‌ಸಿಗೆ ಇಂದು ಚೆನ್ನೈಯಿನ್ ಸವಾಲು

ಗೆಲುವಿನ ಲಯ ಮುಂದುವರಿಸುವ ತವಕ

ಪ್ರಜಾವಾಣಿ ವಾರ್ತೆ



ಬೆಂಗಳೂರು ಎಫ್‌ಸಿ ತಂಡದ ರಾಯ್‌ಕೃಷ್ಣ

ಬೆಂಗಳೂರು: ಗೆಲುವಿನ ಲಯ ಮುಂದುವರಿಸುವ ತವಕದಲ್ಲಿರುವ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಶನಿವಾರ ಚೆನ್ನೈಯಿನ್ ಎಫ್‌ಸಿ ತಂಡಕ್ಕೆ ಮುಖಾಮುಖಿಯಾಗಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಈ ಪಂದ್ಯ ನಡೆಯಲಿದೆ. ಹತ್ತು ದಿನಗಳ ಹಿಂದೆ ಜಮ್ಶೆಡ್‌ಪುರದಲ್ಲಿ ನಡೆದ ಹಣಾಹಣಿಯಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ 3-0ಯಿಂದ ಜಮ್ಶೆಡ್‌ಪುರ ಎಫ್‌ಸಿಗೆ ಸೋಲುಣಿಸಿತ್ತು. ತಂಡಕ್ಕೆ ಟೂರ್ನಿಯಲ್ಲಿ ಅದು ಸತತ ಮೂರನೇ ಗೆಲುವಾಗಿತ್ತು.

‘ಹಿಂದಿನ ಪಂದ್ಯದ ಗೆಲುವಿನಿಂದ ಆತ್ಮವಿಶ್ವಾಸ ವೃದ್ಧಿಸಿದೆ. ಅದೇ ವಿಶ್ವಾಸದೊಂದಿಗೆ ಕಣಕ್ಕಿಳಿಯುವೆವು. ಉತ್ತಮ ಆಟಗಾರರನ್ನು ಒಳಗೊಂಡಿರುವ ಚೆನ್ನೈಯಿನ್ ಎಫ್‌ಸಿ ಬಗ್ಗೆ ಗೌರವವಿದೆ’ ಎಂದು ಬಿಎಫ್‌ಸಿ ಕೋಚ್ ಸೈಮನ್ ಗ್ರೇಸನ್ ಹೇಳಿದ್ದಾರೆ.

ಬೆಂಗಳೂರು ತಂಡಕ್ಕೆ ಚೆಟ್ರಿ, ರಾಯ್‌ಕೃಷ್ಣ, ಶಿವಶಕ್ತಿ ನಾರಾಯಣನ್ ಪ್ರಮುಖ ಆಟಗಾರರೆನಿಸಿದ್ದಾರೆ.

ಚೆನ್ನೈ ತಂಡವೂ ಜಯದ ವಿಶ್ವಾಸದಲ್ಲಿದೆ. ಸ್ಟ್ರೈಕರ್ ಪೀಟರ್ ಸ್ಲಿಸ್ಕೊವಿಚ್ (8) ಅವರು ಆ ತಂಡದ ಪರ ಈ ಋತುವಿನಲ್ಲಿ ಹೆಚ್ಚು ಗೋಲು ಗಳಿಸಿದ ಆಟಗಾರ ಎನಿಸಿದ್ದಾರೆ. ಗರಿಷ್ಠ ಗೋಲು ಗಳಿಸಿದವರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ. ಅವರನ್ನು ಕಟ್ಟಿಹಾಕುವ ಪ್ರಯತ್ನವನ್ನು ಬಿಎಫ್‌ಸಿ ಆಟಗಾರರು ಮಾಡಬೇಕಿದೆ.

ಎರಡೂ ತಂಡಗಳು ಪ್ಲೇ ಆಫ್ ಹಂತ ತಲುಪಲು ಪೈಪೋಟಿ ನಡೆಸುತ್ತಿದ್ದು ಈ ಪಂದ್ಯ ಮಹತ್ವದ್ದೆನಿಸಿದೆ. 15 ಪಂದ್ಯಗಳನ್ನು ಆಡಿರುವ ಬಿಎಫ್‌ಸಿ 19 ಪಾಯಿಂಟ್ಸ್ ಗಳಿಸಿ ಏಳನೇ ಸ್ಥಾನದಲ್ಲಿದ್ದರೆ, ಚೆನ್ನೈಯಿನ್ 14 ಪಂದ್ಯಗಳಿಂದ 17 ಪಾಯಿಂಟ್ಸ್ ಕಲೆಹಾಕಿ ಎಂಟನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ಸಂಜೆ 5.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬ್ಯಾಸ್ಕೆಟ್‌ಬಾಲ್: ತಮಿಳುನಾಡು, ಉತ್ತರ ಪ್ರದೇಶ ಚಾಂಪಿಯನ್

ಬೆಂಗಳೂರು: ತಮಿಳುನಾಡು ಮತ್ತು ಉತ್ತರ ಪ್ರದೇಶ ತಂಡಗಳು 72ನೇ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕಿಯರ ಮತ್ತು ಬಾಲಕರ ವಿಭಾಗಗಳಲ್ಲಿ ಚಾಂಪಿಯನ್ ಆದವು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ತಮಿಳುನಾಡು ತಂಡ 101–32 ಪಾಯಿಂಟ್ಸ್‌ಗಳಿಂದ ಛತ್ತೀಸ್‌ಗಢ ತಂಡವನ್ನು ಮಣಿಸಿತು. ಎ.ನಿಕಿತಾ 25 ಮತ್ತು ಕೆ.ಸತ್ಯಾ 23 ಪಾಯಿಂಟ್ಸ್ ತಂದಿತ್ತರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಉತ್ತರ ಪ್ರದೇಶ 82–61 ರಲ್ಲಿ ರಾಜಸ್ಥಾನ ವಿರುದ್ಧ ಗೆದ್ದಿತು. 31 ಪಾಯಿಂಟ್ಸ್ ಗಳಿಸಿದ ಕುಶಾಲ್ ಸಿಂಗ್ ಅವರು ಉತ್ತರ ಪ್ರದೇಶ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕರ್ನಾಟಕಕ್ಕೆ 6ನೇ ಸ್ಥಾನ: ಕರ್ನಾಟಕದ ಬಾಲಕರು ಟೂರ್ನಿಯಲ್ಲಿ ಆರನೇ ಸ್ಥಾನ ಗಳಿಸಿದರು. 5 ಮತ್ತು 6ನೇ ಸ್ಥಾನವನ್ನು ನಿರ್ಣಯಿಸಲು ನಡೆದ ಪಂದ್ಯದಲ್ಲಿ ಮಧ್ಯಪ್ರದೇಶ 69–66 ರಲ್ಲಿ ಕರ್ನಾಟಕ ತಂಡವನ್ನು ಮಣಿಸಿತು. ಕರ್ನಾಟಕದ ಬಾಲಕಿಯರು 9ನೇ ಸ್ಥಾನ ಗಳಿಸಿದರು.